ಡಿಸೆಂಬರ್ 2012

₹ 15/-

# ಯುಗರಶ್ಮಿ

ತ್ರೈಮಾಸಿಕ



- ಅಣ್ವಾಯುಧ ಯುದ್ಧದ ಘೋರ ವಿನಾಶಕರ ಪರಿಣಾಮಗಳು
- ಇಸ್ಲಾಮ್ ವಿರುದ್ಧ ಸಿನೆಮ : ಅಹ್ಮದಿಯಾ ಖಲೀಫರ ಪ್ರತಿಕ್ರಿಯೆ
- ಜಾಗತಿಕ ರಾಷ್ಟ್ರ ನಾಯಕರಿಗೆ ಖಲೀಫರ ಪತ್ರಗಳು
- ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ
- ಜಿಹಾದ್

"ಅವರ ಪೈಕಿ ಕೆಲವರಿಗೆ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖ ಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ ನಾವು ಅದನ್ನು ನೀಡಿದ್ದೇವೆ. ನಿನ್ನ ಪ್ರಭುವಿನ ಅನುಗ್ರಹ ಅತ್ಯುತ್ತಮವಾದುದೂ ಶಾಶ್ವತವಾದುದೂ ಆಗಿದೆ."

ಪವಿತ್ರ ಖುರ್‌ಆನ್ (20 : 132)

ವಿಷಯ ಸೂಚಿಕೆ


| | ಪುಟ |
|---|---|
| ☆ ದೇವ ಸಂಪ್ರೀತಿ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಇಸ್ಲಾಮ್ ವಿರುದ್ಧ ಸಿನೆಮ : ಜಾಗತಿಕ ಅಹ್ಮದಿಯಾ ಸರ್ವೋಚ್ಚ ನೇತಾರ ಖಲೀಫರ ಪ್ರತಿಕ್ರಿಯೆ | 3 |
| ☆ ಅಣ್ವಾಯುಧ ಯುದ್ಧದ ಘೋರ ವಿನಾಶಕರ ಪರಿಣಾಮಗಳು ಮತ್ತು ಪರಿಪೂರ್ಣವಾದ ನ್ಯಾಯ ಪಾಲನೆಯ ತುರ್ತು ಆವಶ್ಯಕತೆ | 11 |
| ☆ ಜಾಗತಿಕ ರಾಷ್ಟ್ರ ನಾಯಕರಿಗೆ ಖಲೀಫರ ಪತ್ರಗಳು : | |
| * ಯುನೈಟೆಡ್ ಕಿಂಗ್‌ಡಮ್ ಪ್ರಧಾನ ಮಂತ್ರಿಗೆ ಪತ್ರ | 19 |
| * ಬ್ರಿಟಿಷ್ ಪ್ರಧಾನ ಮಂತ್ರಿಯ ಉತ್ತರ | 21 |
| * ಜರ್ಮನಿಯ ಪ್ರಧಾನ ಮಂತ್ರಿಗೆ ಪತ್ರ | 22 |
| * ಇರಾನಿನ ಸರ್ವೋನ್ನತ ನಾಯಕ ಆಯತುಲ್ಲಾರಿಗೆ ಪತ್ರ | 23 |
| * ಫ್ರಾನ್ಸಿನ ಅಧ್ಯಕ್ಷರಿಗೆ ಪತ್ರ | 25 |
| * ಚೀನದ ಪ್ರಧಾನ ಮಂತ್ರಿಗೆ ಪತ್ರ | 27 |
| * ಸೌದಿ ಅರೇಬಿಯಾದ ದೊರೆಗೆ ಪತ್ರ | 29 |
| * ಬ್ರಿಟಿಷ್ ಮಹಾರಾಣಿ ದ್ವಿತೀಯ ಎಲಿಝಬೆತ್‌ರಿಗೆ ಅವರ ಪಟ್ಟಾಭಿಷೇಕದ ವಜ್ರ ಜೂಬಿಲಿ ಸಮಾರಂಭದ ಸಂದರ್ಭ ಬರೆದ ಪತ್ರ | 30 |
| * ಅಹ್ಮದಿಯಾ ಸಂಘಟನೆಯ ಖಲೀಫರು ಬರೆದ ಪತ್ರಕ್ಕೆ ಬ್ರಿಟಿಷ್ ಮಹಾರಾಣಿಯ ಉತ್ತರ | 33 |
| ☆ ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ | 34 |
| ☆ ಜಿಹಾದ್ | 41 |
| ☆ ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರ ಸತ್ಯಸಾಕ್ಷ್ಯ | 44 |
| ☆ ಇಸ್ಲಾಮಿನ ಪ್ರಾಥಮಿಕ ಪಾಠಗಳು | 48 |
| ☆ ಸಂಪಾದಕರಿಗೆ ಪತ್ರ | 49 |
| ☆ ನಿಧನ ವಾರ್ತೆ | 49 |
| ☆ ಅಹ್ಮದಿಯರಿಗೆ ಸುತ್ತೋಲೆ | 50 |
| ☆ ಓದಿದ್ದು | 51 |
| ☆ ಆರೋಗ್ಯ | 58 |
| ☆ ಪ್ರಾರ್ಥನೆ | 59 |


ಯುಗರಶ್ಮಿ

ಮುಖಪುಟ ಚಿತ್ರ :
ಅಣು ಬಾಂಬು ವಿಸ್ಫೋಟ.


ಬಿಡಿ ಪ್ರತಿ : ರೂ.15/- ವಾರ್ಷಿಕ ಚಂದಾ : ರೂ.60/- ಅಂಚೆ ಮೂಲಕ : ರೂ.70/-

ವಿಳಾಸ : 10-23-1008 / 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

بسم الله الرحمن الرحيم
نحمده ونصلي على رسوله الكريم

# ಯುಗಶಕ್ತಿ


ಡಿಸೆಂಬರ್ 2012

| ಆರಂಭ : 1975 | ಸಂಪುಟ : 29 | ಫತಹ್ 1391 ಹಿಜರೀ ಶಮ್ಸೀ | ಸಂಚಿಕೆ : 3-4 |
|---|---|---|---|

*ಸಂಪಾದಕ : ಮುಹಮ್ಮದ್ ಯೂಸುಫ್*

-: ನಿಗಾವಣೆ :-

**ಮುಹಮ್ಮದ್ ಶಫೀಉಲ್ಲಾಹ್**, ಸೌತ್ ಝೋನಲ್ ಅಮೀರ್, ಅಹ್ಮದಿಯಾ ಮುಸ್ಲಿಂ ಜಮಾಅತ್, ಕರ್ನಾಟಕ.


## ದೇವ ಸಂಪ್ರೀತಿ

ಸುಕೃತರಾದ ದಾಸರನ್ನಲ್ಲದೆ ದೇವನು ಯಾರನ್ನೂ ಗಣ್ಯ ಮಾಡುವುದಿಲ್ಲ. ನೀವು ಪರಸ್ಪರ ಸಹೋದರತೆಯನ್ನೂ ಸ್ನೇಹವನ್ನೂ ಬೆಳೆಸಿರಿ. ಎಲ್ಲ ವಿಧ ಲೇವಡಿ ಮತ್ತು ಅಪಹಾಸ್ಯ ಮಾತುಗಳಿಂದ ನೀವು ಸಂಪೂರ್ಣವಾಗಿ ಬಿಟ್ಟು ನಿಲ್ಲಿರಿ. ಪರಿಹಾಸ ಮನುಷ್ಯನ ಹೃದಯವನ್ನು ಸತ್ಯದಿಂದ ಅಗಲಿಸಿ ಎಲ್ಲಿಗೋ ಕೊಂಡೊಯ್ಯುತ್ತದೆ. ನೀವು ಪರಸ್ಪರ ಆದರದಿಂದ ವರ್ತಿಸಿರಿ. ಪ್ರತಿಯೊಬ್ಬನು ತನ್ನ ಸುಖಕ್ಷೇಮಕ್ಕಿಂತ ಸಹೋದರನ ಸುಖಕ್ಷೇಮಕ್ಕೆ ಆದ್ಯತೆ ನೀಡಲಿ. ದೇವನೊಂದಿಗೆ ಸತ್ಯಸಂಧವಾದ ಸಂಧಿ ಮಾಡಿರಿ. ಅವನ ಅನುಸರಣೆಗೆ ಮರಳಿರಿ. ದೇವಕ್ರೋಧ ಭೂಮಿಗೆ ಇಳಿಯುತ್ತಾ ಇದೆ. ಪೂರ್ಣವಾಗಿ ತನ್ನ ಪಾಪಕೃತ್ಯಗಳಿಂದ ಪಶ್ಚಾತ್ತಾಪಪಟ್ಟು ಅವನ ಸನ್ನಿಧಿಯಲ್ಲಿ ಹಾಜರಾಗುವವನು ಮಾತ್ರ ಅದರಿಂದ ರಕ್ಷಿಸಲ್ಪಡುವನು. (ಮಲ್‌ಫೂಝಾತ್)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ❖ ಇಹಲೋಕದಲ್ಲಿ ಒಬ್ಬ ದೇವದಾಸನು ಇನ್ನೊಬ್ಬ ದೇವದಾಸನ ನ್ಯೂನತೆಗಳನ್ನು ಮರೆಮಾಚಿದರೆ, ಪರಲೋಕದಲ್ಲಿ ಅಲ್ಲಾಹು ಆತನ ನ್ಯೂನತೆಗಳನ್ನು ಮರೆಮಾಚುವನು. (ಮುಸ್ಲಿಂ)
- ❖ ಯಾರಾದರೂ ಸತ್ಯವಿಶ್ವಾಸಿಯ ಐಹಿಕ ಸಂಕಟಗಳನ್ನು ನೀಗಿಸಿಕೊಟ್ಟರೆ ಆತನ ಪಾರತ್ರಿಕ ಸಂಕಟಗಳನ್ನು ಅಲ್ಲಾಹು ನೀಗಿಸಿಕೊಡುವನು.
- ❖ ವಿಧವೆಯರಿಗೂ ನಿರ್ಗತಿಕರಿಗೂ ಬೇಕಾಗಿ ಪರಿಶ್ರಮಿಸುವವನು ದೇವಮಾರ್ಗದಲ್ಲಿ ಸಮರ ಮಾಡುವವನಿಗೆ ಸಮಾನನು.
- ❖ ಅನಾಥರು, ಸ್ತ್ರೀಯರು ಎಂಬೀ ಅಬಲರ ಹಕ್ಕನ್ನು ಅವಗಣಿಸುವವರನ್ನು ನಾನು ಪಾಪಿಗಳಂತೆ ಕಾಣುತ್ತೇನೆ.
- ❖ ಯಾರೊಬ್ಬನ ಉಪದ್ರವದಿಂದ ತನ್ನ ನೆರೆವಾಸಿ ಸುರಕ್ಷಿತನಲ್ಲವೋ ಅವನು ಸತ್ಯವಿಶ್ವಾಸಿಯಲ್ಲ. (ಬುಖಾರಿ, ಮುಸ್ಲಿಂ)
- ❖ ವೃದ್ಧರಾದ ಮಾತಾಪಿತರನ್ನು ಅಥವಾ ಅವರಲ್ಲಿ ಒಬ್ಬರನ್ನು ಪಡೆದು ಸ್ವರ್ಗದಲ್ಲಿ ಪ್ರವೇಶಿಸಲು ಶಕ್ತನಾಗದವನು ನೀಚನೂ ನಿಂದ್ಯನೂ ಆಗಲಿ. (ಮುಸ್ಲಿಂ)
- ❖ ಉಪಜೀವನದಲ್ಲಿ ಅಭಿವೃದ್ಧಿ ಪಡೆಯಲು ಮತ್ತು ದೀರ್ಘಾಯುಸ್ಸು ಗಳಿಸಲು ಇಚ್ಛಿಸುವವನು ಕುಟುಂಬ ಬಂಧವನ್ನು ಬಲಪಡಿಸಲಿ. (ಬುಖಾರಿ, ಮುಸ್ಲಿಂ)
- ❖ ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸುವುದು, ಮಾತಾಪಿತರನ್ನು ಅನುಸರಿಸದೆ ಇರುವುದು, ಅನ್ಯಾಯವಾಗಿ ಕೊಲೆ ಮಾಡುವುದು, ಸುಳ್ಳು ಸಾಕ್ಷಿ ಹೇಳುವುದು ಮಹಾ ಪಾಪಗಳಾಗಿವೆ. (ಬುಖಾರಿ)
- ❖ ಕುಟುಂಬ ಬಂಧವನ್ನು ವಿಚ್ಛೇದಿಸುವವನು ಸ್ವರ್ಗದಲ್ಲಿ ಪ್ರವೇಶಿಸಲಾರ. (ಬುಖಾರಿ, ಮುಸ್ಲಿಂ)
- ❖ ಒಬ್ಬ ವ್ಯಕ್ತಿ ತನ್ನ ಮಾತಾಪಿತರನ್ನು ಬೈಯ್ಯುವುದು ಮಹಾ ಪಾಪಗಳಲ್ಲಿ ಸೇರುತ್ತದೆ. (ಬುಖಾರಿ, ಮುಸ್ಲಿಂ)

mta

*MUSLIM TELEVISION AHMADIYYA is now launched on Asia Broadcast satellite (ABS-1) especially for Asian Viewers. You can now watch MTA in 2ft Dish (DTH/Airtel) by adjusting its frequency.*

**Details of this channel**

| | |
|---|---|
| Channel Name | : Muslim TV |
| Satellite | : ABS - 1 |
| Direction | : 75° East |
| Frequency | : 12579 |
| Symbol Rate | : 22000 |
| Polarization | : Horizontal |
| FEC | : 3/4 |



# ಇಸ್ಲಾಮ್ ವಿರುದ್ಧ ಸಿನೆಮ:

## ಜಾಗತಿಕ ಅಹ್ಮದಿಯಾ ಸರ್ವೋಚ್ಚ ನೇತಾರ ಖಲೀಫರ ಪ್ರತಿಕ್ರಿಯೆ

### ಪ್ರವಾದಿ ಪ್ರೇಮ ಪ್ರಕಟಿಸುವುದಕ್ಕೆ ಸರಿಯಾದ ಮಾರ್ಗ

**ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಹ್ಮದಿಯಾ ಪಂಚಮ ಖಲೀಫ) ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ 2012 ಸೆಪ್ಟೆಂಬರ್ ದಿನಾಂಕ 21ರಂದು ಲಂಡನಿನ ಮಸ್‌ಜಿದ್ ಬೈತುಲ್ ಫುತೂಹ್‌ನಲ್ಲಿ ನೀಡಿದ ಜುಮುಅಃ ಖುತುಬ (ಶುಕ್ರವಾರದ ಪ್ರವಚನ).**

إِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِيِّ ۚ
يٰٓاَيُّهَا الَّذِيْنَ اٰمَنُوْا صَلُّوْا عَلَيْهِ وَ
سَلِّمُوْا تَسْلِيْمًا ﴿۵۷﴾
إِنَّ الَّذِيْنَ يُؤْذُوْنَ اللّٰهَ وَرَسُوْلَهٗ لَعَنَهُمُ
اللّٰهُ فِي الدُّنْيَا وَالْاٰخِرَةِ وَاَعَدَّ لَهُمْ
عَذَابًا مُّهِيْنًا ﴿۵۸﴾

ನಾನು ಪಠಿಸಿದ ಪವಿತ್ರ ಖುರ್‌ಆನಿನ ವಚನಗಳ ಅರ್ಥ ಹೀಗಿದೆ: **"ನಿಶ್ಚಯವಾಗಿಯೂ ಅಲ್ಲಾಹನು ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಓ ಸತ್ಯವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ".**

**"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆ ಕೊಡುತ್ತಾರೋ ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹದಲ್ಲೂ ಪರದಲ್ಲೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಸಿದ್ಧಪಡಿಸಿಟ್ಟಿದ್ದಾನೆ". (33:57,58)**

ಇಂದಿನ ಕಾಲದಲ್ಲಿ ಮುಸ್ಲಿಮ್ ಲೋಕದಲ್ಲಿ, ಇಸ್ಲಾಮೀ ದೇಶಗಳಲ್ಲಿ ಮತ್ತು ಲೋಕದ ವಿವಿಧ ದೇಶಗಳಲ್ಲಿ ವಾಸಿಸುತ್ತಿರುವ ಮುಸ್ಲಿಮರಲ್ಲಿ, ಮುಸ್ಲಿಮರನ್ನು ವಿರೋಧಿಸುವ ಕೂಟಗಳು ನಡೆಸುತ್ತಿರುವ ಅತ್ಯಂತ ಹೀನವೂ ಜಿಗುಪ್ಸಾವಹವೂ ದೌರ್ಜನ್ಯ ಭರಿತವೂ ಆಗಿರುವ ಕೆಲಸಗಳ ಕಾರಣದಿಂದ ತೀವ್ರ ದುಃಖ ಮತ್ತು ಕ್ರೋಧದ ಅಲೆಗಳು ಎದ್ದೇಳುತ್ತಿವೆ. ಈ ದುಃಖ ಮತ್ತು ಕ್ರೋಧವನ್ನು ಪ್ರಕಟಿಸುವುದರಲ್ಲಿ ಮುಸ್ಲಿಮರು ನಿಶ್ಚಯವಾಗಿಯೂ ಸಮರ್ಪಕವಾಗಿ ವರ್ತಿಸುವವರಾಗಿದ್ದಾರೆ. ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಮಹಾನ್ ವ್ಯಕ್ತಿತ್ವದ ಬಗ್ಗೆ ಸಂಪೂರ್ಣವಾಗಿ ಅರಿತುಕೊಂಡಿದ್ದರೂ ಅರಿತುಕೊಳ್ಳದೆ ಇದ್ದರೂ ಪ್ರತಿಯೊಬ್ಬ ಮುಸ್ಲಿಮನು ಹಝ್‌ರತ್ ಪೈಗಂಬರರ(ಸ) ಗೌರವವನ್ನು ಕಾಪಾಡಲು ಮೃತನಾಗಲೂ ಹತನಾಗಲೂ ಸದಾ ಸಿದ್ಧನಾಗಿರುತ್ತಾನೆ. ಇಸ್ಲಾಮಿನ ಶತ್ರುಗಳು ಹಝ್‌ರತ್ ಪೈಗಂಬರರ(ಸ) ಬಗ್ಗೆ ನಿರ್ಮಿಸಿದ ನಿಕೃಷ್ಟ ಚಲನಚಿತ್ರದಲ್ಲಿ ಹಝ್‌ರತ್ ಪೈಗಂಬರರನ್ನು(ಸ) ದೌರ್ಜನ್ಯಪೂರಕವಾಗಿ ಅಪಮಾನಿಸಲಾಗಿದೆ. ಅದರ ವಿರುದ್ಧ ದುಃಖ ಮತ್ತು ಕ್ರೋಧವನ್ನು ಪ್ರತಿಯೊಬ್ಬ ಮುಸ್ಲಿಮನು ಪ್ರಕಟಿಸಿದುದು ಸಹಜ ಪ್ರತಿಕ್ರಿಯೆಯೇ ಆಗಿದೆ.

ಮಾನವರಿಗೆಲ್ಲರಿಗೂ ಹಿತಕಾರಿಯಾದವರೂ ಸಕಲ ಲೋಕಗಳಿಗೂ ಅನುಗ್ರಹವಾದವರೂ ಅಲ್ಲಾಹನ ಪ್ರೀತಿಗೆ ಪಾತ್ರರಾದವರೂ ಆಗಿದ್ದ ಆ ಮಹಾನುಭಾವರು ತನ್ನ ರಾತ್ರಿ ಕಾಲಗಳಲ್ಲಿ ಅಲ್ಲಾಹನ ಸೃಷ್ಟಿಗಳಿಗೋಸ್ಕರ ದುಃಖಿಸುತ್ತಾ ಪ್ರಾರ್ಥಿಸುತ್ತಿದ್ದರು. ಅಲ್ಲಾಹನ ಸೃಷ್ಟಿಗಳನ್ನು ವಿನಾಶದಿಂದ ರಕ್ಷಿಸಲು ನೋವಿನಿಂದಲೂ ದುಃಖದಿಂದಲೂ ಪ್ರಾರ್ಥಿಸುತ್ತಾ ತನ್ನ ಜೀವವನ್ನೇ ಅಪಾಯಕ್ಕೆ ಗುರಿಪಡಿಸಿದಾಗ ಸಿಂಹಾಸನಾರೂಢನಾದ ಅಲ್ಲಾಹನೇ ಹಝ್‌ರತ್ ಪೈಗಂಬರರನ್ನು(ಸ) ಸಂಬೋಧಿಸಿ ಹೇಳಿದನು: "ತಮ್ಮ ಸೃಷ್ಟಿಕರ್ತನನ್ನು ಗುರುತಿಸದಂತಹ ಅಜ್ಞ ಜನರಿಗೋಸ್ಕರ ನೀನು ನಿನ್ನ ಜೀವವನ್ನು ಅಪಾಯಕ್ಕೆ ಏಕೆ ಗುರಿಪಡಿಸುತ್ತಿರುವೆ?" ಮಾನವ ಕುಲದ ಇಂತಹ ಸ್ನೇಹಿತನ ಕುರಿತು ಇಂತಹ ಅಪಮಾನಕರ ಚಲನಚಿತ್ರವನ್ನು ನಿರ್ಮಿಸಿದುದರಿಂದ ನಿಶ್ಚಯವಾಗಿಯೂ ಪ್ರತಿಯೊಬ್ಬ ಮುಸ್ಲಿಮನ ಹೃದಯಕ್ಕೆ ನೋವಾಗಬೇಕಾಗಿತ್ತು. ಹಾಗೆಯೇ ಸಂಭವಿಸಿತು. ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧನಾದ ಪ್ರೇಮಿಯಾದ ಇಮಾಮ್ ಮಹ್‌ದಿಯವರನ್ನು ನಂಬುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನಿಗೆ ಎಲ್ಲರಿಗಿಂತಲೂ ಹೆಚ್ಚು ನೋವು ಉಂಟಾಯಿತು. ಆ ಮಹಾನುಭಾವರು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಮಹತ್ತರವಾದ ವ್ಯಕ್ತಿತ್ವದ ಅರಿವನ್ನು ನಮಗೆ ನೀಡಿರುವರು. ಶತ್ರುಗಳ ಈ ಕೃತ್ಯದಿಂದ ನಮ್ಮ ಹೃದಯ ನೋವಿನಿಂದ ತುಡಿಯುತ್ತಿವೆ. ನಮ್ಮ ಮನಸ್ಸು ನೋವಿನಿಂದ ತಲ್ಲಣಿಸುತ್ತಿದೆ. ನಾವು ಅಲ್ಲಾಹನ ಸನ್ನಿಧಿಯಲ್ಲಿ ಸಾಷ್ಟಾಂಗ ಪ್ರಣಾಮ ಮಾಡುತ್ತಾ, "ಈ ದೌರ್ಜನ್ಯಗಾರರಿಗೆ ಪ್ರತೀಕಾರ ಮಾಡು. ಅವರಿಗೆ ಸಂಭವಿಸುವುದು ಲೋಕಾಂತ್ಯದ ತನಕ ನೀತಿ ಪಾಠವನ್ನು ನೀಡುವ ಒಂದು ಉದಾಹರಣೆಯನ್ನಾಗಿ ಮಾಡು" ಎಂದು ಅಲ್ಲಾಹನೊಡನೆ ಪ್ರಾರ್ಥಿಸುತ್ತಾ ಇದ್ದೇವೆ. ನಮಗೆ ಈ ಕಾಲಘಟ್ಟದ ಇಮಾಮರು ಹಝ್‌ರತ್ ಪೈಗಂಬರರನ್ನು(ಸ) ಪ್ರೀತಿಸುವ ಕುರಿತು ಎಂತಹ ಅರಿವು ನೀಡಿರುವರೆಂದರೆ, ಕಾಡುಗಳ ಸರ್ಪಗಳೊಂದಿಗೆ ಮತ್ತು ಹಿಂಸ್ರ ಮೃಗಗಳೊಂದಿಗೆ ಸೌಹಾರ್ದ ಸಾಧ್ಯವಿದ್ದರೂ ನಮ್ಮ ಯಜಮಾನರಾದ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಆಗಿರುವ ಅವರನ್ನು ಅಪಮಾನಿಸುವವರೊಂದಿಗೆ ಮತ್ತು ಅದರ ಬಗ್ಗೆ ಹಟ ಮಾಡುತ್ತಾ ಮುಂದುವರಿಯುವವರೊಂದಿಗೆ ನಾವು ಸೌಹಾರ್ದ ಸ್ಥಾಪಿಸಲು ಸಾಧ್ಯವೇ ಇಲ್ಲ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ (ವಾಗ್ದತ್ತ ಮಸೀಹ್)(ಅ) ಹೀಗೆ ಹೇಳುತ್ತಾರೆ:

"ಮುಸ್ಲಿಮರು ಎಂತಹ ಸಮುದಾಯದವರಾಗಿರುವರೆಂದರೆ, ಅವರು ತಮ್ಮ ಆದರಣೀಯ ಪೈಗಂಬರರ(ಸ) ಗೌರವವನ್ನು ಕಾಪಾಡಲು

ಜೀವವನ್ನು ಅರ್ಪಿಸುತ್ತಾರೆ. ಹಝ್ರತ್ ಪೈಗಂಬರರಿಗೆ(ಸ) ಹಗಲು-ರಾತ್ರಿ ಬೈಗಳನ್ನು ಪ್ರಯೋಗಿಸುತ್ತಾ ಪತ್ರಿಕೆಗಳಲ್ಲೂ ಪುಸ್ತಕಗಳಲ್ಲೂ ಕರಪತ್ರಗಳಲ್ಲೂ ಅತ್ಯಂತ ಅಪಮಾನಕರವಾದ ರೀತಿಯಲ್ಲಿ ಅವರನ್ನು ನಿಂದಿಸುತ್ತಾ ಅತ್ಯಂತ ಕೊಳಕು ಶಬ್ದಗಳನ್ನು ಅವರ ವಿರುದ್ಧ ಪ್ರಯೋಗಿಸುತ್ತಾ ಇರುವವರೊಂದಿಗೆ ಸೌಹಾರ್ದವನ್ನು ಸ್ಥಾಪಿಸಲು ಮುಸ್ಲಿಮರಿಗೆ ಸಾಧ್ಯವಿಲ್ಲ. ನೆನಪಿಡಿರಿ, ಅಪಮಾನಿಸುವ ಈ ಜನರು ತಮ್ಮ ಸ್ವಂತ ಸಮುದಾಯದ ಹಿತೈಷಿಗಳೂ ಆಗಿರುವುದಿಲ್ಲ. ಈ ಜನರು ತಮ್ಮ ಸಮುದಾಯದ ಮಾರ್ಗದಲ್ಲಿ ಮುಳ್ಳುಗಳನ್ನು ಬಿತ್ತುತ್ತಾರೆ. ನಾನು ಸತ್ಯವಾಗಿ ಹೇಳುತ್ತೇನೆ- ನಾವು ಕಾಡಿನ ಸರ್ಪಗಳೊಂದಿಗೂ ವನಾಂತರಗಳ ಹಿಂಸ್ರ ಮೃಗಗಳೊಂದಿಗೂ ಸೌಹಾರ್ದ ಸಂಬಂಧ ಸ್ಥಾಪಿಸುವುದು ಸಾಧ್ಯವಿದೆ. ಆದರೆ ನಾವು ಇಂತಹ ಜನರೊಂದಿಗೆ ಸೌಹಾರ್ದ ಸಂಬಂಧ ಸ್ಥಾಪಿಸಲಾರೆವು. ದೇವನು ಕಳುಹಿಸಿದ ಪರಿಶುದ್ಧ ಪ್ರವಾದಿಗಳನ್ನು ಬೈಯ್ಯುವುದನ್ನು ಅವರು ಬಿಟ್ಟುಬಿಡುವುದಿಲ್ಲ. ಬೈಗಳು ಮತ್ತು ಕೆಟ್ಟ ಮಾತುಗಳನ್ನು ಪ್ರಯೋಗಿಸುವುದರಿಂದಲೇ ಜಯ ಸಿಗುವುದೆಂದು ಅವರು ಭಾವಿಸುತ್ತಾರೆ. ಆದರೆ ಪ್ರತಿಯೊಂದು ಜಯವು ಆಕಾಶದಿಂದ ಅವತೀರ್ಣವಾಗುತ್ತದೆ. ಪರಿಶುದ್ಧವಾದ ಮಾತುಗಳನ್ನಾಡುವವರು ತಮ್ಮ ಪರಿಶುದ್ಧ ನುಡಿಗಳ ಅನುಗ್ರಹದಿಂದ ಕೊನೆಗೆ ಹೃದಯಗಳನ್ನು ಜಯಿಸುತ್ತಾರೆ. ಆದರೆ ಕೆಟ್ಟ ಮಾತುಗಳನ್ನು ಆಡುವವರು ದೇಶದಲ್ಲಿ ಒಡಕು ಮತ್ತು ಗಲಭೆಗೊಂದಲಗಳ ಹೊರತು ಬೇರೇನನ್ನೂ ಮಾಡಲು ಸಮರ್ಥರಾಗುವುದಿಲ್ಲ. ಅನುಭವದಿಂದ ತಿಳಿದು ಬಂದುದೇನೆಂದರೆ, ಕೆಟ್ಟದಾಗಿ ಮಾತನಾಡುವ ಇಂತಹ ಜನರ ಅಂತಿಮ ಗತಿ ಒಳ್ಳೆಯದಾಗಿರುವುದಿಲ್ಲ. ಅಲ್ಲಾಹನ ಅಭಿಮಾನ ತನ್ನ ಪ್ರೀತಿಗೆ ಪಾತ್ರರಾದವರಿಗೋಸ್ಕರ ಕೊನೆಗೆ ಯಾವುದಾದರೂ ದೃಷ್ಟಾಂತ ತೋರಿಸುತ್ತದೆ." (ಚಶ್ಮಯೆ ಮಅರಿಫತ್)

ಇಂದಿನ ಕಾಲಘಟ್ಟದಲ್ಲಿ ಪತ್ರಿಕೆಗಳು ಮತ್ತು ಜಾಹೀರಾತುಗಳೊಂದಿಗೆ ಇತರ ಸಂಪರ್ಕ ಮಾಧ್ಯಮಗಳನ್ನು ಸಹ ಈ ಕೆಟ್ಟ ಕೆಲಸಕ್ಕೆ ಬಳಸಲಾಗುತ್ತಿದೆ. ಈ ಜನರು ತಮ್ಮ ಹಟದ ಕಾರಣದಿಂದ ಅಲ್ಲಾಹನನ್ನು ಎದುರಿಸುತ್ತಿದ್ದಾರೆ. ಇನ್‌ಶಾಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಅವರು ಅವನ ಹಿಡಿತಕ್ಕೆ ಒಳಗಾಗುವರು. ಈ ಕೆಟ್ಟ ಜನರು ತಮ್ಮ ಹಟದಲ್ಲಿ ಮುಂದುವರಿಯುತ್ತಿದ್ದಾರೆ. ಅವರು ಧಿಕ್ಕಾರ ಪೂರ್ವಕವಾಗಿ ತಮ್ಮ ಅಕ್ರಮ ಕೃತ್ಯಗಳನ್ನು ಪ್ರಕಟಿಸುತ್ತಾ ಹೋಗುತ್ತಿದ್ದಾರೆ.

2006ರಲ್ಲಿ ಡೆನ್ಮಾರ್ಕಿನ ದುಷ್ಟ ಪ್ರಕೃತಿಯ ಜನರು ಹಝ್ರತ್ ಪೈಗಂಬರರ(ಸ) ವಿರುದ್ಧ ನಿಕೃಷ್ಟ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ್ದರು. ಆಗ ನಾನು ಅದರ ವಿರುದ್ಧ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡಲು ಅಹ್ಮದಿಯಾ ಜಮಾಅತಿಗೆ ಆದೇಶ ನೀಡುತ್ತಾ ಹೀಗೆ ಹೇಳಿದ್ದೆನು: ಇಂತಹ ಜನರು ಹಿಂದಿನ ಕಾಲದಲ್ಲಿ ಸಹ ಇದ್ದರು. ಇಲ್ಲಿಗೆ ಇದು ಮುಕ್ತಾಯವಾಗಲಾರದು. ಮುಸ್ಲಿಮರ ವತಿಯಿಂದ ನಡೆಯುತ್ತಿರುವ ಪ್ರತಿಭಟನೆ ಮೊದಲಾದುವುಗಳಿಂದ ಯಾವುದೇ ಬದಲಾವಣೆ ಆಗಲಾರದು. ಇನ್ನು ಮುಂದೆ ಸಹ ಇಂತಹ ಜನರು ತಮ್ಮ ಕುಕೃತ್ಯಗಳನ್ನು ಮುಂದುವರಿಸುವರು. ನಾವು ಈಗ ನೋಡುತ್ತಿದ್ದೇವೆ. ಈಗ ಇಂತಹ ಜನರು ಹಿಂದಿನ ಕಾಲಕ್ಕಿಂತ ಹೆಚ್ಚು ನೀಚ ಮತ್ತು ದೌರ್ಜನ್ಯಭರಿತ ಕೆಲಸ ಮಾಡುತ್ತಿದ್ದಾರೆ. ಹಿಂದಿನ ಕಾಲದಿಂದ ಮೆಲ್ಲಮೆಲ್ಲಗೆ ಅವರ ಈ ಕೆಟ್ಟ ಕೆಲಸ ವರ್ಧಿಸುತ್ತಾ ಹೋಗುತ್ತಿದೆ.

ಇಸ್ಲಾಮಿನ ಎದುರಿಗೆ ಈ ಜನರಿಗೆ ಸೋಲು ಸಂಭವಿಸಿದುದರಿಂದ ಈ ಜನರು ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ನಿರರ್ಥಕ ಕೆಲಸ ಮಾಡುತ್ತಿದ್ದಾರೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದ ಹಾಗೆ ಈ ಜನರು ತಮ್ಮ ಸಮುದಾಯದ ಹಿತೈಷಿಗಳಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಈ ಸತ್ಯಾಂಶವು ಇಂತಹ ಜನರ ಸಮುದಾಯಕ್ಕೆ ಮುಂದೆ ಸ್ಪಷ್ಟವಾಗುವುದು. ಈ ಜನರು ಮಾಡುವ ಕೆಲಸ ತಮ್ಮ ಸಮುದಾಯಕ್ಕೆ ಹಾನಿಕರವಾಗಿದೆ ಎಂದೂ ಈ ಜನರು ಸ್ವಾರ್ಥಿಗಳೂ ಅಕ್ರಮಿಗಳೂ ಆಗಿರುವರೆಂದೂ ಅವರ ಸಮುದಾಯದ ಜನರು ಮನವರಿಕೆ ಮಾಡಿಕೊಳ್ಳುವರು. ಇಂತಹ ಜನರಿಗೆ ತಮ್ಮ ದುರಾಶೆಗಳ ಈಡೇರಿಕೆ ಹೊರತು ಬೇರೆ ಯಾವ ಲಾಭವೂ ಇಲ್ಲ.

ಈಗ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ರಾಜಕಾರಣಿಗಳೂ ಬೇರೆ ವರ್ಗದ ಜನರೂ ಕೆಲವು ಕಡೆಗಳಲ್ಲಿ ಬಹಿರಂಗವಾಗಿಯೂ ಮತ್ತು ಬಹುತೇಕ ಕಡೆಗಳಲ್ಲಿ ತಗ್ಗಿದ ಸ್ವರದಲ್ಲಿಯೂ ಇಂತಹ ಕೆಟ್ಟ ಕೆಲಸ ಮಾಡುವವರ ಪರವಾಗಿ ಮಾತನಾಡುತ್ತಾರೆ. ಕೆಲವು ಸಾರಿ ಮುಸ್ಲಿಮರ ಪರವಾಗಿ ಸಹ ಮಾತನಾಡುತ್ತಾರೆ. ಆದರೆ ನೆನಪಿಡಿರಿ, ಈಗ ಲೋಕವು ಒಂದು ಗ್ಲೋಬಲ್ ವಿಲೇಜ್ (ವಿಶ್ವಗ್ರಾಮ) ಆಗಿದೆ. ಕೆಟ್ಟ ಕೆಲಸವನ್ನು ಕೆಟ್ಟ ಕೆಲಸವೆಂದು ಹೇಳದಿದ್ದರೆ ಆ ದೇಶಗಳ ಶಾಂತಿ ಸಮಾಧಾನಗಳನ್ನು ಈ ವಿಷಯವು ನಾಶಗೊಳಿಸುವುದು. ಮಾತ್ರವಲ್ಲ, ದೇವನ ಲಾಠಿಯು ಬೀಸಲಿರುವುದು ಬೇರೆಯೇ ಆಗಿದೆ.

ಈ ಕಾಲಘಟ್ಟದ ಇಮಾಮರ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಜಯವು ಆಕಾಶದಿಂದ ಬರುತ್ತದೆ. ಯಾವ ಸಂದೇಶ ವಾಹಕರನ್ನು ಅಪಮಾನಿಸಲು ನೀವು ಪ್ರಯತ್ನಿಸುತ್ತಿರುವಿರೋ ಆ ಸಂದೇಶವಾಹಕರು ನಿಶ್ಚಯವಾಗಿಯೂ ಜಯಶಾಲಿಗಳಾಗುವರು ಎಂದು ಆಕಾಶವು ನಿರ್ಧರಿಸಿಬಿಟ್ಟಿದೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದ ಹಾಗೆ ಜಯಗಳಿಸುವುದು ಹೃದಯಗಳನ್ನು ಜಯಿಸುವ ಮೂಲಕವಾಗಿದೆ. ಪರಿಶುದ್ಧ ಮಾತುಗಳು ಪ್ರಭಾವಶಾಲಿಯಾಗಿರುತ್ತವೆ. ತೀವ್ರವಾದವನ್ನು ಬಳಸುವ ಆವಶ್ಯಕತೆ ಪರಿಶುದ್ಧ ಮಾತುಗಳಿಗಿಲ್ಲ. ಅಥವಾ ನಿರರ್ಥಕ ಮಾತುಗಳಿಗೆ ನಿರರ್ಥಕ ಮಾತುಗಳನ್ನು ಬಳಸಿ ಉತ್ತರ ನೀಡುವ ಆವಶ್ಯಕತೆ ಇಲ್ಲ. ಈ ಜನರು ಬಳಸುವ ಕೆಟ್ಟ ಮಾತುಗಳು ಮತ್ತು ಕೆಟ್ಟ ಕೃತ್ಯಗಳು ಇನ್‌ಶಾ ಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಬೇಗನೆ ಕೊನೆಗೊಳ್ಳುವುವು. ಇಹಲೋಕ ಜೀವಿತದ ನಂತರ ಇಂತಹ ಜನರನ್ನು ಅಲ್ಲಾಹನು ನೋಡಿಕೊಳ್ಳುವನು.

ನಾನು ಪಠಿಸಿದ ಪವಿತ್ರ ಖುರ್‌ಆನಿನ ವಚನಗಳಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಅವರ ಹೊಣೆಗಾರಿಕೆ ಬಗ್ಗೆ ಹೀಗೆ ಗಮನ ಹರಿಸಿದ್ದಾನೆ- ನಿಮ್ಮ ಕೆಲಸ ಹಝ್ರತ್ ಪೈಗಂಬರರಿಗೆ(ಸ) ದುರೂದ್ ಪ್ರಾರ್ಥನೆ ಅರ್ಪಿಸುತ್ತಾ ಇರಬೇಕೆಂದು. ಆ ಜನರ ನಿರರ್ಥಕ ಮಾತು ಗಳಿಂದ, ಅಕ್ರಮ ವರ್ತನೆಗಳಿಂದ ಮತ್ತು ಲೇವಡಿ ಮಾತುಗಳಿಂದ ಈ ಮಹಾನ್ ಪ್ರವಾದಿಯ ಗೌರವಕ್ಕೆ ಯಾವ ಹಾನಿಯೂ ಉಂಟಾಗಲಾರದು. ಅವರು ಎಂತಹ ಮಹಾನ್ ಪ್ರವಾದಿಯಾಗಿ ದ್ದಾರೆಂದರೆ ಅವರಿಗೋಸ್ಕರ ಅಲ್ಲಾಹನೂ ಅವನ ದೂತರೂ ಶುಭಾಶೀರ್ವಾದಗಳನ್ನು ಸುರಿಸುತ್ತಿದ್ದಾರೆ. ಸತ್ಯವಿಶ್ವಾಸಿಗಳ ಕೆಲಸ ವೇನೆಂದರೆ ಅವರು ದುರೂದ್ ಪ್ರಾರ್ಥನೆಯನ್ನು ಉಚ್ಚರಿಸುತ್ತಾ ಇರಬೇಕು. ಶತ್ರುಗಳು ನಿರರ್ಥಕ ಕೆಲಸಗಳನ್ನು ಮಾಡುವಾಗ ಮೊದಲಿಗಿಂತ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್‌ಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್‌ಮ್ಮಜೀದ್.**

ಇದು ದುರೂದ್ ಪ್ರಾರ್ಥನೆಯಾಗಿದೆ. ಈ ಪ್ರವಾದಿ ಲೋಕದಲ್ಲಿ ಜಯಶಾಲಿಯಾಗುವುದು ವಿಧಿಸಲ್ಪಟ್ಟಿದೆ.

ಶತ್ರುಗಳ ನಿರರ್ಥಕ ವರ್ತನೆಯ ಬಗ್ಗೆ ಅಹ್ಮದೀ ಮುಸ್ಲಿಮರು ಅತೃಪ್ತಿ, ದುಃಖ ಮತ್ತು ಕೋಪವನ್ನು ಪ್ರಕಟಿಸುವುದರೊಂದಿಗೆ ತಂತಮ್ಮ ದೇಶದಲ್ಲಿ ಅಧಿಕಾರ ಹೊಂದಿದವರೊಂದಿಗೆ ಇಂತಹ ನಿರರ್ಥಕ ಕೆಲಸ ಮಾಡದಿರಲು ಮತ್ತು ತಡೆಯಲು ಗಮನಹರಿಸಬೇಕೆಂದು ಹೇಳಿ ಆ ಬಗ್ಗೆ ಪ್ರಯತ್ನಿಸುತ್ತಾ ಇರುತ್ತಾರೆ ಮತ್ತು ಆ ರೀತಿ ಪ್ರಯತ್ನ ಮಾಡಬೇಕಾಗಿದೆ. ವಾಸ್ತವಿಕ ವಿಷಯಗಳನ್ನು ತಿಳಿಸಿ ಈ ಶತ್ರುಗಳ ಈ ಗೂಢ ಉದ್ದೇಶಗಳ ವಿರುದ್ಧ ಲೋಕಕ್ಕೆ ಮನವರಿಕೆ ಮಾಡಿಕೊಡಲು ಅಹ್ಮದೀ ಮುಸ್ಲಿಮರು ಪ್ರಯತ್ನಿಸುತ್ತಾ ಇರುತ್ತಾರೆ. ತನ್ನ ಸ್ವಂತ ನಡವಳಿಕೆಯಿಂದ ಹಝ್ರತ್ ಪೈಗಂಬರರ(ಸ) ಅತ್ಯುತ್ತಮ ನಡವಳಿಕೆಯನ್ನು ಪ್ರಕಟಿಸಲು ಪ್ರತಿಯೊಬ್ಬ ಅಹ್ಮದೀ ಪ್ರಯತ್ನಿಸುತ್ತಾ ಇಸ್ಲಾಮಿನ ನೈಜ ತತ್ವಗಳ ಮತ್ತು ಹಝ್ರತ್ ಪೈಗಂಬರರ(ಸ) ನಡವಳಿಕೆಯ ಚಿತ್ರವನ್ನು ಲೋಕಕ್ಕೆ ತೋರಿಸಿ ಕೊಡಬೇಕು. **ಅದರೊಂದಿಗೆ, ನಾನು ಇದರ ಮೊದಲು ಹೇಳಿದ ಹಾಗೆ ದುರೂದ್ ಪ್ರಾರ್ಥನೆ ಬಗ್ಗೆ ಮೊದಲಿಗಿಂತ ಹೆಚ್ಚು ಗಮನಹರಿಸಬೇಕು. ಪುರುಷ, ಮಹಿಳೆ, ತರುಣ, ವೃದ್ಧ, ಮಕ್ಕಳು ಎಲ್ಲರೂ ತಮ್ಮ ಸುತ್ತಮುತ್ತಲನ್ನು, ತಮ್ಮ ವಾತಾವರಣವನ್ನು ದುರೂದ್ ಪ್ರಾರ್ಥನೆಯಿಂದ ತುಂಬಬೇಕು. ತಮ್ಮ ಕೆಲಸಗಳನ್ನು ಇಸ್ಲಾಮೀ ತತ್ತೋಪದೇಶಗಳ ಕ್ರಿಯಾತ್ಮಕ ರೂಪವನ್ನಾಗಿ ಪರಿವರ್ತಿಸಬೇಕು. ನಾವು ಈ ರೀತಿಯ ಸುಂದರ ಪ್ರತಿಕ್ರಿಯೆಯನ್ನು ಪ್ರಕಟಿಸಬೇಕು.**

ಈ ಅಕ್ರಮಿಗಳ ಅಂತಿಮ ಗತಿ ಏನಾಗುವುದು ಎಂಬುದರ ಬಗ್ಗೆ ಅಲ್ಲಾಹನು ನಾನು ಪಠಿಸಿದ ಎರಡನೆಯ ವಚನದಲ್ಲಿ ವಿವರಿಸಿರುವನು. ಹಝ್ರತ್ ಪೈಗಂಬರರಿಗೆ(ಸ) ತೊಂದರೆ ಕೊಡುವವರಿಗೆ ಮತ್ತು ಹಝ್ರತ್ ಪೈಗಂಬರರ(ಸ) ಗೌರವಕ್ಕೆ ಕುಂದುಂಟಾಗುವಂತೆ ಪ್ರಯತ್ನಿಸಿ ಅವರ ಅನುಯಾಯಿಗಳಾದ ಸತ್ಯ ವಿಶ್ವಾಸಿಗಳ ಹೃದಯಕ್ಕೆ ನೋವನ್ನುಂಟು ಮಾಡುವವರನ್ನು ಅಲ್ಲಾಹನೇ ಸ್ವತಃ ನೋಡಿಕೊಳ್ಳುವನು. ಅವರ ಮೇಲೆ ಇಹಲೋಕದಲ್ಲಿ ಅಲ್ಲಾಹನ ಶಾಪವಿದೆ. ಈ ಶಾಪದ ಕಾರಣ ಅವರು ಹೆಚ್ಚು ಹೆಚ್ಚಾಗಿ ಕೊಳಕಿನಲ್ಲಿ ಮುಳುಗುತ್ತಾ ಹೋಗುವರು. ಅವರು ಮೃತರಾದ ನಂತರ ಅವರಿಗೆ ಅಲ್ಲಾಹನು ಅಪಮಾನಕರ ಶಿಕ್ಷೆಯನ್ನು ಸಿದ್ಧಪಡಿಸಿಟ್ಟಿರುತ್ತಾನೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಇಂತಹ ಕೆಟ್ಟ ಮಾತನ್ನು ಆಡುವ ಜನರ ಬಗ್ಗೆ ಅವರ ಅಂತಿಮ ಗತಿ ಒಳ್ಳೆಯದಾಗಿರದು ಎಂದು ಹೇಳಿದ್ದಾರೆ. ಇಂತಹ ಜನರು ಅಲ್ಲಾಹನ ಶಾಪಕ್ಕೊಳಪಟ್ಟು ಮತ್ತು ಮೃತರಾದ ನಂತರ ಅಪಮಾನಕರ ಶಿಕ್ಷೆ ಅನುಭವಿಸಿ ತಮ್ಮ ಅಂತಿಮ ಗತಿಯನ್ನು ತಲುಪುವರು.

ಇತರ ಮುಸ್ಲಿಮರು ಅಲ್ಲಾಹನ ಉಪದೇಶದ ಪ್ರಕಾರ, ಅಲ್ಲಾಹನ ಆಜ್ಞೆ ಪ್ರಕಾರ ದುರೂದ್ ಶರೀಫ್ ಪ್ರಾರ್ಥನೆಯ ಮೂಲಕ ತಮ್ಮ ದೇಶಗಳನ್ನೂ ತಮ್ಮ ಪ್ರದೇಶಗಳನ್ನೂ ತಮ್ಮ ಸುತ್ತಮುತ್ತಲನ್ನೂ ತಮ್ಮ ವಾತಾವರಣವನ್ನೂ ತುಂಬಬೇಕು. ಈ ರೀತಿ ಅವರು ಪ್ರತಿಕ್ರಿಯೆ ನೀಡಬೇಕು.

ತಮ್ಮದೇ ದೇಶದಲ್ಲಿ ತಮ್ಮದೇ ಸ್ವತ್ತುಗಳಿಗೆ ಬೆಂಕಿ ಹಚ್ಚುವುದು, ತಮ್ಮದೇ ದೇಶದ ನಾಗರಿಕರನ್ನು ಕೊಲ್ಲುವುದು ಮೊದಲಾದುವುಗಳ ಮೂಲಕ ಮಾಡುವ ಪ್ರತಿಭಟನೆ ಯಾವುದೇ ಲಾಭ ನೀಡಲಾರದು. ಮೆರವಣಿಗೆ ಹೊರಡಿಸಿ, ಹಿಂಸಾಚಾರ ಮಾಡಿ ಪೋಲೀಸರು ಗುಂಡು ಹೊಡೆಯಲು ನಿರ್ಬಂಧಿತರಾಗಿ ತಮ್ಮದೇ ದೇಶದ ಜನರನ್ನು ಹತ್ಯೆ ಮಾಡುವಂತಹ ಪರಿಸ್ಥಿತಿ ಉಂಟಾಗಬಾರದು.

ಪತ್ರಿಕೆಗಳ ಮತ್ತು ಇತರ ಸಂಪರ್ಕ ಮಾಧ್ಯಮಗಳ ಮೂಲಕ ಲಭಿಸುವ ವರದಿಗಳಿಂದ ತಿಳಿಯುವುದೇನೆಂದರೆ, ಸಭ್ಯರಾದ ಬಹುತೇಕ ಪಾಶ್ಚಾತ್ಯ ಜನರು ಸಹ ಈ ಜನರ ವರ್ತನೆ ಬಗ್ಗೆ ತಮ್ಮ ಅತೃಪ್ತಿಯನ್ನೂ ಅನಿಷ್ಟವನ್ನೂ ಸೂಚಿಸಿದ್ದಾರೆ. ಮುಸ್ಲಿಮೇತರರಾದ ಸಭ್ಯ ಪ್ರಕೃತಿಯ ಜನರು ಅಮೇರಿಕದಲ್ಲೂ ಇಲ್ಲಿಯೂ ಅದನ್ನು ಇಷ್ಟಪಡಲಿಲ್ಲ. ಆದರೆ ದೇಶದ ನಾಯಕರು ಒಂದು ಕಡೆ, ಇದು ತಪ್ಪು ಕೆಲಸ ಎಂದು ಹೇಳುತ್ತಾರೆ. ಇನ್ನೊಂದು ಕಡೆ, ಅಭಿಪ್ರಾಯ ಸ್ವಾತಂತ್ರ್ಯದ ನೆವನವನ್ನು ನೀಡಿ ಅದನ್ನು ಬೆಂಬಲಿಸುತ್ತಾರೆ. ಈ ದ್ವಿಮುಖ ಧೋರಣೆ ನಡೆಯಲಾರದು. ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಇರುವ ನಿಯಮ ಯಾವುದಾದರೂ ದೈವಿಕ ಗ್ರಂಥವೇನೂ ಅಲ್ಲ. ನಾನು ಅಮೇರಿಕದಲ್ಲಿ ಅಲ್ಲಿನ ರಾಜಕಾರಣಿಗಳೊಂದಿಗೆ ಹೇಳಿದ್ದೆನು. ಲೌಕಿಕ ಮನೋಭಾವದ ಜನರು ನಿರ್ಮಿಸುವ ನಿಯಮಗಳಲ್ಲಿ ನ್ಯೂನತೆಗಳೂ ತಪ್ಪುಗಳೂ ಸಂಭವಿಸಬಹುದು. ನಿಯಮಗಳನ್ನು ರಚಿಸುವಾಗ ಕೆಲವು ಪಾರ್ಶ್ವಗಳು ದೃಷ್ಟಿಯಿಂದ ಮರೆಯಾಗಿರಲು ಸಾಧ್ಯ. ಏಕೆಂದರೆ ಮನುಷ್ಯನಿಗೆ ಅದೃಶ್ಯದ ಜ್ಞಾನ ಇರುವುದಿಲ್ಲ. ಆದರೆ ಅಲ್ಲಾಹನು ಅದೃಶ್ಯ ವಿಚಾರಗಳನ್ನು ಬಲ್ಲವನಾಗಿದ್ದಾನೆ. ಅಲ್ಲಾಹನು ರಚಿಸಿದ ನಿಯಮಗಳಲ್ಲಿ ನ್ಯೂನತೆಗಳು ಇರುವುದಿಲ್ಲ. ಆದುದರಿಂದ ನೀವು ರಚಿಸುವ ನಿಯಮಗಳು ಯಾವುದೇ ಬದಲಾವಣೆ ಮಾಡಲು ಅಸಾಧ್ಯವೆಂದು ನೀವು ಯೋಚಿಸಬೇಡಿರಿ. ಅಭಿಪ್ರಾಯ ಸ್ವಾತಂತ್ರ್ಯದ ನಿಯಮ ಜಾರಿಯಲ್ಲಿದೆ. ಆದರೆ ಯಾವುದೇ ದೇಶದ ನಿಯಮಗಳ ಪ್ರಕಾರ ಅಥವಾ ಯು.ಎನ್.ಓ. ಚಾರ್ಟರ್ ಪ್ರಕಾರ ಒಬ್ಬನು ಇನ್ನೊಬ್ಬನ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಬಾರದೆಂಬ ನಿಯಮವಿಲ್ಲ. ಅನ್ಯ ಧರ್ಮದ ಗುರುಗಳನ್ನು ಪರಿಹಾಸ ಮಾಡಲು ಅನುಮತಿ ಇಲ್ಲ ಎಂದು ಎಲ್ಲಿಯೂ ಬರೆದಿಲ್ಲ. ಈ ಕಾರಣದಿಂದ ಲೋಕದಲ್ಲಿ ಶಾಂತಿಯು ಕೆಟ್ಟು ಹೋಗುತ್ತಿದೆ. ಇದರಿಂದ ದ್ವೇಷದ ಜ್ವಾಲಾಮುಖಿ ಹೊರಹೊಮ್ಮುತ್ತದೆ. ಇದರಿಂದ ಜನಾಂಗಗಳ ಮತ್ತು ಧರ್ಮಗಳ ಮಧ್ಯೆ ಬಿಕ್ಕಟ್ಟು ವಿಶಾಲವಾಗುತ್ತಾ ಹೋಗುತ್ತಿದೆ. ಆದುದರಿಂದ ವ್ಯಕ್ತಿ ಸ್ವಾತಂತ್ರ್ಯದ ನಿಯಮವನ್ನು ನಿಸ್ಸಂಶಯವಾಗಿ ರಚಿಸಿರಿ. ಆದರೆ ಅನ್ಯ ವ್ಯಕ್ತಿಯ ಭಾವನೆಗಳನ್ನು ನೋಯಿಸುವ ನಿಯಮಗಳನ್ನು ರಚಿಸಬೇಡಿರಿ. ಯು.ಎನ್.ಓ. ಸಹ ಜಯಶಾಲಿಯಾಗದುದರ ಕಾರಣವೇನೆಂದರೆ, ವ್ಯರ್ಥ ನಿಯಮಗಳನ್ನು ರಚಿಸಿ ನಾವು ಮಹಾಕಾರ್ಯ ಸಾಧಿಸಿದೆವು ಎಂದು ಹೆಮ್ಮೆ ಪಡುತ್ತಿದೆ. ಅಲ್ಲಾಹನು ರಚಿಸಿದ ನಿಯಮಗಳನ್ನು ನೋಡಿರಿ. ಅನ್ಯರ ಮೂರ್ತಿಗಳನ್ನು ಕೂಡ ನಿಂದಿಸಬೇಡಿರಿ ಎಂದು ಅಲ್ಲಾಹನು ಹೇಳುತ್ತಾನೆ. ನೀವು ಮೂರ್ತಿಗಳನ್ನು ನಿಂದಿಸಿದರೆ ಸರ್ವಶಕ್ತನಾದ ದೇವನನ್ನು ಮೂರ್ತಿಪೂಜಕರು ನಿಂದಿಸುವರು ಮತ್ತು ಶಾಂತಿ ಭಂಗವಾಗುವುದು. ನಿಮ್ಮ ಹೃದಯಕ್ಕೆ ನೋವಾಗುವುದು. ಹೃದಯಗಳಲ್ಲಿ ಮಾಲಿನ್ಯಗಳು ವರ್ಧಿಸುವುವು. ಜಗಳಗಳು, ಹೋರಾಟಗಳು ನಡೆಯುವುವು. ದೇಶದಲ್ಲಿ ಅಶಾಂತಿ ತಲೆದೋರುವುದು.

ಇದು ಇಸ್ಲಾಮಿನ ದೇವನು ನಮಗೆ ನೀಡಿದ ನಿಯಮವಾಗಿದೆ. ಈ ಲೋಕದ, ಈ ಬ್ರಹ್ಮಾಂಡದ ಸೃಷ್ಟಿಕರ್ತ ನೀಡಿದ ನಿಯಮ ಇದಾಗಿದೆ. ಯಾವ ದೇವನು ಪರಿಪೂರ್ಣ ತತ್ವೋಪದೇಶಗಳೊಂದಿಗೆ ತನ್ನ ಪ್ರೀತಿಗೆ ಪಾತ್ರನಾದ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಕಳುಹಿಸಿದನೋ ಅವನು ಈ ನಿಯಮವನ್ನು ನೀಡಿದನು. ಲೋಕದಲ್ಲಿ ಜನರನ್ನು ಸುಧಾರಣೆ ಮಾಡಲು ಮತ್ತು ಪ್ರೀತಿಯನ್ನು ಲೋಕದಲ್ಲಿ ಸ್ಥಾಪಿಸಲು ಹಝ್ರತ್ ಪೈಗಂಬರರನ್ನು(ಸ) ಕಳುಹಿಸಲಾಯಿತು. ಹಝ್ರತ್ ಪೈಗಂಬರರಿಗೆ(ಸ) "ಸಕಲ ಲೋಕಗಳಿಗೆ ಅನುಗ್ರಹ" ಎಂಬ ಬಿರುದನ್ನು ನೀಡಿ ಸಕಲ ಸೃಷ್ಟಿಗಳಿಗೆ ಅನುಗ್ರಹವಾಗಿ ಅವರನ್ನು ಕಳುಹಿಸಲಾಗಿತ್ತು.

ಲೋಕದ ವಿದ್ಯಾವಂತರು, ಸರಕಾರ ನಡೆಸುವವರು ಮತ್ತು ರಾಜಕಾರಣಿಗಳು ಯೋಚಿಸಬೇಕು. ಕೆಲವು ನಿರರ್ಥಕ ಜನರನ್ನು ಕಠಿಣವಾಗಿ ಹತೋಟಿಗೆ ತರದೆ ನೀವು ಸಹ ಈ ಕುಕೃತ್ಯದಲ್ಲಿ ಭಾಗೀದಾರರು ಆಗುವುದಿಲ್ಲವೇ? ಲೋಕದ ಜನಸಾಮಾನ್ಯರು ಸಹ ಯೋಚಿಸಬೇಕು. ಅನ್ಯರ ಧಾರ್ಮಿಕ ಭಾವನೆಗಳನ್ನು ನೋಯಿಸುವ ಭೂಮಿಯ ಈ ಕೆಲವು ಕ್ರಿಮಿಕೀಟಗಳನ್ನು ಮತ್ತು ಕೊಳಕಿನಲ್ಲಿ ಮುಳುಗಿರುವ ಜನರನ್ನು ಬೆಂಬಲಿಸಿ ನೀವು ಸಹ ಲೋಕದ ಶಾಂತಿಯನ್ನು ಕೆಡಿಸುವ ಕೃತ್ಯದಲ್ಲಿ ಭಾಗವಹಿಸುವುದಿಲ್ಲವೇ?

ಅಹ್ಮದೀ ಮುಸ್ಲಿಮರಾದ ನಾವು ಲೋಕದ ಸೇವೆಗೋಸ್ಕರ ಲಭಿಸುವ ಯಾವ ಸಂದರ್ಭವನ್ನೂ ಬಿಟ್ಟು ಬಿಡುವುದಿಲ್ಲ. ಅಮೇರಿಕದಲ್ಲಿ ಕಳೆದ ವರ್ಷ ರಕ್ತದ ಆವಶ್ಯಕತೆ ಉಂಟಾದಾಗ ಅಹ್ಮದಿಯರಾದ ನಾವು ಹನ್ನೆರಡು ಸಾವಿರ ಬಾಟ್ಲ್ ರಕ್ತವನ್ನು ಸಂಗ್ರಹಿಸಿ ನೀಡಿದೆವು. ಈ ವರ್ಷ ಸಹ ಪುನಃ ರಕ್ತವನ್ನು ಸಂಗ್ರಹಿಸಲಾಗುತ್ತಿದೆ. ಈ ಬಗ್ಗೆ ವ್ಯವಸ್ಥಿತವಾಗಿ ಶ್ರಮಿಸಲಾಗುತ್ತದೆ. ನಾನು ಅಮೇರಿಕದ ಜನರೊಂದಿಗೆ ಹೇಳಿದೆ: ನಾವು ಅಹ್ಮದೀ ಮುಸ್ಲಿಮರು ಅನ್ಯರಿಗೆ ಜೀವಿತ ನೀಡಲು ತಮ್ಮ ರಕ್ತವನ್ನು ನೀಡುತ್ತಾ ಇದ್ದೇವೆ. ನೀವು ನಿಮ್ಮ ಕೃತ್ಯಗಳಿಂದ ಮತ್ತು ಇಂತಹ ಕೃತ್ಯ ಮಾಡುವವರೊಂದಿಗೆ ಹೌದು ಹೌದೆಂದು ಹೇಳುತ್ತಾ ನಮ್ಮ ಹೃದಯಗಳನ್ನು ಘಾಸಿಗೊಳಿಸುತ್ತಿರುವಿರಿ.

ಒಬ್ಬ ಅಹ್ಮದೀ ಮುಸ್ಲಿಮನ ಎಂದರೆ ನಿಜವಾದ ಮುಸ್ಲಿಮನ ಕೆಲಸ ಈ ರೀತಿ ಇರುತ್ತದೆ. ಆದರೆ ನಾವು ನ್ಯಾಯಪಾಲನೆ ಮಾಡುವವರೆಂದು ಹೇಳಿಕೊಳ್ಳುವ ಜನರ ಪೈಕಿ ಒಂದು ಗುಂಪಿನ ವರ್ತನೆ ಮೇಲೆ ವಿವರಿಸಿದಂತಿದೆ.

ಮುಸ್ಲಿಮರ ಬಗ್ಗೆ, ಅವರು ತಪ್ಪು ಮಾಡುತ್ತಿದ್ದಾರೆಂದು ಆಕ್ಷೇಪಿಸಲಾಗುತ್ತಿದೆ. ಹೌದು, ಕೆಲವರ ಪ್ರತಿಕ್ರಿಯೆ ತಪ್ಪಾಗಿದೆ. ಆಸ್ತಿಪಾಸ್ತಿಗಳನ್ನು ಧ್ವಂಸ ಮಾಡುವುದು, ಬೆಂಕಿಹಚ್ಚುವುದು, ಗೇರಾಯಿಸುವುದು, ನಿರಪರಾಧಿಗಳನ್ನು ಕೊಲ್ಲುವುದು, ರಾಯಭಾರಿಗಳನ್ನು ಸಂರಕ್ಷಿಸದೆ ಇರುವುದು, ಅವರನ್ನು ಕೊಲ್ಲುವುದು ಅಥವಾ ಹೊಡೆಯುವುದು– ಇವುಗಳೆಲ್ಲಾ ತಪ್ಪು ಕೆಲಸಗಳೇ ಆಗಿವೆ. ಆದರೆ ಅಲ್ಲಾಹನು ನೇಮಿಸಿದ ನಿಷ್ಕಳಂಕ ಪ್ರವಾದಿಗಳನ್ನು ಅಪಹಾಸ್ಯಮಾಡುವುದು ಮತ್ತು ಕ್ರೂರ ಮನೋಭಾವದಲ್ಲಿ ವರ್ತಿಸುವುದು – ಇವುಗಳು ಸಹ ಬಹಳ ದೊಡ್ಡ ಅಪರಾಧಗಳಾಗಿವೆ. ನೋಡುತ್ತಿರುವಂತೆ ಫ್ರಾನ್ಸಿನ ಒಂದು ಪತ್ರಿಕೆಗೆ ಉತ್ಸಾಹ ಉಂಟಾಯಿತು. ಅದು ಸಹ ನಿರರ್ಥಕ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿತು. ಅವು ಮೊದಲು ಪ್ರಕಟವಾದವುಗಳಿಗಿಂತ ಹೆಚ್ಚು ನಿಕೃಷ್ಟವಾಗಿವೆ. ಲೌಕಿಕ ಜನರು ಲೋಕವನ್ನು ಮಾತ್ರ ತಮ್ಮ ಸರ್ವಸ್ವ ಎಂದು ಭಾವಿಸುತ್ತಾರೆ. ಆದರೆ ಈ ಲೋಕವೇ ಅವರನ್ನು ನಾಶ ಮಾಡುವ ಸಾಮಗ್ರಿಯಾಗಿದೆ ಎಂದು ಅವರಿಗೆ ತಿಳಿಯದು.

ನಾನು ಇನ್ನೊಂದು ವಿಷಯವನ್ನು ಸಹ ಹೇಳಲು ಬಯಸುತ್ತೇನೆ. ಲೋಕದ ಬಹಳ ದೊಡ್ಡ ಭೂಭಾಗದಲ್ಲಿ ಮುಸ್ಲಿಮ್ ಸರಕಾರಗಳು ಸ್ಥಾಪಿತವಾಗಿವೆ. ಲೋಕದ ಬಹಳ ದೊಡ್ಡ ಪ್ರದೇಶಗಳು ಮುಸ್ಲಿಮರ ಅಧೀನದಲ್ಲಿವೆ. ಬಹುತೇಕ ಮುಸ್ಲಿಮ್ ದೇಶಗಳಿಗೆ ಅಲ್ಲಾಹನು ನೈಸರ್ಗಿಕ ಸಂಪತ್ತನ್ನು ದಯಪಾಲಿಸಿದ್ದಾನೆ. ಮುಸ್ಲಿಮ್ ದೇಶಗಳು ಸಂಯುಕ್ತ ರಾಷ್ಟ್ರ ಸಂಘದ (U.N.O) ಸದಸ್ಯರೂ ಆಗಿವೆ. ಮನುಷ್ಯನಿಗೆ ಪರಿಪೂರ್ಣ ಜೀವಿತ ಮಾರ್ಗದರ್ಶಿಯಾಗಿರುವ ಪವಿತ್ರ ಖುರ್‌ಆನನ್ನು ನಂಬುವವರೂ ಅದನ್ನು ಪಠಿಸುವವರೂ ಆಗಿರುವಾಗ ಪ್ರತಿಯೊಂದು ಕ್ಷೇತ್ರದಲ್ಲಿ ಈ ಸುಂದರ ತತ್ವಗಳನ್ನು ಲೋಕದಲ್ಲಿ ಪ್ರಚಾರಗೊಳಿಸಲು ಮುಸ್ಲಿಮ್ ಸರಕಾರಗಳು ಏಕೆ ಪ್ರಯತ್ನ ಮಾಡಲಿಲ್ಲ? ಈಗ ಸಹ ಏಕೆ ಮಾಡುವುದಿಲ್ಲ? ಪವಿತ್ರ ಖುರ್‌ಆನ್ ನೀಡುವ ಉಪದೇಶಗಳ ಪ್ರಕಾರ, ಧಾರ್ಮಿಕ ಭಾವನೆಗಳನ್ನು ನೋಯಿಸುವುದು, ಪ್ರವಾದಿಗಳನ್ನು ನಿಂದಿಸುವುದು ಅಥವಾ ಅದಕ್ಕೋಸ್ಕರ ಪ್ರಯತ್ನಿಸುವುದು ಕೂಡ ಅಪರಾಧವಾಗಿದೆ ಹಾಗೂ ಬಹಳ ದೊಡ್ಡ ಅಪರಾಧ ಮತ್ತು ಪಾಪಕೃತ್ಯವಾಗಿದೆ ಎಂದು ಏಕೆ ಪ್ರಕಟಿಸುವುದಿಲ್ಲ? ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಇದನ್ನು ಸಹ ಸಂಯುಕ್ತ ರಾಷ್ಟ್ರ ಸಂಘದ ಚಾರ್ಟರ್‌ನಲ್ಲಿ ಸೇರಿಸಬೇಕು. ಆಗ ಯಾವುದೇ ದೇಶ ತನ್ನ ದೇಶದ ನಾಗರಿಕತೆಗೆ ಅನ್ಯರ ಧಾರ್ಮಿಕ ಭಾವನೆಯೊಂದಿಗೆ ಆಟವಾಡಲು ಅನುಮತಿ ನೀಡಲಾರದು. ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಲೋಕದ ಶಾಂತಿಯನ್ನು ಕೆಡಿಸಲು ಅನುಮತಿ ನೀಡಲಾರದು.

ಆದರೆ ಇಷ್ಟು ಕಾಲ ಇವೆಲ್ಲಾ ಘಟನೆಗಳು ನಡೆಯುತ್ತಾ ಇದ್ದರೂ ಮುಸ್ಲಿಮ್ ದೇಶಗಳು ಒಗ್ಗೂಡಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ಬೇರೆ ಎಲ್ಲ ಪ್ರವಾದಿಗಳ ಗೌರವವನ್ನು ಕಾಪಾಡುವ ಬಗ್ಗೆ ಲೋಕಕ್ಕೆ ತಿಳಿಸಲು ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅದು ಅಂಗೀಕಾರ ಪಡೆಯುವಂತೆ ಮಾಡಲು ದೃಢ ಪ್ರಯತ್ನ ಎಂದೂ ನಡೆಸಲಿಲ್ಲ ಎಂಬುದು ಖೇದಕರವಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ಅನ್ಯ ತೀರ್ಮಾನಗಳ ಹಾಗೆ ಈ ತೀರ್ಮಾನ ಸಹ ಜಾರಿಗೊಳ್ಳದೆ ಹೋದರೂ ಕನಿಷ್ಠ ಈ ವಿಷಯವು ಅದರ ದಾಖಲೆಗೆ ಸೇರ್ಪಡೆ ಹೊಂದುವುದು. ಆರ್ಗನೈಸೇಶನ್ ಆಫ್ ಇಸ್ಲಾಮಿಕ್ ಕಂಟ್ರೀಸ್ (O.I.C.) ಸ್ಥಾಪಿಸಲ್ಪಟ್ಟಿದೆ. ಆದರೆ ಅದರ ಮೂಲಕ ಕೂಡ ಮುಸ್ಲಿಮರ ಘನತೆಯನ್ನು ಲೋಕದಲ್ಲಿ ಸ್ಥಾಪನೆಗೊಳಿಸಲು ಯಾವುದೇ ಪ್ರಯತ್ನ ನಡೆಯಲಿಲ್ಲ. ಮುಸ್ಲಿಮ್ ದೇಶಗಳ ರಾಜಕಾರಣಿಗಳು ತಮ್ಮ ಆಶೆಗಳನ್ನು ಈಡೇರಿಸಲು ಎಲ್ಲ ರೀತಿ ಪ್ರಯತ್ನ ಮಾಡುತ್ತಾ ಇರುತ್ತಾರೆ. ಆದರೆ ಅವರಿಗೆ ಯಾವುದಾದರೂ ವಿಷಯದ ಬಗ್ಗೆ ಚಿಂತೆ ಇಲ್ಲವಾದರೆ ಅದು ಧರ್ಮದ ಘನತೆಯ ಬಗ್ಗೆಯಾಗಿದೆ. ನಮ್ಮ ರಾಜಕೀಯ ನಾಯಕರು ದೃಢ ಪ್ರಯತ್ನ ಮಾಡುತ್ತಿದ್ದರೆ ಸಾಮಾನ್ಯ ಜನರು ಹೀಗೆ ತಪ್ಪು ಪ್ರತಿಕ್ರಿಯೆ ಪ್ರಕಟಿಸುತ್ತಿರಲಿಲ್ಲ. ಪಾಕಿಸ್ತಾನ ಮತ್ತು ಬೇರೆ ದೇಶಗಳಲ್ಲಿ ಇರುವ ಜನರಿಗೆ ತಮ್ಮ ನಾಯಕರು ಪ್ರತಿಭಟನೆಯ ಕೆಲಸ ಮಾಡುವವರು ಎಂದು ತಿಳಿದಿದ್ದರೆ ಅವರು ತಪ್ಪು ರೀತಿ ಪ್ರತಿಭಟನೆ ಮಾಡುತ್ತಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಗೌರವ ಕಾಪಾಡಲು ಮತ್ತು ಎಲ್ಲಾ ಪ್ರವಾದಿಗಳ ಗೌರವ ಕಾಪಾಡಲು ಲೋಕದ ವೇದಿಕೆಗಳಲ್ಲಿ ನಮ್ಮ ರಾಜಕೀಯ ನಾಯಕರು ಹೇಗೆ ಪ್ರತಿಭಟನೆ ಸೂಚಿಸಬೇಕೆಂದರೆ,

ಈ ಜನರು ಹೇಳುವುದು ಸತ್ಯ ಮತ್ತು ವಾಸ್ತವಿಕವಾದುದಾಗಿದೆ ಎಂದು ಲೋಕವು ಹೇಳಬೇಕು.

ಪಶ್ಚಿಮ ದೇಶಗಳಲ್ಲೂ ಲೋಕದ ಎಲ್ಲಾ ಪ್ರದೇಶಗಳಲ್ಲೂ ಮುಸ್ಲಿಮರ ಬಹಳ ದೊಡ್ಡ ಜನಸಂಖ್ಯೆ ಇದೆ. ಧಾರ್ಮಿಕ ದೃಷ್ಟಿಯಲ್ಲೂ ಜನಸಂಖ್ಯೆಯ ದೃಷ್ಟಿಯಲ್ಲೂ ಮುಸ್ಲಿಮರು ಲೋಕದ ಎರಡನೆಯ ಮಹಾಶಕ್ತಿ ಆಗಿದ್ದಾರೆ. ಈ ಜನರು ಅಲ್ಲಾಹನ ಆಜ್ಞೆ ಪಾಲಿಸುವವರಾದರೆ ಪ್ರತಿಯೊಂದು ರೀತಿಯಲ್ಲಿಯೂ ಮುಸ್ಲಿಮರು ಮಹಾಶಕ್ತಿಶಾಲಿಗಳಾಗಬಲ್ಲರು. ಆಗ ಇಸ್ಲಾಮಿನ ಶತ್ರುಗಳಿಗೆ ಈ ರೀತಿ ಹೃದಯಕ್ಕೆ ನೋವುಂಟುಮಾಡುವ ಕೃತ್ಯ ಮಾಡಲು ಮಾತ್ರವಲ್ಲ ಅದರ ಬಗ್ಗೆ ಯೋಚಿಸಲು ಕೂಡ ಸಾಧ್ಯವಾಗಲಾರದು.

ಮುಸ್ಲಿಮ್ ದೇಶಗಳಲ್ಲಿ ಮಾತ್ರವಲ್ಲ ಲೋಕದ ಪ್ರತಿಯೊಂದು ದೇಶದಲ್ಲಿ ಮುಸ್ಲಿಮರು ಬಹಳ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಯುರೋಪಿನಲ್ಲಿ ತುರ್ಕಿ ಮುಸ್ಲಿಮರು ಮಿಲಿಯಗಟ್ಟಲೆ ಸಂಖ್ಯೆಯಲ್ಲಿದ್ದಾರೆ. ಯುರೋಪಿನ ಪ್ರತಿಯೊಂದು ದೇಶದಲ್ಲಿ ಅವರು ಮಿಲಿಯಗಟ್ಟಲೆ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇದೇ ರೀತಿ ಬೇರೆ ಮುಸ್ಲಿಮ್ ಜನಾಂಗಗಳೂ ವಾಸಿಸುತ್ತಾ ಇವೆ. ಏಶಿಯಾದ ಮುಸ್ಲಿಮರು ಯುರೋಪಿನಲ್ಲಿದ್ದಾರೆ. ಯು.ಕೆ.ಯಲ್ಲೂ ಅಮೇರಿಕದಲ್ಲೂ ಕೆನಡದಲ್ಲೂ ಮುಸ್ಲಿಮರಿದ್ದಾರೆ. ಯುರೋಪಿನ ಪ್ರತಿಯೊಂದು ಪ್ರದೇಶದಲ್ಲೂ ಅವರು ವಾಸಿಸುತ್ತಿದ್ದಾರೆ. ಧಾರ್ಮಿಕ ಸೌಹಾರ್ದವನ್ನು ಪ್ರತಿಪಾದಿಸುವ ರಾಜಕಾರಣಿಗಳಿಗೆ ಮಾತ್ರ ಮತದಾನ ಮಾಡುವೆವು ಎಂದು ಇವರೆಲ್ಲರೂ ತೀರ್ಮಾನಿಸಿದರೆ ಮತ್ತು ಧಾರ್ಮಿಕ ಸೌಹಾರ್ದ ಕೇವಲ ಬಾಯಿ ಮಾತಿನದಾಗದೆ ಕೃತಿ ರೂಪದಲ್ಲಿದ್ದರೆ, ಇಂತಹ ಕೆಟ್ಟ ಕೆಲಸ ಮಾಡುವವರನ್ನು, ಅಸಭ್ಯ ಹೇಳುವವರನ್ನು ಅಥವಾ ಚಲನಚಿತ್ರ ನಿರ್ಮಿಸುವವರನ್ನು ಅವರು ನಿಂದಿಸುವರು ಮತ್ತು ಸರಕಾರದ ಒಂದು ವಿಭಾಗ ಇಂತಹ ನಿಕೃಷ್ಟ ಕೆಲಸಗಳ ವಿರುದ್ಧ ಬಹಿರಂಗವಾಗಿ ಅಭಿಪ್ರಾಯ ಸೂಚಿಸುವವರಾಗಿ ಪರಿಣಮಿಸುವರು.

ಮುಸ್ಲಿಮರು ತಮ್ಮ ಮಹತ್ವವನ್ನು ಮನವರಿಕೆ ಮಾಡಿಕೊಂಡರೆ ಲೋಕದಲ್ಲಿ ಒಂದು ಕ್ರಾಂತಿ ಉಂಟುಮಾಡಬಲ್ಲರು. ಅವರು ತಾವಿರುವ ದೇಶಗಳಲ್ಲಿ ಧಾರ್ಮಿಕ ಭಾವನೆಗಳನ್ನು ಗೌರವಿಸುವ ನಿಯಮಗಳನ್ನು ರಚಿಸುವಂತೆ ಮಾಡಬಲ್ಲರು. ಆದರೆ ದುರದೃಷ್ಟಕರವಾಗಿ ಅದರ ಬಗ್ಗೆ ಅವರು ಗಮನಹರಿಸುವುದಿಲ್ಲ. ಅಹ್ಮದಿಯಾ ಜಮಾಅತ್ ಇವರ ಬಗ್ಗೆ ಗಮನಹರಿಸಲು ಪ್ರಯತ್ನಿಸಿದರೆ ಅದನ್ನು ವಿರೋಧಿಸಿ ಶತ್ರುಗಳ ಕೈಗಳನ್ನು ಬಲಪಡಿಸುತ್ತಾರೆ. ಅಲ್ಲಾಹನು ಮುಸ್ಲಿಮರ ನಾಯಕರಿಗೆ, ರಾಜಕಾರಣಿಗಳಿಗೆ ಮತ್ತು ಧಾರ್ಮಿಕ ಪಂಡಿತರಿಗೆ ವಿವೇಕವನ್ನು ನೀಡಲಿ ಮತ್ತು ಅವರು ತಮ್ಮ ಶಕ್ತಿಯನ್ನು ಬಲಪಡಿಸುವಂತಾಗಲಿ. ಅವರು ತಮ್ಮ ಮಹತ್ವವನ್ನು ಗುರುತಿಸುವಂತಾಗಲಿ. ತಮ್ಮ ವಿದ್ಯಾಭ್ಯಾಸದ ಬಗ್ಗೆ ಶ್ರದ್ಧೆ ನೀಡುವಂತಾಗಲಿ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಆಕ್ಷೇಪಿಸುವವರು ಮತ್ತು ಈ ಕೆಟ್ಟ ಚಲನಚಿತ್ರ ನಿರ್ಮಿಸಿದವರು ಮತ್ತು ಅದರಲ್ಲಿ ಕೆಲಸಮಾಡಿದವರು ಎಂತಹ ಜನರು ಎಂಬುದರ ಬಗ್ಗೆ ಸಂಪರ್ಕ ಮಾಧ್ಯಮಗಳಲ್ಲಿ ವರದಿಯಾಗಿದೆ. ಎಲ್ಲದಕ್ಕಿಂತ ಹೆಚ್ಚು ಕೆಲಸ ಮಾಡಿದವನು ಅಮೇರಿಕದಲ್ಲಿ ವಾಸಿಸುವ ಒಬ್ಬ ಖಿಬ್ತಿ (ಈಜಿಪ್ಷಿಯನ್) ಕ್ರೈಸ್ತನೆಂದು ತಿಳಿದು ಬಂದಿದೆ. ನಕೂಲ ಬಸೇಲೀ ನಾಕುಲ ಅಥವಾ ಅಂತಹ ಹೆಸರು ಅವನಿಗಿದೆ. ಅವನು ಸ್ಯಾಮ್ ಬಸೇಲಿ ಎಂದು ಸಹ ಕರೆಯಲ್ಪಡುತ್ತಾನೆ. ಅವನ ಹಿನ್ನೆಲೆ ಅಪರಾಧ ಜಗತ್ತೆಂದು ತಿಳಿದು ಬಂದಿದೆ. ಅವನು ಅಪರಾಧಿಯಾಗಿದ್ದು ವಂಚನೆಯ ಅಪರಾಧಕ್ಕೆ ಶಿಕ್ಷಿಸಲ್ಪಟ್ಟು 2010ರಲ್ಲಿ ಸೆರೆಮನೆಯಲ್ಲಿ ಇದ್ದನು. ಈ ಚಲನಚಿತ್ರದ ನಿರ್ದೇಶಕ ಅಶ್ಲೀಲ ಚಲನಚಿತ್ರಗಳನ್ನು ನಿರ್ದೇಶನ ಮಾಡುವವನಾಗಿದ್ದಾನೆ. ಅದರಲ್ಲಿ ಭಾಗವಹಿಸಿದ ನಟರು ಅಶ್ಲೀಲ ಚಿತ್ರಗಳಲ್ಲಿ ನಟಿಸುವವರಾಗಿರುವವರು. ಇದು ಈ ಜನರ ನೈತಿಕ ಮಟ್ಟವಾಗಿದೆ. ಅಶ್ಲೀಲ ಚಿತ್ರಗಳಿಗೆ ಯಾವುದೇ ಹದ್ದುಬಸ್ತುಗಳ ಬಗ್ಗೆ ಯೋಚಿಸಲು ಸಾಧ್ಯವಿಲ್ಲ. ಈ ಜನರು ಎಂತಹ ಕೊಳಕಿನಲ್ಲಿ ಹೊರಳಾಡುತ್ತಿದ್ದಾರೆ! ಅಲ್ಲಾಹನೇ ಯಾವ ಉನ್ನತ ನೈತಿಕಗುಣ ಮತ್ತು ಪರಿಶುದ್ಧತೆಯ ಬಗ್ಗೆ ಸಾಕ್ಷ್ಯ ನೀಡಿರುವನೋ ಅಂತಹ ಮಹಾನುಭಾವರನ್ನು ಈ ಜನರು ಆಕ್ಷೇಪಿಸುತ್ತಿದ್ದಾರೆ.

ಈ ಜನರು ಕೊಳಕು ಕೆಲಸ ಮಾಡಿ ನಿಶ್ಚಯವಾಗಿಯೂ ಅಲ್ಲಾಹನ ಶಿಕ್ಷೆಯನ್ನು ಆಮಂತ್ರಿಸಿರುವರು ಮತ್ತು ಆಮಂತ್ರಣ ಮುಂದುವರಿಸುತ್ತಾ ಇದ್ದಾರೆ. ಈ ಚಲನಚಿತ್ರವನ್ನು ಸ್ಪಾನ್ಸರ್ ಮಾಡಿದವರು (ಪ್ರಾಯೋಜಿಸಿದವರು) ಸಹ ಅಲ್ಲಾಹನ ಶಿಕ್ಷೆಯಿಂದ ರಕ್ಷಣೆ ಪಡೆಯಲಾರರು. ಅವರಲ್ಲಿ ಒಬ್ಬ ಕ್ರೈಸ್ತ ಪಾದರಿಯೂ ಸೇರಿದ್ದಾನೆ. ಅವನು ಅಗ್ಗದ ಪ್ರಚಾರಗಳಿಸಲು ವಿವಿಧ ಸಂದರ್ಭಗಳಲ್ಲಿ ಪವಿತ್ರ ಖುರ್‌ಆನ್ ಮೊದಲಾದವುಗಳನ್ನು ಸುಡಲು ಪ್ರಯತ್ನ ಮಾಡುತ್ತಾ ಇರುತ್ತಾನೆ.

ಅಲ್ಲಾಹುಮ್ಮ ಮಝ್ಝಿಕ್‌ಹುಮ್ ಕುಲ್ಲ ಮುಮಝ್ಝಖಿನ್

ವ ಸಹ್ಹಿಖ್‌ಹುಮ್ ತಸ್‌ಹೀಖ

ಓ ಅಲ್ಲಾಹ್, ಅವರನ್ನು ಪರಿಪೂರ್ಣವಾಗಿ ನಾಶಮಾಡು.

ಅವರನ್ನು ಪುಡಿ ಪುಡಿಯಾಗಿ ಮಾಡು.

ಸಂಪರ್ಕ ಮಾಧ್ಯಮಗಳಲ್ಲಿ ಕೆಲವರು ಈ ಕೃತ್ಯವನ್ನು ಖಂಡಿಸಿದ್ದಾರೆ. ಅದರೊಂದಿಗೆ ಮುಸ್ಲಿಮರ ಪ್ರತಿಕ್ರಿಯೆಗಳನ್ನೂ ಖಂಡಿಸಿದ್ದಾರೆ. ತಪ್ಪಾದ ರೀತಿಯ ಪ್ರತಿಕ್ರಿಯೆಯನ್ನು ಖಂಡಿಸಬೇಕಾಗಿದೆ. ಅದು ಸರಿಯಾಗಿದೆ. ಆದರೆ ಈ ಕೆಟ್ಟ ಕೆಲಸವನ್ನು ಪ್ರಾರಂಭಿಸಿದವರು ಯಾರೆಂದು ಸಹ ನೋಡಬೇಕಾಗಿದೆ.

ಇದು ಮುಸ್ಲಿಮರ ದುರದೃಷ್ಟವಾಗಿದೆ. ಎಲ್ಲವೂ ಮುಸ್ಲಿಮರ ಅನೈಕ್ಯತೆ ಮತ್ತು ಅನಾಯಕತ್ವ ಕಾರಣದಿಂದ ಸಂಭವಿಸುತ್ತದೆ. ಹಝ್ರತ್ ಪೈಗಂಬರರನ್ನು(ಸ) ಪ್ರೀತಿಸುವುದಾಗಿ ವಾದಿಸುತ್ತಾರಾದರೂ ಮುಸ್ಲಿಮರು ಧರ್ಮದಿಂದ ದೂರಸರಿದಿರುವರು. ವಾದಗಳು ಬಹಳ ಇವೆ. ಆದರೆ ಧರ್ಮದ ಬಗ್ಗೆ ಅರಿವು ಇಲ್ಲ. ಲೌಕಿಕವಾಗಿಯೂ ಬಲಹೀನರಾಗುತ್ತಾ ಇದ್ದಾರೆ. ಯಾವುದೇ ಮುಸ್ಲಿಮ್ ದೇಶ ಯಾವುದೇ ದೇಶದ ವಿರುದ್ಧ ತೀವ್ರವಾಗಿ ಪ್ರತಿಭಟಿಸಲಿಲ್ಲ. ಯಾರಾದರೂ ಪ್ರತಿಭಟಿಸಿದ್ದರೆ ಅದು ಎಷ್ಟು ಬಲಹೀನವಾಗಿ ಎಂದರೆ ಸಂಪರ್ಕ ಮಾಧ್ಯಮಗಳು ಅದಕ್ಕೆ ಯಾವ ಮಹತ್ವವನ್ನೂ ನೀಡಲಿಲ್ಲ. ಮುಸ್ಲಿಮರ ಪ್ರತಿಭಟನೆಯ ಬಗ್ಗೆ ಯಾವುದಾದರೂ ವರದಿ ಸಂಪರ್ಕ ಮಾಧ್ಯಮಗಳು ನೀಡಿದರೆ ಅದು 1.8 ಬಿಲಿಯನ್ ಮುಸ್ಲಿಮರು ಬಾಲಿಶವಾಗಿ ಪ್ರತಿಭಟಿಸುತ್ತಿರುವರೋ ಎಂಬಂತೆ. ಮೇಲ್ವಿಚಾರಕರು ಯಾರೂ ಇಲ್ಲದಿದ್ದರೆ ಅವರು ಅತ್ತಿತ್ತ ಅಲೆದಾಡುವವರೇ ಆಗುತ್ತಾರೆ. ಆದುದರಿಂದ

ಪ್ರತಿಕ್ರಿಯೆ ಬಾಲಿಶದಂತಾಗುತ್ತದೆ. ಈ ರೀತಿ ಈ ಪ್ರತಿಭಟನೆಯನ್ನು ಲೇವಡಿಮಾಡಲಾಯಿತು. ಅದರೊಂದಿಗೆ ಒಂದು ವಾಸ್ತವಿಕತೆಯನ್ನು ಸ್ಪಷ್ಟಪಡಿಸಲಾಯಿತು. ಈಗಲಾದರೂ ಮುಸ್ಲಿಮರಿಗೆ ನಾಚಿಕೆಯಾಗುವಂತೆ ಅಲ್ಲಾಹನು ಮಾಡಲಿ.

ಧರ್ಮದ ಕಣ್ಣು ಕುರುಡಾಗಿರುವ ಈ ಚಲನಚಿತ್ರ ನಿರ್ಮಾಪಕರಿಗೆ ಪ್ರವಾದಿಗಳ ಮಹತ್ವಪೂರ್ಣ ಸ್ಥಾನದ ಬಗ್ಗೆ ಅರಿವಿರುವುದಿಲ್ಲ. ಈ ಜನರು ಹಝ್ರತ್ ಈಸಾರನ್ನು[ಅ] (ಯೇಸುಕ್ರಿಸ್ತರನ್ನು) ಸಹ ಹೀನೈಸಿ ಮೌನವಾಗಿರುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೋಸ್ಕರ[ಸ] ಮುಸ್ಲಿಮರು ಮಾಡುವ ತಮ್ಮ ಭಾವನೆಗಳ ಪ್ರಕಟಣೆ ಮಕ್ಕಳ ಪ್ರತಿಕ್ರಿಯೆಯ ಹಾಗೆ ಅವರಿಗೆ ತೋರುತ್ತದೆ. ನಾನು ಇದರ ಮೊದಲು 2006ರಲ್ಲಿ ಸಹ ಇದರ ಬಗ್ಗೆ ಮುಸ್ಲಿಮರ ಗಮನ ಸೆಳೆದಿದ್ದೆನು. ಮುಂದೆ ಇಂತಹ ಕೆಟ್ಟ ಕೆಲಸ ಮಾಡುವ ಧೈರ್ಯ ಇಸ್ಲಾಮಿನ ಶತ್ರುಗಳಿಗೆ ಉಂಟಾಗದಿರಲು ಕಾರ್ಯಯೋಜನೆಗಳನ್ನು ರೂಪಿಸುವ ಬಗ್ಗೆ ಗಮನಿಸಲು ಹೇಳಿದ್ದೆನು. ಮುಸ್ಲಿಮ್ ದೇಶಗಳು ಈಗಲಾದರೂ ನನ್ನ ಮಾತುಗಳನ್ನು ಆಲಿಸಿದ್ದರೆ ಎಷ್ಟು ಚೆನ್ನಾಗಿತ್ತು! ಪ್ರತಿಯೊಬ್ಬ ಅಹ್ಮದೀ ಈ ಸಂದೇಶವನ್ನು ತಲುಪಿಸಲು ಪ್ರಯತ್ನಿಸಬೇಕು. ನಾಲ್ಕು ದಿನ ಪ್ರತಿಭಟಿಸಿ ಕುಳಿತುಕೊಂಡರೆ ಸಾಕಾಗಲಾರದು.

ಜನರು ವಿವಿಧ ಕಾರ್ಯಯೋಜನೆಗಳ ಬಗ್ಗೆ ಸಲಹೆ ನೀಡುತ್ತಾರೆ. ಒಂದು ಸಲಹೆ ಹೀಗಿದೆ: ಲೋಕದಲ್ಲಿರುವ ಎಲ್ಲಾ ಮುಸ್ಲಿಮ್ ನ್ಯಾಯವಾದಿಗಳು (ವಕೀಲರು) ಒಗ್ಗೂಡಿ ಮನವಿ ಸಲ್ಲಿಸಬೇಕು. ಅಂತರ್‌ರಾಷ್ಟ್ರೀಯವಾಗಿ ಸ್ಥಾನಗಳಿಸಿರುವ ನ್ಯಾಯವಾದಿಗಳು ಇದರ ಬಗ್ಗೆ ಯೋಚಿಸಿದರೆ ಎಷ್ಟು ಚೆನ್ನಾಗಿತ್ತು! ಇದರ ಪರಿಣಾಮಗಳ ಬಗ್ಗೆ ಯೋಚಿಸಿ ಹೀಗೆ ಮಾಡಬಹುದೋ ಇಲ್ಲವೋ ಎಂದು ನಿರ್ಧರಿಸಲಿ ಅಥವಾ ಬೇರೆ ಯಾವುದಾದರೂ ದಾರಿಯನ್ನು ಕಂಡುಹಿಡಿಯಲಿ. ಇಂತಹ ದುಷ್ಟ ಕೆಲಸಗಳು ನಡೆಯುತ್ತಿರುವುದನ್ನು ನೋಡಿ ತಮ್ಮ ದೇಶಗಳಲ್ಲಿ ಪ್ರತಿಭಟಿಸಿ ಹಿಂಸಾಚಾರ ಮತ್ತು ಧ್ವಂಸ ನಡೆಸಿ ಸುಮ್ಮನೆ ಕುಳಿತುಕೊಳ್ಳುವುದರಿಂದ ಪಶ್ಚಿಮ ದೇಶಗಳ ಮೇಲೆ ಯಾವ ಪರಿಣಾಮವೂ ಉಂಟಾಗಲಾರದು. ಆ ಚಲನಚಿತ್ರ ನಿರ್ಮಿಸಿದವರ ಮೇಲೆಯೂ ಯಾವುದೇ ಪ್ರಭಾವ ಉಂಟಾಗಲಾರದು. ನಿರಪರಾಧಿಗಳನ್ನು ಆಕ್ರಮಿಸುವುದು ಅಥವಾ ಬೆದರಿಕೆ ನೀಡುವುದು, ಕೊಲ್ಲಲು ಪ್ರಯತ್ನ ಮಾಡುವುದು, ರಾಯಭಾರಿ ಕಛೇರಿಗಳ ಮೇಲೆ ಆಕ್ರಮಣ ನಡೆಸುವುದು ಇವೆಲ್ಲವೂ ಇಸ್ಲಾಮೀ ಉಪದೇಶಗಳಿಗೆ ವಿರುದ್ಧವಾಗಿವೆ. ಇಸ್ಲಾಮ್ ಖಂಡಿತವಾಗಿಯೂ ಇದಕ್ಕೆ ಅನುಮತಿ ನೀಡುವುದಿಲ್ಲ. ಹೀಗೆ ಮಾಡಿದರೆ ಹಝ್ರತ್ ಪೈಗಂಬರರನ್ನು[ಸ] ಆಕ್ಷೇಪಿಸಲು ಸ್ವತಃ ಸಂದರ್ಭ ನೀಡಿದಂತೆ ಆಗುವುದು.

ಭೀಕರ ವಾದ ಇದಕ್ಕೆ ಉತ್ತರವಾಗಲಾರದು. ಇದಕ್ಕೆ ಉತ್ತರ ನಾನು ನಿಮಗೆ ಹೇಳುತ್ತಿರುವುದೇ ಆಗಿದೆ. ನೀವು ನಿಮ್ಮ ನಡೆವಳಿಕೆಗಳನ್ನು ಸುಧಾರಣೆ ಮಾಡಿ ಮಾನವರಿಗೆ ಮೋಕ್ಷ ನೀಡಿದ ಪ್ರವಾದಿಗೆ ದುರೂದ್ ಪ್ರಾರ್ಥನೆ ಅರ್ಪಿಸಿರಿ. ಮುಸ್ಲಿಮ್ ದೇಶಗಳು ಇದರ ಬಗ್ಗೆ ಪ್ರಯತ್ನಿಸಲು ಒಗ್ಗೂಡಬೇಕು. ಪಶ್ಚಿಮ ದೇಶಗಳಲ್ಲಿ ವಾಸಿಸುವ ಮುಸ್ಲಿಮರು ತಮ್ಮ ಓಟಿನ ಶಕ್ತಿಯನ್ನು ಅಂಗೀಕರಿಸುವಂತೆ ಮಾಡಬೇಕು. ಅಹ್ಮದಿಯಾ ಜಮಾಅತಿಗೆ ಸೇರಿದವರು ಈ ನಿಟ್ಟಿನಲ್ಲಿ ಕೃತಿಶೀಲರಾಗಬೇಕು. ತಮ್ಮ ಅಹ್ಮದಿಯೇತರ ಸ್ನೇಹಿತರನ್ನು ಈ ರೀತಿ ನಡೆಸಲು ಪ್ರಯತ್ನಿಸಬೇಕು. ತಮ್ಮ ಓಟಿನ ಶಕ್ತಿ ಇರುವಲ್ಲೆಲ್ಲಾ ಪ್ರಕಟಿಸಬೇಕು. ಹಝ್ರತ್ ಪೈಗಂಬರರ[ಸ] ಜೀವಿತದ ಸುಂದರ ಪಾರ್ಶ್ವಗಳನ್ನು ಉತ್ತಮ ರೀತಿಯಲ್ಲಿ ಜನರ ಮುಂದಿರಿಸಬೇಕು.

ಈಗ ಈ ಜನರು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಬೊಬ್ಬೆ ಹೊಡೆಯುತ್ತಾರೆ - ಇಸ್ಲಾಮಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾತನಾಡುವ ಸ್ವಾತಂತ್ರ್ಯ ಇಲ್ಲವೆಂದು. ಅವರು ಮುಸ್ಲಿಮ್ ದೇಶಗಳ ಉದಾಹರಣೆ ನೀಡಿ ಅಲ್ಲಿನ ನಾಗರಿಕರಿಗೆ ಸ್ವಾತಂತ್ರ್ಯವಿಲ್ಲವೆಂದು ಹೇಳುತ್ತಾರೆ. ಅಲ್ಲಿ ನಾಗರಿಕ ಸ್ವಾತಂತ್ರ್ಯಗಳು ಇಲ್ಲವಾದರೆ ಅದು ಆ ದೇಶಗಳ ದುರದೃಷ್ಟವಾಗಿದೆ. ಅವರು ಇಸ್ಲಾಮೀ ಉಪದೇಶಗಳನ್ನು ಅನುಸರಿಸುವುದಿಲ್ಲ. ಅದರೊಂದಿಗೆ ಇಸ್ಲಾಮೀ ತತ್ವಗಳಿಗೆ ಯಾವ ಸಂಬಂಧವೂ ಇಲ್ಲ. ನಮಗೆ ಚರಿತ್ರೆಯಿಂದ ಹೀಗೆ ತಿಳಿಯುತ್ತದೆ: ಜನರು ನಿರ್ಭಯರಾಗಿ ಹಝ್ರತ್ ಪೈಗಂಬರರೊಂದಿಗೆ[ಸ] ಮಾತನಾಡುತ್ತಿದ್ದರು ಮತ್ತು ಶಿಷ್ಟಾಚಾರ ಮತ್ತು ಗೌರವರಹಿತರಾಗಿ ವರ್ತಿಸುತ್ತಿದ್ದ ಬಗ್ಗೆ ತಿಳಿದು ಬರುತ್ತದೆ. ಹಝ್ರತ್ ಪೈಗಂಬರರು[ಸ] ಬಹಳ ಸಹನೆಯಿಂದ ವರ್ತಿಸಿದ ಎಂತಹ ಉದಾಹರಣೆಗಳು ಸಿಗುತ್ತವೆ ಎಂದರೆ ಅವುಗಳ ಹಾಗಿರುವ ಉದಾಹರಣೆಗಳು ಎಲ್ಲಿಯೂ ಲೋಕದಲ್ಲಿ ಕಾಣಲು ಸಿಗಲಾರದು. ನಾನು ಇಲ್ಲಿ ಕೆಲವು ಉದಾಹರಣೆಗಳನ್ನು ನೀಡುತ್ತೇನೆ.

ಇವು ಹಝ್ರತ್ ಪೈಗಂಬರರ[ಸ] ಔದಾರ್ಯವನ್ನು ವಿವರಿಸುವ ಸಂಭವಗಳಾಗಿದ್ದರೂ ಈ ಘಟನೆಗಳಲ್ಲಿ ಜನರ ನಿರ್ಭಯತೆ ಮತ್ತು ಹಝ್ರತ್ ಪೈಗಂಬರರ[ಸ] ಸಹನೆಯು ಪ್ರಕಟವಾಗುತ್ತದೆ.

ಹಝ್ರತ್ ಜುಬೈರ್ ಬಿನ್ ಮುತ್‌ಇಮ್[ರ] ವರದಿ ಮಾಡಿರುತ್ತಾರೆ: ಹಝ್ರತ್ ಪೈಗಂಬರ್[ಸ] ಹುನೈನ್ ಯುದ್ಧದಿಂದ ಮರಳಿ ಬರುವಾಗ ಗ್ರಾಮೀಣ ಅರಬಿಗಳು ಹಝ್ರತ್ ಪೈಗಂಬರರನ್ನು[ಸ] ಸುತ್ತುವರಿದರು. ಅವರು ಹಝ್ರತ್ ಪೈಗಂಬರರಿಂದ[ಸ] ಬೇಡುತ್ತಾ ಅವರನ್ನು ಒಂದು ಬಬೂಲ್ ಮರದ ಕಡೆಗೆ ಸರಿಯಲು ನಿರ್ಬಂಧಿಸಿದರು. ಅದರ ಮುಳ್ಳುಗಳಿಗೆ ಹಝ್ರತ್ ಪೈಗಂಬರರ[ಸ] ಚಾದರವು ಸಿಲುಕಿಕೊಂಡಿತು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: "ನನ್ನ ಚಾದರವನ್ನು ನನಗೆ ಕೊಡಿರಿ. ಇಲ್ಲಿರುವ ಕಾಡು ಮರಗಳಷ್ಟು ಒಂಟೆಗಳು ನನ್ನ ಬಳಿ ಇದ್ದಿದ್ದರೆ ನಾನು ಅವುಗಳನ್ನೆಲ್ಲಾ ನಿಮಗೆ ಹಂಚಿಕೊಡುತ್ತಿದ್ದೆನು. ನೀವು ನನ್ನನ್ನು ಜಿಪುಣನಾಗಿಯೂ ಸುಳ್ಳುವಾದಿಯಾಗಿಯೂ ಹೇಡಿಯಾಗಿಯೂ ಕಾಣುತ್ತಿರಲಿಲ್ಲ." (ಬುಖಾರಿ)

ಹಝ್ರತ್ ಅನಸ್[ರ] ಹೀಗೆ ವರದಿ ಮಾಡಿರುತ್ತಾರೆ: ನಾನು ಹಝ್ರತ್ ಪೈಗಂಬರರ[ಸ] ಜೊತೆಗಿದ್ದೆನು. ಅವರು ದಪ್ಪವಾದ ಅಂಚನ್ನು ಹೊಂದಿದ ಚಾದರವನ್ನು ಧರಿಸಿದ್ದರು. ಒಬ್ಬ ಗ್ರಾಮೀಣ ಅರಬಿ ಆ ಚಾದರವನ್ನು ಬಲವಾಗಿ ಎಳೆದಾಗ ಅದರ ದಪ್ಪ ಅಂಚಿನ ಗುರುತು ಅವರ ಕೊರಳಲ್ಲಿ ಕಾಣಿಸಿತು. ಆ ಅರಬಿ ಹೇಳಿದನು: ಅಲ್ಲಾಹನು ನಿಮಗೆ ನೀಡಿದ ಸಂಪತ್ತಿನಿಂದ ನನ್ನ ಈ ಎರಡು ಒಂಟೆಗಳ ಮೇಲೆ ಹೊರಿಸಿರಿ. ಏಕೆಂದರೆ ನೀವು ನಿಮ್ಮ ಸಂಪತ್ತಿನಿಂದಾಗಲಿ ನಿಮ್ಮ ತಂದೆಯ ಸಂಪತ್ತಿನಿಂದಾಗಲಿ ನನಗೆ ಕೊಡುತ್ತಾ ಇಲ್ಲ. ಹಝ್ರತ್ ಪೈಗಂಬರ್[ಸ] ಮೊದಲು ಮೌನವಾಗಿದ್ದು, ಅನಂತರ ಹೇಳಿದರು: ಸಂಪತ್ತು ಅಲ್ಲಾಹನದ್ದೇ ಆಗಿದೆ, ನಾನು ಅವನ ದಾಸನಾಗಿದ್ದೇನೆ. ನನಗೆ ತೊಂದರೆ ಕೊಟ್ಟದ್ದಕ್ಕೆ ನಿನಗೆ ಶಿಕ್ಷೆ

ನೀಡಲಾಗುವುದು. ಆ ಅರಬಿ ಹೇಳಿದನು: ಹಾಗೆ ಆಗಲಾರದು. ಹಝ್ರತ್ ಪೈಗಂಬರ್(ಸ) ಕೇಳಿದರು: ಏಕೆ ಶಿಕ್ಷಿಸಬಾರದು? ಆ ಅರಬಿ ಹೇಳಿದನು: ನೀವು ಕೆಡುಕಿಗೆ ಪ್ರತಿಯಾಗಿ ಕೆಡುಕನ್ನು ಮಾಡುವುದಿಲ್ಲ. ಆಗ ಹಝ್ರತ್ ಪೈಗಂಬರ್(ಸ) ನಕ್ಕರು. ಅವರು ಆತನ ಒಂದು ಒಂಟೆಯ ಮೇಲೆ ಜೋಳವನ್ನೂ ಇನ್ನೊಂದರ ಮೇಲೆ ಖರ್ಜೂರ ವನ್ನೂ ಹೇರಲು ಹೇಳಿದರು. (ಅಶ್ಶಿಫಾ ಎಂಬ ಗ್ರಂಥದಿಂದ)

ಹಝ್ರತ್ ಪೈಗಂಬರರ(ಸ) ಸಹನೆಯ ಸ್ಥಿತಿ ಮೇಲಿನಂತೆ ಇತ್ತು. ಅವರು ತನ್ನವರೊಂದಿಗೆ ಮಾತ್ರವಲ್ಲ ಅನ್ಯರೊಂದಿಗೆ ಸಹ ಸಹನೆಯಿಂದ ವರ್ತಿಸುತ್ತಿದ್ದರು. ಆಕ್ಷೇಪ ಹೊರಿಸುವ ಅಜ್ಞಾನಿಗಳು ತಿಳುವಳಿಕೆ ಇಲ್ಲದೆ, ಸಕಲ ಲೋಕಗಳಿಗೆ ಅನುಗ್ರಹವಾದ ಅವರ ಮೇಲೆ ಆಕ್ಷೇಪಗಳನ್ನು ಹೊರಿಸುತ್ತಾರೆ – ಅವರು ಇಂತಿಂತಹ ಕ್ರೂರಕೃತ್ಯಗಳನ್ನು ಮಾಡಿದರೆಂದು.

ಪವಿತ್ರ ಖುರ್ಆನ್ ಬಗ್ಗೆ ಸಹ ಆಕ್ಷೇಪ ಈ ಚಲನಚಿತ್ರದಲ್ಲಿದೆ ಎಂದು ನಾನು ಜನರಿಂದ ತಿಳಿದೆನು. ನಾನು ಈ ಚಲನಚಿತ್ರವನ್ನು ನೋಡಿಲ್ಲ. ವರಖ ಬಿನ್ ನೌಫಲ್ ಹಝ್ರತ್ ಖದೀಜರ(ರ) ಚಿಕ್ಕಪ್ಪನ ಪುತ್ರರಾಗಿದ್ದು ಅವರ ಬಳಿಗೆ ಹಝ್ರತ್ ಪೈಗಂಬರರನ್ನು(ಸ) ಅವರಿಗೆ ಪ್ರಥಮ ದಿವ್ಯ ಸಂದೇಶ ದೊರೆತಾಗ ಕರೆದುಕೊಂಡು ಹೋಗಿದ್ದರು. ವರಖ ಬಿನ್ ನೌಫಲ್ ಪವಿತ್ರ ಖುರ್ಆನ್ ಬರೆದು ಕೊಟ್ಟಿದ್ದಾಗಿ ಈ ಚಲನಚಿತ್ರದಲ್ಲಿ ಆಕ್ಷೇಪಿಸಲಾಗಿದೆ. ಅವಿಶ್ವಾಸಿಗಳು ಹಝ್ರತ್ ಪೈಗಂಬರರ(ಸ) ಜೀವಿತ ಕಾಲದಲ್ಲಿ ಹೀಗೆ ಆಕ್ಷೇಪಮಾಡುತ್ತಾ ಇದ್ದರು: ಪವಿತ್ರ ಖುರ್ಆನ್ ಕಂತುಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಏಕೆ ಅವತೀರ್ಣ ವಾಗುತ್ತಿದೆ. ಅಲ್ಲಾಹನ ವಾಣಿಯಾಗಿದ್ದರೆ ಒಮ್ಮೆಯೇ ಗ್ರಂಥ ರೂಪದಲ್ಲಿ ಏಕೆ ಅವತೀರ್ಣವಾಗುವುದಿಲ್ಲ? ಈ ಚಿತ್ರ ನಿರ್ಮಾಪಕರು ಸಂಪೂರ್ಣ ಅಜ್ಞಾನಿಗಳಾಗಿದ್ದಾರೆ. ಅವರಿಗೆ ಚರಿತ್ರೆ ಸಹ ತಿಳಿದಿಲ್ಲ. ಆದರೆ ಅವರೊಂದಿಗೆ ಸೇರಿರುವ ಇಬ್ಬರು ಪಾದರಿಗಳು ತಮ್ಮನ್ನು ಜ್ಞಾನವಂತ ರೆಂದು ಗಣಿಸುತ್ತಾರೆ. ಅವರು ಸಹ ಸಂಪೂರ್ಣ ಅಜ್ಞಾನಿಗಳಾಗಿದ್ದಾರೆ. ವರಖ ಬಿನ್ ನೌಫಲ್ ಹೀಗೆ ಹೇಳಿದ್ದರು: ನಿನ್ನನ್ನು ನಿನ್ನ ಸಮುದಾಯ ನಿನ್ನ ಊರಿನಿಂದ ಹೊರಹಾಕುವಾಗ ನಾನು ಜೀವಿಸಿದ್ದರೆ ಎಷ್ಟು ಚೆನ್ನಾಗಿತ್ತು! ಅವರು ಸ್ವಲ್ಪ ಸಮಯದೊಳಗೆ ಮೃತರಾಗಿದ್ದರು. (ಬುಖಾರಿ)

ಈ ಗುಂಪಿನ ಪಾದರಿಗಳು ಚರಿತ್ರೆಯನ್ನು ತಿಳಿಯದ ಅಜ್ಞಾನಿ ಗಳಾಗಿದ್ದಾರೆ. ಪೌರಸ್ತ್ಯ ಭಾಷಾ ಸಾಹಿತ್ಯ ಪಂಡಿತರು ಪವಿತ್ರ ಖುರ್ಆನಿನ ಬಗ್ಗೆ ಯಾವಾಗಲೂ ಹೀಗೆ ಚರ್ಚೆ ಮಾಡುತ್ತಾ ಇರುತ್ತಾರೆ. ಈ ಅಧ್ಯಾಯ ಎಲ್ಲಿ ಅವತೀರ್ಣವಾಯಿತು; ಆ ಅಧ್ಯಾಯ ಎಲ್ಲಿ ಅವತೀರ್ಣ ವಾಯಿತು– ಮದೀನದಲ್ಲೋ ಮಕ್ಕದಲ್ಲೋ? ಎಂದು. ಇದನ್ನು ಇಂತಹ ಜನರು ಬರೆದುಕೊಟ್ಟರು ಎಂದು ಸಹ ಚರ್ಚೆ ಮಾಡುತ್ತಾರೆ. ಆದರೆ ಪವಿತ್ರ ಖುರ್ಆನ್ ಪಂಥಾಹ್ವಾನ ನೀಡುತ್ತದೆ – ಯಾರಾದರೂ ಬರೆದು ಕೊಟ್ಟರೆಂದು ಭಾವಿಸುವವರು ಇದರ ಹಾಗಿರುವ ಒಂದು ಅಧ್ಯಾಯ ವನ್ನಾದರೂ ತಂದು ತೋರಿಸಿರಿ ಎಂದು.

ಅನ್ಯರ ಭಾವನೆಗಳಿಗೆ ಗೌರವ ನೀಡುವ ಬಗ್ಗೆ ಹೇಳುವುದಾದರೆ, ಹಝ್ರತ್ ಪೈಗಂಬರರಿಗೆ(ಸ) ಸರಿ ಹೋಲುವವರು ಯಾರೂ ಇಲ್ಲ. ತಾನು ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠನೆಂದು ತಿಳಿದಿದ್ದರೂ ಅವರು ಯಹೂದಿಯರ ಭಾವನೆಗೆ ಗೌರವ ನೀಡಿ ಹೇಳಿದರು: ನನಗೆ ಪ್ರವಾದಿ ಮೂಸಾರವರ(ಅ) ಮೇಲೆ ಶ್ರೇಷ್ಠತೆ ಇದೆ ಎಂದು ಹೇಳಬೇಡಿರಿ. (ಬುಖಾರಿ)

ಬಡವರ ಭಾವನೆಗಳಿಗೆ ಗೌರವ ನೀಡುವ ಬಗ್ಗೆ ಹೇಳುವುದಾದರೆ, ಒಮ್ಮೆ ಒಬ್ಬ ಶ್ರೀಮಂತನಾದ ಶಿಷ್ಯ ಅನ್ಯರೊಂದಿಗೆ ತನ್ನ ಶ್ರೇಷ್ಠತೆ ಬಗ್ಗೆ ಹೆಮ್ಮೆಯಿಂದ ಹೇಳುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಶಕ್ತಿ ಮತ್ತು ಸಂಪತ್ತು ನಿಮ್ಮ ಸ್ವಂತ ತೋಳುಗಳ ದುಡಿಮೆಯಿಂದ ದೊರೆತುದೆಂದು ಭಾವಿಸುತ್ತೀರಾ? ಹಾಗಲ್ಲ, ನಿಮ್ಮ ಜನಾಂಗದ ಶಕ್ತಿ ಮತ್ತು ನಿಮ್ಮ ಸಂಪತ್ತಿನ ಶಕ್ತಿ ಎಲ್ಲವೂ ಬಡವರ ದುಡಿಮೆಯಿಂದ ದೊರೆತುದಾಗಿದೆ. (ಬುಖಾರಿ)

ಸ್ವಾತಂತ್ರ್ಯಕ್ಕಾಗಿ ವಾದಿಸುವವರು ಇಂದು ಬಡವರ ಹಕ್ಕುಗಳನ್ನು ಸ್ಥಾಪಿಸುತ್ತಿದ್ದಾರೆ. ಬಡವರ ಹಕ್ಕುಗಳನ್ನು ರಕ್ಷಿಸಲು ಪ್ರಯತ್ನ ಮಾಡುತ್ತಾ ಇರುತ್ತಾರೆ ಮತ್ತು ಅದರ ಬಗ್ಗೆ ಪ್ರಕಟಣೆ ನೀಡುತ್ತಾರೆ. ಆದರೆ ಹಝ್ರತ್ ಪೈಗಂಬರ್(ಸ) ಹದಿನಾಲ್ಕು ನೂರು ವರ್ಷಗಳ ಹಿಂದೆ ಬಡವರ ಹಕ್ಕುಗಳನ್ನು ಈ ರೀತಿ ಹೇಳಿ ನೀಡಿದರು: "ಕಾರ್ಮಿಕನ ಕೂಲಿಯನ್ನು ಅವನ ಬೆವರು ಆರಿ ಹೋಗುವ ಮೊದಲೇ ನೀಡಿರಿ." (ಇಬ್ನುಮಾಜ)

ಮಾನವರ ಆ ಹಿತೈಷಿಯನ್ನು ಎಲ್ಲೆಲ್ಲಾ ಎದುರಿಸಬಲ್ಲಿರಿ? ಅಸಂಖ್ಯಾತ ಘಟನೆಗಳಿವೆ. ಯಾವುದೇ ಸುಸ್ವಭಾವವನ್ನು ತೆಗೆದು ಕೊಂಡರೂ ಅದರ ಅತ್ಯುನ್ನತ ಉದಾಹರಣೆಯನ್ನು ಹಝ್ರತ್ ಪೈಗಂಬರರಲ್ಲಿ(ಸ) ನೀವು ಕಾಣಬಲ್ಲಿರಿ.

ಹಝ್ರತ್ ಪೈಗಂಬರರಿಗೆ ಮಹಿಳೆಯರು ಬಹಳ ಇಷ್ಟಕರ ವಾಗಿದ್ದರೆಂದು ಸಹ ಆರೋಪಿಸುತ್ತಾರೆ. (ನಊಧು ಬಿಲ್ಲಾಹ್)

ಮದುವೆಗಳ ಬಗ್ಗೆ ಆಕ್ಷೇಪ ಮಾಡಿದಾಗ ಅಲ್ಲಾಹನು ಈ ಆಕ್ಷೇಪವನ್ನು ರದ್ದುಗೊಳಿಸಿದನು. ಇಂತಹ ಘಟನೆಗಳು ನಡೆಯುವುವು, ಇಂತಹ ಪ್ರಶ್ನೆಗಳು ಉದಿಸುವುವು ಎಂದು ಅಲ್ಲಾಹನಿಗೆ ತಿಳಿದಿತ್ತು. ಅಲ್ಲಾಹನು ಎಂತಹ ಘಟನೆ ಉಂಟು ಮಾಡಿದನೆಂದರೆ, ಆ ಆಕ್ಷೇಪಗಳು ರದ್ದುಗೊಳಿಸಲ್ಪಡುತ್ತವೆ.

ಅಸ್ಮಾ ಬಿನ್ತ್ ನುಅ್‌ಮಾನ್ ಬಿನ್ ಅಬೀಜಾನ್ ಎಂಬ ಮಹಿಳೆ ಅರಬ್ ದೇಶದ ಅತ್ಯಂತ ರೂಪವತಿ ಮಹಿಳೆಯರಲ್ಲಿ ಒಬ್ಬಳಾಗಿದ್ದಳೆಂದು ಹೇಳಲಾಗುತ್ತದೆ. ಆಕೆ ಮದೀನಕ್ಕೆ ಬಂದಾಗ ಮಹಿಳೆ ಯರು ಆಕೆಯನ್ನು ಸಂದರ್ಶಿಸಿದ ನಂತರ ಅವಳಂತಹ ಸುಂದರಿಯನ್ನು ತಾವು ಜೀವಿತದಲ್ಲಿ ಕಂಡೇ ಇಲ್ಲ ಎಂದು ಹೇಳಿದರು. ಆಕೆಯ ಪಿತನ ಕೋರಿಕೆ ಪ್ರಕಾರ ಐನೂರು ದಿರ್‌ಹಮ್ ಮಹರ್ ನಿಶ್ಚಯಿಸಿ ಹಝ್ರತ್ ಪೈಗಂಬರ್(ಸ) ಮದುವೆ ಆದರು. ಅವರು ಆಕೆಯ ಸಮೀಪ ಹೋದಾಗ ಆಕೆ ಹೇಳಿದಳು: "ನಾನು ನಿಮ್ಮ ಬಗ್ಗೆ ಅಲ್ಲಾಹನ ಅಭಯ ಯಾಚಿಸುತ್ತೇನೆ". ಈ ಮಾತನ್ನು ಆಲಿಸಿ ಹಝ್ರತ್ ಪೈಗಂಬರ್(ಸ) "ನೀನು ಬಹಳ ಉನ್ನತನಾದವನ ಅಭಯವನ್ನು ಯಾಚಿಸಿರುವೆ" ಎಂದು ಹೇಳಿ ಹೊರಗೆ ಬಂದರು. ಆಕೆಯನ್ನು ಅವಳ ಮನೆಯವರಿಗೆ ತಲುಪಿಸಲು ಒಬ್ಬ ಶಿಷ್ಯನೊಂದಿಗೆ ಹೇಳಿದರು. ಚರಿತ್ರೆಯಲ್ಲಿ ಹೀಗೆ ಬರೆದಿದೆ: ಈ ಮದುವೆಯ ಬಗ್ಗೆ ಆಕೆಯ ಮನೆಯವರು ಬಹಳ ಸಂತೋಷಗೊಂಡಿದ್ದರು. ತಮ್ಮ ಪುತ್ರಿ ಹಝ್ರತ್ ಪೈಗಂಬರರ(ಸ) ಪತ್ನಿಯಾದಳೆಂದು ಸಂತೋಷಪಟ್ಟಿದ್ದರು. ಆಕೆ ಮರಳಿ ಬಂದಾಗ ಅವರು ಬಹಳ ಕೋಪಗೊಂಡು ಆಕೆಯನ್ನು ನಿಂದಿಸಿದರು. (ತಬಖಾತುಲ್ ಕುಬ್ರಾ)

ಹಝ್ರತ್ ಪೈಗಂಬರ್(ಸ) ಅತ್ಯಂತ ಮಹಾನ್ ವ್ಯಕ್ತಿಯಾಗಿದ್ದರು. ಮಹಿಳೆಯರಿಗೆ ಸಂಬಂಧಿಸಿ ಅವರ ಬಗ್ಗೆ ಕೀಳು ಆಕ್ಷೇಪಗಳನ್ನು

ಮಾಡಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಮದುವೆಯಾದುದು ಅಲ್ಲಾಹನ ಆಜ್ಞೆಗಳ ಪ್ರಕಾರವಾಗಿತ್ತು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ: "ಪತ್ನಿಯರು ಇಲ್ಲದಿದ್ದರೆ, ಮಕ್ಕಳು ಇಲ್ಲದಿದ್ದರೆ, ಮಕ್ಕಳ ಕಾರಣದಿಂದ ಪರೀಕ್ಷೆಗಳು ಇಲ್ಲದಿದ್ದರೆ ಯಾವ ಸಮಸ್ಯೆಗಳನ್ನು ಯಾವ ರೀತಿ ಎದುರಿಸಲಾಯಿತು. ಪತ್ನಿಯೊಂದಿಗೆ ಯಾವ ರೀತಿ ಉತ್ತಮವಾಗಿ ವರ್ತಿಸಲಾಯಿತು. ಸುಸ್ವಭಾವಗಳು ಹೇಗಿದ್ದವು – ಅದರ ಉದಾಹರಣೆಗಳಿಂದ ನಮಗೆ ಅವುಗಳ ಬಗ್ಗೆ ತಿಳಿಯುತ್ತದೆ. ಹಝ್ರತ್ ಪೈಗಂಬರರ(ಸ) ಪ್ರತಿಯೊಂದು ಕೆಲಸ ಅಲ್ಲಾಹನ ಪ್ರೀತಿಗೋಸ್ಕರ ವಾಗಿತ್ತು." (ಚಶ್ಮಯೆ ಮಅರಿಫತ್‌ನಿಂದ ಸಂಗ್ರಹಿತ)

ಹಝ್ರತ್ ಆಯಿಶಾ(ರ) ಬಗ್ಗೆ, ಅವರು ಪೈಗಂಬರರಿಗೆ(ಸ) ಬಹಳ ಪ್ರಿಯ ಪತ್ನಿಯಾಗಿದ್ದರೆಂದು ಆಕ್ಷೇಪಿಸಲಾಗುತ್ತಿದೆ. ಅವರ ವಯಸ್ಸಿನ ಬಗ್ಗೆ ಸಹ ಬಹಳ ತಪ್ಪು ಮಾಹಿತಿ ನೀಡಲಾಗುತ್ತಿದೆ. ಹಝ್ರತ್ ಆಯಿಶಾರೊಂದಿಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: "ಕೆಲವು ರಾತ್ರಿ ಇಡೀ ನಾನು ನನ್ನ ದೇವನ ಆರಾಧನೆ ಮಾಡಲು ಬಯಸುತ್ತೇನೆ. ಅವನು ನನಗೆ ಎಲ್ಲರಿಗಿಂತ ಪ್ರಿಯಕರನಾಗಿದ್ದಾನೆ." (ಅದ್ದುರ್ರುಲ್ ಮನ್‌ಸೂರ್)

ಯಾರ ಮೆದುಳಿನಲ್ಲಿ ಕೊಳಕು ತುಂಬಿದೆಯೋ ಅವರು ಈ ಆರೋಪ ಹೊರಿಸುತ್ತಾ ಇರುತ್ತಾರೆ. ನಾನು ಮುಂಚೆ ಹೇಳಿದಂತೆ ಮುಂದಿನ ಕಾಲದಲ್ಲೂ ಪ್ರಾಯಶಃ ಅವರು ಹೀಗೆಯೇ ಮಾಡುವರು. ಆದರೆ ಅಲ್ಲಾಹನು ಇಂತಹ ಜನರಿಂದ ನರಕವನ್ನು ತುಂಬಿಸುತ್ತಾ ಇರಲು ತೀರ್ಮಾನಿಸಿದ್ದಾನೆ. ಇಂತಹ ಜನರು ಮತ್ತು ಅವರನ್ನು ಬೆಂಬಲಿಸುವವರು ಅಲ್ಲಾಹನ ಶಿಕ್ಷೆಯನ್ನು ಭಯಪಡಬೇಕು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದ ಹಾಗೆ, "ಅಲ್ಲಾಹನು ತನ್ನ ಪ್ರೀತಿಗೆ ಪಾತ್ರರಾದವರ ಬಗ್ಗೆ ಅಭಿಮಾನವನ್ನು ಹೊಂದಿರುತ್ತಾನೆ." (ತಿರ್‌ಯಾಖುಲ್ ಖುಲೂಬ್)

ಈ ಕಾಲಘಟ್ಟದಲ್ಲಿ ಅಲ್ಲಾಹನು ಮಹ್‌ದೀ ಮಸೀಹರನ್ನು ಕಳುಹಿಸಿ ಲೋಕದ ಸುಧಾರಣೆ ಕಡೆಗೆ ಗಮನಹರಿಸಿದನು. ಶತ್ರುಗಳು ಅಪಹಾಸ್ಯ ಮತ್ತು ಅಕ್ರಮ ವರ್ತನೆಯಿಂದ ಹಿಂದೆ ಸರಿಯದಿದ್ದರೆ ಅಲ್ಲಾಹನ ಹಿಡಿತ ಸಹ ಬಹಳ ಕಠಿಣವಾಗಿರುವುದು. ಲೋಕದ ಎಲ್ಲಾ ಸ್ಥಳಗಳಲ್ಲೂ ಈಗ ನೈಸರ್ಗಿಕ ವಿಪತ್ತುಗಳು ಬಂದೆರಗುತ್ತಾ ಇವೆ. ಎಲ್ಲಾ ಕಡೆಗಳಲ್ಲೂ ನಾಶ ಕಂಡುಬರುತ್ತದೆ. ಅಮೇರಿಕದಲ್ಲೂ ಚಂಡಮಾರುತಗಳು ಮೊದಲಿಗಿಂತ ಭೀಕರವಾಗಿ ಬೀಸುತ್ತಾ ಇರುತ್ತವೆ. ಆರ್ಥಿಕ ದುರವಸ್ಥೆ ವರ್ಧಿಸುತ್ತಾ ಇದೆ. ಗ್ಲೋಬಲ್ ವಾರ್ಮಿಂಗ್ (ಜಾಗತಿಕ ತಾಪಮಾನ ವೃದ್ಧಿ) ಕಾರಣ ಎಷ್ಟೋ ಜನವಾಸ ಕೇಂದ್ರಗಳು ಮುಳುಗಿ ಹೋಗುವ ಅಪಾಯಗಳು ತಲೆದೋರುತ್ತವೆ. ಲೋಕವು ಈ ಅಪಾಯಗಳಿಂದ ಸುತ್ತುವರಿಯಲ್ಪಟ್ಟಿವೆ. ಅತಿರೇಕದಿಂದ ವರ್ತಿಸುವವರು ಸೃಷ್ಟಿಕರ್ತನ ಕಡೆಗೆ ಗಮನಹರಿಸುವುದು ಆವಶ್ಯಕವಾಗಿದೆ. ಇವೆಲ್ಲಾ ಘಟನೆಗಳು ಅಲ್ಲಾಹನ ಕಡೆಗೆ ಗಮನಹರಿಸು ವಂಥವುಗಳಾಗಬೇಕಾಗಿದೆ. ಇಂತಹ ವ್ಯರ್ಥ ಕೆಲಸ ಮಾಡುವ ಬಗ್ಗೆ ಗಮನಹರಿಸಬಾರದು. ಆದರೆ ದುರದೃಷ್ಟಕರವಾಗಿ ಇದಕ್ಕೆ ಪೂರ್ಣ ವಿರುದ್ಧವಾಗಿ ಸಂಭವಿಸುತ್ತಾ ಇದೆ. ಹದ್ದುಬಸ್ತುಗಳನ್ನು ಮೀರಿ ಹೋಗಲು ಪ್ರಯತ್ನಮಾಡಲಾಗುತ್ತಿದೆ. ಈ ಕಾಲಘಟ್ಟದ ಇಮಾಮರು ಎಚ್ಚರಿಕೆ ನೀಡಿರುವರು. ಅವರು ಸ್ಪಷ್ಟವಾಗಿ ಹೇಳಿರುವರು – ಲೋಕದ ಜನರು ತನ್ನ ಧ್ವನಿಗೆ ಕಿವಿಗೊಡದಿದ್ದರೆ ಅವರ ಪ್ರತಿಯೊಂದು ಹೆಜ್ಜೆ ಲೋಕವನ್ನು ವಿನಾಶದ ಕಡೆಗೆ ಒಯ್ಯುವುದೆಂದು.


ಹಝ್ರತ್ ವಾಗ್ದತ್ತ ಮಸೀಹ್‌ರ(ಅ) ಸಂದೇಶ ಪದೇ ಪದೇ ಪುನರಾವರ್ತಿಸಬೇಕಾದ ಸಂದೇಶವಾಗಿದೆ. ಇದನ್ನು ಬಹಳ ಸಾರಿ ಜನರ ಮುಂದಿರಿಸಲಾಗಿದೆ. ನಾನು ಪುನಃ ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳಿದರು:

"ನಿಮಗೆ ನೆನಪಿರಲಿ. ದೇವನು ನನಗೆ ಸಾಮಾನ್ಯವಾಗಿ ಭೂಕಂಪಗಳ ಬಗ್ಗೆ ಸಮಾಚಾರ ನೀಡಿದ್ದಾನೆ. ನೀವು ದೃಢವಾಗಿ ತಿಳಿದುಕೊಳ್ಳಿರಿ. ಭವಿಷ್ಯವಾಣಿಯ ಪ್ರಕಾರ ಅಮೇರಿಕದಲ್ಲಿ ಭೂಕಂಪಗಳು ಸಂಭವಿಸಿದ ಹಾಗೆ ಯುರೋಪಿನಲ್ಲೂ ಭೂಕಂಪಗಳು ಬರಲಿವೆ. ಏಶಿಯಾದ ವಿವಿಧ ಸ್ಥಳಗಳಲ್ಲಿ ಭೂಕಂಪಗಳು ಉಂಟಾಗುವುವು. ಅವುಗಳಲ್ಲಿ ಕೆಲವು ಮಹಾಪ್ರಳಯ (ಖಿಯಾಮತ್) ದಿನದ ಹಾಗಿರುವುದು. ಎಷ್ಟು ಮರಣಗಳು ಸಂಭವಿಸುವುವು ಎಂದರೆ ರಕ್ತದ ಹೊಳೆಗಳು ಹರಿಯುವುವು. ಈ ಮೃತ್ಯುವಿನಿಂದ ಪಕ್ಷಿಗಳೂ ಪ್ರಾಣಿಗಳೂ ಹೊರತಾಗಲಾರವು. ಭೂಮಿಯ ಮೇಲೆ ಎಂತಹ ವಿನಾಶ ಸಂಭವಿಸುವುದೆಂದರೆ ಮನುಷ್ಯನು ಸೃಷ್ಟಿಸಲ್ಪಟ್ಟ ನಂತರ ಇಂತಹ ವಿನಾಶ ಎಂದೂ ಬಂದೆರಗಿರಲಾರದು. ಬಹುತೇಕ ಪ್ರದೇಶಗಳು ಅಡಿಮೇಲಾಗಿ ಅಲ್ಲಿ ಜನವಾಸವೇ ಇರಲಿಲ್ಲ ಎಂಬಂತಾಗುವುದು. ಅವುಗಳ ಜೊತೆ ಬೇರೆಯೂ ವಿಪತ್ತುಗಳು ಭೂಮ್ಯಾಕಾಶಗಳಲ್ಲಿ ಭಯಾನಕ ರೀತಿಯಲ್ಲಿ ಉಂಟಾಗುವುವು. ಪ್ರತಿಯೊಬ್ಬ ಬುದ್ಧಿಶಾಲಿಯ ದೃಷ್ಟಿಯಲ್ಲಿ ಈ ಸಂಭವಗಳು ಅಸಾಧಾರಣವಾಗಿ ತೋರುವುವು. ಪ್ರಕೃತಿ ಶಾಸ್ತ್ರ ಮತ್ತು ದಾರ್ಶನಿಕ ಗ್ರಂಥಗಳಲ್ಲಿ ಇಂತಹ ಘಟನೆಗಳ ಬಗ್ಗೆ ಪ್ರಸ್ತಾಪ ಕಾಣಿಸಲಾರದು. ಆಗ ಮನುಷ್ಯರಲ್ಲಿ ಗಾಬರಿ ಉಂಟಾಗುವುದು. ಇದು ಏನಾಗಲಿದೆ ಎಂದು ಅವರು ಯೋಚಿಸುವರು. ಬಹಳ ಜನರು ಮೋಕ್ಷಗಳಿಸುವರು. ಬಹಳ ಜನರು ನಾಶವಾಗುವರು. ಆ ದಿನ ಸಮೀಪವಾಗಿದೆ. ನಾನು ಅದನ್ನು ಕಾಣುತ್ತಿದ್ದೇನೆ. ಅದು ಬಾಗಿಲ ಬಳಿ ಇದೆ. ಲೋಕವು ಮಹಾಪ್ರಳಯದ ದೃಶ್ಯ ಕಾಣುವುದು. ಭೂಕಂಪಗಳು ಮಾತ್ರವಲ್ಲ ಬೇರೆ ಭಯಪಡಿಸುವ ವಿಪತ್ತುಗಳು ಸಹ ಬಂದೆರಗುವುವು. ಕೆಲವು ಆಕಾಶದಿಂದ, ಕೆಲವು ಭೂಮಿಯಿಂದ ಬಂದೆರಗುವುವು. ಇದು ಏಕೆಂದರೆ ಮನುಷ್ಯರು ತಮ್ಮ ದೇವನನ್ನು ಆರಾಧಿಸುವುದನ್ನು ಬಿಟ್ಟಿರುವರು. ತಮ್ಮ ಹೃದಯವನ್ನೂ ಶಕ್ತಿಯನ್ನೂ ಯೋಚನೆಗಳನ್ನೂ ಲೋಕದ ಮೇಲೆಯೇ ಇರಿಸಿ ಬಿದ್ದುಬಿಟ್ಟಿರುವರು. ನಾನು ಬರದೆ ಇರುತ್ತಿದ್ದರೆ ಈ ವಿಪತ್ತುಗಳು ಬರುವುದು ಸ್ವಲ್ಪ ತಡವಾಗುತ್ತಿತ್ತು. ನನ್ನ ಆಗಮನದೊಂದಿಗೆ ದೇವನ ಕ್ರೋಧದ ರಹಸ್ಯ ನಿರ್ಧಾರಗಳು– ಬಹಳ ಕಾಲದಿಂದ ರಹಸ್ಯವಾಗಿ ಇದ್ದವು– ಪ್ರಕಟವಾಗಲು ತೊಡಗಿರುವುವು.

"ಪವಿತ್ರ ಖುರ್‌ಆನಿನಲ್ಲಿ, **'ಒಬ್ಬ ಸಂದೇಶವಾಹಕನನ್ನು ಕಳುಹಿಸುವ ತನಕ ನಾವು (ಜನರನ್ನು) ಶಿಕ್ಷಿಸುವುದಿಲ್ಲ.'** (17:16) ಎಂದು ಹೇಳಿದ ಹಾಗೆ ಇದು ಸಂಭವಿಸುವುದು. ಅಲ್ಲಾಹನ ಕಡೆಗೆ ಪಶ್ಚಾತ್ತಾಪದಿಂದ ಮರುಳುವವರು ರಕ್ಷಣೆ ಪಡೆಯುವರು. ವಿಪತ್ತು ಬಂದೆರಗುವ ಮೊದಲು ದೇವಭಯ ಹೊಂದುವವರ ಮೇಲೆ ದಯೆ ತೋರಿಸಲ್ಪಡುವುದು. ನೀವು ಈ ಭೂಕಂಪಗಳಿಂದ ರಕ್ಷಣೆ ಪಡೆಯುವಿರಿ

*(40ನೇ ಪುಟಕ್ಕೆ.......)*

# ಅಣ್ವಾಯುಧ ಯುದ್ಧದ ಘೋರ ವಿನಾಶಕರ ಪರಿಣಾಮಗಳು ಮತ್ತು ಪರಿಪೂರ್ಣವಾದ ನ್ಯಾಯಪಾಲನೆಯ ತುರ್ತು ಆವಶ್ಯಕತೆ



**2012ರ ವಾರ್ಷಿಕ ಪೀಸ್ ಸಿಂಪೋಸಿಯಂ (ಶಾಂತಿಗೋಷ್ಠಿ)ನಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕ, ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರ ಮುಖ್ಯ ಭಾಷಣ.**

2012ರ ಮಾರ್ಚ್ ದಿನಾಂಕ 24ರಂದು ಲಂಡನಿನ ಮೋರ್ಡನ್‌ನಲ್ಲಿರುವ ಪಶ್ಚಿಮ ಯುರೋಪಿನ ಅತ್ಯಂತ ದೊಡ್ಡ ಮಸ್‌ಜಿದ್ ಆಗಿರುವ ಬೈತುಲ್ ಫುತೂಹ್‌ನಲ್ಲಿ ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ವತಿಯಿಂದ ಒಂಬತ್ತನೆಯ ವಾರ್ಷಿಕ ಪೀಸ್ ಸಿಂಪೋಸಿಯಂ ಜರುಗಿತು. ಈ ಸಮಾರಂಭಕ್ಕೆ ಸರಕಾರಿ ಸಚಿವರು, ರಾಯಭಾರಿಗಳು, ಪಾರ್ಲಿಮೆಂಟಿನ ಎರಡು ಸಭೆಗಳ ಸದಸ್ಯರು, ಲಂಡನಿನ ಮೇಯರ್, ಇತರ ಗಣ್ಯರು ಅತಿಥಿಗಳಾಗಿ ಆಗಮಿಸಿದ್ದರು. ಒಂದು ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ ಈ ವಿಚಾರಗೋಷ್ಠಿಯ ವಿಷಯ **"ಅಂತರ್‍ರಾಷ್ಟ್ರೀಯ ಶಾಂತಿ"** ಎಂದಾಗಿತ್ತು.

ಯು.ಕೆ. ಅಹ್ಮದಿಯಾ ಮುಸ್ಲಿಮ್ ಅಸೋಸಿಯೇಶನ್ ಇದರ ರಾಷ್ಟ್ರೀಯ ಅಧ್ಯಕ್ಷರಾದ ರಫೀಖ್ ಹಯಾತ್ ತಮ್ಮ ಸ್ವಾಗತ ಭಾಷಣದಲ್ಲಿ "ಖಲೀಫರ ನಾಯಕತ್ವದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿ, ಸಹನೆ ಮತ್ತು ದೇಶಭಕ್ತಿಗೋಸ್ಕರ ಸದಾ ಕೃತಿಶೀಲವಾಗಿರುತ್ತದೆ" ಎಂದು ಹೇಳಿದರು.

ಸಯೋಭೈನ್ ಮೆಕ್ ಡೊನಾಗ್, ಮಿಟ್‌ಚಮ್ ಮತ್ತು ಮೋರ್ಡನ್ ಪ್ರದೇಶದ ಪಾರ್ಲಿಮೆಂಟ್ ಸದಸ್ಯೆಯೂ ಯು.ಕೆ. ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ ಫಾರ್ ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿ ಇದರ ಅಧ್ಯಕ್ಷೆಯೂ ಆಗಿರುವರು. ಅವರು ಹೀಗೆಂದರು: "ಲೋಕದಾದ್ಯಂತ ಎಲ್ಲಾ ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಗಳಿಸಿ ಕೊಡುವ ನಿಟ್ಟಿನಲ್ಲಿ ಪುರೋಗತಿ ಪ್ರಾರಂಭವಾಗಿದ್ದರೂ ಇದರ ಬಗ್ಗೆ ಇನ್ನಷ್ಟು ಪ್ರಯತ್ನಗಳನ್ನು ನಡೆಸಬೇಕಾಗಿದೆ."

ಲಂಡನಿನ ಮೇಯರ್ ಬೋರಿನ್ ಜೋನ್‌ಸನ್ ಅಹ್ಮದಿಯಾ ಜಮಾಅತ್ ಅನೇಕ ರೀತಿಗಳಲ್ಲಿ ಶಾಂತಿ ಸ್ಥಾಪನೆ ಮತ್ತು ಸಹಿಷ್ಣುತಾ ಮನೋಭಾವವನ್ನು ಬೆಳೆಸಿ ಲಂಡನ್‌ನಲ್ಲಿ ಜನರನ್ನು ಒಗ್ಗೂಡಿಸಲು ಪ್ರಯತ್ನಸಿದುದಕ್ಕೆ ಕೃತಜ್ಞತೆ ಸೂಚಿಸಿ ಅಹ್ಮದಿಯಾ ಜಮಾಅತಿಗೆ ಮತ್ತು ಅದರ ದಾನಶೀಲ ಚಟುವಟಿಕೆಗಳಿಗೆ ಯಾವಾಗಲೂ ಬೆಂಬಲ ನೀಡುವುದಾಗಿ ಘೋಷಿಸಿದರು.

ರೈಟ್ ಆನರೇಬಲ್ ಎಡ್ ಡೇವಿ ಪಾರ್ಲಿಮೆಂಟ್ ಸದಸ್ಯರೂ ಸೆಕ್ರಿಟರಿ ಆಫ್ ಸ್ಟೇಟ್ ಫೋರ್ ಎನರ್ಜಿ ಎಂಡ್ ಕ್ಲೈಮೇಟ್ ಚೇಂಜ್ (ಇಂಧನ ಮತ್ತು ಪರಿಸರ ಖಾತೆಯ ಸಚಿವ) ಖಲೀಫರ ಬಗ್ಗೆ, "ಶಾಂತಿಗೋಸ್ಕರ ಪ್ರತಿಪಾದಿಸುವ ಮಹಾನಾಯಕ" ಎಂದು ಹೇಳಿದರು. ವಾತಾವರಣದ ಬದಲಾವಣೆಯಿಂದ ವಿಶ್ವದಲ್ಲಿ ಆಹಾರ ಮತ್ತು ಜಲಕ್ಕೆ ಸಂಬಂಧಿಸಿದ ಉಂಟಾಗಬಹುದಾದ ಕೇಡುಗಳ ಬಗ್ಗೆ ಸಹ ಅವರು ವಿವರಿಸಿದರು.

ಸ್ಟೀಫನ್ ಹ್ಯಾಮಂಡ್ ಪಾರ್ಲಿಮೆಂಟ್ ಸದಸ್ಯರಾಗಿರುವರು. ಅವರು ರೈಟ್ ಆನರೇಬಲ್ ಎರಿಕ್ ಪಿಕ್ಲ್‌ಸ್, ಸೆಕ್ರಿಟರಿ ಆಫ್ ಸ್ಟೇಟ್ ಫೋರ್ ಕಮ್ಯುನಿಟೀಸ್ ಏಂಡ್ ಲೋಕಲ್ ಗವರ್ನಮೆಂಟ್ (ಧಾರ್ಮಿಕ ಗುಂಪುಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಸಚಿವ) ಇವರ ಸಂದೇಶವನ್ನು ಓದಿ ಹೇಳಿದರು. ಬ್ರಿಟನಿನಲ್ಲಿ ವಿವಿಧ ಸಮುದಾಯಗಳ ಮಧ್ಯೆ ಸೌಹಾರ್ದವನ್ನು ಸ್ಥಾಪಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಡೆಸುವ ಕೆಲಸಗಳನ್ನು ಅವರು ಆ ಸಂದೇಶದಲ್ಲಿ ಪ್ರಶಂಸಿದ್ದರು.

ಆಂಡ್ರೂ ಸ್ಟನ್ನೆಲ್ ಓ.ಬಿ.ಇ. ಪಾರ್ಲಿಮೆಂಟ್ ಸದಸ್ಯರಾಗಿರುವರು. ಅವರು ಹೀಗೆಂದರು: "ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ನಡೆಸಲಾಗುವ ಸಮಾಜಸೇವೆ ಮತ್ತು ಸಾಮುದಾಯಿಕ ಸೌಹಾರ್ದ ವರ್ಧನೆಗೆ ಮಡುವ ಪ್ರಯತ್ನಗಳನ್ನು ಬ್ರಿಟಿಷ್ ಸರಕಾರವು ಬಹಳ ಮೆಚ್ಚುತ್ತದೆ. ಇದು ಈ ಮಸ್‌ಜಿದ್‌ಗೆ ನನ್ನ ಪ್ರಥಮ ಭೇಟಿಯಾಗಿದೆ. ಇದು ಬಹಳ ಹೃದಯಸ್ಪರ್ಶಿ ಪ್ರಭಾವ ಬೀರುವ ಭವನವಾಗಿದೆ."

ಮೆರ್ಟನ್ ಮುನ್ಸಿಪಲ್ ಕೌನ್ಸಿಲ್ ಇದರ ಕೌನ್ಸಿಲರ್ ಸ್ಟೀಫನ್ ಅಲೆಂಬ್ರಿಟಿಸ್ (ಲೀಡರ್ ಆಫ್ ಮೆರ್ಟನ್ ಕೌನ್ಸಿಲ್ – ಮೆರ್ಟನ್ ಕೌನ್ಸಿಲ್ ಅಧ್ಯಕ್ಷ) ಹೀಗೆಂದರು: "ಅಹ್ಮದಿಯಾ ಮಸ್‌ಜಿದ್ ಮತ್ತು




ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಲ್ಲಿ ಸ್ಥಾಪಿತವಾದ ಬಗ್ಗೆ ನಾವು ಹೆಮ್ಮೆಪಡುತ್ತೇವೆ."

ಲಾರ್ಡ್ ಎರಿಕ್ ಆವ್‌ಬರಿ ಹೀಗೆಂದರು: "ಯುದ್ಧಗಳನ್ನು ಮತ್ತು ಸಂಘರ್ಷಗಳನ್ನು ತಡೆಯಲು ಸಾಕಷ್ಟು ಪ್ರಯತ್ನ ನಡೆಸಲಾಗುತ್ತಿಲ್ಲ. ಆದರೆ ಅದರ ಬಗ್ಗೆ ಅಸಡ್ಡೆ ತೋರುವುದು ನೈತಿಕವಾಗಿ ಅಪರಾಧವಾಗುವುದು. ಹಲವಾರು ದೇಶಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹಿಂಸಾಚಾರಗಳಿಗೆ ಗುರಿಯಾಗುತ್ತಿದ್ದರೂ ಅದು ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸುವುದರಲ್ಲಿ ಮುಂಚೂಣಿಯಲ್ಲಿದೆ."

ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫೋರ್ ಎಡ್ವಾನ್ಸ್‌ಮೆಂಟ್ ಆಫ್ ಪೀಸ್ (ಅಹ್ಮದಿಯಾ ಶಾಂತಿ ಸಮ್ಮಾನ) ಇದರ ಮೂರನೆಯ ವಾರ್ಷಿಕ ಸಮ್ಮಾನ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರಿಂದ ಎಸ್ ಓ ಎಸ್ ಚಿಲ್ಡ್ರನ್ಸ್ ವಿಲೇಜಸ್ ಯು. ಕೆ. (SOS CHILDREN'S VILLAGES, UK) ಇದಕ್ಕೆ "ಅನಾಥರಾದ ಮತ್ತು ಪರಿತ್ಯಜಿಸಲಾದ ಮಕ್ಕಳ ಕಷ್ಟಗಳ ನಿವಾರಣೆಗೋಸ್ಕರ ಜಗತ್ತಿನಾದ್ಯಂತ ಪ್ರಯತ್ನ ಮುಂದುವರಿಸುತ್ತಾ ಪ್ರತಿಯೊಬ್ಬ ಮಗುವಿಗೆ ಪ್ರೀತಿಸುವ ಮನೆಯನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದುದಕ್ಕಾಗಿ" ನೀಡಲಾಯಿತು. ಈ ಸಂಸ್ಥೆಯ ಬ್ರಿಟನಿನ ಪ್ರೆಸಿಡೆಂಟ್ ಡೇಮ್ ಮೇರಿ ರಿಚರ್ಡ್‌ಸನ್ ಡಿಬಿಇ ಈ ಸಮ್ಮಾನವನ್ನು ಸಂಸ್ಥೆಯ ಪರವಾಗಿ ಪಡೆದು ಹೀಗೆ ಹೇಳಿದರು: "ನಾವು ಮಕ್ಕಳ ಆರೈಕೆಗೆ ಯಾವಾಗಲೂ ಆದ್ಯತೆ ನೀಡಬೇಕು. ನಾನು ಈ ಸಮ್ಮಾನವನ್ನು ಹೃತ್ಪೂರ್ವಕವಾಗಿ ಸ್ವೀಕರಿಸುತ್ತೇನೆ. ನಾನು ಈ ಮೂಲಕ ಗೌರವಿಸಲ್ಪಟ್ಟಿರುವೆನು ಮತ್ತು ಬೆಂಬಲ ಗಳಿಸಿರುವೆನು."

ಈ ಸಭೆಯಲ್ಲಿ ಭಾಗವಹಿಸಿದ ಇತರ ಗಣ್ಯ ಅತಿಥಿಗಳು:

* ರೈಟ್ ಆನರೇಬಲ್ ಜಸ್ಟಿನ್ ಗ್ರೀನಿಂಗ್ ಎಂ. ಪಿ. ಸೆಕ್ರೆಟರಿ ಆಫ್ ಸ್ಟೇಟ್ ಫೋರ್ ಟ್ರಾನ್ಸ್‌ಪೋರ್ಟ್ (ಸಾರಿಗೆ ಸಚಿವೆ)
* ಜೇನ್ ಎಲ್ಲಿಸನ್ ಎಂ. ಪಿ. (ಬೆಟ್ಟರ್‌ಸೀ)
* ಸೀಮಾ ಮಲ್‌ಹೋತ್ರ ಎಂ. ಪಿ. (ಫೆಲ್ಟ್‌ಹ್ಯಾಮ್ ಎಂಡ್ ಹೆಸ್ಟನ್)
* ಟಾಮ್ ಬ್ರೇಕ್ ಎಂ. ಪಿ. (ಕಾರ್ಲ್ ಶಾಲ್‌ಟ್‌ನ್ ಎಂಡ್ ವಾಲಿಂಗ್‌ಟನ್)
* ವೀರೇಂದ್ರ ಶರ್ಮ ಎಂ. ಪಿ. (ಈಲಿಂಗ್ ಎಂಡ್ ಸೌತಾಲ್)
* ಲಾರ್ಡ್ ತಾರೀಖ್ ಅಹ್ಮದ್ (ಆಫ್ ವಿಂಬಲ್‌ಡನ್)
* ಎಚ್. ಇ. ವೆಸ್‌ಲೀ ಮೋಮೋ ಜೋನ್‌ಸನ್ (ಲೈಬೀರಿಯಾದ ಅಂಬಾಸಡರ್)
* ಎಚ್. ಇ. ಅಬ್ದುಲ್ಲಾ ಅಲ್ ರಾಧಿ (ಯೆಮನಿನ ಅಂಬಾಸಡರ್)
* ಎಚ್. ಇ. ಮಿಗೆಲ್ ಸೊಲಾನೋ – ಲೋಪೆಝ್ (ಪೆರುಗ್ವೇಯ ಅಂಬಾಸಡರ್)
* ಕೋಲೋಡೋರ್ ಮಾರ್ಟಿನ್ ಅಂತೆರ್‌ಟನ್ (ನೇವಲ್ ರೀಜನಲ್ ಕಮಾಂಡರ್)
* ಕೌನ್ಸಿಲರ್ ಜೇನ್ ಕೂಪರ್ (ವಾಂಡ್ಸ್‌ವರ್ಥ್ ಮೇಯರ್)
* ಕೌನ್ಸಿಲರ್ ಮಿಲ್‌ಟನ್ ಮೆಕ್‌ಕೆನ್‌ಝೀ ಎಂ.ಬಿ.ಇ. (ಬಾರ್ಕಿಂಗ್ ಮತ್ತು ಡಾಗೆನ್‌ಹ್ಯಾಮ್ ಮೇಯರ್)
* ಕೌನ್ಸಿಲರ್ ಅಮೃತ್ ಮನ್ (ಹೌನ್‌ಸ್ಲೋ ಮೇಯರ್)
* ಸಿಯೋಭಾನ್ ಬೆನಿಟ (ಲಂಡನ್ ಮೇಯರ್ ಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿ)
* ಭಾರತ, ಕೆನಡ, ಇಂಡೋನೇಶಿಯಾ ಮತ್ತು ಗಿನಿ ಮೊದಲಾದ ದೇಶಗಳ ರಾಯಭಾರಿ ಕಚೇರಿಯ ಉದ್ಯೋಗಿಗಳು.

## ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರ ಭಾಷಣ

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫ ಹೀಗೆ ಹೇಳಿದರು:

ಎಲ್ಲಾ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಒಂದು ವರ್ಷದಾಟಿ ಹೋದ ನಂತರ ಇಂದು ನಿಮ್ಮೆಲ್ಲರನ್ನೂ ಈ ಸಂದರ್ಭದಲ್ಲಿ ಸ್ವಾಗತಿಸುತ್ತಿದ್ದೇನೆ. ನೀವೆಲ್ಲರೂ ಈ ಸಮಾರಂಭಕ್ಕೆ ಬಂದುದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ.

"ಶಾಂತಿಗೋಷ್ಠಿ" ಎಂದು ಕರೆಯಲ್ಪಡುವ ಈ ಸಮಾರಂಭದ ಬಗ್ಗೆ ನಮ್ಮಲ್ಲಿ ಬಹುತೇಕ ಜನರು ಚೆನ್ನಾಗಿ ಪರಿಚಿತರಾಗಿದ್ದಾರೆ. ಇದನ್ನು ಪ್ರತಿ ವರ್ಷ ಅಹ್ಮದಿಯಾ ಮುಸ್ಲಿಮ್ ಜಮಾತಿನ ವತಿಯಿಂದ ಜರಗಿಸಲಾಗುತ್ತಿದೆ. ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡಬೇಕೆಂಬ ಅಭಿಲಾಷೆಯಿಂದ ನಾವು ಮಾಡುವ ಅನೇಕ ಪ್ರಯತ್ನಗಳಲ್ಲಿ ಇದು ಒಂದಾಗಿದೆ. ಇಂದು ಕೆಲವು ಹೊಸ ಮಿತ್ರರು ಮೊದಲನೆಯ ಬಾರಿ ಇಲ್ಲಿಗೆ ಆಗಮಿಸಿದ್ದಾರೆ. ಉಳಿದವರು ನಮ್ಮ ಹಳೆಯ ಸ್ನೇಹಿತರು.

ಅವರು ಅನೇಕ ವರ್ಷಗಳಿಂದ ನಮ್ಮ ಪ್ರಯತ್ನಗಳಿಗೆ ಬೆಂಬಲ ನೀಡುತ್ತಿದ್ದಾರೆ. ನೀವೆಲ್ಲರೂ ವಿದ್ಯಾ ಸಂಪನ್ನರಾಗಿದ್ದೀರಿ. ಈ ಲೋಕದಲ್ಲಿ ಶಾಂತಿ ಸ್ಥಾಪಿಸಬೇಕೆಂಬ ನಮ್ಮ ಅಭಿಲಾಷೆಯಲ್ಲಿ ನೀವು ಸಹ ಪಾಲುಗಾರರಾಗಿರುವಿರಿ. ಈ ಅಭಿಲಾಷೆಯ ಕಾರಣದಿಂದಲೇ ನೀವು ಈ ಸಮಾರಂಭಕ್ಕೆ ಆಗಮಿಸಿರುವಿರಿ.

ಲೋಕವು ಪ್ರೀತಿ, ವಾತ್ಸಲ್ಯ ಮತ್ತು ಸ್ನೇಹ ಭರಿತವಾಗಬೇಕೆಂದು ಹೃತ್ಪೂರ್ವಕ ಆಶೆಯೊಂದಿಗೆ ನೀವೆಲ್ಲರೂ ಇಲ್ಲಿಗೆ ಆಗಮಿಸಿರುವಿರಿ. ಲೋಕದ ಬಹುತೇಕ ಜನರು ಇದೇ ಆಶಯಗಳನ್ನು ಹೊಂದಿದ್ದಾರೆ ಮತ್ತು ಅವರೆಲ್ಲರಿಗೂ ಇವುಗಳ ಆವಶ್ಯಕತೆಗಳಿರುತ್ತವೆ. ನೀವು ಬೇರೆ ಬೇರೆ ಹಿನ್ನೆಲೆಗಳನ್ನು ಹೊಂದಿ ಬೇರೆ ಬೇರೆ ಜನಾಂಗಗಳಿಗೆ ಮತ್ತು ಧರ್ಮಗಳಿಗೆ ಸೇರಿದವರಾಗಿದ್ದರೂ ನೀವೆಲ್ಲರೂ ಈ ಉದ್ದೇಶಗಳನ್ನು ಗಳಿಸಲು ಇಲ್ಲಿ ನನ್ನ ಮುಂದೆ ಸಮಾವೇಶಗೊಂಡಿರುವಿರಿ.

ನಾನು ಇದರ ಮೊದಲು ಹೇಳಿದ ಪ್ರಕಾರ ನಾವು ಈ ಸಮಾವೇಶವನ್ನು ಪ್ರತಿವರ್ಷ ಜರಗಿಸುತ್ತೇವೆ. ಪ್ರತಿ ವರ್ಷ, ಶಾಂತಿಯು ಲೋಕದಲ್ಲಿ ನಮ್ಮ ಕಣ್ಣ ಮುಂದೆ ಸ್ಥಾಪಿತವಾಗಬೇಕೆಂದು ನಾವೆಲ್ಲರೂ ಶುಭ ಪ್ರತೀಕ್ಷೆ ಹೊಂದುತ್ತೇವೆ. ನಿಮಗೆ ಸಾಧ್ಯವಿರುವಲ್ಲೆಲ್ಲಾ ಮತ್ತು ನೀವು ಸಂಪರ್ಕ ಸಾಧಿಸುವವರೊಂದಿಗೆ ನೀವು ಶಾಂತಿಗೋಸ್ಕರ ಪ್ರಯತ್ನಿಸಬೇಕೆಂದು ನಾನು ಪ್ರತಿ ವರ್ಷ ನಿಮ್ಮನ್ನು ಕೋರುತ್ತಾ ಇರುತ್ತೇನೆ. ರಾಜಕೀಯ ಪಕ್ಷಗಳೊಂದಿಗೆ ಮತ್ತು ಸರಕಾರಗಳೊಂದಿಗೆ ಸಂಬಂಧ ಹೊಂದಿರುವ ಎಲ್ಲರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಅವರೆಲ್ಲರೂ ಈ ಶಾಂತಿ ಸಂದೇಶವನ್ನು ತಮ್ಮ ಪ್ರಭಾವದ ವಲಯದೊಳಗೆ ಹರಡಬೇಕು. ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಉನ್ನತ ನೈತಿಕ ಮೌಲ್ಯಗಳನ್ನು ಜೀವಿತದಲ್ಲಿ ಅಳವಡಿಸಿಕೊಳ್ಳುವುದು ಹಿಂದೆಂದಿಗಿಂತಲೂ ಈಗ ಅತ್ಯಾವಶ್ಯಕವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಬಗ್ಗೆ ಹೇಳುವುದಾದರೆ, ನಮಗೆ ಯಾವಾಗೆಲ್ಲಾ ಮತ್ತು ಎಲ್ಲೆಲ್ಲಾ ಸಂದರ್ಭ ಸಿಗುವುದೋ ನಾವು ನಮ್ಮ ನಿಲುವನ್ನು ಬಹಿರಂಗವಾಗಿ ಘೋಷಿಸುತ್ತೇವೆ: ಲೋಕವು ಯಾವ ನಾಶದ ಕಡೆಗೆ ಸಾಗುತ್ತಿದೆಯೋ ಅದನ್ನು ಅದರಿಂದ ರಕ್ಷಿಸಲು ಇರುವ ಏಕಮಾತ್ರ ಮಾರ್ಗ ಪ್ರೀತಿ, ವಾತ್ಸಲ್ಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹರಡಲು ನಾವೆಲ್ಲರೂ ಪ್ರಯತ್ನ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಅತ್ಯಂತ ಪ್ರಾಮುಖ್ಯವಾದ ವಿಷಯವೇನೆಂದರೆ, ಲೋಕವು ತನ್ನ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸಬೇಕು. ಈ ರೀತಿ ಸೃಷ್ಟಿಕರ್ತನನ್ನು ಗುರುತಿಸುವುದರಿಂದ ಅವನ ಸೃಷ್ಟಿಯ ಬಗ್ಗೆ ಪ್ರೀತಿ ಮತ್ತು ಸಹಾನುಭೂತಿ ಉಂಟಾಗುವುದು. ಇವು ನಮ್ಮ ಸದ್ಗುಣಗಳ ಅಂಶವಾಗುವಾಗ ನಾವು ದೇವನ ಪ್ರೀತಿಗೆ ಪಾತ್ರರಾಗುವೆವು.

ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕೆಂದು ನಾವು ನಿರಂತರವಾಗಿ ಧ್ವನಿಯೆತ್ತಿ ಅಪೇಕ್ಷಿಸುತ್ತೇವೆ. ನಾವು ನಮ್ಮ ಹೃದಯದಲ್ಲಿ ಅನುಭವಿಸುವ ನೋವು ಮತ್ತು ಯಾತನೆ, ಲೋಕದ ಜನರ ಕಷ್ಟವನ್ನು ನಿವಾರಿಸಿ ನಾವು ಜೀವಿಸುವ ಲೋಕವನ್ನು ಉತ್ತಮಗೊಳಿಸಲು ಪ್ರಯತ್ನಿಸಲಿಕ್ಕೆ ನಮಗೆ ಸ್ಫೂರ್ತಿ ನೀಡುತ್ತದೆ. ಇಂದು ನಾವು ನಡೆಸುವ ಈ ಸಮಾರಂಭವು ನಾವು ಈ ಉದ್ದೇಶವನ್ನು ಗಳಿಸಲು ಮಾಡುವ ಅನೇಕ ಪ್ರಯತ್ನಗಳಲ್ಲಿ ಒಂದಾಗಿದೆ.

ನಾನು ಇದರ ಮೊದಲು ಹೇಳಿದಂತೆ ನೀವೆಲ್ಲರೂ ಈ ಉನ್ನತಮಟ್ಟದ ಅಭಿಲಾಷೆಗಳನ್ನು ಹೊಂದಿರುವಿರಿ. ನಾನು ರಾಜಕಾರಣಿಗಳೊಂದಿಗೆ ಮತ್ತು ಧಾರ್ಮಿಕ ನಾಯಕರೊಂದಿಗೆ ಶಾಂತಿಗೋಸ್ಕರ ಪ್ರಯತ್ನಿಸಲು ಅಪೇಕ್ಷಿಸಿದ್ದೇನೆ. ಆದರೆ ಈ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದರೂ ಆತಂಕ ಮತ್ತು ಸಂಘರ್ಷ ಲೋಕದಾದ್ಯಂತ ವ್ಯಾಪಕವಾಗಿ ಮುಂದುವರಿಯುತ್ತಾ ಇರುತ್ತವೆ. ಇಂದಿನ ಲೋಕದಲ್ಲಿ ನಾವು ಬಹಳ ಸಂಘರ್ಷಗಳನ್ನು, ಅಸ್ವಸ್ಥತೆಗಳನ್ನು ಮತ್ತು ಅಸ್ತವ್ಯಸ್ತತೆಗಳನ್ನು ಕಾಣುತ್ತಿದ್ದೇವೆ. ಕೆಲವು ದೇಶಗಳಲ್ಲಿ ದೇಶದ ನಿವಾಸಿಗಳು ಪರಸ್ಪರ ಹೋರಾಡುತ್ತಾ ಇರುತ್ತಾರೆ. ಕೆಲವು ದೇಶಗಳಲ್ಲಿ ಪ್ರಜೆಗಳು ತಮ್ಮ ಸರಕಾರಗಳ ವಿರುದ್ಧ ಹೋರಾಡುತ್ತಿದ್ದಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಸರಕಾರಗಳು ತಮ್ಮ ದೇಶದ ಪ್ರಜೆಗಳ ಮೇಲೆ ಆಕ್ರಮಣ ಮಾಡುತ್ತಾ ಇವೆ. ಭೀಕರ ಗುಂಪುಗಳು ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಅರಾಜಕತೆಯನ್ನೂ ಅಸ್ತವ್ಯಸ್ತತೆಯನ್ನೂ ಉತ್ತೇಜಿಸುತ್ತಾ ನಿರಪರಾಧಿಗಳಾದ ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ನಿಷ್ಕಾರಣವಾಗಿ ಕೊಲ್ಲುತ್ತಾ ಇವೆ. ಕೆಲವು ದೇಶಗಳಲ್ಲಿ ರಾಜಕೀಯ ಪಕ್ಷಗಳು ಸ್ವಾರ್ಥಕ್ಕೋಸ್ಕರ ಪರಸ್ಪರ ಹೋರಾಡುತ್ತಿವೆ. ದೇಶದ ಸೇವೆಗೋಸ್ಕರ ರಾಜಕೀಯ ಪಕ್ಷಗಳು ಪರಸ್ಪರ ಕೈಜೋಡಿಸಲು ಮುಂದಾಗುವುದಿಲ್ಲ. ಕೆಲವು ದೇಶಗಳು ಅನ್ಯ ದೇಶಗಳ ಸಾಧನ ಸಂಪತ್ತುಗಳನ್ನು ಹಿಡಿಗೂಡಲು ತಮ್ಮ ದೃಷ್ಟಿಗಳನ್ನು ಅಸೂಯೆಯಿಂದ ಹಾಯಿಸುತ್ತಾ ಇರುತ್ತವೆ. ಲೋಕದ ಮಹಾಶಕ್ತಿ ರಾಷ್ಟ್ರಗಳು ತಮ್ಮ ಮೇಧಾವಿತ್ವವನ್ನು ಕಾಪಾಡಲು ನಿರಂತರವಾಗಿ ಪ್ರಯತ್ನಿಸುತ್ತಾ ಇರುತ್ತವೆ ಮತ್ತು ತಮ್ಮ ಗುರಿಯನ್ನು ಸಾಧಿಸಲು ಅವರು ಯಾವ ಕುಕೃತ್ಯವನ್ನೂ ಮಾಡಲು ಹಿಂಜರಿಯುವುದಿಲ್ಲ.

ಇವೆಲ್ಲವನ್ನು ಗಮನಿಸುವಾಗ ನಾವು ಕಾಣುವುದೇನೆಂದರೆ, ಅಹ್ಮದಿಯಾ ಮುಸ್ಲಿಮ್ ಸಂಘಟನೆ ಮತ್ತು ನಿಮ್ಮಲ್ಲಿ ಬಹುತೇಕ ಜನರು ಲೋಕದಲ್ಲಿ ಗುಣಾತ್ಮಕ ಬದಲಾವಣೆ ತರುವ ಶಕ್ತಿಯನ್ನಾಗಲಿ, ಅಧಿಕಾರವನ್ನಾಗಲಿ ಹೊಂದಿಲ್ಲವೆಂದಾಗಿದೆ. ಇದು ಏಕೆಂದರೆ ನಾವು ಸರಕಾರಿ ಉದ್ಯೋಗವನ್ನಾಗಲೀ ಶಕ್ತಿಯನ್ನಾಗಲೀ ಹೊಂದದಿರುವುದರಿಂದಾಗಿದೆ. ವಾಸ್ತವಿಕ ಸಂಗತಿ ಏನೆಂದರೆ ನಾವು ಸ್ನೇಹ ಸಂಬಂಧವನ್ನು ಬೆಳೆಸಿರುವ ರಾಜಕಾರಣಿಗಳು ಕೂಡ ನಮ್ಮೊಂದಿಗೆ ಇರುವಾಗ ನಮ್ಮ ಮಾತುಗಳನ್ನು ಒಪ್ಪಿಕೊಳ್ಳುತ್ತಾರಾದರೂ ಅವರು ನಿರ್ಭಯವಾಗಿ ಹೇಳಿಕೆ ನೀಡಲು ಹಿಂಜರಿಯುತ್ತಾರೆ. ಅವರ ಹೇಳಿಕೆಗಳನ್ನು ದಮನಿಸಲಾಗುತ್ತಿದೆ ಮತ್ತು ಅವರು ಹಿಂಜರಿಕೆಯಿಲ್ಲದೆ ಹೇಳಿಕೆ ನೀಡುವುದನ್ನು ತಡೆಯಲಾಗುತ್ತಿದೆ. ಹೀಗೆ ಸಂಭವಿಸುವುದು ಅವರು ತಮ್ಮ ಪಕ್ಷಗಳ ಧೋರಣೆಗಳನ್ನು ಬೆಂಬಲಿಸಲು ನಿರ್ಬಂಧಿಸಲ್ಪಡುವುದರಿಂದಾಗಿದೆ ಅಥವಾ ಪ್ರಾಯಶಃ ಬಾಹ್ಯ ಲೋಕ ಶಕ್ತಿರಾಷ್ಟ್ರಗಳ ಅಥವಾ ರಾಜಕೀಯ ಒಡಂಬಡಿಕೆಗಳ ಕಾರಣದಿಂದಾಗಿರಬಹುದು. ಅವುಗಳು ಅವರನ್ನು ಅದುಮಿಡುತ್ತವೆ.

ಹೀಗಿದ್ದರೂ ಶಾಂತಿ ಗೋಷ್ಠಿಯಲ್ಲಿ ಪ್ರತಿವರ್ಷ ಭಾಗವಹಿಸುವ ನಾವು ನಿಸ್ಸಂಶಯವಾಗಿ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕೆಂಬ ಆಶೆಯನ್ನು ಹೊಂದಿದ್ದೇವೆ. ನಾವು ನಮ್ಮ ಭಾವನೆಗಳನ್ನೂ ಅಭಿಪ್ರಾಯಗಳನ್ನೂ ಹೀಗೆ ಸೂಚಿಸುತ್ತೇವೆ: ಪ್ರೀತಿ, ಸಹಾನುಭೂತಿ ಮತ್ತು ಭ್ರಾತೃತ್ವವು ಎಲ್ಲಾ ಧರ್ಮಗಳ ಮಧ್ಯೆ, ಎಲ್ಲಾ ಜನಾಂಗಗಳ ಮಧ್ಯೆ, ಎಲ್ಲಾ ಕುಲವಂಶಗಳ ಮಧ್ಯೆ ಮತ್ತು ಎಲ್ಲಾ ಜನರ ಮಧ್ಯೆ ಸ್ಥಾಪಿತವಾಗಬೇಕು.

ದುರದೃಷ್ಟಕರವಾಗಿ ನಾವು ನಮ್ಮ ಈ ಆದರ್ಶವನ್ನು ಕೃತಿಗಿಳಿಸಲು ಶಕ್ತಿಯನ್ನು ಹೊಂದಿಲ್ಲ. ನಾವು ಆಶಿಸುವ ಪರಿಣಾಮಗಳನ್ನು ಉಂಟು ಮಾಡಲು ನಮಗೆ ಅಧಿಕಾರವಾಗಲಿ ಸಾಧನ ಸಂಪತ್ತಾಗಲಿ ಇಲ್ಲ.

ಕೆಲವು ವರ್ಷಗಳ ಹಿಂದೆ ಇದೇ ಸಭಾಭವನದಲ್ಲಿ ಜರುಗಿಸಲಾದ ಶಾಂತಿಗೋಷ್ಠಿಯಲ್ಲಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಮಾರ್ಗೋಪಾಯಗಳ ಬಗ್ಗೆ ವಿವರಿಸಿ ಸಂಯುಕ್ತ ರಾಷ್ಟ್ರ ಸಂಘ ಹೇಗೆ ಕಾರ್ಯಪ್ರವೃತ್ತವಾಗಬೇಕೆಂದು ಸೂಚಿಸಿದ್ದೆನು. ಆ ಭಾಷಣದ ಬಗ್ಗೆ ನಮ್ಮ ಗಣ್ಯ ಸ್ನೇಹಿತರಾದ ಲಾರ್ಡ್ ಎರಿಕ್ ಆವ್‌ಬರಿ, ಅಂತಹ ಭಾಷಣವನ್ನು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮಾಡಬೇಕಾಗಿತ್ತೆಂದು ಅಭಿಪ್ರಾಯಪಟ್ಟಿದ್ದರು. ಅವರು ತಮ್ಮ ಹೇಳಿಕೆ ಮೂಲಕ ತಮ್ಮ ಉನ್ನತ ನೈತಿಕ ಗುಣವನ್ನು ಪ್ರಕಟಿಸಿದರು. ಆದರೆ ನಾನು ಹೇಳಲು ಬಯಸುವುದೇನೆಂದರೆ, ಕೇವಲ ಭಾಷಣ ಮಾಡುವುದು ಮತ್ತು ಅದನ್ನು ಆಲಿಸುವುದು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಸಾಕಾಗಲಾರದು. ಈ ಮುಖ್ಯ ಉದ್ದೇಶವನ್ನು ಸಾಧಿಸಲು ಇರುವ ಅತ್ಯಾವಶ್ಯಕ ಘಟಕ ಪರಿಪೂರ್ಣ ನ್ಯಾಯಪಾಲನೆ ಮತ್ತು ಎಲ್ಲಾ ವಿಷಯಗಳಿಗೆ ಸಂಬಂಧಿಸಿ ಉತ್ತಮ ವರ್ತನೆಯಾಗಿದೆ. ಪವಿತ್ರ ಖುರ್‌ಆನಿನ ಅಧ್ಯಾಯ **4** ವಚನ **136**ರಲ್ಲಿ ಇದರ ಬಗ್ಗೆ ಒಂದು ಸುವರ್ಣ ತತ್ವವನ್ನು ವಿವರಿಸಿ ನಮಗೆ ಮಾರ್ಗದರ್ಶನ ನೀಡಲಾಗಿದೆ. ಅದರಲ್ಲಿ ಹೀಗೆ ಹೇಳಲಾಗಿದೆ: ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ. ಅದು ನಿಮಗೆ ಅಥವಾ (ನಿಮ್ಮ) ಮಾತಾ ಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ.

ಇದು ಸರಿಯಾದ ನ್ಯಾಯಪಾಲನೆಯಾಗಿದೆ. ಸಾಮೂಹಿಕ ಹಿತಕ್ಕೋಸ್ಕರ ಸ್ವಾರ್ಥವನ್ನು ಬದಿಗಿರಿಸಲಾಗಿದೆ.

ನಾವು ಈ ತತ್ವವನ್ನು ಸಾಮೂಹಿಕ ಹಂತದಲ್ಲಿ ಬಳಸುವ ಬಗ್ಗೆ ಚಿಂತಿಸುವಾಗ ಸಂಪತ್ತು ಮತ್ತು ಪ್ರಭಾವ ಬಳಸಿ ಅನ್ಯಾಯಕರ ಪ್ರಭಾವ ಬೀರುವಿಕೆಯನ್ನು ನಾವು ಕೈಬಿಡಬೇಕೆಂದು ತಿಳಿಯುತ್ತದೆ. ಪ್ರತಿಯೊಂದು ದೇಶದ ಪ್ರತಿನಿಧಿಗಳು ಮತ್ತು ರಾಯಭಾರಿಗಳು ಪ್ರಾಮಾಣಿಕವಾಗಿ ನ್ಯಾಯಪಾಲನೆ ಮತ್ತು ಸಮತೆಗೋಸ್ಕರ ಕಾರ್ಯನಿರತರಾಗಬೇಕು. ಎಲ್ಲಾ ವಿಧಗಳ ಪಕ್ಷಪಾತ ಮತ್ತು ತಾರತಮ್ಯತೆಯನ್ನು ನಿವಾರಿಸಬೇಕು. ಇದು ಶಾಂತಿ ಸ್ಥಾಪನೆಗಿರುವ ಏಕಮಾತ್ರ ಮಾರ್ಗವಾಗಿದೆ. ನಾವು ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿ ಮತ್ತು ಸೆಕ್ಯುರಿಟಿ ಕೌನ್ಸಿಲ್‌ಗಳ ಕಡೆಗೆ ನೋಡುವುದಾದರೆ, ಅಲ್ಲಿ ನೀಡಲಾದ ಹೇಳಿಕೆಗಳು ಮತ್ತು ಭಾಷಣಗಳು ಬಹಳ ಪ್ರಶಂಸಿಸಲ್ಪಡುವುದನ್ನು ಕಾಣುತ್ತೇವೆ. ಆದರೆ ಅಂತಹ ಮೆಚ್ಚಿಕೆಯ ಹೇಳಿಕೆಗಳು ಅರ್ಥಶೂನ್ಯವಾಗಿವೆ. ಏಕೆಂದರೆ ವಾಸ್ತವಿಕ ತೀರ್ಮಾನ ಗಳನ್ನು ಮೊದಲೇ ನಿರ್ಧರಿಸಲಾಗಿರುತ್ತದೆ.

ನ್ಯಾಯಬದ್ಧವಾದ ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ ನಿರ್ಧಾರ ಗಳನ್ನು ಮಾಡದೆ ಮಹಾಶಕ್ತಿ ರಾಷ್ಟ್ರಗಳ ಒತ್ತಡಗಳ ಪ್ರಭಾವಕ್ಕೊಳಗಾಗಿ ಅಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದರಿಂದ ಅಲ್ಲಿ ನಡೆಸಲಾಗುವ ಭಾಷಣಗಳು ಪೊಳ್ಳಾದುದೂ ಅರ್ಥ ಶೂನ್ಯವೂ ಹೊರ ಜಗತ್ತನ್ನು ವಂಚಿಸಲು ಮಾಡುವ ಅಭ್ಯಾಸಗಳೂ ಆಗಿರುತ್ತವೆ. ಹೀಗಿದ್ದರೂ ನಾವು ನಿರಾಶರಾಗಿ ಎಲ್ಲಾ ಪ್ರಯತ್ನಗಳನ್ನು ಬಿಟ್ಟುಬಿಡಬಾರದು. ಅದಕ್ಕೆ ಬದಲಾಗಿ ನಾವು ನಮ್ಮ ದೇಶಗಳ ನಿಯಮಗಳನ್ನು ಪಾಲಿಸಿಕೊಂಡು ನಮ್ಮ ಸರಕಾರಗಳ ಗಮನಕ್ಕೆ ಈ ಕಾಲದ ಆವಶ್ಯಕತೆಗಳ ಕಡೆಗೆ ಗಮನ ಸೆಳೆಯುವುದು ನಮ್ಮ ಜೀವಿತೋದ್ದೇಶವಾಗಬೇಕು. ಸ್ವಂತ ಹಿತಾಸಕ್ತಿಗಳುಳ್ಳ ಗುಂಪುಗಳಿಗೆ ನಾವು ಸಲಹೆಗಳನ್ನು ಸರಿಯಾಗಿ ನೀಡಿ ಜಾಗತಿಗೆ ಮಟ್ಟದಲ್ಲಿ ನ್ಯಾಯವು ಮೇಲುಗೈಯನ್ನು ಪಡೆಯುವಂತೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ನಾವೆಲ್ಲರೂ ಆಶಿಸುವಂತಹ ಒಂದು ಶಾಂತಿಧಾಮವಾಗಿ ಲೋಕವು ಪರಿವರ್ತನಗೊಳ್ಳುವುದು.

ಆದುದರಿಂದ ನಾವು ನಮ್ಮ ಪ್ರಯತ್ನಗಳನ್ನು ಬಿಟ್ಟುಬಿಡಬಾರದು. ದೌರ್ಜನ್ಯ ಮತ್ತು ಅನ್ಯಾಯಗಳ ವಿರುದ್ಧ ನಾವು ಧ್ವನಿಯೆತ್ತುವುದಿಲ್ಲವಾದರೆ ನಾವು ನೈತಿಕ ಮೌಲ್ಯರಹಿತರಾಗುವೆವು. ನಮ್ಮ ಧ್ವನಿಗಳು ಆಲಿಸಲ್ಪಡುವವೋ, ಇಲ್ಲವೋ, ಅವು ಪ್ರಭಾವಶಾಲಿಯಾಗುವುವೋ ಇಲ್ಲವೋ ಎಂಬುದು ಅಪ್ರಸ್ತುತವಾಗಿದೆ. ನಾವು ಯಾವಾಗಲೂ ಶಾಂತಿ ಸ್ಥಾಪನೆಯ ಬಗ್ಗೆ ಅನ್ಯರಿಗೆ ಉಪದೇಶಿಸುತ್ತಾ ಇರಬೇಕು. ವಿವಿಧ ಧರ್ಮಗಳ ಮತ್ತು ವಿವಿಧ ಜನಾಂಗಗಳ ಜನರು ಮಾನವ ಮೌಲ್ಯಗಳನ್ನು ಪ್ರತಿಪಾದಿಸಲು ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಲೋಕದಲ್ಲಿ ಶಾಂತಿ ಮತ್ತು ಸಹಾನುಭೂತಿ ಬಗ್ಗೆ ಆಲಿಸಿ, ಕಲಿತು, ಮಾತನಾಡಲು ಮುಂದಾಗುವುದನ್ನು ಕಾಣುವಾಗ ನಾನು ಯಾವಾಗಲೂ ಅತ್ಯಂತ ಸಂತೋಷಭರಿತನಾಗುತ್ತೇನೆ. ನೀವೆಲ್ಲರೂ ಲೋಕದಲ್ಲಿ ಶಾಂತಿ ಸ್ಥಾಪನೆ ಗೋಸ್ಕರ ನಿಮ್ಮ ಶಕ್ತಿ ಸಾಮರ್ಥ್ಯಕ್ಕನು ಸಾರವಾಗಿ ಪ್ರಯತ್ನಿಸಬೇಕೆಂದು ನಿಮ್ಮೆಲ್ಲರನ್ನೂ ಅಪೇಕ್ಷಿಸುತ್ತೇನೆ. ಹೀಗೆ ಮಾಡಿದರೆ ನಾವು ನಮ್ಮ ಪ್ರತೀಕ್ಷೆಯ ಜ್ಯೋತಿಯನ್ನು ಬೆಳಗಿಸಿಡುವೆವು ಮತ್ತು ಸತ್ಯವಾದ ಶಾಂತಿ ಮತ್ತು ನ್ಯಾಯವು ಲೋಕದ ಎಲ್ಲಾ ಭಾಗಗಳಲ್ಲೂ ಸ್ಥಾಪಿಸಲ್ಪಡುವ ಕಾಲವು ಬಂದೇ ಬರುವುದು.

ನಾವು ಒಂದು ವಿಷಯವನ್ನು ಯಾವಾಗಲೂ ನೆನಪಿಡಬೇಕು. ಮನುಷ್ಯರ ಪ್ರಯತ್ನಗಳು ಸೋತುಹೋಗುವಾಗ ಸರ್ವಶಕ್ತನಾದ ದೇವನು ತನ್ನ ವಿಧಿಯನ್ನು ಜಾರಿಗೊಳಿಸುತ್ತಾನೆ ಮತ್ತು ಮಾನವರ ಭವಿಷ್ಯವನ್ನು ನಿರ್ಧರಿಸುತ್ತಾನೆ. ದೇವನು ತನ್ನ ವಿಧಿಯನ್ನು ಜಾರಿಗೊಳಿಸಿ ತನ್ನ ಕಡೆಗೆ ಮತ್ತು ಮಾನವರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಜನರನ್ನು ನಿರ್ಬಂಧಕ್ಕೊಳಪಡಿಸುವ ಮೊದಲೇ ಜನರು ಸ್ವತಃ ಈ ಅತ್ಯಾವಶ್ಯಕ ವಿಷಯಗಳ ಬಗ್ಗೆ ಗಮನಹರಿಸುವುದು ಬಹಳ ಉತ್ತಮವಾಗಿದೆ. ಏಕೆಂದರೆ ಸರ್ವಶಕ್ತನಾದ ದೇವನು ಕ್ರಮಕೈಗೊಳ್ಳುವಾಗ ಅವನ ಕೋಪವು ಮಾನವರನ್ನು ಅತ್ಯಂತ ಕಠಿಣವಾಗಿಯೂ ಭಯಾನಕವಾಗಿಯೂ ಹಿಡಿಗೂಡುತ್ತದೆ.

ಇಂದಿನ ಕಾಲದಲ್ಲಿ ದೇವನ ವಿಧಿನಿರ್ಣಯದ ಭಯಾನಕ ರೂಪವು ಇನ್ನೊಂದು ಮಹಾಯುದ್ಧದ ರೂಪದಲ್ಲಿ ಪ್ರತ್ಯಕ್ಷವಾಗ ಬಹುದು. ಅಂತಹ ಮಹಾಯುದ್ಧದ ದೋಷಭರಿತ ಪರಿಣಾಮಗಳು ಆ ಯುದ್ಧ ಕಾಲಕ್ಕೆ ಅಥವಾ ಈ ಪೀಳಿಗೆಗೆ ಮಾತ್ರ ಸೀಮಿತ ವಾಗಿರಲಾರವು ಎಂಬುದು ಸಂಶಯಾತೀತವಾಗಿದೆ. ವಾಸ್ತವಿಕವಾಗಿ ಅಂತಹ ಯುದ್ಧದ ಭೀಕರ ಪರಿಣಾಮಗಳು ಮುಂದಿನ ಅನೇಕ ಪೀಳಿಗೆಗಳಿಗೆ ವ್ಯಾಪಿಸುವುವು. ಅದರ ಒಂದು ದಾರುಣ ಪರಿಣಾಮವು ಈಗ ಜನಿಸುವ ಮತ್ತು ಮುಂದೆ ಜನಿಸಲಿರುವ ಶಿಶುಗಳಿಗೆ ಹಾನಿಕರವಾಗಿರುವುದು. ಈಗ ಲಭ್ಯವಾಗಿರುವ ಅಣು ಆಯುಧಗಳು ಎಷ್ಟು ವಿನಾಶಕಾರಿಗಳಾಗಿವೆ ಎಂದರೆ ಹಲವಾರು ಪೀಳಿಗೆಗಳಲ್ಲಿ ಹುಟ್ಟುವ ಮಕ್ಕಳು ತೀವ್ರತರವಾದ ಅಂಗವಿಕಲತೆಯನ್ನೂ ಅಂಗಹೀನತೆ

ಯನ್ನೂ ವಂಶವಾಹಿ ಸಂಬಂಧವಾದ ನ್ಯೂನತೆಗಳನ್ನೂ ಹೊಂದಿ ಜನಿಸುವರು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನ್ ಅಣು ಬಾಂಬು ದಾಳಿಗೊಳಗಾಗಿ ಘೋರ ಯಾತನೆಗೆ ಗುರಿಯಾದ ದೇಶವಾಗಿದೆ. ನೀವು ಇಂದಿಗೂ ಜಪಾನ್ ದೇಶಕ್ಕೆ ಭೇಟಿಕೊಡುವಾಗ ನೀವು ಜಪಾನಿನ ಜನರಲ್ಲಿ ಯುದ್ಧದ ಬಗ್ಗೆ ತೀವ್ರ ಭಯ ಮತ್ತು ದ್ವೇಷವನ್ನು ಅವರ ಮಾತುಗಳಿಂದಲೂ ಅವರ ಕಣ್ಣುಗಳಿಂದಲೂ ಕಾಣಬಹುದು. ಆದರೆ ಆ ಕಾಲದಲ್ಲಿ ಉಪಯೋಗಿಸಲಾಗುವ ಅಣುಬಾಂಬುಗಳು ವಿಸ್ತಾರ ಕ್ಷೇತ್ರದಲ್ಲಿ ವಿನಾಶವನ್ನುಂಟುಮಾಡಿದ್ದರೂ ಅವುಗಳು ಇಂದಿನ ಕಾಲದ ಅಣುಬಾಂಬುಗಳಿಗೆ ಹೋಲಿಸಿದರೆ ಬಹಳ ಕಡಿಮೆ ಶಕ್ತಿಶಾಲಿ ಗಳಾಗಿದ್ದುವು. ಇಂತಹ ಶಕ್ತಿಶಾಲಿ ಅಣುಬಾಂಬುಗಳು ಈಗ ಚಿಕ್ಕ ದೇಶಗಳಲ್ಲೂ ಇವೆ.

ಜಪಾನ್ ಮೇಲೆ ಅಣುಬಾಂಬು ದಾಳಿ ನಡೆದು ಏಳು ದಶಕಗಳು ದಾಟಿಹೋಗಿದ್ದರೂ ಅಣು ಬಾಂಬು ದಾಳಿಯ ದುಷ್ಪರಿಣಾಮಗಳು ಈಗ ಸಹ ಅಲ್ಲಿನ ನವಜಾತ ಶಿಶುಗಳಲ್ಲಿ ಕಂಡುಬರುತ್ತವೆ ಎಂದು ವರದಿಯಾಗಿದೆ. ಒಬ್ಬನಿಗೆ ಗುಂಡು ಹೊಡೆದರೆ ಕೆಲವು ಸಾರಿ ಅವನು ವೈದ್ಯಕೀಯ ಸೇವೆಯ ಮೂಲಕ ರಕ್ಷಿಸಲ್ಪಡಬಹುದಾಗಿದೆ. ಆದರೆ ಅಣು ಆಯುಧ ಪ್ರಯೋಗಿಸುವ ಸಮರ ಪ್ರಾರಂಭವಾದರೆ ಅಣು ಬಾಂಬ್ ದಾಳಿಗೆ ತುತ್ತಾಗುವ ಯಾರೂ ಇಂತಹ ಸುಯೋಗವನ್ನು ಗಳಿಸಲಾರರು. ಅಣುಬಾಂಬು ದಾಳಿಗೆ ಗುರಿಯಗುವವರು ಕೂಡಲೇ ಸತ್ತುಹೋಗುವರು ಮತ್ತು ಅವರ ದೇಹಗಳು ಪ್ರತಿಮೆಗಳ ಹಾಗೆ ಸ್ಥಗಿತಗೊಳ್ಳುವುವು. ಅವರ ಚರ್ಮವು ಕರಗಿ ಹೋಗುವುದು. ಕುಡಿಯುವ ನೀರು, ಆಹಾರ ಮತ್ತು ಸಸ್ಯಗಳು ಅಣು ವಿಕಿರಣದ ದೋಷಕರವಾದ ಪರಿಣಾಮಗಳಿಗೆ ಈಡಾಗುವುವು. ಆ ದೋಷಕರ ಪರಿಣಾಮಗಳು ಎಂತಹ ರೋಗಗಳನ್ನು ಉಂಟುಮಾಡಬಲ್ಲವು ಎಂಬುದರ ಬಗ್ಗೆ ನಾವು ಕೇವಲ ಊಹಿಸಬಹುದು. ಅಣುಬಾಂಬು ದಾಳಿಗೆ ನೇರವಾಗಿ ಗುರಿಯಾಗಿಲ್ಲವಾದರೂ ಅಣು ವಿಕಿರಣಕ್ಕೆ ಸಮೀಪ ಪ್ರದೇಶಗಳು ಅಣುವಿಕಿರಣಗಳಿಗೆ ಕಡಿಮೆ ತುತ್ತಾಗಿದ್ದರೂ ರೋಗವು ಅಂತಹ ಸ್ಥಳಗಳಲ್ಲೂ ಹರಡುವುದು ಸಂಭಾವ್ಯವಾಗಿದೆ ಮತ್ತು ಅಲ್ಲೂ ಮುಂದಿನ ಪೀಳಿಗೆಗಳು ಸಹ ದೋಷಬಾಧಿತವಾಗುವುವು.

ನಾನು ಇದರ ಮೊದಲು ಹೇಳಿದ ಹಾಗೆ ಅಣು ಯುದ್ಧದ ವಿನಾಶಕಾರಿ ಪರಿಣಾಮಗಳು ಯುದ್ಧಕ್ಕೆ ಮತ್ತು ಅದರ ಸಮೀಪ ಕಾಲಕ್ಕೆ ಸೀಮಿತವಾಗಿರಲಾರವು. ಅವು ಪೀಳಿಗೆಗಳಿಂದ ಪೀಳಿಗೆಗಳಿಗೆ ದಾಟುತ್ತಾ ಹೋಗುವುವು. ಅಣುಬಾಂಬು ಬಳಸಲಾಗುವ ಯುದ್ಧದ ವಾಸ್ತವಿಕ ಪರಿಣಾಮಗಳು ಇವುಗಳಾಗಿದ್ದರೂ ಈಗ ಸಹ ಸ್ವಾರ್ಥಿಗಳಾದ ತಿಳಿಗೇಡಿ ಜನರು ತಮ್ಮ ಆವಿಷ್ಕಾರಗಳ ಬಗ್ಗೆ ಅತ್ಯಂತ ಹೆಮ್ಮೆಪಡುತ್ತಾ ತಾವು ಲೋಕಕ್ಕೆ ಒಂದು ಪಾರಿತೋಷಕವನ್ನು ಅರ್ಪಿಸಿದ ರೀತಿಯಲ್ಲಿ ಅದರ ಬಗ್ಗೆ ವಿವರಣೆ ನೀಡುತ್ತಾರೆ.

ಅಣು ಇಂಧನ ಮತ್ತು ತಂತ್ರಜ್ಞಾನದ ಉಪಯುಕ್ತತೆ ಬಗ್ಗೆ ವಿವರಿಸಲಾಗುತ್ತಿದ್ದರೂ ವಾಸ್ತವಿಕ ವಿಷಯವೇನೆಂದರೆ, ನಿರ್ಲಕ್ಷ್ಯತೆ ಮತ್ತು ಅಪಘಾತಗಳ ಕಾರಣಗಳಿಂದಲೂ ವ್ಯಾಪಕ ವಿನಾಶಕಾರಿ ಪರಿಣಾಮಗಳು ಉಂಟಾಗುವುವು. ನಾವು ಅಂತಹ ದುರ್ಘಟನೆಗಳಿಗೆ ಸಾಕ್ಷಿಯಾಗಿದ್ದೇವೆ. ಉದಾಹರಣೆಗೆ 1986ರಲ್ಲಿ ಉಕ್ರೇನಿನ ಚೆರ್ನೋಬೈಲ್‌ನಲ್ಲಿ ನಡೆದ ಅಣು ಅಪಘಾತ. ಕಳೆದ ವರ್ಷ ಜಪಾನಿನಲ್ಲಿ ಉಂಟಾದ ಭೂಕಂಪ ಮತ್ತು ಸುನಾಮಿಯ ನಂತರ ಅಣು ರಿಯಾಕ್ಟರ್‌ಗಳ ಬಗ್ಗೆ ಬಹಳ ಭೀತಿ ಉಂಟಾಗಿತ್ತು. ಅಣು ಸಂಬಂಧಿಸಿದ ಅಪಘಾತಗಳು ನಡೆದರೆ ಅಂತಹ ಪ್ರದೇಶಗಳಲ್ಲಿ ಜನರನ್ನು ಪುನಃ ವಾಸಿಸುವಂತೆ ಮಾಡುವುದು ಬಹಳ ಕಷ್ಟಕರವಾಗಿರುತ್ತದೆ. ಜಪಾನಿಯರು ಅದ್ವಿತೀಯ ದಾರುಣ ಅನುಭವಗಳಿಗೆ ಈಡಾದ ಕಾರಣ ಅವರು ಬಹಳ ಜಾಗರೂಕರಾಗಿರುವರು ಮತ್ತು ಅವರ ಭಯ ಭೀತಿಯು ನ್ಯಾಯಯುತವಾದುದೇ ಆಗಿದೆ.

ಯುದ್ಧಗಳಲ್ಲಿ ಜನರು ಸಾಯುತ್ತಾರೆ ಎಂಬುದು ಒಂದು ಸತ್ಯವಾಗಿದೆ. ಜಪಾನ್ ದ್ವಿತೀಯ ಮಹಾಯುದ್ಧದಲ್ಲಿ ಪ್ರವೇಶಿಸಿದಾಗ ಅಲ್ಲಿನ ಸರಕಾರ ಮತ್ತು ಜನರು, ಆ ಯುದ್ಧದಲ್ಲಿ ಕೆಲವರು ಸಾಯುವರು ಎಂದು ಚೆನ್ನಾಗಿ ತಿಳಿದಿದ್ದರು. ಅಂದಾಜು ಮೂರು ಮಿಲಿಯ ಜಪಾನಿಯರು ಆ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಇದು ಆ ದೇಶದ ಜನಸಂಖ್ಯೆಯ ಶೇಕಡ ನಾಲ್ಕರಷ್ಟು ಆಗುತ್ತದೆ. ಬೇರೆ ಕೆಲವು ದೇಶಗಳಲ್ಲಿ ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸತ್ತಿರಬಹುದಾದರೂ ಜಪಾನಿನ ಜನರಲ್ಲಿ ಯುದ್ಧದ ಬಗ್ಗೆ ಇರುವ ದ್ವೇಷ ಮತ್ತು ವಿರೋಧವು ಇತರ ದೇಶದ ಜನರಿಗೆ ಹೋಲಿಸಿ ನೋಡುವುದಾದರೆ ಬಹಳ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದಕ್ಕೆ ಕಾರಣವೇನೆಂದರೆ, ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಎರಡು ಅಣುಬಾಂಬುಗಳನ್ನು ಜಪಾನಿನ ಮೇಲೆ ಹಾಕಲಾಯಿತು ಮತ್ತು ಅವುಗಳ ದುಷ್ಪರಿಣಾಮಗಳನ್ನು ಅವರು ಈಗಲೂ ಅನುಭವಿಸುತ್ತಿದ್ದಾರೆ. ಜಪಾನಿಯರು ತಮ್ಮ ದೇಶವನ್ನು ಪೂರ್ವಸ್ಥಿತಿಗೆ ತರುವಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿರುವರು. ಅವರು ನಾಶವಾದ ನಗರಗಳಲ್ಲಿ ಪುನರ್ ನಿವೇಶನವನ್ನು ಬೇಗ ಬೇಗನೆ ಈಡೇರಿಸಿದರು. ಆದರೆ ನಾನು ಒಂದು ವಿಷಯ ಸ್ಪಷ್ಟಪಡಿಸಲು ಬಯಸುತ್ತೇನೆ. ಈಗಿನ ಕಾಲದಲ್ಲಿ ಅಣುಬಾಂಬುಗಳು ಪ್ರಯೋಗಿಸಲ್ಪಟ್ಟರೆ ಕೆಲವು ದೇಶಗಳ ಕೆಲವು ಪ್ರದೇಶಗಳು ಸಂಪೂರ್ಣವಾಗಿ ಅಳಿಸಿ ಹೋಗುವುವು. ಆ ದೇಶಗಳು ಸಹ ನಾಮಾವಶೇಷವಾಗಬಹುದು.

ದ್ವಿತೀಯ ಮಹಾಯುದ್ಧದಲ್ಲಿ ಸತ್ತವರ ಸಂಖ್ಯೆ ಮಿತವಾದ ಅಂದಾಜು ಪ್ರಕಾರ 62 ಮಿಲಿಯನ್ ಆಗಿದೆ. ಅವರಲ್ಲಿ 40 ಮಿಲಿಯ ಜನರು ನಾಗರಿಕರಾಗಿದ್ದರು. ಹಾಗಾದರೆ ಸೈನಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಸತ್ತರೆಂದು ಸ್ಪಷ್ಟವಾಗುತ್ತದೆ. ಜಪಾನ್‌ನಲ್ಲಿ ಹೊರತು ಬೇರೆಲ್ಲೂ ಅಣುಬಾಂಬು ದಾಳಿ ನಡೆದಿರದಿದ್ದರೂ ಅಲ್ಲೆಲ್ಲಾ ಸಾಂಪ್ರದಾಯಿಕ ರೀತಿಯ ಯುದ್ಧಗಳು ಅಣು ರಹಿತ ಅಸ್ತ್ರಗಳನ್ನು ಬಳಸಿ ನಡೆಸಲಾಗಿದ್ದರೂ ಇಷ್ಟು ಸಾವುಗಳು ಸಂಭವಿಸಿದವು.

ಬ್ರಿಟನ್ ಅಂದಾಜು ಅರ್ಧ ಮಿಲಿಯನ್ ಜನರನ್ನು ಕಳೆದು ಕೊಂಡಿತು. ಆ ಸಮಯದಲ್ಲಿ ಬ್ರಿಟನ್ ಅನೇಕ ಅಧಿನಿವೇಶ ಪ್ರದೇಶ ಗಳನ್ನು ಹೊಂದಿದ್ದುದರಿಂದ ಅಲ್ಲಿನ ಜನರು ಸಹ ಬ್ರಿಟನಿನ ಪರವಾಗಿ ಯುದ್ಧದಲ್ಲಿ ಭಾಗವಹಿಸಿದರು. ಅವರ ಸಂಖ್ಯೆಯನ್ನು ಸೇರಿಸುವುದಾದರೆ ಮಿಲಿಯಾಂತರ ಜನರು ಸತ್ತರೆಂದು ತಿಳಿಯುತ್ತದೆ. ಇಂಡಿಯಾ ದೇಶದಲ್ಲಿ 1.6 ಮಿಲಿಯ ಜನರು ದ್ವಿತೀಯ ಮಹಾಯುದ್ಧ ಕಾಲದಲ್ಲಿ ಸಾವಿಗೀಡಾದರು.

ಈಗ ಸ್ಥಿತಿಯು ಬದಲಾವಣೆಗೊಂಡಿದೆ. ಬ್ರಿಟನಿನ ಆಡಳಿತೆ

ಗೊಳಪಟ್ಟ ದೇಶಗಳು ಬ್ರಿಟಿಷ್ ಸಾಮ್ರಾಜ್ಯಕ್ಕೋಸ್ಕರ ಯುದ್ಧಮಾಡಿದ್ದುವು. ಆ ದೇಶಗಳು, ಈಗ ಯುದ್ಧ ಪ್ರಾರಂಭವಾಗುವುದಾದರೆ ಬ್ರಿಟನಿನ ವಿರುದ್ಧ ಹೋರಾಡಬಲ್ಲವುಗಳಾಗಿವೆ. ಇದಲ್ಲದೆ ನಾನು ಮೊದಲು ಹೇಳಿದಂತೆ ಕೆಲವು ಚಿಕ್ಕ ದೇಶಗಳು ಸಹ ಅಣು ಆಯುಧಗಳನ್ನು ಹೊಂದಿವೆ.

ಅತ್ಯಂತ ಭಯಭೀತಿ ಉಂಟುಮಾಡುವ ವಿಷಯವೇನೆಂದರೆ, ಅಣು ಆಯುಧಗಳು ಎಂತಹ ಜನರ ಕೈಗಳಿಗೆ ಸಿಗಬಹುದಾಗಿದೆ ಎಂದರೆ ಅವರಿಗೆ ತಮ್ಮ ಕೆಲಸಗಳ ದುಷ್ಪರಿಣಾಮಗಳನ್ನು ಅರಿತುಕೊಳ್ಳುವ ಸಾಮರ್ಥ್ಯವಿರುವುದಿಲ್ಲ ಮತ್ತು ಅವರು ಅದರ ಬಗ್ಗೆ ಚಿಂತಿಸುವುದಕ್ಕೆ ಮುಂದಾಗುವುದೂ ಇಲ್ಲ. ವಾಸ್ತವಿಕವಾಗಿ ತಮ್ಮ ದುಷ್ಕೃತ್ಯಗಳ ದುಷ್ಪರಿಣಾಮಗಳ ಬಗ್ಗೆ ನಿರ್ಲಕ್ಷ್ಯತೆ ಹೊಂದಿರುವ ಯುದ್ಧಪ್ರಿಯರು ಅವರಾಗಿದ್ದಾರೆ.

ಮಹಾಶಕ್ತಿ ರಾಷ್ಟ್ರಗಳು ನ್ಯಾಯಯುತವಾಗಿ ವರ್ತಿಸುವುದಿಲ್ಲವಾದರೆ, ಚಿಕ್ಕ ದೇಶಗಳ ಆತಂಕಗಳನ್ನು ದೂರೀಕರಿಸುವುದಿಲ್ಲವಾದರೆ ಮತ್ತು ಉತ್ತಮವೂ ವಿವೇಕಭರಿತವೂ ಆಗಿರುವ ಧೋರಣೆಗಳನ್ನು ಕೈಗೊಳ್ಳುವುದಿಲ್ಲವಾದರೆ ಲೋಕದ ಪರಿಸ್ಥಿತಿಯು ನಿಯಂತ್ರಣಾತೀತವಾಗುವುದು ಮತ್ತು ಊಹಾತೀತವಾದ ವಿನಾಶವು ಸಂಭವಿಸುವುದು. ಲೋಕದ ಬಹುತೇಕ ಭಾಗದ ಜನರು ಶಾಂತಿಯನ್ನು ಬಯಸುತ್ತಾರಾದರೂ ಅವರೆಲ್ಲರೂ ಈ ನಾಶದಿಂದ ಆವರಿಸಲ್ಪಡುವರು.

ಆದುದರಿಂದ ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ. ಲೋಕದ ಮಹಾ ಶಕ್ತಿರಾಷ್ಟ್ರಗಳ ನಾಯಕರು ಈ ವಿನಾಶಕಾರಿ ವಾಸ್ತವಿಕತೆಯನ್ನು ಮನಗಾಣಬೇಕು. ಅವರು ತಮ್ಮ ಉದ್ದೇಶ ಲಕ್ಷ್ಯಗಳನ್ನು ಗಳಿಸಲು ಬಲಾತ್ಕಾರವನ್ನು ಮತ್ತು ಬಲಪ್ರಯೋಗವನ್ನು ಕೈಬಿಟ್ಟು ನ್ಯಾಯ ಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವ ಧೋರಣೆಗಳನ್ನು ಕೈಗೊಳ್ಳಲು ಪ್ರಯತ್ನಿಸಬೇಕು.

ಇತ್ತೀಚೆಗೆ ರಶ್ಯದ ಮಿಲಿಟರಿಯ ಒಬ್ಬ ಹಿರಿಯ ಸೇನಾ ನಾಯಕ ಅಣು ಯುದ್ಧದ ಸಾಧ್ಯತೆಯ ಬಗ್ಗೆ ಗಂಭೀರ ಮುನ್ನೆಚ್ಚರಿಕೆ ನೀಡಿದ್ದರು. ಅವರ ಅಭಿಪ್ರಾಯ ಪ್ರಕಾರ ಏಶಿಯಾ ಮತ್ತು ಇತರ ಪ್ರದೇಶಗಳಲ್ಲಿ ಈ ಯುದ್ಧ ನಡೆಯಲಾರದು. ಅದು ಯುರೋಪಿನ ಗಡಿಗಳಲ್ಲಿ ನಡೆಯುವುದು. ಪೂರ್ವ ಯುರೋಪಿಯನ್ ದೇಶಗಳಲ್ಲಿ ಈ ಯುದ್ಧದ ಕಿಡಿಯು ಹೊರಚಿಮ್ಮಿ ಯುದ್ಧವು ಪ್ರಾರಂಭವಾಗುವುದು. ಕೆಲವು ಜನರು ಇದು ಆ ಸೇನಾನಾಯಕನ ಕೇವಲ ಸ್ವಂತ ಅಭಿಪ್ರಾಯ ಎಂದು ಹೇಳಬಹುದಾದರೂ ಅವರ ಅಭಿಪ್ರಾಯ ಅಸಂಭಾವ್ಯವೆಂದು ನಾನು ಭಾವಿಸುವುದಿಲ್ಲ. ಅದರೊಂದಿಗೆ, ಅಂತಹ ಯುದ್ಧವೇನಾದರೂ ಪ್ರಾರಂಭವಾದರೆ ಏಶಿಯಾದ ದೇಶಗಳು ಸಹ ಆ ಯುದ್ಧದಲ್ಲಿ ಸೇರಿಕೊಳ್ಳುವುವು ಎಂದು ನಾನು ನಂಬುತ್ತೇನೆ.

ಇನ್ನೊಂದು ವಾರ್ತೆಗೆ ಇತ್ತೀಚೆಗೆ ವ್ಯಾಪಕ ಪ್ರಚಾರ ನೀಡಲಾಗಿದೆ. ಇಸ್ರಾಯೇಲ್ ದೇಶದ ಗುಪ್ತಚಾರ ಸಂಸ್ಥೆಯಾದ ಮೊಸ್ಸಾದಿನ ನಿವೃತ್ತ ಮುಖ್ಯಾಧಿಕಾರಿ ಅಮೇರಿಕದ ಟೆಲಿವಿಶನ್ ಚ್ಯಾನಲ್ CBSಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದರು: "ಇಸ್ರಾಯೇಲ್ ಸರಕಾರ ಇರಾನಿನ ವಿರುದ್ಧ ಯುದ್ಧ ಮಾಡಲು ಬಯಸುತ್ತಿದೆ ಎಂದು ತೋರುತ್ತದೆ. ಆದರೆ ಅಂತಹ ಯುದ್ಧವೇನಾದರೂ ಪ್ರಾರಂಭವಾಗುವುದಾದರೆ ಆ ಯುದ್ಧವು ಹೇಗೆ ಕೊನೆಗೊಳ್ಳುವುದೆಂದು ತಿಳಿಯಲು ಅಸಾಧ್ಯವಾಗಿದೆ."

ಆದುದರಿಂದ ಅಂತಹ ಆಕ್ರಮಣ ಮಾಡುವುದನ್ನು ಅವರು ತೀವ್ರವಾಗಿ ವಿರೋಧಿಸಿದರು.

ನನ್ನ ಅಭಿಪ್ರಾಯವೇನೆಂದರೆ, ಅಂತಹ ಯುದ್ಧವೇನಾದರೂ ಪ್ರಾರಂಭವಾಗುವುದಾದರೆ ಅದರ ಪರಿಣಾಮವಾಗಿ ಅಣುಬಾಂಬು ವರ್ಷಿಸಲ್ಪಡುವ ವಿನಾಶವು ಸಂಭವಿಸುವುದು.

ನಾನು ಒಂದು ಲೇಖನವನ್ನು ಇತ್ತೀಚೆಗೆ ಕಂಡೆನು. ಅದರಲ್ಲಿ ಲೇಖಕ ಹೀಗೆ ಹೇಳಿದ್ದರು: ಇಂದಿನ ಲೋಕದ ಸ್ಥಿತಿ ರಾಜಕೀಯವಾಗಿಯೂ ಆರ್ಥಿಕವಾಗಿಯೂ 1932ರ ಲೋಕದ ಸ್ಥಿತಿಗೆ ಸಮಾನವಾಗಿದೆ. ಕೆಲವು ದೇಶಗಳಲ್ಲಿರುವ ಜನರಿಗೆ ತಮ್ಮ ರಾಜಕಾರಣಿಗಳ ಬಗ್ಗೆ ಮತ್ತು ತಮ್ಮ ತಥಾಕಥಿತ ಪ್ರಜಾಪ್ರಭುತ್ವಗಳ ಬಗ್ಗೆ ವಿಶ್ವಾಸವಿಲ್ಲ. ಅನೇಕ ಸಮಾನ ಘಟಕಗಳು ಮತ್ತು ಸಮಾನ ಸ್ಥಿತಿಗಳು ಒಟ್ಟಿಗೆ ಸೇರಿಕೊಂಡಿದ್ದು ಅವು ಲೋಕವನ್ನು ಎಂತಹ ಸ್ಥಿತಿಗೆ ತಲುಪಿಸಿವೆ ಎಂದರೆ ದ್ವಿತೀಯ ಮಹಾಯುದ್ಧದ ಪ್ರಾರಂಭಕ್ಕೆ ಮೊದಲು ಇದ್ದ ಸ್ಥಿತಿಗತಿಗಳಿಗೆ ಸಮಾನವಾಗಿವೆ.

ಕೆಲವರು ಈ ಅಭಿಪ್ರಾಯವನ್ನು ಒಪ್ಪದಿರಬಹುದು. ಆದರೆ ನಾನು ಈ ಅಭಿಪ್ರಾಯವನ್ನು ಅಂಗೀಕರಿಸುತ್ತೇನೆ. ಇದೇ ಕಾರಣದಿಂದ ಲೋಕದ ಸರಕಾರಗಳು ಈ ಪರಿಸ್ಥಿತಿಯ ಬಗ್ಗೆ ಅತ್ಯಂತ ಚಿಂತಿತರಾಗಬೇಕೆಂದೂ ಅದರ ಬಗ್ಗೆ ಲಕ್ಷ್ಯ ನೀಡುವವರಾಗಬೇಕೆಂದೂ ನಾನು ನಿರೀಕ್ಷಿಸುತ್ತೇನೆ. ಇದೇ ರೀತಿ ಕೆಲವು ಮುಸ್ಲಿಮ್ ದೇಶಗಳ ಅನ್ಯಾಯದಿಂದ ವರ್ತಿಸುವ ನಾಯಕರು ಹೇಗಾದರೂ ತಮ್ಮ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂಬ ಏಕಮಾತ್ರ ಉದ್ದೇಶವನ್ನು ಹೊಂದಿದವರಾಗಿದ್ದಾರೆ. ಅವರು ತಮ್ಮ ಸ್ಥಿತಿಯ ಬಗ್ಗೆ ಪ್ರಜ್ಞಾವಂತರಾಗಬೇಕು. ಹೀಗೆ ಮಾಡದಿದ್ದರೆ ಅವರ ತಿಳಿಗೇಡಿ ವರ್ತನೆಗಳು ಅವರನ್ನು ನಾಶಕ್ಕೊಯ್ಯುವುದು ಮತ್ತು ಅವರು ತಂತಮ್ಮ ದೇಶಗಳನ್ನು ಅತ್ಯಂತ ಭಯಾನಕ ಪರಿಸ್ಥಿತಿಗೆ ಒಯ್ಯುವರು.

ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಲೋಕವನ್ನೂ ಲೋಕದ ಜನರನ್ನೂ ವಿನಾಶದಿಂದ ರಕ್ಷಿಸಲು ನಮಗೆ ಸಾಧ್ಯವಿರುವಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಏಕೆಂದರೆ ನಾವು ಈ ಕಾಲಘಟ್ಟದ ಇಮಾಮರನ್ನು ನಂಬುತ್ತೇವೆ. ಅವರನ್ನು ಅಲ್ಲಾಹನು ವಾಗ್ದತ್ತ ಮಸೀಹರಾಗಿ ಮತ್ತು ಸಕಲ ಲೋಕಗಳಿಗೆ ಅನುಗ್ರಹದಾಯಕರಾಗಿ ಆಗಮಿಸಿದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದಾಸರಾಗಿ ಕಳುಹಿಸಿದನು.

ನಾವು ಇಸ್ಲಾಮಿನ ಮಹಾನ್ ಪ್ರವಾದಿಯವರ ಉಪದೇಶಗಳನ್ನು ಅನುಸರಿಸುವವರಾದ ಕಾರಣ ಲೋಕದ ಇಂದಿನ ಪರಿಸ್ಥಿತಿಯನ್ನು ನೋಡಿ ನಾವು ಅತ್ಯಂತ ಹೆಚ್ಚು ನೋವನ್ನು ಮತ್ತು ಆತಂಕವನ್ನು ನಮ್ಮ ಹೃದಯದಲ್ಲಿ ಅನುಭವಿಸುತ್ತಿದ್ದೇವೆ. ಲೋಕದ ಜನತೆಯನ್ನು ನಾಶದಿಂದಲೂ ಕಷ್ಟದಿಂದಲೂ ರಕ್ಷಿಸಲು ಇದು ನಮ್ಮನ್ನು ಪ್ರಚೋದಿಸುತ್ತಾ ಇದೆ. ಆದುದರಿಂದ ನಾನು ಮತ್ತು ಎಲ್ಲಾ ಅಹ್ಮದೀ ಮುಸ್ಲಿಮರು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ನಮ್ಮ ಜವಾಬ್ದಾರಿಗಳನ್ನು ಈಡೇರಿಸಲು ಪರಿಶ್ರಮಪಡುತ್ತಾ ಇರುತ್ತೇವೆ.

ಲೋಕದಲ್ಲಿ ಶಾಂತಿ ಸ್ಥಾಪನೆಗೆ ನಾನು ಮಾಡಿದ ಪ್ರಯತ್ನಗಳಲ್ಲಿ ಒಂದು, ಲೋಕದ ಕೆಲವು ನಾಯಕರಿಗೆ ನಾನು ಬರೆದ ಪತ್ರಗಳಾಗಿವೆ. ಕೆಲವು ತಿಂಗಳುಗಳ ಹಿಂದೆ ನಾನು ಪೋಪ್ ಬೆನಡಿಕ್ಟರಿಗೆ ಪತ್ರ

ಬರೆದಿದ್ದೆನು. ಅದನ್ನು ನನ್ನ ಪ್ರತಿನಿಧಿಯಾದ ಒಬ್ಬ ಅಹ್ಮದೀ ಅವರಿಗೆ ನೇರವಾಗಿ ತಲಪಿಸಿದರು. ಪೋಪರು ಲೋಕದ ಅತ್ಯಂತ ದೊಡ್ಡ ಧಾರ್ಮಿಕ ಪಂಗಡದ ಮುಖಂಡರಾಗಿರುವ ಕಾರಣ ಅವರು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನ ಮಾಡಲೇ ಬೇಕು ಎಂದು ನಾನು ಅವರೊಂದಿಗೆ ಆ ಪತ್ರದಲ್ಲಿ ಅಪೇಕ್ಷಿಸಿದ್ದೆನು.

ಇತ್ತೀಚೆಗೆ ಇರಾನ್ ಮತ್ತು ಇಸ್ರಾಯೇಲ್ ಮಧ್ಯೆ ವಿರೋಧವು ವರ್ಧಿಸುತ್ತಿರುವುದನ್ನು ಕಂಡು ನಾನು ಒಂದು ಪತ್ರವನ್ನು ಇಸ್ರಾಯೇಲ್ ಪ್ರಧಾನ ಮಂತ್ರಿ ನೆತನ್ಯಾಹೂರಿಗೂ ಇರಾನಿನ ಅಧ್ಯಕ್ಷ ಮಹ್‌ಮೂದ್ ನೆಜಾದ್‌ರಿಗೂ ಬರೆದು ಅವುಗಳಲ್ಲಿ, ಅವರು ಅವಸರದಿಂದಲೂ ನಿರ್ಲಕ್ಷ್ಯಭಾವನೆಯಿಂದಲೂ ತೀರ್ಮಾನಗಳನ್ನು ಕೈಗೊಳ್ಳಬಾರದೆಂದೂ ಮಾನವರ ಹಿತಕ್ಕೋಸ್ಕರ ಸಹನೆದೋರಬೇಕೆಂದೂ ಅಪೇಕ್ಷಿಸಿದ್ದೆನು.

ಇತ್ತೀಚೆಗೆ ನಾನು ಅಮೇರಿಕದ ಪ್ರೆಸಿಡೆಂಟ್ ಬರಾಕ್ ಒಬಾಮರಿಗೂ ಕೆನಡದ ಪ್ರಧಾನ ಮಂತ್ರಿ ಸ್ಟೀಫನ್ ಹಾರ್ಪರರಿಗೂ ಪತ್ರ ಬರೆದು, ಅವರು ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ವಾತಾವರಣ ಸ್ಥಾಪಿಸಲು ತಮ್ಮ ಜವಾಬ್ದಾರಿಗಳನ್ನು ಈಡೇರಿಸ ಬೇಕೆಂದು ಕೋರಿದ್ದೆನು.

ಇನ್ನು ಮುಂದೆ ಬೇಗನೆ ಇತರ ದೇಶಗಳ ನಾಯಕರಿಗೂ ಮುನ್ನೆಚ್ಚರಿಕೆ ನೀಡುವ ಪತ್ರಗಳನ್ನು ಬರೆಯಲು ನಾನು ಸಿದ್ಧತೆಗಳನ್ನು ಮಾಡಿದ್ದೇನೆ.

ನಾನು ಬರೆದ ಪತ್ರಗಳಿಗೆ ವಿವಿಧ ದೇಶಗಳ ನಾಯಕರು ಯಾವ ಮಹತ್ವ ನೀಡುವರು ಎಂದು ನನಗೆ ತಿಳಿಯದು. ಆದರೆ ಅವರೆಲ್ಲರ ಪ್ರತಿಕ್ರಿಯೆ ಹೇಗೆಯೇ ಇರಲಿ, ನಾನು ಮಿಲಿಯಗಟ್ಟಲೆ ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನಾಯಕನೆಂಬ ನೆಲೆಯಲ್ಲಿ ಲೋಕವು ವಿಪತ್ತಿನ ಪರಿಸ್ಥಿತಿಯಲ್ಲಿರುವ ಬಗ್ಗೆ ನಮ್ಮ ಭಾವನೆಗಳನ್ನೂ ಆತಂಕಗಳನ್ನೂ ಲೋಕದ ನಾಯಕರಿಗೆ ತಲಪಿಸಲು ಪ್ರಯತ್ನಿಸಿದ್ದೇನೆ.

ಒಂದು ವಿಷಯವನ್ನು ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ನನಗೆ ವೈಯಕ್ತಿಕವಾಗಿ ಭೀತಿ ಇರುವುದರಿಂದ ನಾನು ಈ ಭಾವನೆಗಳನ್ನು ವ್ಯಕ್ತಪಡಿಸಿದುದಲ್ಲ, ಬದಲಾಗಿ, ನಾನು ಮಾನವತೆಯ ಬಗ್ಗೆ ಪ್ರಾಮಾಣಿಕ ಪ್ರೀತಿಯಿಂದ ಪ್ರೇರಿತನಾಗಿದ್ದೇನೆ.

ಎಲ್ಲಾ ನೈಜ ಮುಸ್ಲಿಮರಲ್ಲಿ ಮಾನವರಿಗೋಸ್ಕರ ಪ್ರೀತಿಯು ತುಂಬಿಸಲ್ಪಟ್ಟು ಬೆಳೆಸಿದುದು ಲೋಕದ ಸರ್ವರಿಗೂ ಅನುಗ್ರಹವಾಗಿ ಆಗಮಿಸಿದ ಪುಣ್ಯ ಪ್ರವಾದಿ ನೀಡಿದ ಉಪದೇಶಗಳಾಗಿವೆ ಎಂಬುದರ ಬಗ್ಗೆ ನಾನು ಇದರ ಮೊದಲು ಸಹ ಪ್ರಸ್ತಾಪಿಸಿರುವೆನು.

ನಾವು ಮಾನವರೆಲ್ಲರನ್ನೂ ಪ್ರೀತಿಸುವುದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ ಪ್ರಕಾರವೆಂದು ನೀವು ಆಲಿಸುವಾಗ ನೀವು ಆಶ್ಚರ್ಯಚಕಿತರಾಗಬಹುದು. ಮುಸ್ಲಿಮರಲ್ಲಿ ನಿರಪರಾಧಿ ಜನರನ್ನು ಕೊಲ್ಲುವ ಭೀಕರ ಗುಂಪುಗಳೇಕೆ ಇವೆ? ಮುಸ್ಲಿಮ್ ಸರಕಾರಗಳು ತಮ್ಮ ಅಧಿಕಾರವನ್ನು ಕಾಪಾಡಲು ಜನರನ್ನು ಸಾಮೂಹಿಕವಾಗಿ ಹತ್ಯೆ ಮಾಡಲು ಏಕೆ ಆಜ್ಞಾಪಿಸುತ್ತವೆ? ಎಂಬ ಪ್ರಶ್ನೆಗಳು ನಿಮ್ಮಲ್ಲಿ ಉದಿಸಬಹುದು.

ನಾನು ನಿಮಗೆ ಸಂಪೂರ್ಣವಾಗಿ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಅಂತಹ ಕೆಟ್ಟ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಪವಿತ್ರ ಖುರ್‌ಆನ್ ಯಾವುದೇ ಸಂದರ್ಭದಲ್ಲಿಯೂ ಭೀಕರ ಕೃತ್ಯಗಳಿಗೆ ಅನುಮತಿ ನೀಡುವುದಿಲ್ಲ.

ನಮ್ಮ ನಂಬಿಕೆ ಪ್ರಕಾರ ಈ ಕಾಲಘಟ್ಟದಲ್ಲಿ ಸರ್ವಶಕ್ತನಾದ ದೇವನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು(ಅ) ವಾಗ್ದತ್ತ ಮಸೀಹ ರಾಗಿ ಮತ್ತು ಇಮಾಮ್ ಮಹ್‌ದಿಯಾಗಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಿಷ್ಠಾವಂತ ದಾಸನಾಗಿ ನೇಮಿಸಿ ಕಳುಹಿಸಿರುವನು. ವಾಗ್ದತ್ತ ಮಸೀಹರನ್ನು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ನಿಜವಾದ ಉಪದೇಶಗಳನ್ನು ಲೋಕದಾದ್ಯಂತ ಪ್ರಚಾರ ಮಾಡಲು ಕಳುಹಿಸ ಲಾಯಿತು. ಮನುಷ್ಯ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪಿಸುವುದು ಸಹ ಅವರ ಆಗಮನದ ಇನ್ನೊಂದು ಉದ್ದೇಶವಾಗಿದೆ. ಮನುಷ್ಯರು ಪರಸ್ಪರ ಹೊಂದಿರುವ ಹಕ್ಕುಗಳನ್ನೂ ಅವರ ಬಾಧ್ಯತೆ ಗಳನ್ನೂ ಮನವರಿಕೆ ಮಾಡಿಕೊಡಲು ಅವರು ಆಗಮಿಸಿದರು. ಎಲ್ಲಾ ವಿಧಗಳ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಲು ಅವರು ಆಗಮಿಸಿದರು. ಪ್ರತಿಯೊಂದು ಧರ್ಮದ ಸ್ಥಾಪಕರನ್ನೂ ಪ್ರವಾದಿ ಗಳನ್ನೂ ಗೌರವಿಸಲು ಜನರಿಗೆ ಕಲಿಸಲು ಅವರನ್ನು ಕಳುಹಿಸಲಾಯಿತು. ಅತ್ಯುನ್ನತ ನೈತಿಕ ಮಟ್ಟವನ್ನು ತಲಪುವ ಬಗ್ಗೆ ಜನರಿಗೆ ಉಪದೇಶಿಸಲು, ಲೋಕದಲ್ಲಿ ಶಾಂತಿ, ಪ್ರೀತಿ, ಸಹಾನುಭೂತಿ ಮತ್ತು ಭ್ರಾತೃತ್ವ ಸ್ಥಾಪಿಸಲು ಅವರನ್ನು ಕಳುಹಿಸಲಾಯಿತು.

ನೀವು ಲೋಕದ ಯಾವ ಭಾಗಕ್ಕೆ ಹೋದರೂ ನೀವು ಅಹ್ಮದೀ ಮುಸ್ಲಿಮರಲ್ಲಿ ಈ ಸದ್ಗುಣಗಳನ್ನು ಕಾಣುವಿರಿ. ನಮಗೆ ಭೀಕರವಾದಿ ಗಳಾಗಲಿ ಮತಭ್ರಾಂತರಾಗಲಿ ಮಾದರಿ ಆಗಿಲ್ಲ. ಕ್ರೂರ ಮುಸ್ಲಿಮ್ ನಿರಂಕುಶ ಪ್ರಭುಗಳು ಸಹ ನಮಗೆ ಮಾದರಿಯಾಗಿಲ್ಲ, ಪಾಶ್ಚಿಮಾತ್ಯ ಶಕ್ತಿ ರಾಷ್ಟ್ರಗಳೂ ನಮಗೆ ಮಾದರಿಯಾಗಿಲ್ಲ. ನಾವು ಅನುಸರಿಸುವುದು ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್‌ರ(ಸ) ಮಾದರಿಯನ್ನು ಮಾತ್ರವಾಗಿದೆ. ನಮಗೆ ಮಾರ್ಗದರ್ಶನ ನೀಡುವ ತತ್ವಗಳು ಪವಿತ್ರ ಖುರ್‌ಆನ್‌ನಲ್ಲಿದೆ.

ಈ ಶಾಂತಿ ವಿಚಾರಗೋಷ್ಠಿಯಲ್ಲಿ ನಾನು ಒಂದು ಸಂದೇಶವನ್ನು ಲೋಕದಾದ್ಯಂತ ನೀಡಲು ಬಯಸುತ್ತೇನೆ. ಪವಿತ್ರ ಖುರ್‌ಆನಿನ ಸಂದೇಶ ಮತ್ತು ಉಪದೇಶ ಪ್ರೀತಿ, ಸಹಾನುಭೂತಿ, ದಯೆ ಮತ್ತು ಶಾಂತಿ ಆಗಿರುತ್ತದೆ.

ದುಃಖಕರವಾದ ವಿಷಯವೇನೆಂದರೆ, ಮುಸ್ಲಿಮರಲ್ಲಿ ಒಂದು ಚಿಕ್ಕ ಗುಂಪು ಇಸ್ಲಾಮಿನ ಸಂಪೂರ್ಣವಾಗಿ ವಿಕೃತವಾದ ಚಿತ್ರಣ ನೀಡುತ್ತದೆ ಮತ್ತು ತಮ್ಮ ದಾರಿತಪ್ಪಿದ ನಂಬಿಕೆಗಳ ಪ್ರಕಾರ ವರ್ತಿಸುತ್ತದೆ. ನಾನು ನಿಮ್ಮೆಲ್ಲರೊಂದಿಗೆ ಹೇಳಲು ಬಯಸುತ್ತೇನೆ: ಈ ಜನರ ಕೃತ್ಯಗಳನ್ನು ನೀವು ನಿಜವಾದ ಇಸ್ಲಾಮ್ ಎಂದು ತಪ್ಪುಗ್ರಹಿಕೆಗೆ ಒಳಗಾಗಿ ಆ ಜನರ ಮಾರ್ಗ ಭ್ರಷ್ಟ ಕೃತ್ಯಗಳನ್ನು ಶಾಂತಿಪ್ರಿಯರಾದ ಮುಸ್ಲಿಮ್ ಬಹುಸಂಖ್ಯಾತರ ಭಾವನೆಗಳನ್ನು ನೋಯಿಸಲು ಮತ್ತು ಅವರನ್ನು ದೌರ್ಜನ್ಯಗಳಿಗೆ ಗುರಿಪಡಿಸಲು ಇರುವ ಅನುಮತಿ ಪತ್ರ ಎಂಬಂತೆ ಬಳಸಬಾರದು.

ಪವಿತ್ರ ಖುರ್‌ಆನ್ ಎಲ್ಲಾ ಮುಸ್ಲಿಮರ ಅತ್ಯಂತ ಪವಿತ್ರ ಗ್ರಂಥ ವಾಗಿದೆ. ಅದರ ವಿರುದ್ಧ ನಿಂದಿಸುವುದು ಮತ್ತು ಕೊಳಕು ಭಾಷೆಯನ್ನು ಪ್ರಯೋಗಿಸುವುದು ಅಥವಾ ಅದನ್ನು ಸುಟ್ಟು ಹಾಕುವುದು ಮುಸ್ಲಿಮರ

ಭಾವನೆಗಳನ್ನು ಖಂಡಿತವಾಗಿಯೂ ತೀವ್ರವಾಗಿ ನೋಯಿಸುವುದು. ಇಂತಹ ಸಂಭವ ನಡೆಯುವಾಗ ತೀವ್ರವಾದಿ ಮುಸ್ಲಿಮರು ಸಂಪೂರ್ಣ ತಪ್ಪು ಮತ್ತು ಅನುಚಿತ ಪ್ರತಿಕ್ರಿಯೆ ನೀಡುವುದು ಕಂಡುಬರುತ್ತದೆ.

ಅಫ್‌ಘಾನಿಸ್ತಾನದಲ್ಲಿ ಇತ್ತೀಚೆಗೆ ಎರಡು ಘಟನೆಗಳು ನಡೆದುದಾಗಿ ವರದಿಯಾಗಿವೆ. ಕೆಲವು ಅಮೇರಿಕನ್ ಸೈನಿಕರು ಪವಿತ್ರ ಖುರ್‌ಆನಿನೊಂದಿಗೆ ಗೌರವ ಹೀನವಾಗಿ ವರ್ತಿಸಿದರು ಮತ್ತು ನಿರಪರಾಧಿ ಮಹಿಳೆಯರನ್ನೂ ಮಕ್ಕಳನ್ನೂ ಅವರ ಮನೆಗಳೊಳಗೆ ಕೊಂದರು. ಇದೇ ರೀತಿ ಒಬ್ಬ ಕ್ರೂರಿಯು ಕೆಲವು ಫ್ರೆಂಚ್ ಸೈನಿಕರನ್ನು ದಕ್ಷಿಣ ಫ್ರಾನ್ಸಿನಲ್ಲಿ ನಿಷ್ಕಾರಣವಾಗಿ ಕೊಂದನು. ಕೆಲವು ದಿನಗಳ ನಂತರ ಅವನು ಒಂದು ಶಾಲೆಯೊಳಗೆ ನುಗ್ಗಿ ಮೂರು ನಿರಪರಾಧಿ ಯಹೂದಿ ವಿದ್ಯಾರ್ಥಿಗಳನ್ನೂ ಒಬ್ಬ ಅಧ್ಯಾಪಿಕೆಯನ್ನೂ ಕೊಂದನು.

ಇಂತಹ ನಡವಳಿಕೆಗಳು ಸಂಪೂರ್ಣವಾಗಿ ತಪ್ಪಾದುದೂ ಶಾಂತಿಗೆ ಹಾನಿಕರವೂ ಆಗಿವೆ. ಇಂತಹ ಕ್ರೂರ ಕೃತ್ಯಗಳು ಪಾಕಿಸ್ತಾನದಲ್ಲಿ ಮತ್ತು ಇತರ ಪ್ರದೇಶಗಳಲ್ಲಿ ಆಗಾಗ ಸಂಭವಿಸುತ್ತಾ ಇರುತ್ತವೆ. ಈ ಕೃತ್ಯಗಳು ಇಸ್ಲಾಮಿನ ವಿರೋಧಿಗಳಿಗೆ ತಮ್ಮ ದ್ವೇಷವನ್ನು ವರ್ಧಿಸುವ ಇಂಧನಗಳಾಗುತ್ತವೆ. ಅವರು ತಮ್ಮ ಇಸ್ಲಾಮ್ ವಿರೋಧೀ ಚಟುವಟಿಕೆಗಳನ್ನು ಹೆಚ್ಚಿಸಲು ಇಂತಹ ಘಟನೆಗಳು ನೆವನಗಳನ್ನು ಒದಗಿಸುತ್ತವೆ.

ಮೇಲೆ ವಿವರಿಸಲಾದ ಅನಾಗರಿಕ ಕ್ರೂರ ಕೃತ್ಯಗಳು ವೈಯಕ್ತಿಕ ದ್ವೇಷಾಸೂಯೆಗಳ ಕಾರಣದಿಂದ ನಡೆಸಿದವುಗಳಲ್ಲ. ವಾಸ್ತವಿಕವಾಗಿ ಅವು ಸರಕಾರಗಳ ಅನ್ಯಾಯಭರಿತ ಧೋರಣೆಗಳು ದೇಶೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೊಂಡುದುದರ ಪ್ರತಿಕ್ರಿಯೆಗಳ ರೂಪದಲ್ಲಿರುತ್ತವೆ.

ಆದುದರಿಂದ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕಾದರೆ ಸರಿಯಾದ ರೀತಿಯ ನ್ಯಾಯಪಾಲನೆ ಎಲ್ಲಾ ಹಂತಗಳಲ್ಲೂ ಎಲ್ಲಾ ದೇಶಗಳಲ್ಲೂ ಜಾರಿಯಾಗಬೇಕು. ಒಬ್ಬ ಮನುಷ್ಯನನ್ನು ನಿಷ್ಕಾರಣವಾಗಿ ಕೊಲ್ಲುವುದು ಮಾನವ ಸಮೂಹವನ್ನೇ ಕೊಂದುದಕ್ಕೆ ಸಮವೆಂದು ಪವಿತ್ರ ಖುರ್‌ಆನ್ ಹೇಳಿದೆ.

ಮುಸ್ಲಿಮನೆಂಬ ನೆಲೆಯಲ್ಲಿ ನಾನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ಇಸ್ಲಾಮ್ ಧರ್ಮವು ಯಾವುದೇ ರೀತಿ ಕ್ರೂರವರ್ತನೆಯನ್ನೂ ದೌರ್ಜನ್ಯವನ್ನೂ ಅನುಮತಿಸುವುದಿಲ್ಲ. ಇದು ಎಂತಹ ಆಜ್ಞೆ ಎಂದರೆ ಇದರ ಬಗ್ಗೆ ಯಾವ ರಿಯಾಯಿತಿಯೂ ಇರುವುದಿಲ್ಲ. ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: ಯಾವುದೇ ದೇಶ ಅಥವಾ ಜನಾಂಗ ಮುಸ್ಲಿಮರ ವಿರುದ್ಧ ಹಗೆತನವನ್ನು ಹೊಂದಿದ್ದರೆ, ಅಂತಹ ದೇಶ ಅಥವಾ ಜನಾಂಗದೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವುದನ್ನು ಇಸ್ಲಾಮ್ ಧರ್ಮ ತಡೆಗಟ್ಟುವುದಿಲ್ಲ. ಹಗೆತನ ಅಥವಾ ಸ್ಪರ್ಧೆಯ ಕಾರಣದಿಂದ ಸೇಡಿನ ರೂಪದಲ್ಲಿ ಅಥವಾ ಅತಿರೇಕದಿಂದ ವಿರೋಧಿಗಳೊಂದಿಗೆ ಕೂಡ ವರ್ತಿಸಬಾರದು. ಪವಿತ್ರ ಖುರ್‌ಆನ್ ನೀಡುವ ಇನ್ನೊಂದು ಉಪದೇಶವೇನೆಂದರೆ ಅನ್ಯರ ಸಂಪತ್ತನ್ನು ಅಸೂಯೆಯಿಂದಲೂ ದುರಾಶೆಯಿಂದಲೂ ನೋಡಬಾರದು.

ನಾನು ಪವಿತ್ರ ಖುರ್‌ಆನ್ ಹೇಳಿದ ಕೆಲವು ಅಂಶಗಳನ್ನು ಮಾತ್ರ ವಿವರಿಸಿರುವೆನು. ಆದರೆ ಇವುಗಳು ಅತ್ಯಂತ ಮುಖ್ಯವಾದವು ಮತ್ತು ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿಸಲು ಅಸ್ತಿಭಾರವನ್ನು ಹಾಕುವಂತಹವುಗಳಾಗಿವೆ. ಲೋಕವು ಈ ಮುಖ್ಯ ವಿಷಯಗಳ ಕಡೆಗೆ ಗಮನಹರಿಸಿ ಅನ್ಯಾಯಗಾರರೂ ಅಸತ್ಯವಾದಿಗಳೂ ಆಗಿರುವವರು ಲೋಕವನ್ನು ನಾಶದ ಕಡೆಗೆ ಒಯ್ಯುವುದರಿಂದ ರಕ್ಷಿಸುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಾನು ನನ್ನ ಭಾಷಣಕ್ಕೆ ಸ್ವಲ್ಪ ಹೆಚ್ಚು ಸಮಯ ವಿನಿಯೋಗಿಸಿದುದಕ್ಕೋಸ್ಕರ ನಾನು ನಿಮ್ಮೊಂದಿಗೆ ಕ್ಷಮೆಯನ್ನು ಕೇಳುತ್ತೇನೆ. ವಾಸ್ತವಿಕ ವಿಷಯವೇನೆಂದರೆ, ಲೋಕದಲ್ಲಿ ಶಾಂತಿ ಸ್ಥಾಪಿಸುವ ವಿಷಯ ಅತ್ಯಂತ ಮಹತ್ವಪೂರ್ಣವಾದುದಾಗಿದೆ.

ಸಮಯವು ದಾಟಿ ಹೋಗುತ್ತಾ ಇದೆ. ನಾವು ಈ ಕಾಲಘಟ್ಟದ ಆವಶ್ಯಕತೆಯ ಬಗ್ಗೆ ಬಹಳ ಹೆಚ್ಚಿನ ಶ್ರದ್ಧೆಯನ್ನು ಸಮಯವು ಮೀರಿ ಹೋಗುವ ಮೊದಲು ನೀಡಬೇಕಾಗಿದೆ.

ನನ್ನ ಭಾಷಣವನ್ನು ಮುಕ್ತಾಯಗೊಳಿಸುವ ಮೊದಲು ನಾನು ಒಂದು ಮುಖ್ಯ ವಿಷಯದ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ನಾವೆಲ್ಲರೂ ತಿಳಿದಂತೆ ಎಲಿಝಬೆತ್ ದ್ವಿತೀಯ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭಗಳು ಈಗ ನಡೆಯುತ್ತಿವೆ. ನಾವು ಗಡಿಯಾರದ ಕೀಲಿಕೈಯನ್ನು 115 ವರ್ಷ ಹಿಂದಕ್ಕೆ ತಿರುಗಿಸುವುದಾದರೆ 1897ರಲ್ಲಿ ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭ ಗಳನ್ನು ಜರಗಿಸಲಾಯಿತೆಂದು ತಿಳಿಯುತ್ತದೆ. ಆ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ವಿಕ್ಟೋರಿಯಾ ಮಹಾರಾಣಿಗೆ ಅಭಿನಂದನೆಯ ಒಂದು ಸಂದೇಶವನ್ನು ಕಳುಹಿಸಿದ್ದರು.

ಆ ಸಂದೇಶದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಮಹಾರಾಣಿಗೆ ಇಸ್ಲಾಮ್ ಧರ್ಮದ ತತ್ವಗಳನ್ನು ವಿವರಿಸಿಕೊಟ್ಟರಲ್ಲದೆ ಬ್ರಿಟಿಷ್ ಸರಕಾರಕ್ಕೋಸ್ಕರ ಪ್ರಾರ್ಥಿಸಿ ಮಹಾರಾಣಿಗೆ ದೀರ್ಘಾಯುಸ್ಸನ್ನು ಕೋರಿದ್ದರು. ಮಹಾರಾಣಿಯ ಸರಕಾರದ ಅತ್ಯಂತ ಉತ್ತಮ ಆಡಳಿತೆಯ ರೀತಿ, ಅದು ಎಲ್ಲಾ ಜನರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುತ್ತದೆ ಎಂಬುದಾಗಿದೆ ಎಂದು ಅವರು ಪ್ರಶಂಸಿಸಿದ್ದರು.

ಇಂದಿನ ಕಾಲದಲ್ಲಿ ಬ್ರಿಟಿಷ್ ಸರಕಾರ ಭಾರತದ ಉಪ-ಭೂಖಂಡದಲ್ಲಿ ಅಧಿಕಾರವನ್ನು ಹೊಂದಿಲ್ಲವಾದರೂ ಧಾರ್ಮಿಕ ಸ್ವಾತಂತ್ರ್ಯ ಎಂಬ ತತ್ವವು ಬ್ರಿಟಿಷ್ ಸಮಾಜದಲ್ಲಿ ಮತ್ತು ನ್ಯಾಯ ವ್ಯವಸ್ಥೆಯಲ್ಲಿ ಬೇರೂರಿದೆ. ಅದರ ಮೂಲಕ ಪ್ರತಿಯೊಬ್ಬ ಮನುಷ್ಯನಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಈ ಸ್ವಾತಂತ್ರ್ಯದ ಒಂದು ಸುಂದರ ಉದಾಹರಣೆಯನ್ನು ನಾವು ಇಲ್ಲಿ ಈ ದಿನ ರಾತ್ರಿ ಕಾಣುತ್ತಿದ್ದೇವೆ. ವಿವಿಧ ಧರ್ಮಗಳ ಮತ್ತು ವಿವಿಧ ನಂಬಿಕೆಗಳ ಜನರು ಇಲ್ಲಿ ಸಮಾವೇಶಗೊಂಡಿದ್ದಾರೆ ಮತ್ತು ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಸಮಾನ ಉದ್ದೇಶ ಲಕ್ಷ್ಯಗಳನ್ನು ಹೊಂದಿದ್ದಾರೆ.

ವಾಗ್ದತ್ತ ಮಸೀಹರು ವಿಕ್ಟೋರಿಯಾ ಮಹಾರಾಣಿಯನ್ನು ಸಂಬೋಧಿಸಿ ಬರೆದ ಮಾತುಗಳನ್ನು ಬಳಸಿ ನಾನು ಎಲಿಝಬೆತ್ ಮಹಾರಾಣಿಗೆ ಶುಭಾಶಯಗಳನ್ನು ಕೋರುತ್ತೇನೆ. ವಾಗ್ದತ್ತ ಮಸೀಹರು ಹೀಗೆ ಹೇಳಿದ್ದರು:

"ಸಂತೋಷ ಮತ್ತು ಕೃತಜ್ಞತೆಯಿಂದ ತುಂಬಿದ ಶುಭಾಶಯಗಳು

*(40ನೇ ಪುಟಕ್ಕೆ....)*



# ಜಾಗತಿಕ ರಾಷ್ಟ್ರ ನಾಯಕರಿಗೆ ಖಲೀಫರ ಪತ್ರಗಳು

## ಯುನೈಟೆಡ್ ಕಿಂಗ್‌ಡಮ್ ಪ್ರಧಾನ ಮಂತ್ರಿ ಡೇವಿಡ್ ಕ್ಯಾಮರೂನ್‌ರಿಗೆ ಪತ್ರ

15 ಎಪ್ರಿಲ್ 2012

ಪ್ರಿಯ ಪ್ರಧಾನ ಮಂತ್ರಿಯವರೇ,

ಲೋಕವು ಇಂದು ದಾಟಿಹೋಗುತ್ತಿರುವ ಅಪಾಯಕರ ಮತ್ತು ವಿಪತ್ತು ಭರಿತ ಸನ್ನಿವೇಶಗಳ ಬೆಳಕಿನಲ್ಲಿ ನಿಮಗೆ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ. ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನ ಮಂತ್ರಿಯಾದ ನೀವು ನಿಮ್ಮ ದೇಶದ ಮತ್ತು ಸಂಪೂರ್ಣ ವಿಶ್ವದ ಮುಂದಿನ ಸ್ಥಿತಿಯನ್ನು ಪ್ರಭಾವಿಸಲು ಶಕ್ತವಾದ ತೀರ್ಮಾನಗಳನ್ನು ಮಾಡಲು ಅಧಿಕಾರವನ್ನು ಹೊಂದಿರುವಿರಿ. ಈಗ ವಿಶ್ವದಲ್ಲಿ ಶಾಂತಿ ಸ್ಥಾಪಿಸುವುದು ಅತ್ಯಾವಶ್ಯಕವಾಗಿದೆ. ಏಕೆಂದರೆ ಯುದ್ಧದ ಕಿಡಿಗಳು ಲೋಕದಾದ್ಯಂತ ಕಾಣಿಸಿಕೊಳ್ಳುತ್ತಾ ಇವೆ. ದೇಶಗಳ ಮಧ್ಯೆ ನಡೆಯುತ್ತಿರುವ ಕಿರಿದಾದ ಸಂಘರ್ಷಗಳು ಜಾಗತಿಕ ಸಂಘರ್ಷಕ್ಕೊಯ್ಯಬಹುದೆಂಬ ಬೆದರಿಕೆಗಳಿವೆ. ಲೋಕದ ಇಂದಿನ ಸ್ಥಿತಿ 1932ರ ಸ್ಥಿತಿಗೆ ಆರ್ಥಿಕವಾಗಿಯೂ ರಾಜಕೀಯವಾಗಿಯೂ ಸಮಾನತೆ ಹೊಂದಿದೆ ಎಂದು ನಾವು ಕಾಣುತ್ತೇವೆ. ಬೇರೆ ಅನೇಕ ಸಮಾನ ಸ್ಥಿತಿಗಳು ಸಹ ಇವೆ. ಇವುಗಳೆಲ್ಲಾ ಒಗ್ಗೂಡುವಾಗ ದ್ವಿತೀಯ ಮಹಾಯುದ್ಧವು ಪ್ರಾರಂಭಗೊಳ್ಳುವಾಗ ಇದ್ದ ಲೋಕದ ಸ್ಥಿತಿಗೆ ಸಮಾನವಾದ ಚಿತ್ರಣವು ಕಾಣಿಸುತ್ತದೆ. ಈ ಕಿಡಿಗಳು ಎಂದಾದರೂ ಬೆಂಕಿ ಹಚ್ಚುವುದಾದರೆ ನಾವು ತೃತೀಯ ಮಹಾಯುದ್ಧದ ಭೀಕರ ದೃಶ್ಯಗಳನ್ನು ನಮ್ಮ ಮುಂದೆ ಕಾಣುವೆವು. ಚಿಕ್ಕ ಮತ್ತು ದೊಡ್ಡ ಅನೇಕ ದೇಶಗಳು ಅಣು ಆಯುಧಗಳನ್ನು ಹೊಂದಿರುವುದರಿಂದ ಮುಂದೆ ಸಂಭವಿಸಬಹುದಾದ ಮಹಾಯುದ್ಧವು ನಿಸ್ಸಂಶಯವಾಗಿಯೂ ಅಣು ಅಸ್ತ್ರಗಳನ್ನು ಪ್ರಯೋಗಿಸುವಂತಹದಾಗುವುದು. ಇಂದು ದೇಶಗಳು ಹೊಂದಿರುವ ಅಣು ಅಸ್ತ್ರಗಳು ಎಷ್ಟು ಹಾನಿಕರವಾಗಿವೆ ಎಂದರೆ ಮುಂದಿನ ಅನೇಕ ಪೀಳಿಗೆಗಳಲ್ಲಿ ಮಕ್ಕಳು ತೀವ್ರ ವಂಶವಾಹಿ ಮತ್ತು ಶಾರೀರಿಕ ವಿಕಲತೆಗಳನ್ನು ಹೊಂದಿ ಜನಿಸುವರು. ಜಪಾನ್ ದೇಶವು ಅಣುಬಾಂಬಿನ ದಾಳಿಗೊಳಪಟ್ಟು ಅಸಹ್ಯ ಪರಿಣಾಮಗಳಿಗೆ ಗುರಿಯಾದ ದೇಶವಾಗಿದ್ದು ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಅದರ ಎರಡು ನಗರಗಳು ಧ್ವಂಸಗೊಂಡವು. ಹೀಗಿದ್ದರೂ ವ್ಯಾಪಕ ವಿನಾಶ ಉಂಟುಮಾಡಿದ ಆಗಿನ ಕಾಲದ ಅಣುಬಾಂಬುಗಳು ಈಗಿನ ಕಾಲದಲ್ಲಿ ಕೆಲವು ಚಿಕ್ಕ ದೇಶಗಳು ಹೊಂದಿರುವ ಅಣುಬಾಂಬುಗಳಿಗಿಂತ ಕಡಿಮೆ ಶಕ್ತಿಶಾಲಿಗಳಾಗಿದ್ದವು. ಆದುದರಿಂದ ಲೋಕದ ಮಹಾಶಕ್ತಿ ರಾಷ್ಟ್ರಗಳು ಒಟ್ಟಿಗೆ ಸೇರಿಕೊಂಡು ಮಾನವರನ್ನು ವಿನಾಶದ ಅಂಚಿನಿಂದ ರಕ್ಷಿಸುವುದು ಹೇಗೆಂಬುದನ್ನು ಪರಾಮರ್ಶಿಸುವುದು ಅವರ ಕರ್ತವ್ಯವಾಗಿದೆ.

ಅತ್ಯಂತ ಭಯ ಉಂಟುಮಾಡುವ ವಿಷಯವೇನೆಂದರೆ, ಕೆಲವು ಚಿಕ್ಕ ದೇಶಗಳಲ್ಲಿರುವ ಅಣು ಅಸ್ತ್ರಗಳು ಕೆಲವು ಯುದ್ಧ ಪ್ರಿಯರಾದ ಜನರ ಕೈಗೆ ಬರಬಹುದು ಎಂಬುದಾಗಿದೆ. ಅವರಿಗೆ ತಮ್ಮ ಕೃತ್ಯಗಳ ಪರಿಣಾಮಗಳ ಬಗ್ಗೆ ಚಿಂತಿಸುವ ಸಾಮರ್ಥ್ಯವಿರುವುದಿಲ್ಲ ಅಥವಾ ಅವರು ಅದರ ಬಗ್ಗೆ ಚಿಂತಿಸಲು ಇಚ್ಛಿಸುವುದೂ ಇಲ್ಲ. ಪ್ರಧಾನ ಶಕ್ತಿಶಾಲಿ ದೇಶಗಳು ನ್ಯಾಯಪಾಲನೆ ಮಾಡದಿದ್ದರೆ, ಚಿಕ್ಕ ದೇಶಗಳ ಅತೃಪ್ತಿಯನ್ನು ಕೊನೆಗೊಳಿಸಲು ಪ್ರಯತ್ನಿಸದಿದ್ದರೆ, ಮಹತ್ತಾದ ಮತ್ತು ವಿವೇಕಭರಿತವಾದ ಧೋರಣೆಗಳನ್ನು ಕೈಗೊಳ್ಳದಿದ್ದರೆ ಲೋಕದ ಪರಿಸ್ಥಿತಿಯು ನಿಯಂತ್ರಣಾತೀತವಾಗುವುದು ಮತ್ತು ನಾವು ಊಹಿಸದಂತಹ ವಿನಾಶಗಳು ಸಂಭವಿಸುವುವು. ಲೋಕದ ಜನಸಂಖ್ಯೆಯಲ್ಲಿ ಬಹುಸಂಖ್ಯಾತರು ಶಾಂತಿಯನ್ನು ಬಯಸುವವರಾದರೂ ಅವರು ಸಹ ವಿನಾಶಕ್ಕೆ ತುತ್ತಾಗುವರು.

ನನ್ನ ಹೃತ್ಪೂರ್ವಕ ಇಚ್ಛೆ ಮತ್ತು ಪ್ರಾರ್ಥನೆ ಏನೆಂದರೆ, ನೀವು ಮತ್ತು ಮಹಾಶಕ್ತಿ ರಾಷ್ಟ್ರಗಳ ನಾಯಕರೆಲ್ಲರೂ ಈ ಭಯಾನಕ ವಾಸ್ತವಿಕತೆಯನ್ನು ಮನಗಾಣಬೇಕು. ಆಕ್ರಮಣಕಾರಿ ಧೋರಣೆಗಳನ್ನು ಕೈಗೊಂಡು ನಿಮ್ಮ ಉದ್ದೇಶ ಲಕ್ಷ್ಯಗಳನ್ನು

ಈಡೇರಿಸಲು ಬಲಪ್ರಯೋಗ ಮಾಡುವುದನ್ನು ಕೈಬಿಟ್ಟು ಲೋಕದಲ್ಲಿ ನ್ಯಾಯಪಾಲನೆ ಮಾಡುವುದಕ್ಕೋಸ್ಕರ ಕ್ರಮಗಳನ್ನು ಕೈಗೊಳ್ಳಬೇಕು.

ನಾವು ಇತ್ತೀಚೆಗಿನ ಚರಿತ್ರೆಯ ಕಡೆಗೆ ನೋಡುವುದಾದರೆ, ಬ್ರಿಟನ್ ಅನೇಕ ದೇಶಗಳಲ್ಲಿ ಆಡಳಿತೆ ನಡೆಸಿ ಅಲ್ಲೆಲ್ಲಾ ಮತ್ತು ವಿಶಿಷ್ಟವಾಗಿ ಭಾರತ ಪಾಕಿಸ್ತಾನ ಉಪಭೂಖಂಡದಲ್ಲಿ ನ್ಯಾಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉನ್ನತ ಮಟ್ಟವನ್ನು ಸ್ಥಾಪಿಸಿದ್ದಿತು. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಘನವೆತ್ತ ವಿಕ್ಟೋರಿಯಾ ಮಹಾರಾಣಿಯನ್ನು ಅವರ ವಜ್ರ ಜೂಬಿಲಿ ಸಮಾರಂಭದ ಕಾಲದಲ್ಲಿ ಅಭಿನಂದಿಸಿ ಇಸ್ಲಾಮಿನ ಸಂದೇಶವನ್ನು ತಲಪಿಸಿ ನ್ಯಾಯನಿಷ್ಠೆಯಿಂದ ಆಡಳಿತೆ ನಡೆಸುತ್ತಿದ್ದ ಬ್ರಿಟಿಷ್ ಸರಕಾರವನ್ನು ಅನುಗ್ರಹಿಸಲು ದೇವನೊಂದಿಗೆ ಪ್ರಾರ್ಥಿಸಿದ್ದರು. ಅವರು, ಧಾರ್ಮಿಕ ಸ್ವಾತಂತ್ರ್ಯ ನೀಡಿದುದಕ್ಕೋಸ್ಕರ ಬ್ರಿಟಿಷ್ ಸರಕಾರವನ್ನು ಬಹಳ ಹೊಗಳಿದ್ದರು. ಇಂದು ಬ್ರಿಟಿಷ್ ಸರಕಾರವು ಭಾರತ ಪಾಕಿಸ್ತಾನ ಉಪಖಂಡದಲ್ಲಿ ಆಡಳಿತೆ ನಡೆಸುತ್ತಾ ಇಲ್ಲವಾದರೂ ಧಾರ್ಮಿಕ ಸ್ವಾತಂತ್ರ್ಯದ ತತ್ವಗಳು ಬ್ರಿಟಿಷ್ ಸಮಾಜದಲ್ಲಿ ಮತ್ತು ಅದರ ನಿಯಮಗಳಲ್ಲಿ ಆಳವಾಗಿ ಬೇರೂರಿದ್ದು ಬ್ರಿಟನ್‌ನಲ್ಲಿರುವ ಪ್ರತಿಯೊಬ್ಬನಿಗೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಮಾನ ಹಕ್ಕುಗಳನ್ನು ನೀಡಲಾಗಿದೆ. ಈ ವರ್ಷ ಘನವೆತ್ತ ಮಹಾರಾಣಿ ಎಲಿಝಬೆತ್ ದ್ವಿತೀಯರವರ ವಜ್ರ ಜೂಬಿಲಿ ಸಮಾರಂಭಗಳು ನಡೆಯುತ್ತಾ ಇವೆ. ಬ್ರಿಟನ್ ತನ್ನ ನ್ಯಾಯಪಾಲನೆ ಮತ್ತು ನಿಷ್ಕಳಂಕತೆಯ ಮಟ್ಟವನ್ನು ಲೋಕದ ಮುಂದಿಡಲು ಇದು ಉತ್ತಮ ಸಂದರ್ಭವನ್ನು ಒದಗಿಸಿಕೊಡುತ್ತಿದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಚರಿತ್ರೆ ತೋರಿಸಿಕೊಡುವುದೇನೆಂದರೆ, ಬ್ರಿಟನ್ ತನ್ನ ನ್ಯಾಯನಿಷ್ಠೆಯನ್ನು ಪ್ರದರ್ಶಿಸಿದಾಗೆಲ್ಲಾ ನಾವು ಅದನ್ನು ಗುರುತಿಸಿದ್ದೇವೆ. ಇನ್ನು ಮುಂದೆ ಸಹ ನ್ಯಾಯಪಾಲನೆ ಬ್ರಿಟಿಷ್ ಸರಕಾರದ ವೈಶಿಷ್ಟ್ಯವಾಗುವುದೆಂದು ನಾವು ಪ್ರತೀಕ್ಷಿಸುತ್ತೇವೆ. ಧಾರ್ಮಿಕ ಸ್ವಾತಂತ್ರ್ಯದ ವಿಷಯದಲ್ಲಿ ಮಾತ್ರವಲ್ಲ, ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ನೀವು ನಿಮ್ಮ ಜನಾಂಗದ ಶ್ರೇಷ್ಠವಾದ ಉತ್ತಮ ಗುಣಗಳನ್ನು ಮರೆತು ಬಿಡದೆ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಬ್ರಿಟನ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತನ್ನ ಪಾತ್ರವನ್ನು ನಿರ್ವಹಿಸಬೇಕು.

ನನ್ನ ಕೋರಿಕೆ ಏನೆಂದರೆ ಪ್ರತಿಯೊಂದು ಹಂತದಲ್ಲಿಯೂ ಪ್ರತಿಯೊಂದು ದಿಸೆಯಲ್ಲಿಯೂ ದ್ವೇಷಾಗ್ನಿಯನ್ನು ನಂದಿಸಲು ನಾವು ಸಾಧ್ಯವಿರುವಷ್ಟು ಉತ್ತಮವಾಗಿ ಪ್ರಯತ್ನಿಸಬೇಕು. ನಾವು ನಮ್ಮ ಈ ಪ್ರಯತ್ನದಲ್ಲಿ ಜಯಶಾಲಿಗಳಾದರೆ ಮಾತ್ರ ನಾವು ಮುಂದಿನ ನಮ್ಮ ಪೀಳಿಗೆಗಳಿಗೆ ಪ್ರಕಾಶಮಾನವಾದ ಭವಿಷ್ಯವನ್ನು ಖಾತರಿ ನೀಡಲು ಶಕ್ತರಾಗುವೆವು. ನಾವು ನಮ್ಮ ಪ್ರಯತ್ನಗಳಲ್ಲಿ ಸೋತುಹೋಗುವುದಾದರೆ ಮುಂದೆ ಸಂಭವಿಸುವ ಅಣು ಅಸ್ತ್ರಗಳು ಬಳಸಲ್ಪಡುವ ಯುದ್ಧದ ಕಾರಣದಿಂದ ನಮ್ಮ ಮುಂದಿನ ಪೀಳಿಗೆಗಳು ಎಲ್ಲಾ ಸ್ಥಳಗಳಲ್ಲೂ ನಮ್ಮ ಕೃತ್ಯಗಳ ಭಯಾನಕ ಪರಿಣಾಮಗಳನ್ನು ಅನುಭವಿಸುವರು ಮತ್ತು ಜಾಗತಿಕ ವಿನಾಶಕ್ಕೊಯ್ದ ತಮ್ಮ ಹಿರಿಯರನ್ನು ಅವರು ಎಂದೂ ಮರೆತುಬಿಡಲಾರರು ಎಂಬುದರ ಬಗ್ಗೆ ಶಂಕಿಸಬೇಕಾಗಿಲ್ಲ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಮೇಲೆ ಪ್ರಭಾವ ಬೀರ ಬಲ್ಲ ದೇಶಗಳಲ್ಲಿ ಬ್ರಿಟನ್ ಒಂದಾಗಿದೆ ಎಂದು ನಾನು ನಿಮಗೆ ಇನ್ನೊಮ್ಮೆ ನೆನಪಿಸಿಕೊಡಲು ಬಯಸುತ್ತೇನೆ. ನೀವು ಇಚ್ಛಿಸುವುದಾದರೆ ಸಮತೆ ಮತ್ತು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸಿಕೊಂಡು ನೀವು ಲೋಕಕ್ಕೆ ಮಾರ್ಗದರ್ಶನ ನೀಡಬಲ್ಲಿರಿ. ಬ್ರಿಟನ್ ಮತ್ತು ಇತರ ಪ್ರಧಾನ ಶಕ್ತಿರಾಷ್ಟ್ರಗಳು ಲೋಕದಲ್ಲಿ ಶಾಂತಿ ಸ್ಥಾಪಿಸಲು ತಮ್ಮ ಪಾತ್ರವನ್ನು ನಿರ್ವಹಿಸಬೇಕು. ನೀವು ಮತ್ತು ಇತರ ಜಾಗತಿಕ ನಾಯಕರು ಈ ಸಂದೇಶವನ್ನು ಮನವರಿಕೆ ಮಾಡಿಕೊಳ್ಳುವಂತೆ ಸರ್ವಶಕ್ತನಾದ ದೇವನು ಮಾಡಲಿ.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ,

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ಜಾಗತಿಕ ನೇತಾರ.

# ಬ್ರಿಟಿಷ್ ಪ್ರಧಾನ ಮಂತ್ರಿಯ ಉತ್ತರ

13 ಜುಲಾಯಿ 2012

ಪ್ರಿಯ ಮಿಸ್ಟರ್ ಅಹ್ಮದ್,



ಜಾಗತಿಕ ಸಂಘದ ಬೆದರಿಕೆಯ ಬಗ್ಗೆ ನಿಮ್ಮ ಚಿಂತೆಯನ್ನು ಸೂಚಿಸುತ್ತಾ ಎಪ್ರಿಲ್ ದಿನಾಂಕ 15ರಂದು ನೀವು ನನಗೆ ಬರೆದ ಪತ್ರದ ಬಗ್ಗೆ ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ಇಂತಹ ಅತ್ಯಂತ ಮುಖ್ಯ ವಿಷಯಗಳ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಮತ್ತು ಅದರ ಹಾಗಿರುವ ಗುಂಪುಗಳು ಮುಂದುವರಿಸುತ್ತಿರುವ ಕ್ರಿಯಾಶೀಲತೆಯನ್ನು ನಾನು ಸ್ವಾಗತಿಸುತ್ತೇನೆ.

ಸಂಘರ್ಷ ಮತ್ತು ಅಸ್ಥಿರತೆಯನ್ನು ತಗ್ಗಿಸಲು ಕೆಲಸ ಮಾಡುವುದು ನೈತಿಕವಾಗಿ ಸರಿಯೆಂದೂ ಅದು ಬ್ರಿಟನಿನ ರಾಷ್ಟ್ರೀಯ ಹಿತಕ್ಕೆ ಆವಶ್ಯಕವೆಂದೂ ಬ್ರಿಟಿಷ್ ಸರಕಾರ ನಂಬುತ್ತದೆ. ಅಣುಶಸ್ತ್ರ ರಹಿತ ಲೋಕವೆಂಬ ಅಂತಿಮ ಗುರಿ ತಲಪುವ ಬಗ್ಗೆ ನಾವು ನಿಮ್ಮೊಂದಿಗೆ ಸಹಮತವನ್ನು ಹೊಂದಿದ್ದು ಈ ಗುರಿಯು ವಾಸ್ತವಿಕವಾಗಿ ಈಡೇರಿಸಲು ನಾವು ಬಹಳ ಕಠಿಣ ಪರಿಶ್ರಮ ನಡೆಸುತ್ತಿದ್ದೇವೆ.

ಅಣು ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿ ಬ್ರಿಟನಿನ ನಿಲುವು ಬಲಯುತವಾಗಿ ದಾಖಲಿಸಲ್ಪಟ್ಟಿದೆ. ಕಳೆದ ಹದಿನೆಂಟು ತಿಂಗಳ ಕಾಲದಲ್ಲಿ ನಾವು ನಿಶ್ಶಸ್ತ್ರೀಕರಣಕ್ಕೋಸ್ಕರ ಮುಖ್ಯ ಕ್ರಮಗಳನ್ನು ಕೈಗೊಂಡಿದ್ದು ನಮ್ಮ ಪ್ರತಿರೋಧಕ ಅಣು ಶಸ್ತ್ರ ಶಕ್ತಿಯನ್ನು ತಗ್ಗಿಸಲು ಪ್ರಯತ್ನಿಸಿದ್ದೇವೆ. ದಿ ಸ್ಟ್ರಾಟೆಜಿಕ್ ಡಿಫೆನ್ಸ್ ಎಂಡ್ ಸೆಕ್ಯುರಿಟಿ ರಿವ್ಯೂ ಎಂಬ ಪತ್ರಿಕೆ 2010 ಒಕ್ಟೋಬರ್ ತಿಂಗಳ ಸಂಚಿಕೆಯಲ್ಲಿ, ನಾವು ನಮ್ಮ ಸಬ್‌ಮೆರೀನ್‌ಗಳಲ್ಲಿ (ಜಲಾಂತರ್ಗತ ನೌಕೆಗಳಲ್ಲಿ) ಅಣು ಬಾಂಬುಗಳ ಮತ್ತು ಮಿಸ್ಸೈಲ್‌ಗಳ ಸಂಖ್ಯೆಯನ್ನು ಕಡಿತಗೊಳಿಸುವುದಾಗಿ ಮತ್ತು ಅಣು ಬಾಂಬುಗಳನ್ನು 2020ರ ದಶಕಗಳ ಮಧ್ಯದೊಳಗೆ 180ಕ್ಕಿಂತ ಹೆಚ್ಚಾಗಿರದಂತೆ ಮಾಡಲಾಗುವುದೆಂದು ಘೋಷಿಸಿದೆ.

ಆದರೆ ಅಣುಶಸ್ತ್ರ ಭಂಡಾರಗಳು ವಿಶ್ವದ ಅನ್ಯ ಸ್ಥಳಗಳಲ್ಲಿರುವ ತನಕ ಮತ್ತು ಲೋಕದ ಭದ್ರತೆಯ ವಾತಾವರಣದ ಮುಂದಿನ ಸ್ಥಿತಿ ಇಷ್ಟು ಸಂಧಿಗ್ಧವಾಗಿರುವಾಗ ವಿಶ್ವಸನೀಯ, ಕನಿಷ್ಠ ಸಂಖ್ಯೆಯ ಪ್ರತಿರೋಧಕ ಅಣ್ವಸ್ತ್ರಗಳನ್ನು ಇಟ್ಟುಕೊಳ್ಳುವುದಕ್ಕೆ ಬ್ರಿಟಿಷ್ ಸರಕಾರ ಬದ್ಧವಾಗಿದೆ.

ನಾವು ಸ್ವತಃ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಅನ್ಯದೇಶಗಳೊಂದಿಗೆ ಸಹಕರಿಸಿ ಸ್ಥಿರವಾದ ಅಣು ನಿಶ್ಶಸ್ತ್ರೀಕರಣ ಪ್ರಕ್ರಿಯೆಗಳಲ್ಲಿ ಕಾರ್ಯನಿರತರಾಗುವುದು ಆವಶ್ಯಕವೆಂದು ನಾವು ನಂಬುತ್ತೇವೆ. ದಿ ನ್ಯೂಕ್ಲಿಯರ್ ನಾನ್ – ಪ್ರೊಲಿಫರೇಶನ್ ಟ್ರೀಟಿಯನ್ನು 189 ದೇಶಗಳು ಅಂಗೀಕರಿಸಿದ್ದು ಜಾಗತಿಕ ಅಣು ನಿಶ್ಶಸ್ತ್ರೀಕರಣದಲ್ಲಿ ಮುಂದುವರಿಯಲು ಸ್ಥಾಪಿತವಾದ ಪ್ರಥಮ ಜಾಗತಿಕ ಸಂವಿಧಾನವಾಗಿದೆ.

ಬ್ರಿಟನ್ ಮತ್ತು ಇತರ ದೇಶಗಳು ಅಣು ಅಸ್ತ್ರಗಳನ್ನು ತ್ಯಜಿಸಲು ಸಾಧ್ಯವಾಗುವಂತಹ ಸುರಕ್ಷಿತ ಮತ್ತು ಸುಸ್ಥಿರ ವಿಶ್ವವನ್ನು ಸ್ಥಾಪಿಸಲು ಬ್ರಿಟನ್ ಸರಕಾರವು ಕಾರ್ಯನಿರತವಾಗಿ ಮುಂದುವರಿಯುತ್ತಾ ಹೋಗುವುದೆಂದು ನಾನು ನಿಮಗೆ ಭರವಸೆ ನೀಡಲು ಬಯಸುತ್ತೇನೆ.

**ಡೇವಿಡ್ ಕ್ಯಾಮರೂನ್**

# ಜರ್ಮನಿಯ ಪ್ರಧಾನ ಮಂತ್ರಿ ಏಂಜೆಲಾ ಮೆರ್ಕಲ್‌ರಿಗೆ ಪತ್ರ



15 ಎಪ್ರಿಲ್ 2012

ಪ್ರಿಯ ಚಾನ್ಸಿಲ್‌ರವರೇ,

ಲೋಕದ ಅಪಾಯಕರ ಮತ್ತು ಅತ್ಯಂತ ಚಿಂತಾಜನಕವಾದ ಇಂದಿನ ಪರಿಸ್ಥಿತಿಯ ಬೆಳಕಿನಲ್ಲಿ ನಿಮಗೆ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಗಣಿಸುತ್ತೇನೆ. ಲೋಕದ ಶಕ್ತಿರಾಷ್ಟ್ರಗಳಲ್ಲಿ ಒಂದಾಗಿರುವ ಮತ್ತು ಪ್ರಭಾವಶಾಲಿಯಾದ ಜರ್ಮನಿಯ ಚಾನ್ಸಿಲರಾದ ನಿಮಗೆ ನಿಮ್ಮ ದೇಶದ ಮೇಲೆ ಮತ್ತು ಲೊಕದ ಇತರ ದೇಶಗಳ ಮೇಲೆ ಪರಿಣಾಮ ಬೀರ ಬಲ್ಲ ತೀರ್ಮಾನಗಳನ್ನು ಮಾಡಲು ಅಧಿಕಾರವಿದೆ. ಇಂದಿನ ಕಾಲದಲ್ಲಿ ಲೋಕದ ದೇಶಗಳು ವಿವಿಧ ಗುಂಪುಗಳಾಗಿ ವಿಭಜಿಸಲ್ಪಟ್ಟಿವೆ. ತೀವ್ರವಾದವು ವರ್ಧಿಸುತ್ತಾ ಇದೆ. ಆರ್ಥಿಕ, ರಾಜಕೀಯ, ಸಾಂಪತ್ತಿಕ ಸ್ಥಿತಿ ಕೆಟ್ಟು ಹೋಗುತ್ತಾ ಇದೆ. ಹೀಗಿರುವಾಗ ಶಾಂತಿಯ ಅಸ್ತಿಭಾರ ಹಾಕಲು ಎಲ್ಲಾ ರೀತಿಯ ದ್ವೇಷಾಗ್ನಿಗಳನ್ನು ನಂದಿಸಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಎಲ್ಲಾ ಭಾವನೆಗಳನ್ನು ಗೌರವಿಸುವ ಮೂಲಕ ಮಾತ್ರ ಇದನ್ನು ಸಾಧಿಸಬಹುದಾಗಿದೆ. ಆದರೆ ಸರಿಯಾಗಿಯೂ ಪ್ರಾಮಾಣಿಕವಾಗಿಯೂ ನೈತಿಕವಾಗಿಯೂ ಇದನ್ನು ಕಾರ್ಯಗತಗೊಳಿಸದ ಕಾರಣದಿಂದ ಲೋಕದ ಸ್ಥಿತಿಯು ವೇಗವಾಗಿ ನಿಯಂತ್ರಣಾತೀತವಾಗಿ ಕೆಟ್ಟು ಹೋಗುತ್ತಾ ಇದೆ. ಬಹುತೇಕ ದೇಶಗಳು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದಿಲ್ಲ ಎಂದು ನಾವು ಕಾಣುತ್ತೇವೆ. ಇದರ ಪರಿಣಾಮವಾಗಿ ಇನ್ನೊಂದು ಲೋಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ. ಈಗ ಚಿಕ್ಕ ಮತ್ತು ದೊಡ್ಡ ಅನೇಕ ದೇಶಗಳು ಅಣು ಅಸ್ತ್ರಗಳನ್ನು ಹೊಂದಿವೆ. ಆದುದರಿಂದ ಒಂದು ಮಹಾಯುದ್ಧ ಈಗ ಪ್ರಾರಂಭಗೊಳ್ಳುವುದಾದರೆ, ಆ ಯುದ್ಧ ಸಾಂಪ್ರದಾಯಿಕ ಆಯುಧಗಳನ್ನು ಬಳಸುವಂತಹದು ಆಗಲಾರದು. ಆ ಯುದ್ಧದಲ್ಲಿ ಅಣು ಅಸ್ತ್ರಗಳು ಪ್ರಯೋಗಿಸಲ್ಪಡುವುವು. ಅಣು ಅಸ್ತ್ರಗಳನ್ನು ಬಳಸಿ ಮಾಡುವ ಯುದ್ಧವು ಅತ್ಯಂತ ವಿನಾಶಕರವಾಗುವುದು. ಅದರ ಪರಿಣಾಮವು ಅದಕ್ಕೆ ಸಮೀಪ ಕಾಲಕ್ಕೆ ಮಾತ್ರ ಸೀಮಿತವಾಗಿರದೆ ಅನೇಕ ಪೀಳಿಗೆಗಳು ಅದರ ದೀರ್ಘಕಾಲೀನ ಪರಿಣಾಮಗಳಿಂದ ಪೀಡಿತವಾಗುವುವು. ಮಕ್ಕಳು ಅಂಗವಿಕಲರಾಗಿ ಜನಿಸುವರು.

ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ನ್ಯಾಯಪಾಲನೆಯು ಅತ್ಯಾವಶ್ಯಕವಾಗಿದೆಯಲ್ಲದೆ ಎಲ್ಲಾ ಜನರ ಧಾರ್ಮಿಕ ಭಾವನೆಗಳನ್ನು ಮತ್ತು ಅನುಷ್ಠಾನ ಕರ್ಮಗಳನ್ನು ಗೌರವಿಸಬೇಕು ಎಂದು ನಾನು ನಂಬುತ್ತೇನೆ. ಬಡ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಜನರು ಅಲ್ಲಿಂದ ಬಂದು ತಮ್ಮ ದೇಶಗಳಲ್ಲಿ ವಾಸಿಸಲು ಅನೇಕ ಪಾಶ್ಚಿಮಾತ್ಯ ದೇಶಗಳು ಔದಾರ್ಯಪೂರ್ಣವಾಗಿ ಅನುಮತಿಸಿದುದನ್ನು ನಾನು ಅನುಮೋದಿಸುತ್ತೇನೆ. ವಲಸೆ ಬಂದ ಜನರಲ್ಲಿ ಮುಸ್ಲಿಮರು ಸಹ ಸೇರಿದ್ದಾರೆ. ಮುಸ್ಲಿಮರೆಂದು ಹೇಳಿಕೊಳ್ಳುವ ಒಂದು ಚಿಕ್ಕ ಗುಂಪು ಸಂಪೂರ್ಣವಾಗಿ ಅನುಚಿತವಾಗಿ ವರ್ತಿಸಿ ಪಾಶ್ಚಿಮಾತ್ಯ ದೇಶಗಳ ಜನರ ಹೃದಯಗಳಲ್ಲಿ ನಿಸ್ಸಂಶಯವಾಗಿಯೂ ಅಪನಂಬಿಕೆಗಳನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಅವರ ಕೃತ್ಯಗಳಿಗೆ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಲೋಕಕ್ಕೆ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಸಂದೇಶವನ್ನು ತಂದ ಪುಣ್ಯ ಪ್ರವಾದಿ ಮುಹಮ್ಮದ್‌ರನ್ನು(ಸ) ಅಂತಹ ತೀವ್ರವಾದಿಗಳು ನಿಜವಾಗಿಯೂ ಪ್ರೀತಿಸುವವರಲ್ಲ. ಬೆರಳೆಣಿಕೆಯ ಸಂಖ್ಯೆಯಲ್ಲಿರುವ ದಾರಿ ತಪ್ಪಿದ ದುಷ್ಕೃತ್ಯಗಳನ್ನು, ನಮ್ಮ ಧರ್ಮವನ್ನು ಆಕ್ಷೇಪಿಸಲು ಮತ್ತು ನಿಷ್ಕಳಂಕರೂ ನಿರಪರಾಧಿಗಳೂ ಆಗಿರುವ ಬಹುಸಂಖ್ಯಾತ ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡುವುದಕ್ಕೆ ಸಾಕ್ಷ್ಯಧಾರವನ್ನಾಗಿ ಮಾಡಬಾರದು. ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಇಬ್ಬಗೆಯ ಮಾರ್ಗವಿರಬೇಕು. ಎಲ್ಲಾ ಪಕ್ಷಗಳ ಜನರು ಒಗ್ಗೂಡಿ ಪರಸ್ಪರ ಸೌಹಾರ್ದಕ್ಕೆ ಪ್ರಯತ್ನ ಮಾಡುವುದಾದರೆ ಮಾತ್ರ ಶಾಂತಿಯು ಸ್ಥಾಪಿಸಲ್ಪಡುವುದು. ಪಶ್ಚಿಮ ದೇಶಗಳ ಜನರಲ್ಲಿರುವ ಅಪನಂಬಿಕೆಯ ಕಾರಣದಿಂದ ದೇಶಗಳ ಮತ್ತು ಜನರ ಮಧ್ಯೆ ಸಂಬಂಧ ಸುಧಾರಣೆಯಾಗುವುದಕ್ಕೆ ಬದಲಾಗಿ, ಕೆಲವು ಮುಸ್ಲಿಮೇತರರ ಪ್ರತಿಕ್ರಿಯೆ ಕೆಟ್ಟದಾಗುತ್ತಾ ಹೋಗುತ್ತಿದೆ ಮತ್ತು ಮುಸ್ಲಿಮ್ ಮತ್ತು ಮುಸ್ಲಿಮೇತರರ ಮಧ್ಯೆ ಒಡಕು ಸೃಷ್ಟಿಸಲ್ಪಡುತ್ತದೆ.

ಮುಸ್ಲಿಮರ ಕೆಲವು ಗುಂಪುಗಳ ಮತ್ತು ದೇಶಗಳ ತಪ್ಪಾದ ಕೃತ್ಯಗಳ ಕಾರಣದಿಂದ ಕೆಲವು ಶಕ್ತಿಶಾಲಿ ರಾಷ್ಟ್ರಗಳು ತಮ್ಮ ಸ್ವಾರ್ಥ ಹಿತಾಸಕ್ತಿಗೆ ಪ್ರಾಮಾಣಿಕತೆ ಮತ್ತು ನ್ಯಾಯದ ಮೇಲೆ ಆದ್ಯತೆ ನೀಡಿವೆ. ಕೆಲವು ದೇಶಗಳ ಸಂಪತ್ತು ಮತ್ತು

ಸಂಪನ್ಮೂಲಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಮತ್ತು ಸ್ಪರ್ಧಿಸುವ ದೇಶಗಳನ್ನು ಅವುಗಳಿಂದ ದೂರ ಸರಿಸಲು ಕೆಲವು ಶಕ್ತಿಶಾಲಿ ರಾಷ್ಟ್ರಗಳು ಆಶೆಯನ್ನು ಹೊಂದಿವೆ. ಇದೇ ಕಾರಣದಿಂದ ಜನರಿಗೆ ಸಹಾಯ ನೀಡುವ ಅಥವಾ ಶಾಂತಿ ಸ್ಥಾಪನೆ ಮಾಡುವ ನೆವನದಿಂದ ರಾಷ್ಟ್ರಗಳು ಕಾರ್ಯನಿರತವಾಗುತ್ತವೆ. ಇಂದಿನ ರಾಜಕೀಯ ಸಂಭವಗಳಿಗೆ ಮುಖ್ಯ ಕಾರಣ ಆರ್ಥಿಕ ಹಿನ್ನಡೆಯಾಗಿದ್ದು ಅದು ನಮ್ಮನ್ನು ಇನ್ನೊಂದು ಮಹಾಯುದ್ಧದ ಕಡೆಗೆ ಸೆಳೆಯುತ್ತಾ ಇದೆ. ಸತ್ಯಸಂಧತೆಯನ್ನು ವಾಸ್ತವಿಕವಾಗಿಯೂ ಪಾಲಿಸುವುದಾದರೆ ಈ ದೇಶಗಳಲ್ಲಿ ಪರಸ್ಪರ ಲಾಭವನ್ನು ನ್ಯಾಯಬದ್ಧವಾದ ರೀತಿಯಲ್ಲಿ, ಕೈಗಾರಿಕೆ ಮತ್ತು ಆರ್ಥಿಕ ಸಂಬಂಧಗಳನ್ನು ಸರಿಯಾದ ರೀತಿಯಲ್ಲಿ ಸ್ಥಾಪಿಸಿ ಗಳಿಸಬಹುದು. ಒಬ್ಬರಿನ್ನೊಬ್ಬರ ಸಂಪನ್ಮೂಲಗಳಿಂದ ನ್ಯಾಯಬಾಹಿರವಾದ ಲಾಭ ಗಳಿಸಲು ಪ್ರಯತ್ನ ಮಾಡಲಾರರು; ಬದಲಿಗೆ, ಅವರು ಒಗ್ಗೂಡಿ ಪರಸ್ಪರ ಸಹಾಯ ಮಾಡುವವರಾಗುವರು. ಇಂದು ಲೋಕದಲ್ಲಿ ಕಂಡು ಬರುವ ಅವ್ಯವಸ್ಥೆಗೆ ಮುಖ್ಯ ಕಾರಣ ನ್ಯಾಯಪಾಲನೆಯ ಕೊರತೆಯಾಗಿದೆ. ಅದು ವ್ಯಾಪಕ ಆತಂಕ ಮತ್ತು ಗಾಬರಿಯನ್ನು ಉಂಟುಮಾಡುತ್ತಿದೆ.

ಆದುದರಿಂದ ನಾನು ನಿಮ್ಮನ್ನು ಕೋರುತ್ತೇನೆ. ಇನ್ನೊಂದು ಮಹಾಯುದ್ಧ ಸ್ಫೋಟಿಸುವುದನ್ನು ತಡೆಯಲು ನೀವು ಕಠಿಣ ಪ್ರಯತ್ನ ನಡೆಸಿರಿ. ನಿಮ್ಮ ಎಲ್ಲಾ ಶಕ್ತಿ, ಸಂಪನ್ಮೂಲ ಮತ್ತು ಪ್ರಭಾವವನ್ನು ನಮ್ಮ ಮುಂದೆ ತೂಗಾಡುತ್ತಿರುವ ಭಯಾನಕ ವಿನಾಶದಿಂದ ಲೋಕವನ್ನು ರಕ್ಷಿಸಲು ಬಳಸಿರಿ. ಅಣು ಆಯುಧಗಳನ್ನು ಹೊಂದಿರುವ ಆಧುನಿಕ ತಂತ್ರಜ್ಞಾನ ಬಳಸಲಾದ ಮೂರು ಸಬ್‌ಮೇರೀನ್ ನೌಕೆಗಳನ್ನು ಜರ್ಮನಿಯು ಇಸ್ರಾಯೇಲ್ ದೇಶಕ್ಕೆ ನೀಡಲಿದೆ ಎಂದು ವರದಿಯಾಗಿದೆ. ಇಸ್ರಾಯೇಲ್ ಮತ್ತು ಇರಾನ್ ಮಧ್ಯೆ ಪ್ರಾರಂಭಗೊಂಡಿರುವ ಬಿಗುವಿನ ಸ್ಥಿತಿಯನ್ನು ಇನ್ನಷ್ಟು ವರ್ಧಿಸಲು ಇದು ಸಹಾಯ ಮಾಡುವುದೆಂದು ಜರ್ಮನಿಯ ಒಬ್ಬ ಪ್ರೊಫೆಸರ್ ಹೇಳಿರುವರು. ಈಗ ಅಣು ಆಯುಧಗಳನ್ನು ವಿಶ್ವದ ಮಹಾಶಕ್ತಿ ರಾಷ್ಟ್ರಗಳು ಮಾತ್ರವಲ್ಲ, ಚಿಕ್ಕ ದೇಶಗಳು ಸಹ ಹೊಂದಿವೆ ಎಂಬುದನ್ನು ನಾವು ನೆನಪಿಡಬೇಕು. ನಮಗೆ ಚಿಂತೆಗೆ ಕಾರಣವಾಗಿರುವುದೇನೆಂದರೆ, ಅಣು ಅಸ್ತ್ರಗಳನ್ನು ಹೊಂದಿದ ಕೆಲವು ಚಿಕ್ಕ ದೇಶಗಳಲ್ಲಿ ಆಡಳಿತೆ ನಡೆಸುವ ನಾಯಕರು ಯುದ್ಧಪ್ರಿಯರೂ ಅಣು ಆಯುಧ ಪ್ರಯೋಗದ ಪರಿಣಾಮವೇನಾದೀತೆಂಬುದರ ಬಗ್ಗೆ ಲಕ್ಷ್ಯ ನೀಡದವರೂ ಆಗಿದ್ದಾರೆ. ಆದುದರಿಂದ ನಾನು ನಿಮ್ಮನ್ನು ಇನ್ನೊಮ್ಮೆ ಕೋರುತ್ತೇನೆ. ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ನೀವು ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಿರಿ. ನಾವು ಶಾಂತಿ ಸ್ಥಾಪನೆಯ ಈ ಪ್ರತಿಕ್ರಿಯೆಯಲ್ಲಿ ಸೋತು ಹೋದರೆ ಅಣು ಆಯುಧಗಳನ್ನು ಬಳಸಿ ಮಾಡಬಹುದಾದ ಯುದ್ಧದಿಂದ ಉಂಟಾಗುವ ಘೋರ ವಿನಾಶದೊಂದಿಗೆ ಪೀಳಿಗೆಗಳ ನಂತರ ಪೀಳಿಗೆಗಳ ಮಕ್ಕಳು ವಿಕಲರಾಗಿ ಜನಿಸುವರು. ಜಾಗತಿಕ ವಿಪತ್ತುಗಳಿಗೆ ಲೋಕವನ್ನು ಕೊಂಡೊಯ್ದ ತಮ್ಮ ಹಿರಿಯರನ್ನು ಅವರೆಂದೂ ಕ್ಷಮಿಸಲಾರರು. ನಿಮಗೆ ಮತ್ತು ಲೋಕದ ಎಲ್ಲಾ ದೇಶಗಳ ನಾಯಕರಿಗೆ ಈ ಸಂದೇಶವನ್ನು ಮನವರಿಕೆ ಮಾಡುವ ಭಾಗ್ಯವನ್ನು ದೇವನು ಕರುಣಿಸಲಿ.


ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಯೊಂದಿಗೆ,

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ಜಾಗತಿಕ ನೇತಾರ

## ಇರಾನಿನ ಸರ್ವೋನ್ನತ ನಾಯಕ ಆಯತುಲ್ಲಾ ಸಯ್ಯಿದ್ ಅಲಿ ಹುಸೈನಿ ಖಾಮನೇಯಿರಿಗೆ ಬರೆದ ಪತ್ರ

14 ಮೇ 2012



ಬಹುಮಾನ್ಯರಾದ ಆಯತುಲ್ಲಾಹ್‌ರವರೇ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತು ಹೂ.

ಸರ್ವಶಕ್ತನಾದ ಅಲ್ಲಾಹನು ನೀವು ಇರಾನಿನಲ್ಲಿ ಇಸ್ಲಾಮಿನ ಸೇವೆ ಮಾಡುವ ಭಾಗ್ಯ ನೀಡಿರುವನು. ಈಗ ಇರಾನಿನ ಸರಕಾರ ನಿಮ್ಮ ಮೇಲ್ವಿಚಾರಣೆಗೊಳಪಟ್ಟು ಅಧಿಕಾರ ನಡೆಸುತ್ತಿದೆ. ಸರಿಯಾದ ಇಸ್ಲಾಮೀ ತತ್ವಗಳನ್ನು ಲೋಕದ ಮುಂದೆ ಇರಿಸುವುದಕ್ಕೆ ನಾವು ಕಠಿಣ ಪ್ರಯತ್ನ ನಡೆಸಬೇಕು. ಲೋಕದಲ್ಲಿ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಭಾವನೆಯೊಂದಿಗೆ ಜೀವಿಸಬೇಕೆಂದು ಲೋಕದ

ಜನರಿಗೆ ಮುಸ್ಲಿಮರಾದ ನಾವು ಕಲಿಸಬೇಕು. ವಿಶಿಷ್ಟವಾಗಿ ಮುಸ್ಲಿಮರ ನಾಯಕರು ತ್ವರಿತವಾಗಿ ಇದರ ಬಗ್ಗೆ ಗಮನ ನೀಡಬೇಕು. ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ನಿಮ್ಮ ಸರಕಾರ ಹೊಂದಿರುವ ಜವಾಬ್ದಾರಿ ಕುರಿತು ನೀವು ನಿಮ್ಮ ಸರಕಾರದ ಗಮನಹರಿಸಬೇಕೆಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ಇರಾನ್ ದೇಶವು ಆಕ್ರಮಣಕ್ಕೆ ಗುರಿಯಾದರೆ ಪ್ರತಿರೋಧಾತ್ಮಕ ಪ್ರಕ್ರಿಯೆಗಳನ್ನು ಕೈಗೊಳ್ಳಲು ಮತ್ತು ದೇಶವನ್ನು ರಕ್ಷಿಸಲು ಸರಕಾರಕ್ಕೆ ಅಧಿಕಾರವಿದೆ. ಆದರೆ ಅದು ಆಕ್ರಮಣವನ್ನು ಉತ್ತೇಜಿಸಬಾರದು ಮತ್ತು ಸಂಘರ್ಷವನ್ನು ಪ್ರಾರಂಭಿಸಲು ಮುಂದಾಗಬಾರದು. ಧಾರ್ಮಿಕ ಅಭಿಪ್ರಾಯ ವ್ಯತ್ಯಾಸಗಳನ್ನು ಕಡೆಗಣಿಸಿ ಸಮಾನ ಹಿತಾಸಕ್ತಿಗೆ ಸಂಬಂಧಿಸಿ ಒಗ್ಗೂಡುವುದು ಆವಶ್ಯಕವಾಗಿದೆ. ಇಸ್ಲಾಮಿನ ಅದ್ಯ ಕಾಲದಲ್ಲಿ ಇಂತಹ ನಿಲುವನ್ನು ಕೈಗೊಂಡುದರ ಬಗ್ಗೆ ಚಾರಿತ್ರಿಕವಾಗಿ ತಿಳಿದು ಬಂದಿದೆ.

ನಾನು ಈ ಪತ್ರವನ್ನು ಬರೆದುದು ನಾನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯ(ಅ) ಅನುಯಾಯಿಯೂ ಅವರ ಖಲೀಫ ಸಹ ಆಗಿರುವುದರಿಂದಾಗಿದೆ. ಅವರ ಆಗಮನದ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಭವಿಷ್ಯ ನುಡಿದಿದ್ದರು. ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಸ್ಥಾಪಿಸಿದರು. ಅಲ್ಲಾಹನ ಅನುಗ್ರಹದಿಂದ 200 ದೇಶಗಳಲ್ಲಿ ಈ ಜಮಾಅತ್ ಸ್ಥಾಪಿಸಲ್ಪಟ್ಟಿದೆ ಮತ್ತು ಮಿಲಿಯಗಟ್ಟಲೆ ಜನರು ನಿಷ್ಠಾವಂತ ಅನುಯಾಯಿಗಳಾಗಿ ಇದಕ್ಕೆ ಲೋಕದಾದ್ಯಂತ ಸೇರಿದ್ದಾರೆ. ಪರಸ್ಪರ ಪ್ರೀತಿ ಮತ್ತು ಶಾಂತಿಯಿಂದ ಜೀವಿಸಲು ಲೋಕಕ್ಕೆ ಮಾರ್ಗದರ್ಶನ ನೀಡಲು ನಾವು ಅತ್ಯಂತ ಹೆಚ್ಚು ಆಶೆಯನ್ನು ಹೊಂದಿದ್ದೇವೆ. ಈ ಉದ್ದೇಶವನ್ನು ಸಾಧಿಸಲು ನಾನು ವಿವಿಧ ಶ್ರೇಣಿಗಳಲ್ಲಿರುವ ಜನರನ್ನು ಈ ವಿಷಯದ ಬಗ್ಗೆ ಗಮನಹರಿಸಲು ನಿರಂತರವಾಗಿ ಪ್ರಯತ್ನಿಸುತ್ತಾ ಇದ್ದೇನೆ. ನಾನು ಇತ್ತೀಚೆಗೆ ಇಸ್ರಾಯೇಲ್ ದೇಶದ ಪ್ರಧಾನ ಮಂತ್ರಿಯವರಿಗೂ ಅಮೇರಿಕದ ಅಧ್ಯಕ್ಷರಿಗೂ ಇತರ ದೇಶಗಳ ನಾಯಕರಿಗೂ ಪತ್ರಗಳನ್ನು ಬರೆದಿರುವೆನು. ನಾನು ಈ ಬಗ್ಗೆ ಪೋಪ್ ಬೆನೆಡಿಕ್ಟ್ XVIಗೂ ಪತ್ರ ಬರೆದಿದ್ದೆನು.

ದೊಡ್ಡದಾದೊಂದು ಇಸ್ಲಾಮೀ ದೇಶದ ಆಧ್ಯಾತ್ಮಿಕ ನೇತಾರರಾದ ನೀವು ಒಂದು ವಿಷಯದ ಬಗ್ಗೆ ಒಮ್ಮತ ಹೊಂದುವಿರೆಂದು ನಾನು ಪ್ರತೀಕ್ಷಿಸುತ್ತೇನೆ: ಮುಸ್ಲಿಮ್ ಸಮುದಾಯದ ಎಲ್ಲರೂ ಒಗ್ಗೂಡಿ ಕಾರ್ಯನಿರತರಾದರೆ ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡುವುದು. ದ್ವೇಷ ವರ್ಧನೆಗೆ ನಾವು ಇಂಧನ ಹಾಕಬಾರದು. ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ಸಂದರ್ಭಗಳಿಗೋಸ್ಕರ ಅನ್ವೇಷಿಸಬೇಕು. ಅನ್ಯರ ವಿರುದ್ಧ ಹಗೆತನ ಅಥವಾ ವಿರೋಧವು ನಮ್ಮನ್ನು ಅನ್ಯಾಯದಿಂದ ವರ್ತಿಸುವಂತೆ ಮಾಡಬಾರದು. ಪವಿತ್ರ ಖುರ್‌ಅನ್‌ನಲ್ಲಿ ನಮಗೆ ಹೀಗೆ ಉಪದೇಶಿಸಲಾಗಿದೆ:

*"ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತ ರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (ಪವಿತ್ರ ಖುರ್‌ಆನ್ 5:9)*

ಮುಸ್ಲಿಮ್ ಸಮುದಾಯದ ಎಲ್ಲರೂ ಮುಸ್ಲಿಮ್ ಸರಕಾರಗಳೂ ನನ್ನ ಸಂದೇಶವನ್ನು ಮನವರಿಕೆ ಮಾಡಿಕೊಳ್ಳಲು ಅಲ್ಲಾಹನು ಅನುಗ್ರಹಿಸಲಿ ಮತ್ತು ಅವರು ಲೋಕದಲ್ಲಿ ಶಾಂತಿ ಸ್ಥಾಪಿಸಲು ತಂತಮ್ಮ ಪಾತ್ರಗಳನ್ನು ವಹಿಸಲು ಸಿದ್ಧತೆಗಳನ್ನು ನಡೆಸುವವರಾಗಲಿ.

ಮುಸ್ಲಿಮ್ ಸಮುದಾಯದ ಎಲ್ಲರ ಬಗ್ಗೆ ಇರುವ ನನ್ನ ಪ್ರೀತಿಯು ಮಾನವರೆಲ್ಲರನ್ನು ಪ್ರೀತಿಸುವುದಕ್ಕೆ ನನ್ನನ್ನು ಬೆಳೆಸಿದುದರಿಂದಲೂ "ಮಾನವರೆಲ್ಲರಿಗೆ ಅನುಗ್ರಹದಾಯಕರಾದ" ಹಝ್ರತ್ ಪೈಗಂಬರರ(ಸ) ಅನುಯಾಯಿ ಯಾಗಿರುವುದರಿಂದಲೂ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ಲೋಕದ ರಾಷ್ಟ್ರ ನಾಯಕರು ನನ್ನ ಸಂದೇಶವನ್ನು ಅರ್ಥಮಾಡಿಕೊಂಡು ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಕೃತಿಶೀಲರಾಗುವ ಭಾಗ್ಯವನ್ನು ಅಲ್ಲಾಹನು ನೀಡಲಿ. ಇಲ್ಲದಿದ್ದರೆ ಒಂದು ದೇಶವು ಆತುರದಿಂದಲೂ ನಿರ್ಲಕ್ಷ್ಯದಿಂದಲೂ ಇನ್ನೊಂದು ದೇಶದ ವಿರುದ್ಧ ಕೈಗೊಳ್ಳುವ ಕ್ರಮಗಳು ಎರಡು ದೇಶಗಳ ಮಧ್ಯೆ ಘೋರ ಹೋರಾಟಕ್ಕೆ ನಾಂದಿಯಾದರೆ ಅಂತಹ ಯುದ್ಧವು ಆ ಎರಡು ದೇಶಗಳಿಗೆ ಸೀಮಿತವಾಗದು. ಯುದ್ಧದ ಜ್ವಾಲೆಗಳು ಲೋಕದಾದ್ಯಂತ ವ್ಯಾಪಿಸುವುವು. ಒಂದು ಮಹಾಯುದ್ಧವು ಪ್ರಾರಂಭವಾಗುವುದು ಸಂಭವನೀಯವಾಗಿದೆ. ಆದರೆ ಆ ಯುದ್ಧದಲ್ಲಿ ಸಾಂಪ್ರದಾಯಿಕ ಆಯುಧಗಳಿಗೆ ಬದಲಾಗಿ ಅಣು ಅಸ್ತ್ರಗಳು ಬಳಸಲ್ಪಡುವುವು. ಅಣು ಅಸ್ತ್ರಗಳನ್ನು ಬಳಸಿ ಮಾಡಲಾದ ಯುದ್ಧವು ಭಯಾನಕ ವಿನಾಶಕರವಾಗುವುದು. ಅದರ ಪರಿಣಾಮವು ಆಗ ಜೀವಿಸಿರುವ ಜನರನ್ನು

ಮಾತ್ರವಲ್ಲ, ಆ ಯುದ್ಧವು ಭೀಕರ 'ಕೊಡುಗೆ'ಗಳನ್ನು ಮುಂದಿನ ಪೀಳಿಗೆಗಳಿಗೆ ನೀಡುವುದು. ಮಕ್ಕಳು ಅಂಗವಿಕಲರಾಗಿ ಜನಿಸುವರು. ಆದುದರಿಂದ ಯಾವುದೇ ದೇಶವು ತಲೆಯ ಮೇಲೆ ತೂಗುತ್ತಿರುವ ವಿನಾಶಗಳಿಂದ ಸುರಕ್ಷಿತವಾಗಿರುವುದೆಂದು ಯೋಚಿಸಬಾರದು.

ಆದುದರಿಂದ, ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹೆಸರಿನಲ್ಲಿ ಮತ್ತು ಮಾನವರ ಬಗ್ಗೆ ಅನುಕಂಪವನ್ನು ಹೊಂದಿ ನಾನು ಇನ್ನೊಮ್ಮೆ ನಿಮ್ಮೊಂದಿಗೆ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ನಿಮ್ಮ ಪಾತ್ರವನ್ನು ನಿರ್ವಹಿಸಬೇಕೆಂದು ಅಪೇಕ್ಷಿಸುತ್ತೇನೆ.

ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಯೊಂದಿಗೆ,
ವಸ್ಸಲಾಮ್
**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**
ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ಜಾಗತಿಕ ನೇತಾರ

## ಫ್ರಾನ್ಸಿನ ಅಧ್ಯಕ್ಷ ಫ್ರಾಂಕೋಯಿಸ್‌ರಿಗೆ ಪತ್ರ

16 ಮೇ 2012



ಪ್ರಿಯ ಅಧ್ಯಕ್ಷರೇ,

ನೀವು ಫ್ರಾನ್ಸಿನ ಅಧ್ಯಕ್ಷರಾಗಿ ಚುನಾಯಿತರಾದುದಕ್ಕಾಗಿ ನಾನು ನಿಮಗೆ ಅಭಿನಂದನೆಗಳನ್ನು ಸೂಚಿಸಲು ಬಯಸುತ್ತೇನೆ. ನಿಮಗೆ ನಿಶ್ಚಯವಾಗಿಯೂ ಬೃಹತ್ತಾದೊಂದು ಹೊಣೆಗಾರಿಕೆಯನ್ನು ವಹಿಸಿಕೊಡಲಾಗಿದೆ. ಫ್ರಾನ್ಸಿನ ಜನರು ಮತ್ತು ಲೋಕವು ನಿಮ್ಮ ನಾಯಕತ್ವದಿಂದ ಲಾಭಗಳಿಸಲಿ ಎಂದು ನಾನು ಪ್ರತೀಕ್ಷೆ ಮಾಡುತ್ತೇನೆ ಮತ್ತು ಅದರ ಬಗ್ಗೆ ಪ್ರಾರ್ಥಿಸುತ್ತೇನೆ. ಲೋಕ ಪರಿಸ್ಥಿತಿಯು ವೇಗವಾಗಿ ಅಧಃಪತನಗೊಳ್ಳುತ್ತಾ ಇರುವುದರಿಂದ ನಾನು ಇತ್ತೀಚೆಗೆ ನಿಮಗಿಂತ ಮೊದಲು ಫ್ರಾನ್ಸಿನ ಪ್ರೆಸಿಡೆಂಟರಾಗಿದ್ದ ನಿಕೋಲಸ್ ಸರ್ಕೋಝಿಯವರಿಗೆ ಪತ್ರ ಬರೆದಿದ್ದೆನು. ಆ ಪತ್ರದಲ್ಲಿ ನಾನು ಪ್ರೆಸಿಡೆಂಟ್ ಸರ್ಕೋಝಿಯವರೊಂದಿಗೆ, ಅವರು ಒಬ್ಬ ಜಾಗತಿಕ ನೇತಾರನಾಗಿರುವ ಸ್ಥಿತಿಯಲ್ಲಿ ನ್ಯಾಯಕ್ಕೆ ಬದ್ಧರಾಗಬೇಕೆಂದೂ ಲೋಕ ಮಹಾಯುದ್ಧ ಸ್ಫೋಟಗೊಳ್ಳುವುದನ್ನು ತಡೆಯಬೇಕೆಂದೂ ಅಪೇಕ್ಷಿಸಿದ್ದೆನು.

ಹೊಸದಾಗಿ ಫ್ರಾನ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ನಿಮಗೆ ಸಹ ಇದೇ ಸಂದೇಶ ನೀಡಬೇಕೆಂದು ನಾನು ಬಯಸುತ್ತೇನೆ. ನಿಮ್ಮ ದೇಶವನ್ನೂ ಲೋಕವನ್ನೂ ಬಾಧಿಸುವ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರವನ್ನು ನೀವು ಹೊಂದಿರುವಿರಿ. ಲೋಕದ ಇಂದಿನ ಪರಿಸ್ಥಿತಿಯಲ್ಲಿ ಲೋಕದ ಸರಕಾರಗಳು ಅತ್ಯಂತ ಜಾಗರೂಕರಾಗಿರಬೇಕೆಂದು ನಾನು ನಂಬುತ್ತೇನೆ. ಅನ್ಯಾಯಕರ ವರ್ತನೆಗಳು ಮತ್ತು ಹಗೆತನಗಳು ದೇಶಗಳ ಮಧ್ಯೆ ಇರುವುದರಿಂದ ಜಾಗತಿಕ ಸಂಘರ್ಷಕ್ಕೊಯ್ಯಲ್ಪಡುವ ಬೆದರಿಕೆಗಳು ಇವೆ. ಕಳೆದ ಶತಮಾನದಲ್ಲಿ ಎರಡು ಜಾಗತಿಕ ಮಹಾಯುದ್ಧಗಳು ನಡೆದವು. ಮೊದಲನೆಯ ಮಹಾಯುದ್ಧದ ನಂತರ ಲೀಗ್ ಆಫ್ ನೇಶನ್ಸ್ ಸ್ಥಾಪಿಸಲ್ಪಟ್ಟಿತು. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರದ ಕಾರಣ ಎರಡನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗಿ ಆ ಯುದ್ಧದ ಕೊನೆಯ ಘಟ್ಟದಲ್ಲಿ ಅಣು ಬಾಂಬು ಬಳಸಲಾಯಿತು. ಅನಂತರ ಯುನೈಟೆಡ್ ನೇಶನ್ಸ್ ಎಂಬ ಸಂಸ್ಥೆ ಮಾನವರ ಮೂಲಭೂತ ಹಕ್ಕುಗಳ ಮತ್ತು ಜಾಗತಿಕ ಶಾಂತಿಯ ಸಂರಕ್ಷಣೆಗೋಸ್ಕರ ಸ್ಥಾಪಿಸಲ್ಪಟ್ಟಿತು. ಹೀಗೆ ಯುದ್ಧಗಳನ್ನು ತಡೆಗಟ್ಟುವ ಪ್ರಯತ್ನ ಮಾಡಲಾಯಿತು. ಆದರೆ ಮೂರನೆಯ ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಹಾಕಿರುವುದಾಗಿ ನಾವು ಈಗ ಕಾಣುತ್ತಿದ್ದೇವೆ. ಚಿಕ್ಕ ಮತ್ತು ದೊಡ್ಡದಾದ ಅನೇಕ ದೇಶಗಳು ಈಗಾಗಲೇ ಅಣು ಬಾಂಬುಗಳನ್ನು ಹೊಂದಿವೆ. ಚಿಂತೆಯುಂಟುಮಾಡುವ ವಿಷಯವೇನೆಂದರೆ, ಅಣು ಬಾಂಬು ಹೊಂದಿರುವ ಕೆಲವು ಚಿಕ್ಕ ದೇಶಗಳು ಬೇಜವಾಬ್ದಾರಿಯಿಂದ ವರ್ತಿಸುವವುಗಳೂ ಅಣುಬಾಂಬು ಬಳಸಲಾದ ಯುದ್ಧದಿಂದ ಸಂಭವಿಸಬಹುದಾದ ಘೋರ ನಾಶದ ಬಗ್ಗೆ ಅಜ್ಞಾನಿಗಳೂ ಆಗಿವೆ ಎಂಬುದಾಗಿದೆ. ಅಣು ಬಾಂಬುಗಳು ವರ್ಷಿಸಲ್ಪಟ್ಟರೆ ಅದರ ಭೀಕರ ಪರಿಣಾಮವು ಕೂಡಲೇ ಪ್ರಕಟವಾಗುವುದು ಮತ್ತು ಆ ದಿನವು ಪ್ರಳಯ ದಿನದ ಹಾಗೆ ಆಗುವುದು. ಇಂದಿನ ಕಾಲದ ಅಣು ಬಾಂಬುಗಳು

ಎಷ್ಟು ವಿನಾಶಕರವಾಗಿವೆ ಎಂದರೆ ಪೀಳಿಗೆಗಳ ನಂತರ ಪೀಳಿಗೆಗಳ ಮಕ್ಕಳು ವಂಶವಾಹಿಗೆ ಸಂಬಂಧಿಸಿದ ವಿಕಲತೆಗಳಿಂದಲೂ ಅಂಗವಿಕಲತೆಗಳಿಂದಲೂ ಜನಿಸುವರು. ಅಣು ಬಾಂಬಿನ ದಾಳಿಗೆ ತುತ್ತಾಗಿ ಅದರ ವಿನಾಶಕರ ಪರಿಣಾಮವನ್ನು ಎದುರಿಸಿದ ಏಕಮಾತ್ರ ದೇಶವಾದ ಜಪಾನಿನ ಸ್ಥಿತಿ ಹೇಗಿದೆ ಎಂದರೆ ಅಣು ಬಾಂಬು ದಾಳಿಯ ನಂತರ ಏಳು ದಶಕಗಳು ದಾಟಿ ಹೋಗಿದ್ದರೂ ಅಣು ಬಾಂಬು ಪ್ರಯೋಗದ ದುಷ್ಪರಿಣಾಮಗಳು ಈಗ ಸಹ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುತ್ತಾ ಇವೆ.

ಆದುದರಿಂದ ನಾನು ನಿಮ್ಮನ್ನು ವಿನಂತಿಸುತ್ತೇನೆ. ಮುಸ್ಲಿಮ್ ಮತ್ತು ಮುಸ್ಲಿಮೇತರ ಲೋಕದ ಮಧ್ಯೆ ಇರುವ ದ್ವೇಷ ಮತ್ತು ಅಪನಂಬಿಕೆಯನ್ನು ನಂದಿಸಲು ನೀವು ಶಕ್ತಿಯುತವಾಗಿ ಪ್ರಯತ್ನಿಸಿರಿ. ಕೆಲವು ಯುರೋಪಿಯನ್ ದೇಶಗಳು ಇಸ್ಲಾಮಿನ ಉಪದೇಶಗಳ ಬಗ್ಗೆ ಮತ್ತು ಸಂಪ್ರದಾಯಗಳ ಬಗ್ಗೆ ವಿಶಿಷ್ಟ ಆತಂಕಗಳನ್ನು ಹೊಂದಿ ಅವುಗಳ ಮೇಲೆ ಕೆಲವು ನಿಯಂತ್ರಣಗಳನ್ನು ಹೇರಿವೆ. ಬೇರೆ ಕೆಲವು ದೇಶಗಳು ಅದರ ಬಗ್ಗೆ ಯೋಚಿಸುತ್ತಿವೆ. ಮುಸ್ಲಿಮರೆಂದು ಹೇಳಿಕೊಳ್ಳುವ ಕೆಲವು ತೀವ್ರವಾದಿಗಳು ಪಶ್ಚಿಮ ದೇಶಗಳ ವಿರುದ್ಧ ಹೊಂದಿರುವ ಹಗೆತನ ಅವರನ್ನು ಅನುಚಿತವಾದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಮಾಡಬಹುದು ಮತ್ತು ಅದರಿಂದ ಧಾರ್ಮಿಕ ಅಸಹನೆ ಮತ್ತು ಕಲಹವು ವರ್ಧಿಸುವುದು. ಆದರೆ ಇಸ್ಲಾಮ್ ಶಾಂತಿಪ್ರಿಯ ಧರ್ಮವಾಗಿದೆ. ಕೆಡುಕನ್ನು ತಡೆಯಲು ಕೆಟ್ಟ ಕೆಲಸಮಾಡಲು ಅದು ಉಪದೇಶಿಸುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಈ ತತ್ವವನ್ನು ಅನುಸರಿಸುತ್ತೇವೆ ಮತ್ತು ಎಲ್ಲಾ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ ನೀಡುವ ಬಗ್ಗೆ ನಂಬಿಕೆ ಹೊಂದಿದ್ದೇವೆ.

ದುಃಖಕರವಾದ ವಿಷಯವೇನೆಂದರೆ, ಮುಸ್ಲಿಮರ ಒಂದು ಚಿಕ್ಕ ಗುಂಪು ಇಸ್ಲಾಮ್ ಧರ್ಮದ ಸಂಪೂರ್ಣ ವಿಕೃತ ಚಿತ್ರಣವನ್ನು ನೀಡುತ್ತದೆ ಮತ್ತು ತಮ್ಮ ದಾರಿತಪ್ಪಿದ ನಂಬಿಕೆಗಳ ಪ್ರಕಾರ ವರ್ತಿಸುತ್ತದೆ. ಮಾನವರೆಲ್ಲರಿಗೂ ಅನುಗ್ರಹದಾಯಕರಾಗಿದ್ದ ಪುಣ್ಯ ಪ್ರವಾದಿ ಮುಹಮ್ಮದರನ್ನು ಪ್ರೀತಿಸುವ ನಾನು ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ: ನೀವು ತೀವ್ರವಾದಿಗಳ ಕೃತ್ಯಗಳನ್ನು ನಿಜವಾದ ಇಸ್ಲಾಮ್ ಎಂದು ಗಣಿಸಬಾರದು ಮತ್ತು ಅವರ ಕೃತ್ಯಗಳನ್ನು ಶಾಂತಿಪ್ರಿಯರಾದ ಬಹುಸಂಖ್ಯಾತರಾದ ಮುಸ್ಲಿಮರ ಭಾವನೆಗಳನ್ನು ನೋಯಿಸಲು ಇರುವ ಅನುಮತಿ ಪತ್ರವಾಗಿ ಗಣಿಸಬಾರದು. ಇತ್ತೀಚೆಗೆ ಒಬ್ಬ ನಿರ್ದಯಿ ಕ್ರೂರಿ ಮನುಷ್ಯನು ವಿನಾ ಕಾರಣ ಕೆಲವು ಫ್ರೆಂಚ್ ಸೈನಿಕರನ್ನು ದಕ್ಷಿಣ ಫ್ರಾನ್ಸಿನಲ್ಲಿ ಕೊಂದು ಹಾಕಿದನು. ಕೆಲವು ದಿನಗಳ ನಂತರ ಅವನು ಒಂದು ಶಾಲೆಯನ್ನು ಪ್ರವೇಶಿಸಿ ನಿಷ್ಕಳಂಕರಾದ ಮೂವರು ಯಹೂದಿ ವಿದ್ಯಾರ್ಥಿಗಳನ್ನೂ ಅವರ ಅಧ್ಯಾಪಕರನ್ನೂ ಕೊಂದನು. ಇಂತಹ ಕ್ರೂರ ಕೃತ್ಯಗಳು ಕೆಲವು ಮುಸ್ಲಿಮ್ ದೇಶಗಳಲ್ಲೂ ಆಗಾಗ ನಡೆಯುತ್ತಿರುವುದಾಗಿ ನಾವು ಕಾಣುತ್ತೇವೆ. ಇವು ಇಸ್ಲಾಮಿನ ವಿರೋಧಿಗಳಿಗೆ ತಮ್ಮ ದ್ವೇಷವನ್ನು ಹೊರಹೊಮ್ಮಿಸಲು ಮತ್ತು ತಮ್ಮ ಉದ್ದೇಶಲಕ್ಷ್ಯಗಳನ್ನು ವರ್ಧಿಸಿದ ರೀತಿಯಲ್ಲಿ ಮುಂದುವರಿಸಲು ಆಧಾರ ನೀಡುತ್ತವೆ. ಮುಸ್ಲಿಮನಾದ ನಾನು ಸಂಪೂರ್ಣವಾಗಿ ಹೀಗೆ ಸ್ಪಷ್ಟಪಡಿಸಲು ಬಯಸುತ್ತೇನೆ: ಇಸ್ಲಾಮ್ ಯಾವುದೇ ರೀತಿಯ ಕ್ರೂರಕೃತ್ಯಗಳನ್ನು ಅನುಮತಿಸುವುದಿಲ್ಲ. ಒಬ್ಬ ನಿರಪರಾಧಿಯನ್ನು ಅನ್ಯಾಯದಿಂದ ಕೊಲ್ಲುವುದು ಮಾನವರೆಲ್ಲರನ್ನೂ ಕೊಂದುದಕ್ಕೆ ಸಮವಾದ ಗುರುತರವಾದ ಅಪರಾಧವೆಂದು ಪವಿತ್ರ ಖುರ್‌ಆನ್ ಗಣಿಸಿದೆ. ಇದು ಯಾವುದೇ ಅಪವಾದವಿಲ್ಲದ ಆಜ್ಞೆಯಾಗಿದೆ. ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: ***ಯಾವುದಾದರೂ ದೇಶ ಅಥವಾ ಜನತೆ ನಿಮ್ಮ ವಿರುದ್ಧ ಶತ್ರುತ್ವವನ್ನು ಹೊಂದಿದ್ದರೆ ಅವರೊಡನೆ ನ್ಯಾಯಯುತವಾಗಿ ವರ್ತಿಸಲು ಅದು ನಿಮ್ಮನ್ನು ತಡೆಗಟ್ಟಬಾರದು. ದ್ವೇಷ ಮತ್ತು ಸ್ಪರ್ಧೆ ನಿಮ್ಮನ್ನು ಸೇಡು ತೀರಿಸಲು ಅಥವಾ ಅನ್ಯಾಯದಿಂದ ವರ್ತಿಸಲು ಪ್ರೇರೇಪಿಸಬಾರದು. ಉತ್ತಮ ರೀತಿಯಲ್ಲಿ ಸಂಘರ್ಷಗಳನ್ನು ಪರಿಹರಿಸಲು ನೀವು ಬಯಸುವಿರಾದರೆ ಸೌಹಾರ್ದ ಪೂರ್ಣವಾಗಿ ವರ್ತಿಸಿರಿ.***

ಅನೇಕ ಪಶ್ಚಿಮ ದೇಶಗಳು ಬಡ ಮತ್ತು ಹಿಂದುಳಿದ ದೇಶಗಳ ಜನರು ತಮ್ಮ ದೇಶಗಳಲ್ಲಿ ವಾಸಿಸಲು ಔದಾರ್ಯ ಪೂರ್ಣವಾಗಿ ಅನುಮತಿಸಿದುದನ್ನು ನಾನು ಮೆಚ್ಚುತ್ತೇನೆ. ಅವರಲ್ಲಿ ಮುಸ್ಲಿಮರೂ ಸೇರಿದ್ದಾರೆ. ಅನೇಕ ಮುಸ್ಲಿಮರು ನಿಮ್ಮ ದೇಶದಲ್ಲಿ ನಿಮ್ಮ ನಾಗರಿಕರಾಗಿ ಜೀವಿಸುತ್ತಿದ್ದಾರೆ. ಅವರಲ್ಲಿ ಬಹುತೇಕ ಜನರು ನ್ಯಾಯವನ್ನು ಉಲ್ಲಂಘಿಸದವರೂ ನಿಷ್ಠಾವಂತರೂ ಆಗಿರುತ್ತಾರೆ. ದೇಶಭಕ್ತಿಯು ಸತ್ಯವಿಶ್ವಾಸದ ಒಂದು ಭಾಗವಾಗಿದೆ ಎಂದು ಇಸ್ಲಾಮ್ ಸ್ಪಷ್ಟವಾಗಿ ಕಲಿಸುತ್ತದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ಸಂದೇಶವನ್ನು ಲೋಕದಾದ್ಯಂತ ಪ್ರಚಾರಗೊಳಿಸುತ್ತಾ ಇದೆ. ಇಸ್ಲಾಮಿನ ಈ ಸತ್ಯ ಸಂದೇಶವನ್ನು ಎಲ್ಲಾ ಕಡೆಗಳಲ್ಲೂ ಪ್ರಚಾರಗೊಳಿಸಿದರೆ ದೇಶದ ಬಗ್ಗೆ ಪ್ರೀತಿ ಮತ್ತು ಶಾಂತಿ ಸ್ಥಾಪನೆಯ ಬಗ್ಗೆ ಆಸಕ್ತಿಯು ಪ್ರತಿಯೊಂದು ದೇಶದ ಜನರಲ್ಲಿ ಮತ್ತು ವಿಶ್ವದ ವಿವಿಧ ದೇಶಗಳ ಮಧ್ಯೆ ಸ್ಥಾಪಿತವಾಗುವುದು.

ನನ್ನ ವಿನೀತ ಅಪೇಕ್ಷೆ ನಿಮ್ಮೊಡನೆ ಮತ್ತು ಜಾಗತಿಕ ನಾಯಕರೊಂದಿಗೆ ಏನೆಂದರೆ, ಇತರ ದೇಶಗಳನ್ನು ಬಗ್ಗುಬಡಿಯಲು ಬಲಪ್ರಯೋಗಿಸುವುದಕ್ಕೆ ಬದಲಾಗಿ ಅನ್ಯದೇಶಗಳೊಂದಿಗೆ ರಾಜಕೀಯ ಮುತ್ಸದ್ದಿತನದಿಂದಲೂ ಸಂವಾದ ಮೂಲಕವೂ

ವಿವೇಕದಿಂದಲೂ ವರ್ತಿಸಬೇಕು. ಫ್ರಾನ್ಸಿನ ಹಾಗಿರುವ ಪ್ರಮುಖ ಶಕ್ತಿರಾಷ್ಟ್ರಗಳು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಕಾರ್ಯೋನ್ಮುಖವಾಗಬೇಕು. ಚಿಕ್ಕ ದೇಶಗಳ ಕೃತ್ಯಗಳನ್ನು ಶಾಂತಿಯನ್ನು ಕೆಡಿಸಲು ಆಧಾರವನ್ನಾಗಿ ಮಾಡಿಕೊಳ್ಳಬಾರದು. ಚಿಕ್ಕ ಮತ್ತು ದೊಡ್ಡ ದೇಶಗಳು ತೃತೀಯ ಜಾಗತಿಕ ಮಹಾಯುದ್ಧ ಸ್ಫೋಟಿಸದಂತೆ ಮಾಡಲು ಅತ್ಯಂತ ಹೆಚ್ಚು ಪರಿಶ್ರಮ ಪಡಬೇಕೆಂದು ನಾನು ನಿಮಗೆ ಇನ್ನೊಮ್ಮೆ ನೆನಪಿಸಿಕೊಡುತ್ತೇನೆ. ಯುದ್ಧವನ್ನು ತಡೆಗಟ್ಟುವ ನಮ್ಮ ಪ್ರಯತ್ನದಲ್ಲಿ ನಾವು ಸೋತುಹೋದರೆ ಯುದ್ಧದ ಕೆಟ್ಟ ಪರಿಣಾಮಗಳು ಏಶಿಯಾದ ಬಡದೇಶಗಳನ್ನು, ಯುರೋಪು ಮತ್ತು ಅಮೇರಿಕವನ್ನು ಮಾತ್ರವಲ್ಲ, ನಮ್ಮ ಮುಂದಿನ ಪೀಳಿಗೆಗಳನ್ನು ಅದರ ಭಯಾನಕ ಪರಿಣಾಮಗಳು ಬಾಧಿಸುವುವು ಮತ್ತು ವಿಶ್ವದ ಎಲ್ಲಾ ಕಡೆಗಳಲ್ಲೂ ಮಕ್ಕಳು ಅಂಗವಿಕಲರಾಗಿ ಹುಟ್ಟುವರು. ವಿಶ್ವದ ವಿವಿಧ ದೇಶಗಳ ನೇತಾರರು ವಿವೇಕದಿಂದ ವರ್ತಿಸಬೇಕೆಂದೂ ದೇಶಗಳ ಮತ್ತು ಜನಾಂಗಗಳ ಮಧ್ಯೆ ಚಿಕ್ಕಮಟ್ಟದಲ್ಲಿ ಇರುವ ಹಗೆತನವು ಇನ್ನೊಂದು ಜಾಗತಿಕ ಸಂಘರ್ಷಕ್ಕೆ ನಾಂದಿಯಾಗದಿರಲಿ ಎಂದೂ ಪ್ರಾರ್ಥಿಸುತ್ತೇನೆ. ನೀವು ಮತ್ತು ಲೋಕದ ಎಲ್ಲಾ ಜಾಗತಿಕ ನೇತಾರರು ನನ್ನ ಸಂದೇಶವನ್ನು ಮನವರಿಕೆಮಾಡಿಕೊಳ್ಳುವ ಭಾಗ್ಯವನ್ನು ಸರ್ವೋನ್ನತನಾದ ದೇವನು ಅನುಗ್ರಹಿಸಿಕೊಡಲಿ.

ಶುಭಾಶಯ ಮತ್ತು ಪ್ರಾರ್ಥನೆಯೊಂದಿಗೆ.

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ಜಾಗತಿಕ ನಾಯಕ

---

## ಚೀನದ ಪ್ರಧಾನ ಮಂತ್ರಿ ವೆನ್ ಜಿಯಬಾವೋರಿಗೆ ಪತ್ರ

9 ಎಪ್ರಿಲ್ 2012



ಪ್ರಿಯ ಪ್ರಧಾನಮಂತ್ರಿಯವರೇ,

ನಾನು ಈ ಪತ್ರವನ್ನು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನಮ್ಮ ಒಬ್ಬ ಪ್ರತಿನಿಧಿ ಮೂಲಕ ನಿಮಗೆ ಕಳುಹಿಸುತ್ತಿದ್ದೇನೆ. ಅವರು ಇಸ್ರಾಯೇಲ್ ದೇಶದ ಕಬಾಬೀರ್‌ನಲ್ಲಿರುವ ನಮ್ಮ ಜಮಾಅತ್ ಶಾಖೆಯ ಅಧ್ಯಕ್ಷರಾಗಿದ್ದಾರೆ. ಅವರನ್ನು ಚೀನದ ಅಲ್ಪಸಂಖ್ಯಾತರ ಖಾತೆಯ ಮಂತ್ರಿ ಚೀನಕ್ಕೆ ಆಮಂತ್ರಿಸಿದ್ದಾರೆ. ಚೀನದಿಂದ ಇಸ್ರಾಯೇಲ್‌ಗೆ ಬಂದ ಒಂದು ಪ್ರತಿನಿಧಿ ಸಂಘದಲ್ಲಿ ಚೀನದ ಅಲ್ಪಸಂಖ್ಯಾತರ ಖಾತೆಯ ಉಪಮಂತ್ರಿ ಸಹ ಇದ್ದರು. ಆ ಪ್ರತಿನಿಧಿ ಸಂಘ ಕಬಾಬೀರ್‌ನಲ್ಲಿರುವ ನಮ್ಮ ಮಿಶನ್ ಹೌಸನ್ನು ಸಂದರ್ಶಿಸಿತ್ತು. ನಾನು ಬರೆದ ಪತ್ರವನ್ನು ನಿಮಗೆ ತಲಪಿಸುವ ವ್ಯಕ್ತಿಯನ್ನು ಆ ಪ್ರತಿನಿಧಿ ಸಂಘಕ್ಕೆ ಪರಿಚಯಿಸಲಾಗಿತ್ತು.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮ್ ಧರ್ಮಕ್ಕೆ ಸೇರಿದ ಒಂದು ಪಂಗಡವಾಗಿದೆ. ಮುಸ್ಲಿಮರಿಗೆ ಮಾರ್ಗದರ್ಶನ ನೀಡಲು ಮಹ್‌ದಿಯಾಗಿ, ಕ್ರೈಸ್ತರಿಗೆ ಮಾರ್ಗದರ್ಶನ ನೀಡಲು ಮಸೀಹರಾಗಿ ಮತ್ತು ಮಾನವರೆಲ್ಲರಿಗೂ ಮಾರ್ಗದರ್ಶಕರಾಗಿ ಒಬ್ಬ ಮಹಾಪುರುಷರು ಆಗಮಿಸುವರೆಂದು ಪುಣ್ಯ ಪ್ರವಾದಿ ಮುಹಮ್ಮದರು[ಸ] ಭವಿಷ್ಯ ನುಡಿದ ಹಾಗೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದರು[ಅ] ಭಾರತದ ಖಾದಿಯಾನ್‌ನಲ್ಲಿ ಆಗಮಿಸಿದರೆಂದು ನಾವು ನಂಬುತ್ತೇವೆ. ಸರ್ವಶಕ್ತನಾದ ಸೃಷ್ಟಿಕರ್ತನ ಆಜ್ಞೆ ಪ್ರಕಾರ ಅವರು 1889ರಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಸ್ಥಾಪಿಸಿದರು. ಅವರು ಮೃತರಾಗುವುದರೊಳಗೆ ಲಕ್ಷಾಂತರ ಜನರು ಅವರು ಸ್ಥಾಪಿಸಿದ ಜಮಾಅತಿಗೆ ಸೇರಿದರು. ಅವರು ನಿಧನ ಹೊಂದಿದ ನಂತರ ಖಿಲಾಫತ್ ವ್ಯವಸ್ಥೆ ಈ ಜಮಾಅತ್‌ನಲ್ಲಿ ಸ್ಥಾಪಿತವಾಯಿತು. ನಾವು ಈಗ ಪಂಚಮ ಖಲೀಫರ ಕಾಲಘಟ್ಟದಲ್ಲಿದ್ದೇವೆ. ನಾನು ವಾಗ್ದತ್ತ ಮಸೀಹರ ಪಂಚಮ ಖಲೀಫ ಆಗಿರುವೆನು. ಅತ್ಯಂತ ಮುಖ್ಯವಾದ ಮತ್ತು ಮೂಲಭೂತವಾದ ನಮ್ಮ ತತ್ವವೇನೆಂದರೆ ಧಾರ್ಮಿಕ ಯುದ್ಧಗಳು ಕೊನೆಗೊಳ್ಳಬೇಕು. ಯಾರಾದರೂ ಒಂದು ಉಪದೇಶವನ್ನು ತಲಪಿಸಲು ಅಥವಾ ಪ್ರಚಾರ ಮಾಡಲು ಬಯಸುವುದಾದರೆ ಅವನು ಪ್ರೀತಿಯಿಂದಲೂ ಅನುಕಂಪಭರಿತವಾಗಿಯೂ ಭ್ರಾತೃತ್ವಭಾವನೆಯಿಂದಲೂ ಹಾಗೆ ಮಾಡಿ ಅವನು ಶಾಂತಿ, ಸಾಮರಸ್ಯ ಮತ್ತು ಸೌಹಾರ್ದವನ್ನು ಸ್ಥಾಪಿಸುವವನಾಗಬೇಕು ಎಂಧು ನಾವು ನಂಬುತ್ತೇವೆ. ಇಸ್ಲಾಮ್ ಧರ್ಮದ ಸತ್ಯವಾದ ಉಪದೇಶಗಳನ್ನು ಆಧಾರವಾಗಿ ಇಟ್ಟುಕೊಂಡು ಕೈಗೊಂಡ ಈ ನಿಲುವನ್ನು ಅಹ್ಮದಿಯಾ

ಮುಸ್ಲಿಮ್ ಸಂಘಟನೆ ಲೋಕದಾದ್ಯಂತ ಪ್ರಚಾರ ಮಾಡುತ್ತಾ ಇದೆ. ಈ ಸಂಘಟನೆ ಈಗ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿತವಾಗಿದ್ದು ಮಿಲಿಯಗಟ್ಟಲೆ ಅನುಯಾಯಿಗಳನ್ನು ಹೊಂದಿರುತ್ತದೆ.

ನಾನು ನಿಮಗೆ ಹೀಗೆ ಸಂದೇಶ ನೀಡಲು ಬಯಸುತ್ತೇನೆ: ಲೋಕವು ಈಗ ಅತ್ಯಂತ ಕಠಿಣ ಮತ್ತು ಅಪಾಯಕರ ಸ್ಥಿತಿಯಲ್ಲಿದೆ. ನಾವು ಇನ್ನೊಂದು ಜಾಗತಿಕ ಮಹಾಯುದ್ಧದ ಕಡೆಗೆ ವೇಗವಾಗಿ ಸಮೀಪಿಸುತ್ತಿರುವ ಹಾಗೆ ತೋರುತ್ತದೆ. ನೀವು ಒಂದು ಮಹಾಶಕ್ತಿ ರಾಷ್ಟ್ರದ ನೇತಾರರಾಗಿರುವಿರಿ. ಅಲ್ಲದೆ ಲೋಕದ ಜನಸಂಖ್ಯೆಯ ಬಹಳ ದೊಡ್ಡ ಒಂದು ಭಾಗ ನಿಮ್ಮ ದೇಶದಲ್ಲಿದೆ. ನೀವು ಯುನೈಟೆಡ್ ನೇಶನ್ಸ್ ಸಂಸ್ಥೆಯಲ್ಲಿ ವೀಟೋ ಅಧಿಕಾರ ಸಹ ಹೊಂದಿರುವಿರಿ. ಆದುದರಿಂದ ನಮ್ಮೆದುರು ಕಾಣಿಸುತ್ತಿರುವ ವಿನಾಶದಿಂದ ಲೋಕವನ್ನು ರಕ್ಷಿಸಲು ನೀವು ಪ್ರಯತ್ನ ಮಾಡಬೇಕು ಎಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ರಾಷ್ಟ್ರೀಯತೆ, ಧರ್ಮ, ಜಾತಿ ಮತ್ತು ವಿಶ್ವಾಸಗಳು ಹೇಗೆಯೇ ಇದ್ದಲ್ಲಿ ನಾವೆಲ್ಲರೂ ಒಗ್ಗೂಡಿ ಮಾನವರನ್ನು ರಕ್ಷಿಸಲು ಪರಿಶ್ರಮಪಡಬೇಕು.

ಚೀನದಲ್ಲಿ ಕ್ರಾಂತಿಯ ನಂತರ ಬಹಳ ಅಭಿವೃದ್ಧಿ ಮತ್ತು ಬದಲಾವಣೆಗಳು ಉಂಟಾಗಿವೆ. ನಿಮ್ಮ ಮಹಾ ನಾಯಕರಾದ ಮಾವೋ ತ್ಸೆ ತುಂಗ್ ಉನ್ನತ ನೈತಿಕ ಮಟ್ಟಕ್ಕೋಸ್ಕರ ಅಸ್ತಿಭಾರ ಹಾಕಿದ್ದರು. ಅದನ್ನು ಮಾನವೀಯ ಮೌಲ್ಯಗಳ ಅತ್ಯುತ್ಕೃಷ್ಟ ಮಟ್ಟ ಎಂದು ವರ್ಣಿಸಬಹುದು. ನೀವು ದೇವನ ಅಸ್ತಿತ್ವದ ಬಗ್ಗೆ ನಂಬಿಕೆ ಹೊಂದಿಲ್ಲವಾದರೂ ನೀವು ನೈತಿಕತೆಯ ಮೇಲೆ ನಿಮ್ಮ ಸಿದ್ಧಾಂತಗಳನ್ನು ರೂಪಿಸಿರುವಿರಿ. ಇಸ್ಲಾಮ್ ಧರ್ಮವು ಚಿತ್ರಿಸುವ ನಮ್ಮ ದೇವನು ಮಾನವರಿಗೆ ಪವಿತ್ರ ಖುರ್‌ಆನನ್ನು ಮಾರ್ಗದರ್ಶನವಾಗಿ ಅವತೀರ್ಣಗೊಳಿಸಿರುವನು. ನೀವು ಅನುಸರಿಸುವ ನೈತಿಕ ತತ್ವಗಳನ್ನು ಪವಿತ್ರ ಖುರ್‌ಆನ್ ಪ್ರತಿಪಾದಿಸುತ್ತದೆ. ಅವುಗಳಿಗಿಂತ ಹೆಚ್ಚು ಮಾರ್ಗದರ್ಶನಗಳನ್ನು ಅದು ನೀಡುತ್ತಿದೆ. ಮಾನವರ ಸುಸ್ಥಿರತೆಗೆ ಇರುವ ಮಾರ್ಗ ಮತ್ತು ಮಾನವೀಯ ಮೌಲ್ಯಗಳ ಸ್ಥಾಪನೆಯ ಬಗ್ಗೆ ಅದು ಸುಂದರವಾದ ಉಪದೇಶಗಳನ್ನು ನೀಡುತ್ತದೆ. ಲೋಕವು – ವಿಶಿಷ್ಟವಾಗಿ ಮುಸ್ಲಿಮ್ ಲೋಕ – ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಸರಿಸುವುದಾದರೆ ಎಲ್ಲಾ ಸಮಸ್ಯೆಗಳೂ ಸಂಘರ್ಷಗಳೂ ಪರಿಹರಿಸಲ್ಪಡುವುವು ಮತ್ತು ಶಾಂತಿ ಮತ್ತು ಸೌಹಾರ್ದದ ವಾತಾವರಣವು ಬೆಳೆಯಿಸಲ್ಪಡುವುದು.

ಇಂದಿನ ಕಾಲದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಲೋಕದ ಪ್ರತಿಯೊಂದು ಪ್ರದೇಶದಲ್ಲಿ ಕಾರ್ಯನಿರತವಾಗಿದೆ. ನಮ್ಮ ಶಾಂತಿ ವಿಚಾರಗೋಷ್ಠಿಗಳ ಮೂಲಕ ಮತ್ತು ವಿವಿಧ ಶ್ರೇಣಿಯ ಜನರೊಂದಿಗೆ ಮತ್ತು ವಿವಿಧ ಉದ್ಯೋಗಗಳ ಜನರೊಂದಿಗೆ ನಾನು ಏರ್ಪಡಿಸಿದ ಸಭೆಗಳಲ್ಲಿ ನಾನು ಲೋಕದ ಜನರಿಗೆ ಈ ಮುಖ್ಯ ಉದ್ದೇಶಲಕ್ಷ್ಯದ ಬಗ್ಗೆ ನೆನಪಿಸಿಕೊಡುತ್ತಿದ್ದೇನೆ. ಲೋಕದ ವಿವಿಧ ದೇಶಗಳ ನಾಯಕರು ವಿವೇಕದಿಂದ ವರ್ತಿಸುವವರಾಗಬೇಕೆಂದೂ ದೇಶಗಳ ಮತ್ತು ಜನಾಂಗಗಳ ಮಧ್ಯೆ ತಲೆದೋರಿರುವ ಚಿಕ್ಕ ಸಂಘರ್ಷಗಳು ಜಾಗತಿಕ ಸಂಘರ್ಷವಾಗಿ ಸ್ಫೋಟಿಸದಿರಲಿ ಎಂದೂ ನಾನು ಪ್ರಾರ್ಥಿಸುತ್ತೇನೆ. ಲೋಕದ ಬಹಳ ದೊಡ್ಡ ಶಕ್ತಿ ರಾಷ್ಟ್ರವಾದ ನೀವು ಜಾಗತಿಕ ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕೆಂದು ನಾನು ನಿಮ್ಮನ್ನು ಕೋರುತ್ತೇನೆ. ಒಂದು ಜಾಗತಿಕ ಮಹಾಯುದ್ಧದ ಭೀಕರ ಪರಿಣಾಮಗಳಿಂದ ನೀವು ಲೋಕವನ್ನು ರಕ್ಷಿಸಿರಿ. ಅಂತಹ ಯುದ್ಧ ಪ್ರಾರಂಭವಾದರೆ ಅದು ಅಣು ಅಸ್ತ್ರಗಳನ್ನು ಬಳಸಿ ಕೊನೆಗೊಳ್ಳುವುದು. ಅಣು ಬಾಂಬು ಬಳಸಿದರೆ ಕೆಲವು ದೇಶಗಳ ಪ್ರದೇಶಗಳೇ ಭೂಮಿಯಿಂದ ಅಳಿಸಿ ಹೋಗುವುವು. ಅಣು ಅಸ್ತ್ರ ಬಳಸಲಾದ ಯುದ್ಧದ ಪರಿಣಾಮ ಆ ಕಾಲಘಟ್ಟದ ವಿನಾಶಕ್ಕೆ ಸೀಮಿತವಾಗಿರದೆ ಅದರ ದೂರಗಾಮಿ ಪರಿಣಾಮದಿಂದ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಜನಿಸುವುವು. ಆದುದರಿಂದ ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳನ್ನೂ ಸಂಪನ್ಮೂಲಗಳನ್ನೂ ಮಾನವರನ್ನು ಇಂತಹ ಭಯಾನಕ ಪರಿಣಾಮಗಳಿಂದ ರಕ್ಷಿಸಲು ವಿನಿಯೋಗಿಸಿರಿ. ನೀವು ಹೀಗೆ ವರ್ತಿಸಿದರೆ ಅದು ನಿಮ್ಮ ದೇಶಕ್ಕೆ ಸಹ ಹಿತಕಾರಿಯಾಗುವುದು. ಲೋಕದ ಚಿಕ್ಕ ಮತ್ತು ದೊಡ್ಡದಾದ ಎಲ್ಲಾ ದೇಶಗಳು ನನ್ನ ಈ ಸಂದೇಶವನ್ನು ಮನವರಿಕೆ ಮಾಡುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶುಭಾಶಯಗಳು ಮತ್ತು ಪ್ರಾರ್ಥನೆಯೊಂದಿಗೆ

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ಜಾಗತಿಕ ನಾಯಕ

# ಸೌದಿ ಅರೇಬಿಯಾದ ದೊರೆ ಅಬ್ದುಲ್ಲಾ ಬಿನ್ ಅಬ್ದುಲ್ ಅಝೀಝ್ ಅಸ್ಸೌದ್‌ರಿಗೆ ಪತ್ರ

28 ಮಾರ್ಚ್ 2012



ಬಹುಮಾನ್ಯರಾದ ದೊರೆ ಅಬ್ದುಲ್ಲಾರಿಗೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ.

ಇಸ್ಲಾಮಿನ ಎರಡು ಪವಿತ್ರ ಕ್ಷೇತ್ರಗಳ ಪರಿಪಾಲಕರಾದ ನೀವು ಮುಸ್ಲಿಮ್ ಸಮುದಾಯದಲ್ಲಿ ಬಹಳ ಉನ್ನತ ಸ್ಥಾನವನ್ನು ಹೊಂದಿರುವಿರಿ. ನಾನು ನಿಮಗೆ ಒಂದು ಮುಖ್ಯ ವಿಷಯದ ಬಗ್ಗೆ ಬರೆಯಲು ಇಚ್ಛಿಸುತ್ತಿದ್ದೇನೆ. ನಿಮ್ಮ ದೇಶದಲ್ಲಿ ಮುಸ್ಲಿಮರ ಎರಡು ಪವಿತ್ರ ಕ್ಷೇತ್ರಗಳಾದ ಮಕ್ಕತುಲ್ ಮುಕರ್ರಮ ಮತ್ತು ಮದೀನತುಲ್ ಮುನವ್ವರ ಇವೆ. ಅವುಗಳನ್ನು ಪ್ರೀತಿಯಿಂದ ಕಾಣುವುದು ಮುಸ್ಲಿಮರ ವಿಶ್ವಾಸದ ಭಾಗವಾಗಿದೆ. ಇವೆರಡು ಕ್ಷೇತ್ರಗಳು ಮುಸ್ಲಿಮರ ಆಧ್ಯಾತ್ಮಿಕ ಅಭಿವೃದ್ಧಿಯ ಕೇಂದ್ರಗಳಾಗಿದ್ದು ಇವುಗಳನ್ನು ಮುಸ್ಲಿಮರು ಬಹಳ ಆದರ ಭಾವದಿಂದ ಕಾಣುತ್ತಾರೆ. ಈ ಕಾರಣದಿಂದ ಎಲ್ಲಾ ಮುಸ್ಲಿಮರು ಮತ್ತು ಮುಸ್ಲಿಮ್ ದೇಶಗಳ ಸರಕಾರಗಳು ನಿಮಗೆ ಉನ್ನತ ಪದವಿಯನ್ನು ನೀಡಿರುತ್ತಾರೆ. ಈ ಪದವಿಯನ್ನು ಹೊಂದಿದ ನೀವು ಮುಸ್ಲಿಮ್ ಸಮುದಾಯಕ್ಕೆ ಸರಿಯಾದ ಮಾರ್ಗದರ್ಶನದ ನೀಡುವ ಮತ್ತು ಮುಸ್ಲಿಮ್ ದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದದ ವಾತಾವರಣವನ್ನು ಉಂಟುಮಾಡಲು ಪ್ರಯತ್ನಿಸುವ ಜವಾಬ್ದಾರಿಯನ್ನು ಹೊಂದಿರುವಿರಿ. ಮುಸ್ಲಿಮರು ಪರಸ್ಪರ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸುವಂತೆ ಮಾಡಲು ಮತ್ತು ಪವಿತ್ರ ಖುರ್‌ಆನ್ ವಿವರಿಸಿದ ಹಾಗೆ "ರುಹಮಾವು ಬೈನಹುಮ್" – ಪರಸ್ಪರ ದಯೆದೋರುವವರಾಗಿ ವರ್ತಿಸುವಂತೆ ಮಾಡಲು ಸಹ ನೀವು ಪ್ರಯತ್ನಿಸಬೇಕು.

ಎಲ್ಲಕ್ಕಿಂತ ಮಿಗಿಲಾಗಿ, ಲೋಕದಾದ್ಯಂತ ಶಾಂತಿಯನ್ನು ಮಾನವರ ಹಿತಕ್ಕೋಸ್ಕರ ಸ್ಥಾಪಿಸಲು ಸಹ ನೀವು ಪ್ರಯತ್ನಿಸಬೇಕು. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರನೂ ವಾಗ್ದತ್ತ ಮಸೀಹರ ಮತ್ತು ಇಮಾಮ್ ಮಹ್‌ದಿಯ[ಅ] ಖಲೀಫನಾದ ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಇತರ ಮುಸ್ಲಿಮರ ಮಧ್ಯೆ ಧಾರ್ಮಿಕ ವಿಶ್ವಾಸಗಳ ಬಗ್ಗೆ ಅಭಿಪ್ರಾಯ ವ್ಯತ್ಯಾಸಗಳಿದ್ದರೂ ಮುಸ್ಲಿಮ್ ಸಮುದಾಯಕ್ಕೆ ಸೇರಿದ ನಾವೆಲ್ಲರೂ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಒಗ್ಗೂಡಬೇಕು. ಪ್ರೀತಿ ಮತ್ತು ಶಾಂತಿಯನ್ನು ಪ್ರತಿಪಾದಿಸುವ ನೈಜ ಇಸ್ಲಾಮೀ ತತ್ವಗಳನ್ನು ಲೋಕದ ಜನರಿಗೆ ತಿಳಿಸಿಕೊಡಲು ನಾವು ನಮ್ಮ ಸಾಮರ್ಥ್ಯಗಳನ್ನು ಚೆನ್ನಾಗಿ ಬಳಸಿ ಪ್ರಯತ್ನ ಮಾಡಬೇಕು. ನಾವು ಈ ರೀತಿ ವರ್ತಿಸಿ ಪಶ್ಚಿಮ ದೇಶಗಳಲ್ಲೂ ಲೋಕದ ಇತರೆಡೆಗಳಲ್ಲೂ ಇರುವ ಜನರು ಇಸ್ಲಾಮಿನ ಬಗ್ಗೆ ಹೊಂದಿರುವ ತಪ್ಪುಗ್ರಹಿಕೆಗಳನ್ನು ದೂರೀಕರಿಸಬಹುದು. ಇತರ ದೇಶಗಳ ಅಥವಾ ಗುಂಪುಗಳ ವಿರುದ್ಧ ಇರುವ ಹಗೆತನವು ನಮ್ಮನ್ನು ನ್ಯಾಯರಹಿತವಾಗಿ ವರ್ತಿಸಲು ಪ್ರೇರೇಪಿಸಬಾರದು. ಪವಿತ್ರ ಖುರ್‌ಆನಿನ ಅಲ್‌ಮಾಯಿದ ಅಧ್ಯಾಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

***"ಒಂದು ಜನತೆ ನಿಮ್ಮನ್ನು ಪವಿತ್ರ ಮಸ್‌ಜಿದ್‌ನಿಂದ ತಡೆಗಟ್ಟಿ ನಿಮ್ಮೊಡನೆ ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸುವರೆ ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. ಆದರೆ ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿಯೂ ಶಿಕ್ಷಿಸುವವನಾಗಿದ್ದಾನೆ." (5:3)***

ಇದು ನಾವು ಯಾವಾಗಲೂ ನಮ್ಮ ದೃಷ್ಟಿಯ ಮುಂದಿರಿಸಬೇಕಾದ ಮಾರ್ಗದರ್ಶಕ ತತ್ವವಾಗಿದ್ದು ಇದರ ಮೂಲಕ ನಾವು ಇಸ್ಲಾಮಿನ ಸುಂದರ ಚಿತ್ರವನ್ನು ಲೋಕದ ಮುಂದಿರಿಸಬಹುದಾಗಿದೆ. ಹೃತ್ಪೂರ್ವಕ ಪ್ರೀತಿ ಮತ್ತು ಎಲ್ಲಾ ಮುಸ್ಲಿಮರ ಬಗ್ಗೆ ತೀವ್ರ ಅನುಕಂಪವನ್ನು ಹೊಂದಿ ನಾನು ನಿಮ್ಮೊಂದಿಗೆ ಇದರ ಬಗ್ಗೆ ನಿಮ್ಮ ಜವಾಬ್ದಾರಿ ನಿರ್ವಹಿಸಲು ಅಪೇಕ್ಷಿಸುತ್ತಾ ಇದ್ದೇನೆ.

ಇಂದಿನ ಕಾಲದಲ್ಲಿ ಲೋಕದಲ್ಲಿ ಕೆಲವು ರಾಜಕಾರಣಿಗಳು ಮತ್ತು ವಿದ್ವಾಂಸರೆಂದು ಹೇಳಿಕೊಳ್ಳುವವರು ಹಝ್ರತ್ ಪ್ರವಾದಿಯವರನ್ನು[ಸ] ಅಪಮಾನಿಸಿ ಇಸ್ಲಾಮಿನ ವಿರುದ್ಧ ದ್ವೇಷದ ಬೀಜಗಳನ್ನು ಬಿತ್ತುತ್ತಾ ಇದ್ದಾರೆ. ಅವರು ತಮ್ಮ ಗುರಿಯನ್ನು ಸಾಧಿಸಲು ಪವಿತ್ರ ಖುರ್‌ಆನಿನ ಉಪದೇಶಗಳ ಬಗ್ಗೆ ಸಂಪೂರ್ಣ ವಿಕೃತವಾದ ವ್ಯಾಖ್ಯಾನಗಳನ್ನು ನೀಡುತ್ತಾ ಇದ್ದಾರೆ.

ಇದಲ್ಲದೆ ಪಾಲೆಸ್ತೀನ್ ಮತ್ತು ಇಸ್ರಾಯೇಲ್ ಮಧ್ಯೆ ಸಂಘರ್ಷಗಳು ವರ್ಧಿಸುತ್ತಾ ಇವೆ. ಮಾತ್ರವಲ್ಲ, ಇಸ್ರಾಯೇಲ್ ಮತ್ತು ಇರಾನಿನ ಮಧ್ಯೆ ಹಗೆತನವು ವರ್ಧಿಸಿ ಅವರ ಪರಸ್ಪರ ಸಂಬಂಧವು ತೀವ್ರವಾಗಿ ಮುರಿದು ಹಾಕಲ್ಪಟ್ಟಿದೆ. ಇಂತಹ ಸಂದರ್ಭದಲ್ಲಿ ಮುಸ್ಲಿಮ್ ಸಮುದಾಯದ ಅತ್ಯಂತ ಪ್ರಮುಖ ನೇತಾರರಾದ ನೀವು ಈ ಜಗಳಗಳನ್ನು ನ್ಯಾಯ ಮತ್ತು ಸಮತೋಲನ ದೃಷ್ಟಿಯಿಂದ ಬಗೆಹರಿಸಲು ಪ್ರತಿಯೊಂದು ರೀತಿಯ ಪ್ರಯತ್ನಗಳನ್ನು ಮಾಡಬೇಕು. ಇಸ್ಲಾಮ್ ವಿರುದ್ಧ ಎಲ್ಲೆಲ್ಲಿ ದ್ವೇಷವು ಪ್ರಕಟಗೊಳ್ಳುತ್ತಿದೆಯೋ ಅಲ್ಲೆಲ್ಲಾ ಅದನ್ನು ನಿವಾರಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರಯತ್ನಿಸುತ್ತಾ ಇರುತ್ತದೆ. ಮುಸ್ಲಿಮರು ಎಲ್ಲರೂ ಒಗ್ಗೂಡಿ ಇದರ ಬಗ್ಗೆ ಪ್ರಯತ್ನ ಮಾಡಲು ಮುಂದಾಗದಿದ್ದರೆ ಲೋಕದಲ್ಲಿ ಶಾಂತಿಯು ಎಂದೂ ಸ್ಥಾಪಿತವಾಗಲಾರದು.

ನೀವು ಇದರ ಬಗ್ಗೆ ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಬೇಕೆಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ತೃತೀಯ ಜಾಗತಿಕ ಮಹಾಯುದ್ಧವು ವಿಧಿಸಲ್ಪಟ್ಟಿದ್ದರೆ ಅದು ಯಾವುದೇ ಮುಸ್ಲಿಮ್ ದೇಶದಲ್ಲಿ ಆರಂಭವಾಗದಿರಲು ನಾವು ಪ್ರಯತ್ನಿಸಬೇಕು. ಮುಸ್ಲಿಮ್ ದೇಶ ಅಥವಾ ಮುಸ್ಲಿಮ್ ವ್ಯಕ್ತಿ ಲೋಕದಲ್ಲಿ ಎಲ್ಲಿಯಾದರೂ ಇಂದು ಅಥವಾ ಮುಂದಿನ ಕಾಲದಲ್ಲಿ ಮಹಾಯುದ್ಧದ ಕಿಡಿ ಹೊತ್ತಿಸಿದುದರ ಅಪವಾದದ ಜವಾಬ್ದಾರಿಯನ್ನು ಹೊರಲು ಇಚ್ಛಿಸಲಾರನು. ಮಹಾಯುದ್ಧವು ಪ್ರಾರಂಭವಾಗುವುದಾದರೆ ಅಣು ಅಸ್ತ್ರಗಳು ಬಳಸಲ್ಪಡುವುವು ಮತ್ತು ಅದರ ಪರಿಣಾಮವಾಗಿ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಜನಿಸುವುವು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಎರಡು ನಗರಗಳ ಮೇಲೆ ಅಣು ಬಾಂಬು ದಾಳಿಯಿಂದ ಉಂಟಾದ ಘೋರ ವಿನಾಶನ ಬಗ್ಗೆ ನಾವು ಅರಿತಿರುವೆವು.

ಆದುದರಿಂದ ಓ, ಸೌದಿ ಅರೇಬಿಯಾದ ದೊರೆಯವರೇ, ನೀವು ನಿಮ್ಮ ಎಲ್ಲಾ ಶಕ್ತಿ ಮತ್ತು ಪ್ರಭಾವವನ್ನು, ಲೋಕವನ್ನು ಈ ಸಂಪೂರ್ಣ ವಿನಾಶದಿಂದ ರಕ್ಷಿಸಲು ಪ್ರಯತ್ನಿಸಿರಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ಸಹಾಯವನ್ನೂ ಅನುಗ್ರಹವನ್ನೂ ನೀಡಲಿ. ಆಮೀನ್.

ನಿಮಗೆ ಮತ್ತು ಸರ್ವ ಮುಸ್ಲಿಮರಿಗೂ ಪ್ರಾರ್ಥನೆಯೊಂದಿಗೆ:

ಓ ಅಲ್ಲಾಹ್, ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು.

ವಸ್ಸಲಾಮ್

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ.

---

# ಅಹ್ಮದಿಯಾ ಖಲೀಫರಾದ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರು ಬ್ರಿಟಿಷ್ ಮಹಾರಾಣಿ ದ್ವಿತೀಯ ಎಲಿಝಬೆತ್‌ರಿಗೆ ಅವರ ಪಟ್ಟಾಭಿಷೇಕದ ವಜ್ರ ಜೂಬಿಲಿ ಸಮಾರಂಭದ ಸಂದರ್ಭ ಬರೆದ ಪತ್ರ

19 ಎಪ್ರಿಲ್ 2012



ಘನವೆತ್ತ ಮಹಾರಾಣಿಯವರೇ,

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮಿಲಿಯಗಟ್ಟಲೆ ಜನರ ಪರವಾಗಿ ಅವರ ಜಾಗತಿಕ ಸರ್ವೋಚ್ಚ ನಾಯಕನಾದ ನಾನು ಮಹಾರಾಣಿಯವರ ಪಟ್ಟಾಭಿಷೇಕದ ವಜ್ರ ಜೂಬಿಲಿಯ ಸಂತೋಷದಾಯಕವಾದ ಈ ಸಂದರ್ಭದಲ್ಲಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸೂಚಿಸುತ್ತಿದ್ದೇನೆ. ಈ ವೈಭವಶಾಲಿ ಸಮಾರಂಭದಲ್ಲಿ ಭಾಗವಹಿಸಲು ನಮಗೆ ಸರ್ವಶಕ್ತನಾದ ದೇವನು ನೀಡಿದ ಭಾಗ್ಯಕ್ಕೋಸ್ಕರ ನಾವು ಅವನಿಗೆ ವಿಶಿಷ್ಟವಾಗಿ ಕೃತಜ್ಞರಾಗಿದ್ದೇವೆ. ವಿಶೇಷವಾಗಿ ಯುನೈಟೆಡ್ ಕಿಂಗ್‌ಡಮ್ ನಾಗರಿಕರಾದ ಅಹ್ಮದೀ ಮುಸ್ಲಿಮರು ಈ ವಜ್ರ ಜೂಬಿಲಿ ಸಮಾರಂಭದಲ್ಲಿ ಭಾಗವಹಿಸಿ ಬಹಳ ಅಭಿಮಾನದಿಂದ ಸಂತೋಷಗೊಂಡಿರುವರು. ಆದುದರಿಂದ ಅವರೆಲ್ಲರ ಪರವಾಗಿ ನಾನು ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು

ಘನವೆತ್ತ ಮಹಾರಾಣಿಯವರಿಗೆ ತಲಪಿಸುತ್ತೇನೆ. ಮಹೋನ್ನತನಾದ ದೇವನು ಔದಾರ್ಯವಂತೆಯಾದ ನಮ್ಮ ಮಹಾರಾಣಿಯನ್ನು ಶಾಶ್ವತವಾದ ಸುಖ ಮತ್ತು ಸಮಾಧಾನದಲ್ಲಿ ಕಾಪಾಡಲಿ.

ಭೂಮ್ಯಾಕಾಶಗಳನ್ನು ಸೃಷ್ಟಿಸಿ ನಮ್ಮ ಜೀವಿತಕ್ಕೆ ಸಂಖ್ಯಾತೀತ ಅನುಗ್ರಹಗಳನ್ನು ಒದಗಿಸಿಕೊಟ್ಟ ಸರ್ವಶಕ್ತನಾದ ವೈಭವಶಾಲಿ ದೇವನು, ಅನೇಕ ಪರಮಾಧಿಕಾರ ಹೊಂದಿದ ದೇಶಗಳ ಮತ್ತು ಕಾಮನ್‌ವೆಲ್ತ್ ದೇಶಗಳ ಮುಖ್ಯಸ್ಥೆಯಾದ ಔದಾರ್ಯವಂತೆಯಾದ ನಮ್ಮ ಮಹಾರಾಣಿಗೆ ಶಾಂತಿ, ನೆಮ್ಮದಿ ಮತ್ತು ಸಂರಕ್ಷಣೆಯನ್ನು ದಯಪಾಲಿಸಲಿ. ಘನವೆತ್ತ ಮಹಾರಾಣಿ ಹಿರಿಯರೂ ಕಿರಿಯರೂ ಆಗಿರುವ ಪ್ರಜೆಗಳಿಂದ ಪ್ರೀತಿಸಲ್ಪಟ್ಟು ಗೌರವಿಸಲ್ಪಡುವ ಹಾಗೆ ದೇವದೂತರಿಂದಲೂ ಪ್ರೀತಿಸಲ್ಪಡಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಸರ್ವಶಕ್ತನೂ ಪ್ರತಾಪಶಾಲಿಯೂ ಆಗಿರುವ ದೇವನು ಘನವೆತ್ತ ಮಹಾರಾಣಿಗೆ ಅಗಣಿತ ಲೌಕಿಕ ಅನುಗ್ರಹಗಳನ್ನು ನೀಡಿದ ಹಾಗೆ ಸಂಖ್ಯಾತೀತ ಆಧ್ಯಾತ್ಮಿಕ ಅನುಗ್ರಹಗಳನ್ನೂ ವರದಾನಗಳನ್ನೂ ನೀಡುವವನಾಗಲಿ. ಈ ವರದಾನಗಳನ್ನು ಪಡೆದು ಈ ಮಹಾನ್ ದೇಶದ ನಾಗರಿಕರು ಸರ್ವೋನ್ನತನಾದ ಒಡೆಯನನ್ನು ಗುರುತಿಸಿ ಪರಸ್ಪರ ಪ್ರೀತಿ ವಾತ್ಸಲ್ಯಗಳನ್ನು ಹೊಂದಿ ಜೀವಿಸುವಂತಾಗಲಿ. ವರ್ಣ, ವಿಶ್ವಾಸ, ಜನಾಂಗ ಮತ್ತು ಧರ್ಮ ಇವುಗಳ ವ್ಯತ್ಯಾಸವನ್ನು ಪರಿಗಣಿಸದೆ ಯುನೈಟೆಡ್ ಕಿಂಗ್‌ಡಮಿನ ಎಲ್ಲಾ ನಾಗರಿಕರು ಪರಸ್ಪರ ಗೌರವ ಹೊಂದಿ ಜೀವಿಸುತ್ತಾ ಅವರ ಈ ಮನೋಭಾವದ ಪ್ರಭಾವವು ಈ ದೇಶದ ಹೊರಗೆ ವಿಶ್ವದ ಅನ್ಯದೇಶಗಳ ಪ್ರಜೆಗಳ ಮೇಲೆ ಸಹ ಬೀರುವಂತಾಗಲಿ. ಇಂದು ಲೋಕದ ಅನೇಕ ಪ್ರದೇಶಗಳು ಯುದ್ಧಗಳಿಂದಲೂ ಗಲಭೆಗೊಂದಲಗಳಿಂದಲೂ ದ್ವೇಷಾಸೂಯೆ ಗಳಿಂದಲೂ ಪೀಡಿತವಾಗಿದ್ದು ಅದಕ್ಕೆದುರಾಗಿ ಆ ಪ್ರದೇಶಗಳು ಶಾಂತಿ, ಭ್ರಾತೃತ್ವ ಮತ್ತು ಪ್ರೀತಿಯ ಧಾಮವಾಗಲಿ ಎಂದು ಆಶಿಸುತ್ತೇವೆ. ಘನವೆತ್ತ ಮಹಾರಾಣಿಯ ದೂರದೃಷ್ಟಿ ಮತ್ತು ಪ್ರಯತ್ನಗಳು ಈ ತುರ್ತು ಆವಶ್ಯಕತೆಯನ್ನು ಈಡೇರಿಸುವ ವಿಷಯದಲ್ಲಿ ಮುಖ್ಯ ಪಾತ್ರ ವಹಿಸಬಲ್ಲದು ಎಂದು ನಾನು ದೃಢವಾಗಿ ನಂಬುತ್ತೇನೆ.

ಕಳೆದ ಶತಮಾನದಲ್ಲಿ ನಡೆದ ಎರಡು ಜಾಗತಿಕ ಮಹಾಯುದ್ಧಗಳಲ್ಲಿ ಮಿಲಿಯಗಟ್ಟಲೆ ಜನರು ಹತರಾದರು. ಈಗ ವಿವಿಧ ದೇಶಗಳ ಮಧ್ಯೆ ಇರುವ ಬೇಗುದಿಗಳು ವರ್ಧಿಸುತ್ತಾ ಹೋದರೆ ಕೊನೆಗೆ ಇನ್ನೊಂದು ಮಹಾಯುದ್ಧಕ್ಕೆ ಅವು ಹೇತುವಾಗಬಲ್ಲವು. ಮುಂದೆ ಸಂಭವಿಸಬಹುದಾದ ಮಹಾಯುದ್ಧದಲ್ಲಿ ಅಣ್ವಸ್ತ್ರಗಳ ಬಳಕೆಯಾಗಬಹುದಾದ ಕಾರಣ ಹಿಂದೆ ಎಂದೂ ಸಂಭವಿಸದಷ್ಟು ದಾರುಣ ವಿನಾಶಗಳು ಸಂಭವಿಸುವುವು. ಸರ್ವೋನ್ನತನಾದ ದೇವನು ಇಂತಹ ಭೀಕರ ವಿನಾಶದಿಂದ ರಕ್ಷಿಸಲಿ ಮತ್ತು ಲೋಕದ ಎಲ್ಲಾ ಜನರು ಬುದ್ಧಿಯನ್ನೂ ವಿವೇಕವನ್ನೂ ಹೊಂದಲಿ. ನಾನು ವಿನೀತನಾಗಿ ಘನವೆತ್ತ ಮಹಾರಾಣಿಯೊಂದಿಗೆ ಅಪೇಕ್ಷಿಸುತ್ತೇನೆ. ವಜ್ರ ಜೂಬಿಲಿ ಸಮಾರಂಭಗಳ ಸಂದರ್ಭದಲ್ಲಿ ಮಾನವರೆಲ್ಲರ ಹಿತವನ್ನು ಬಯಸಿ ಚಿಕ್ಕ ಮತ್ತು ದೊಡ್ಡದಾದ ಎಲ್ಲಾ ದೇಶಗಳ ಜನರು ಪರಸ್ಪರ ಪ್ರೀತಿ, ಶಾಂತಿ ಮತ್ತು ಸೌಹಾರ್ದದೊಂದಿಗೆ ಜೀವಿಸುವ ಬಗ್ಗೆ ಅವರಿಗೆ ನೆನಪಿಸಿಕೊಡಬೇಕು.

ಈ ವಜ್ರ ಜೂಬಿಲಿ ಸಂದರ್ಭದಲ್ಲಿ ನಾನು ವಿನೀತನಾಗಿ ಇನ್ನೊಂದು ಅಪೇಕ್ಷೆ ಮಾಡಲು ಬಯಸುತ್ತೇನೆ. ಘನವೆತ್ತ ಮಹಾರಾಣಿಯವರು ಒಂದು ಜಾಗತಿಕ ಸಂದೇಶ ನೀಡಿ ಎಲ್ಲಾ ಧರ್ಮಗಳಿಗೆ ಸೇರಿದ ಜನರು ಮತ್ತು ದೇವವಿಶ್ವಾಸವಿಲ್ಲದವರು ಕೂಡ ಅನ್ಯ ಧರ್ಮದವರ ಭಾವನೆಗಳನ್ನು ಗೌರವಿಸಬೇಕೆಂದು ಸೂಚಿಸಬೇಕು. ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮದ ಬಗ್ಗೆ ಜಗತ್ತಿನಾದ್ಯಂತ ತಪ್ಪು ಗ್ರಹಿಕೆಗಳು ಜಾರಿಯಲ್ಲಿವೆ. ಈ ಕಾರಣದಿಂದ ಒಂದು ಕಡೆ ಶಾಂತಿ ಪ್ರಿಯರಾದ ಮುಸ್ಲಿಮರ ಭಾವನೆಗಳು ನೋಯಿಸಲ್ಪಡುತ್ತವೆ. ಇನ್ನೊಂದು ಕಡೆ ಮುಸ್ಲಿಮೇತರರ ಹೃದಯಗಳಲ್ಲಿ ಇಸ್ಲಾಮಿನ ಬಗ್ಗೆ ದ್ವೇಷ ಮತ್ತು ಅವಿಶ್ವಾಸ ವರ್ಧಿಸುತ್ತಾ ಇರುತ್ತದೆ. ಆದುದರಿಂದ ಮಹಾರಾಣಿಯವರು ವಿಶ್ವದ ಎಲ್ಲಾ ಜನರೊಂದಿಗೆ ಅನ್ಯ ಧರ್ಮಗಳನ್ನು ಮತ್ತು ಅವುಗಳ ಅನುಯಾಯಿಗಳನ್ನು ಗೌರವಿಸಲು ಸಲಹೆ ನೀಡುವುದಾದರೆ ಅದು ಘನವೆತ್ತ ಮಹಾರಾಣಿಯ ಔದಾರ್ಯಭರಿತ ವರ್ತನೆಯಾಗಿ ಅದು ಎಲ್ಲಾ ಧರ್ಮಗಳ ಜನರಿಗೆ ಹಿತಕರವಾಗುವುದು. ವೈಭವಶಾಲಿ ಒಡೆಯನಾದ ದೇವನು ಈ ಉದ್ದೇಶವನ್ನು ಈಡೇರಿಸಲು ನಮ್ಮ ಮಹಾರಾಣಿಗೆ ಸಹಾಯವನ್ನು ನೀಡಲಿ.

ಈ ಪತ್ರದ ಪ್ರಾರಂಭದಲ್ಲಿ ಸೂಚಿಸಿದ ಹಾಗೆ ನಾನು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ನೇತಾರನಾಗಿದ್ದೇನೆ. ಆದುದರಿಂದ ನಾನು ನಮ್ಮ ಸಂಘಟನೆಯ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲು ಬಯಸುತ್ತೇನೆ. ಪುಣ್ಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಮತ್ತು ಅನುಗ್ರಹ ಇರಲಿ) ಮತ್ತು ಹಿಂದಿನ ಪ್ರವಾದಿಗಳು ಭವಿಷ್ಯ ನುಡಿದ ಪ್ರಕಾರ ಆಗಮಿಸಿದ ವಾಗ್ದತ್ತ

ಮಸೀಹ ಮತ್ತು ಸುಧಾರಕ ಖಾದಿಯಾನಿನ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ (ಅವರ ಮೇಲೆ ಶಾಂತಿ ಇರಲಿ) ಹೊರತು ಬೇರೆ ಯಾರೂ ಅಲ್ಲ ಎಂದು ಅಹ್ಮದಿಯಾ ಮುಸ್ಲಿಮ್ ಸಂಘಟನೆ ದೃಢವಾಗಿ ನಂಬುತ್ತದೆ. ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಮತ್ತು ಸಾತ್ವಿಕ ಸಂಘಟನೆಯನ್ನು 1899ರಲ್ಲಿ ಸ್ಥಾಪಿಸಿದರು. ಈ ಸಂಘಟನೆಯನ್ನು ಸ್ಥಾಪಿಸಿದುದರ ಉದ್ದೇಶ ಲಕ್ಷ್ಯ ಮನುಷ್ಯರ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪಿಸಿ ಮನುಷ್ಯರು ಪರಸ್ಪರ ಹಕ್ಕುಗಳನ್ನು ಈಡೇರಿಸಿ ಕೊಡುವಂತೆ ಮಾಡಿ, ಪರಸ್ಪರ ಗೌರವಭಾವ ಹೊಂದಿ, ಪರಸ್ಪರ ಹಿತಕಾಂಕ್ಷಿಗಳಾಗಿ ಜೀವಿಸುವಂತೆ ಮಾಡುವುದಾಗಿದೆ. ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ 1908ರಲ್ಲಿ ನಿಧನ ಹೊಂದುವಾಗ ಅವರ ಅನುಯಾಯಿಗಳ ಸಂಖ್ಯೆ ಅಂದಾಜು ನಾಲ್ಕು ಲಕ್ಷಕ್ಕೆ ತಲಪಿತ್ತು. ಅವರು ನಿಧನ ಹೊಂದಿದ ನಂತರ ದೈವಿಕ ನಿರ್ಧಾರ ಪ್ರಕಾರ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಯಿತು. ದೇವನ ಈ ವಿನೀತ ದಾಸನು ವಾಗ್ದತ್ತ ಮಸೀಹರ ಪಂಚಮ ಖಲೀಫ ಆಗಿರುವನು. ಈ ವ್ಯವಸ್ಥೆ ಮೂಲಕ ಅಹ್ಮದಿಯಾ ಮುಸ್ಲಿಮ್ ಸಂಘಟನೆ ತನ್ನ ಸ್ಥಾಪಕರ ಆಗಮನೋದ್ದೇಶಗಳನ್ನು ಈಡೇರಿಸಲು ಲೋಕದಾದ್ಯಂತ ಪರಿಶ್ರಮಪಡುತ್ತಿದೆ. ನಮ್ಮ ಸಂದೇಶ ಪ್ರೀತಿ, ಸೌಹಾರ್ದ ಮತ್ತು ಭ್ರಾತೃತ್ವವಾಗಿದೆ. ನಮ್ಮ ಘೋಷಣೆ "ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ" ಎಂದಾಗಿದೆ. ವಾಸ್ತವಿಕವಾಗಿ ಇದರಲ್ಲಿ ಇಸ್ಲಾಮಿನ ಸುಂದರ ಉಪದೇಶ ಸಂಕ್ಷಿಪ್ತವಾಗಿ ಅಡಕವಾಗಿದೆ.

ಸಂತೋಷಕರವಾದ ಒಂದು ಸಹ ಸಂಭವದ ಬಗ್ಗೆ ಪ್ರಸ್ತಾಪಿಸುವುದು ಸಮಂಜಸವಾಗಿದೆ ಎಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಜೀವಿಸಿದ್ದ ಕಾಲದಲ್ಲಿ ಘನವೆತ್ತ ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭ ಜರಗಿತು. ಆಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ತುಹ್‌ಫಯೆ ಖೈಸರಿಯ್ಯ (ಮಹಾರಾಣಿಗೊಂದು ಪಾರಿತೋಷಕ) ಎಂಬ ಪುಸ್ತಕ ಬರೆದು ಅದರಲ್ಲಿ ಸಂದೇಶ ನೀಡಿ ವಿಕ್ಟೋರಿಯಾ ಮಹಾರಾಣಿಯನ್ನು ಅಭಿನಂದಿಸಿದ್ದರು. ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದರು ತನ್ನ ಸಂದೇಶದಲ್ಲಿ ವಿಕ್ಟೋರಿಯಾ ಮಹಾರಾಣಿಯ ಆಡಳಿತೆಗೊಳಪಟ್ಟ ಭಾರತದ ಉಪ ಭೂಖಂಡ ಸಮೇತ ಎಲ್ಲಾ ದೇಶಗಳ ಪ್ರಜೆಗಳು ಅನುಭವಿಸುತ್ತಿರುವ ನ್ಯಾಯವ್ಯವಸ್ಥೆ ಮತ್ತು ಧಾರ್ಮಿಕ ಸ್ವಾತಂತ್ರ್ಯದಿಂದ ಶಾಂತಮಯ ಜೀವನವನ್ನು ನಡೆಸುವ ಬಗ್ಗೆ ಮಹಾರಾಣಿಯನ್ನು ಅಭಿನಂದಿಸಿದ್ದರು. ಅವರು ಇಸ್ಲಾಮಿನ ಸುಂದರ ಉಪದೇಶಗಳನ್ನು, ತನ್ನ ವಾದ ಮತ್ತು ಆಗಮನೋದ್ದೇಶವನ್ನು ವಿವರಿಸಿದ್ದರು. ಈಗ ಭಾರತದ ಉಪಭೂಖಂಡದ ಜನರಿಗೆ ಸ್ವಾತಂತ್ರ್ಯ ನೀಡಲಾಗಿದೆ. ವಿವಿಧ ಹಿನ್ನೆಲೆಯ ಮತ್ತು ವಿವಿಧ ಧರ್ಮಗಳಿಗೆ ಸೇರಿದ ಜನರಿಗೆ ಬ್ರಿಟಿಷ್ ಸರಕಾರ ಸಮಾನ ಹಕ್ಕುಗಳನ್ನು, ಧಾರ್ಮಿಕ ಸ್ವಾತಂತ್ರ್ಯವನ್ನು, ಧರ್ಮವನ್ನು ಅವಲಂಬಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ನೀಡಿದುದು ಬ್ರಿಟನಿನ ಸೌಹಾರ್ದ ಮನೋಭಾವದ ಉನ್ನತ ಮಟ್ಟವನ್ನು ಚೆನ್ನಾಗಿ ಸಾಬೀತುಗೊಳಿಸುತ್ತದೆ.

ಈಗ ಸಾವಿರಗಳ ಸಂಖ್ಯೆಯಲ್ಲಿ ಅಹ್ಮದಿ ಮುಸ್ಲಿಮರು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಅನೇಕರು ತಮ್ಮ ದೇಶಗಳಲ್ಲಿ ಅನುಭವಿಸುತ್ತಿದ್ದ ಹಿಂಸಾಚಾರಗಳಿಂದ ರಕ್ಷಣೆ ಪಡೆಯಲು ವಲಸೆ ಬಂದವರಾಗಿದ್ದಾರೆ. ಘನವೆತ್ತ ಮಹಾರಾಣಿಯವರ ಔದಾರ್ಯಪೂರ್ಣವಾದ ಆಡಳಿತೆಯಲ್ಲಿ ನ್ಯಾಯ, ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಪಡೆದು ಅವರು ಶಾಂತಮಯ ಜೀವನ ಅನುಭವಿಸುತ್ತಿದ್ದಾರೆ. ಈ ಔದಾರ್ಯಕ್ಕೋಸ್ಕರ ನಾನು ನಮ್ಮ ವೈಭವಶಾಲಿ ಮಹಾರಾಣಿಗೆ ನನ್ನ ಕೃತಜ್ಞತೆಯನ್ನು ಇನ್ನೊಮ್ಮೆ ಅರ್ಪಿಸುತ್ತೇನೆ.

ನಾನು ಈ ಪತ್ರವನ್ನು ಈ ಕೆಳಗಿನ ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸುತ್ತಿದ್ದೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಘನವೆತ್ತ ವಿಕ್ಟೋರಿಯಾ ಮಹಾರಾಣಿಯ ಪರವಾಗಿ ಇವೇ ಶಬ್ದಗಳಲ್ಲಿ ಪ್ರಾರ್ಥಿಸಿದ್ದರು.

"ಓ ಶಕ್ತಿಶಾಲಿಯೂ ಪ್ರತಾಪಶಾಲಿಯೂ ಆಗಿರುವ ಪ್ರಭೂ, ನಿನ್ನ ದಯೆ ಮತ್ತು ಅನುಗ್ರಹದಿಂದ ನಮ್ಮ ಬಹುಮಾನ್ಯ ಮಹಾರಾಣಿಯನ್ನು ನಾವೆಲ್ಲರೂ ಅವರ ಔದಾರ್ಯಭರಿತ ಆಡಳಿತೆಯಲ್ಲಿ ಸುಖವಾಗಿ ಜೀವಿಸುತ್ತಿರುವ ಹಾಗೆ ಶಾಶ್ವತವಾಗಿ ಸುಖಮಯವಾಗಿ ಜೀವಿಸುವಂತೆ ಮಾಡು. ನಾವು ಮಹಾರಾಣಿಯ ಔದಾರ್ಯ ಮತ್ತು ದಯಾಭರಿತ ಆಡಳಿತೆಯಲ್ಲಿ ಶಾಂತಿ ಮತ್ತು ಸಮೃದ್ಧಿಯಿಂದ ಜೀವಿಸುವ ಹಾಗೆ ಓ ಸರ್ವಶಕ್ತನಾದ ಪ್ರಭೂ, ನೀನು ಮಹಾರಾಣಿಗೆ ದಯೆ ಮತ್ತು ಪ್ರೀತಿಯನ್ನು ಅನುಗ್ರಹಿಸು."

ನಾನು ಹೀಗೆ ಸಹ ಪ್ರಾರ್ಥಿಸುತ್ತೇನೆ: ಸರ್ವೋನ್ನತನಾದ ದೇವನು ನಮ್ಮ ಗೌರವಾನ್ವಿತ ಮಹಾರಾಣಿಗೆ ತಾನಿಚ್ಛಿಸುವ ರೀತಿಯಲ್ಲಿ ಮಾರ್ಗದರ್ಶನ ನೀಡಲಿ. ಮಹಾರಾಣಿಯ ಸಂತಾನ ಪರಂಪರೆ ಸತ್ಯದ ಮೇಲೆ ನೆಲೆನಿಂತು ಅದರ ಕಡೆಗೆ

ಮಾರ್ಗದರ್ಶನ ನೀಡುವಂತಾಗಲಿ. ನ್ಯಾಯಪಾಲನೆ ಮತ್ತು ಸ್ವಾತಂತ್ರ್ಯವು ಬ್ರಿಟಿಷ್ ರಾಜವಂಶದ ಮಾರ್ಗದರ್ಶಕ ಸೂತ್ರಗಳಾಗಿ ಸ್ಥಿರವಾಗಿ ಮುಂದುವರಿಯಲಿ. ಈ ಸಂತೋಷದ ಸಂದರ್ಭದಲ್ಲಿ ನಾನು ಘನವೆತ್ತ ಮಹಾರಾಣಿಯನ್ನು ಇನ್ನೊಮ್ಮೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ,

**ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನಾಯಕ.

## ಅಹ್ಮದಿಯಾ ಸಂಘಟನೆಯ ಖಲೀಫರು ಬರೆದ ಪತ್ರಕ್ಕೆ ಬ್ರಿಟಿಷ್ ಮಹಾರಾಣಿ ದ್ವಿತೀಯ ಎಲಿಝಬೆತ್‌ರ ಉತ್ತರ

### ಬಕ್ಕಿಂಗ್‌ಹ್ಯಾಮ್ ಪ್ಯಾಲೇಸ್

18ನೇ ಜುಲೈ 2012

ಪರಿಶುದ್ಧ ಮಹನೀಯರೇ,

ನೀವು ಬರೆದ ಪತ್ರಕ್ಕೆ ನಿಮಗೆ ಧನ್ಯವಾದಗಳನ್ನು ಅರ್ಪಿಸಲು ಮಹಾರಾಣಿಯವರು ನನ್ನೊಂದಿಗೆ ಅಪೇಕ್ಷಿಸಿದ್ದಾರೆ. ಯು.ಕೆ. ಅಹ್ಮದಿಯಾ ಮುಸ್ಲಿಮ್ ಅಸೋಸಿಯೇಶನಿನ ಅಮೀರ್ ಹಾಗೂ ನ್ಯಾಶನಲ್ ಪ್ರೆಸಿಡೆಂಟ್ ಆಗಿರುವ ಮಿಸ್ಟರ್ ರಫೀಕ್ ಹಯಾತರ ನೇತೃತ್ವದಲ್ಲಿ ನಿಮ್ಮ ಪ್ರತಿನಿಧಿ ಸಂಘ ಸುಂದರ ಪಾರಿತೋಷಕಗಳೊಂದಿಗೆ ನಿಮ್ಮ ಪತ್ರವನ್ನು ಮಹಾರಾಣಿಗೆ ಜುಲೈ 13ರಂದು ತಲಪಿಸಿದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರಾದ ಖಾದಿಯಾನಿನ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದರು ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿಯ ಸಂದರ್ಭದಲ್ಲಿ ಬರೆದ "ಮಹಾರಾಣಿಗೊಂದು ಪಾರಿತೋಷಕ" ಎಂಬ ಪುಸ್ತಕವನ್ನು ಮಹಾರಾಣಿ ಬಹಳ ಆಸಕ್ತಿಪೂರ್ಣವಾಗಿ ನೋಡಿದರು. ಮಹಾರಾಣಿ ನಿಮಗೆ ಮತ್ತು ಯು.ಕೆ. ಅಹ್ಮದಿಯಾ ಅಸೋಸಿಯೇಶನ್‌ಗೆ ನಿಮ್ಮೆಲ್ಲರ ಸಂದರ್ಭೋಚಿತ ಕಾಳಜಿಗೋಸ್ಕರ ಹೃತ್ಪೂರ್ವಕ ಕೃತಜ್ಞತೆಗಳನ್ನು ಮತ್ತು ಶುಭಾಶಯಗಳನ್ನು ಕೋರುತ್ತಾರೆ.

ನಿಮ್ಮ ಪತ್ರದಲ್ಲಿ ನೀವು ಸ್ಥಿರ ಶಾಂತಿಗೋಸ್ಕರ ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ವಿವರಿಸಿ ವಿವಿಧ ಧರ್ಮಗಳ ಜನರು ಪರಸ್ಪರ ಪ್ರೀತಿ ಮತ್ತು ಗೌರವದಿಂದ ವರ್ತಿಸಲು ಪ್ರೋತ್ಸಾಹಿಸಬೇಕೆಂದು ಮಹಾರಾಣಿಯವರೊಂದಿಗೆ ಅಪೇಕ್ಷಿಸಿರುವಿರಿ. ಈ ವಿಷಯಕ್ಕೆ ಸಂಬಂಧಿಸಿ ಮಹಾರಾಣಿ ವ್ಯಕ್ತಿಗತವಾಗಿ ಏನನ್ನೂ ಹೇಳಲು ಬಯಸುವುದಿಲ್ಲವಾದರೂ ಇತ್ತೀಚೆಗೆ ವಜ್ರ ಜೂಬಿಲಿಗೆ ಸಂಬಂಧಿಸಿ ಲಂಡನಿನ ಲ್ಯಾಂಬೆತ್ ಪ್ಯಾಲೇಸ್‌ನಲ್ಲಿ ವ್ಯವಸ್ಥೆಗೊಳಿಸಲಾದ ವಿವಿಧ ಧರ್ಮಗಳಿಗೆ ಸೇರಿದವರ ಸ್ವಾಗತ ಸಮಾರಂಭದಲ್ಲಿ ಘನವೆತ್ತ ಮಹಾರಾಣಿ ಮತ್ತು ಅವರ ಪತಿ ಡ್ಯೂಕ್ ಆಫ್ ಎಡಿನ್‌ಬರೋ ಎಂಟು ಕ್ರೈಸ್ತೇತರ ಧರ್ಮಗಳ ಪ್ರತಿನಿಧಿಗಳನ್ನು ಭೇಟಿಯಾಗಿ ಯು.ಕೆ.ಯಲ್ಲಿ ವಿವಿಧ ಧರ್ಮಗಳ ಅಸ್ತಿತ್ವವನ್ನು ಪ್ರಶಂಸಿದ್ದರು ಎಂಬುದು ನಿಮಗೆ ನಿಶ್ಚಯವಾಗಿಯೂ ತಿಳಿದಿರಬಹುದೆಂದು ನಂಬುತ್ತೇನೆ.

ನೀವು ಪ್ರಾರ್ಥಿಸುವುದಾಗಿ ಭರವಸೆ ನೀಡಿದುದಕ್ಕೆ ಮತ್ತು ವಜ್ರ ಜೂಬಿಲಿ ಸಂದರ್ಭದಲ್ಲಿ ನೀವು ಪ್ರಕಟಿಸಿದ ಶುಭಾಶಂಸೆಗಳಿಗೆ ಮಹಾರಾಣಿ ನಿಮಗೆ ಕೃತಜ್ಞರಾಗಿದ್ದಾರೆ.

ಮಹಾರಾಣಿಯ ಒಂದು ಸಂದೇಶವನ್ನು ಇದರೊಂದಿಗೆ ಕಳುಹಿಸುತ್ತಿದ್ದೇನೆ.

**ಹಿಸ್ ಹೋಲಿನೆಸ್ ಮಿರ್ಝಾ ಮಸ್ರೂರ್ ಅಹ್ಮದ್**
**ಖಲೀಫತುಲ್ ಮಸೀಹ್ V ಅವರಿಗೆ**

**Doug King (ಡೂಗ್ ಕಿಂಗ್)**
**ಮಹಾರಾಣಿಯ ಅಸಿಸ್ಟೆಂಟ್ ಪ್ರೈವೇಟ್ ಸೆಕ್ರಿಟರಿ**

# ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ

**ಲೇಖಕ : ಮೌಲವಿ ಮುಝುಫ್ಫರ್ ಅಹ್ಮದ್ ಝಫರ್**
ಅಧ್ಯಾಪಕರು, ಜಾಮಿಅ ಅಹ್ಮದಿಯಾ ಖಾದಿಯಾನ್

## ಅಮೇರಿಕದ ಫ್ಲೋರಿಡಾದ ಡವ್ (Dove) ಚರ್ಚ್ ಪಾದರಿ ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ 8:

ಮುಸ್ಲಿಮರಿಗೆ ತಮ್ಮ ಧರ್ಮವನ್ನು ಬದಲಾಯಿಸುವ ಅಧಿಕಾರವಿಲ್ಲ. ಧರ್ಮತ್ಯಾಗದ ಶಿಕ್ಷೆಯು ಮರಣದಂಡನೆ ಎಂದು ಇಸ್ಲಾಮ್ ವಿಧಿಸಿದೆ.

### ಉತ್ತರ

ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ವಿರುದ್ಧ ಮಾಡಲಾಗುವ ಈ ಆರೋಪ ಪವಿತ್ರ ಖುರ್‌ಆನಿನ ಸ್ಪಷ್ಟ ಉಪದೇಶಗಳಿಗೆ ವಿರುದ್ಧವೂ ಚಾರಿತ್ರಿಕ ಸತ್ಯಾಂಶಗಳ ಬೆಳಕಿನಲ್ಲಿ ತಿರಸ್ಕರಿಸಬೇಕಾದುದೂ ಆಗಿದೆ. ಈ ಆಕ್ಷೇಪದಿಂದ ಆಕ್ಷೇಪಗಾರನ ಮನೋಭಾವದ ಬಗ್ಗೆ ಅಂದಾಜಿಸಬಹುದಾಗಿದೆ. ಒಬ್ಬ ಮನುಷ್ಯ ಹಠ ಮತ್ತು ದ್ವೇಷದ ಹೊದಿಕೆಯನ್ನು ಧರಿಸಿದರೆ ಎಷ್ಟರ ಮಟ್ಟಿಗೆ ಹೋಗಬಲ್ಲನೆಂಬುದು ಟೆರ್ರಿ ಜೋನ್ಸ್ ಕೈಗೊಂಡ ನಿರ್ಧಾರ ಸೂಚಿಸುತ್ತದೆ.

ಪವಿತ್ರ ಖುರ್‌ಆನ್ ಎಂತಹ ಭವ್ಯ ಧರ್ಮಶಾಸ್ತ್ರವೆಂದರೆ ಅದರಲ್ಲಿ ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಮತ್ತು ಪ್ರವಾದಿಗಳನ್ನು ಗೌರವಿಸಲು ಆದೇಶಿಸಲಾಗಿದೆ. ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಹೇಳುವುದಾದರೆ, ಅದನ್ನು ಅತ್ಯಂತ ಒತ್ತಿ ಹೇಳುವುದು ಪವಿತ್ರ ಖುರ್‌ಆನ್ ಆಗಿದೆ:

**"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ; ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ."**
(ಪವಿತ್ರ ಖುರ್‌ಆನ್ 2:259)

ಪವಿತ್ರ ಖುರ್‌ಆನ್ ಇನ್ನೊಂದು ಕಡೆ ಹೀಗೆ ಹೇಳಿದೆ:

**"ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ."** (ಪವಿತ್ರ ಖುರ್‌ಆನ್ 109:7)

ಪ್ರತಿಯೊಬ್ಬ ಮನುಷ್ಯನು ತನ್ನ ಧರ್ಮದ ಅನುಷ್ಠಾನ ಕರ್ಮಗಳನ್ನು ಮಾಡಲು ಸ್ವತಂತ್ರನು ಎಂದು ಮೇಲಿನ ವಚನ ಸ್ಪಷ್ಟಪಡಿಸುತ್ತದೆ.

ಇಸ್ಲಾಮ್ ಧರ್ಮವು ಧರ್ಮಪ್ರಚಾರವನ್ನು ಅಂಗೀಕರಿಸುವ ಧರ್ಮವಾಗಿದೆ. ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ[ಸ] ಹೀಗೆ ಹೇಳಿದನು:

**"ಆದ್ದರಿಂದ ನೀನು ಉಪದೇಶಿಸು. ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಕಾವಲುಗಾರನಲ್ಲ."**
(ಪವಿತ್ರ ಖುರ್‌ಆನ್ 88: 22, 23)

ಮೇಲಿನ ವಚನಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಇಸ್ಲಾಮ್ ಧರ್ಮದ ಕಡೆಗೆ ಆಮಂತ್ರಣ ನೀಡುವವರನ್ನಾಗಿ ಪ್ರಸ್ತಾಪಿಸಲಾಗಿದೆ. ಅವರ ಕೆಲಸ ಉಪದೇಶಿಸುವುದು ಮಾತ್ರವಾಗಿದೆ. ಅವರನ್ನು ವಿಶ್ವಾಸಿಗಳ ಮೇಲೆ ನಿಗಾ ಇಡುವ ಕಾವಲುಗಾರನಾಗಿ ನೇಮಿಸಿಲ್ಲ.

ಪವಿತ್ರ ಖುರ್‌ಆನ್ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೆ ಅವನಿಚ್ಛಿಸುವ ಧರ್ಮವನ್ನು ಸ್ವೀಕರಿಸುವ ಅಧಿಕಾರವಿದೆ. ಈ ಕೆಳಗಿನ ವಚನವನ್ನು ನೋಡಿರಿ:

**"ಹೇಳು: 'ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ."** (18:30)

ಇಂತಹ ಸ್ಪಷ್ಟ ಆಜ್ಞೆಗಳು ಇರುವಾಗ ಪವಿತ್ರ ಖುರ್‌ಆನಿನ ಮೇಲೆ ಬಲಾತ್ಕಾರವನ್ನು ಆರೋಪಿಸಲು ಸಾಧ್ಯವಿಲ್ಲ. ಆಕ್ಷೇಪಿಸುವವನು ಹೀಗೆ ಹೇಳುತ್ತಾನೆ: ಒಬ್ಬನು ಇಸ್ಲಾಮ್ ಧರ್ಮ ತ್ಯಜಿಸಿದರೆ ಅದಕ್ಕಿರುವ ಶಿಕ್ಷೆ ಹತ್ಯೆಯಾಗಿದೆ.

ಆದರೆ ಪವಿತ್ರ ಖುರ್‌ಆನಿನಲ್ಲಿ ಇಂತಹ ಶಿಕ್ಷೆ ವಿಧಿಸುವ ವಚನವನ್ನು ಕಾಣಲಾರೆವು. ಇದು ಪವಿತ್ರ ಖುರ್‌ಆನಿನ ಮೇಲೆ ಹೊರಿಸಲಾಗುವ ಸುಳ್ಳು ಆರೋಪವಾಗಿದೆ. ಪವಿತ್ರ ಖುರ್‌ಆನ್ ಧರ್ಮತ್ಯಾಗಿಯ ಬಗ್ಗೆ ಹೀಗೆ ಹೇಳಿದೆ:

**"ನಿಮ್ಮ ಪೈಕಿ ಯಾರಾದರೂ ತನ್ನ ಧರ್ಮದಿಂದ ವಿಮುಖವಾಗಿ ಅವಿಶ್ವಾಸಿಯಾಗಿದ್ದುಕೊಂಡು ಮೃತಪಟ್ಟರೆ ಅಂಥವರ ಕರ್ಮಗಳು ಇಹದಲ್ಲೂ ಪರದಲ್ಲೂ ನಿಷ್ಫಲವಾಗುವುವು."** (2:218)

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

**"ಸತ್ಯವಿಶ್ವಾಸವನ್ನು ಹೊಂದಿದ ನಂತರ ಅವಿಶ್ವಾಸವನ್ನು ಹೊಂದಿ ಮತ್ತೆ ಅವಿಶ್ವಾಸದಲ್ಲೇ ಮುನ್ನೇರುವವರ ಪಶ್ಚಾತ್ತಾಪವು ಎಂದಿಗೂ ಸ್ವೀಕರಿಸಲ್ಪಡದು. ಅವರೇ ದಾರಿ ತಪ್ಪಿದವರು."** (3:91)

ಈ ಮೇಲಿನ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಇಸ್ಲಾಮ್ ಧರ್ಮದಲ್ಲಿ ಧರ್ಮತ್ಯಾಗದ ಶಿಕ್ಷೆ ಹತ್ಯೆ ಎಂದು ವಿಧಿಸಿಲ್ಲ. ಧರ್ಮತ್ಯಾಗದ ಶಿಕ್ಷೆ ಹತ್ಯೆಯಾಗಿದ್ದರೆ ಅವಿಶ್ವಾಸದಲ್ಲಿ ಮುಂದುವರಿಯುವ ಬಗ್ಗೆ ಮತ್ತು ಪಶ್ಚಾತ್ತಾಪದ ಸ್ವೀಕಾರ್ಯದ ಬಗ್ಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತಿರಲಿಲ್ಲ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಸೂಚಿಸುವುದೇನೆಂದರೆ, ಒಬ್ಬನು ಪದೇ ಪದೇ ಧರ್ಮತ್ಯಾಗ ಮಾಡಿದರೂ ಅವನಿಗೆ ಮರಣದಂಡನೆ ವಿಧಿಸಲಾಗದು.

ಈ ಕೆಳಗಿನ ವಚನ ನೋಡಿರಿ:

**"ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸ ಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರ. ಅವರಿಗೆ ಅವನು (ಮೋಕ್ಷ) ಮಾರ್ಗವನ್ನು ತೋರಿಸಿಕೊಡಲಾರ."** (4:138)

ಪವಿತ್ರ ಖುರ್‌ಆನ್‌ನಲ್ಲಿ ಇಷ್ಟು ಸ್ಪಷ್ಟ ಉಪದೇಶವಿರುವಾಗ ಇಸ್ಲಾಮ್, ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ವಿಧಿಸುತ್ತದೆ ಎಂದು ಪರಿಗಣಿಸಲು ಹೇಗೆ ತಾನೆ ಸಾಧ್ಯ?

## ಹುದೈಬಿಯಾ ಸಂಧಿಯ ಘಟನೆ

ಚಾರಿತ್ರಿಕ ದಾಖಲೆಗಳಲ್ಲಿ ಹುದೈಬಿಯಾ ಸಂಧಿ ಒಂದು ಮೈಲುಗಲ್ಲಿನ ರೂಪದಲ್ಲಿದೆ. ಮಕ್ಕದ ಖುರೈಶರ ಮತ್ತು ಮುಸ್ಲಿಮರ ಮಧ್ಯೆ ಈ ಒಪ್ಪಂದ ಜಾರಿಗೊಂಡಿತು. ಈ ಒಪ್ಪಂದದ ಒಂದು ಶರತ್ತು ಹೀಗಿತ್ತು: "ಒಬ್ಬ ಮುಸ್ಲಿಮನು ಧರ್ಮತ್ಯಾಗ ಮಾಡಿ ಮಕ್ಕದ ಖುರೈಶರೊಂದಿಗೆ ಸೇರಲು ಬಯಸುವುದಾದರೆ ಮುಸ್ಲಿಮರು ಅವನನ್ನು ತಡೆದಿಡಬಾರದು. ಮಕ್ಕದವರು ಅವನನ್ನು ಮುಸ್ಲಿಮರ ವಶಕ್ಕೆ ಮರಳಿ ನೀಡಲಾರರು. ಆದರೆ ಮಕ್ಕದ ಖುರೈಶರ ಪೈಕಿ ಯಾರಾದರೂ ಮುಸ್ಲಿಮನಾಗಿ ಮುಸ್ಲಿಮರನ್ನು ಸೇರಲು ಬಯಸುವುದಾದರೆ ಮುಸ್ಲಿಮರು ಅವನಿಗೆ ತಮ್ಮ ಬಳಿ ಆಶ್ರಯ ನೀಡದೆ ಅವನನ್ನು ಖುರೈಶರಿಗೆ ಒಪ್ಪಿಸಬೇಕು."

ಇಸ್ಲಾಮೀ ತತ್ವಗಳ ಪ್ರಕಾರ ಧರ್ಮತ್ಯಾಗಿಗೆ ಇರುವ ಶಿಕ್ಷೆ ಹತ್ಯೆಯಾಗಿದ್ದರೆ ಹಝ್ರತ್ ಪೈಗಂಬರ್(ಸ) ತಥಾಕಥಿತ ಇಸ್ಲಾಮೀ ನಿಯಮದ ವಿರುದ್ಧ ವರ್ತಿಸಲು ಹೇಗೆ ತಾನೆ ಸಾಧ್ಯ?

ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ನಡೆದ ಒಂದು ಘಟನೆ ಇಲ್ಲಿ ಪ್ರಸ್ತಾಪಿಸಲು ಯೋಗ್ಯವಾಗಿದೆ. ಹಝ್ರತ್ ಪೈಗಂಬರರು ಧರ್ಮತ್ಯಾಗಿಗೆ ಶಿಕ್ಷೆ ನೀಡಲಿಲ್ಲ. ಹಝ್ರತ್ ಪೈಗಂಬರರಿಗೆ ಅವತೀರ್ಣವಾಗುತ್ತಿದ್ದ ದೇವಸಂದೇಶ ವಾಣಿಗಳನ್ನು ಬರೆದಿಡಲು ಅಬ್ದುಲ್ಲಾ ಬಿನ್ ಸರ್‌ಹನನ್ನು ನೇಮಿಸಲಾಗಿತ್ತು. ಆತನು ಇಸ್ಲಾಮನ್ನು ತ್ಯಜಿಸಿದಾಗ ಆತನಿಗೆ ಯಾವ ಶಿಕ್ಷೆಯನ್ನೂ ಹಝ್ರತ್ ಪೈಗಂಬರ್(ಸ) ವಿಧಿಸಲಿಲ್ಲ. ಪ್ರಥಮ ನಾಲ್ಕು ಖಲೀಫರ ಕಾಲದಲ್ಲೂ ಯಾವುದೇ ಧರ್ಮತ್ಯಾಗಿಗೆ ಮರಣದಂಡನೆ ವಿಧಿಸಿದುದನ್ನು ನಾವು ಕಾಣಲಾರೆವು. ಆದರೆ ಸರಕಾರದ ವಿರುದ್ಧ ವಿದ್ರೋಹ ನಡೆಸಿದ ಮತ್ತು ದೇಶದಲ್ಲಿ ಗಲಭೆಗೊಂದಲಗಳಿಗೆ ಪ್ರಯತ್ನಿಸಿದ ಧರ್ಮತ್ಯಾಗಿಗಳನ್ನು ನಿಶ್ಚಯವಾಗಿಯೂ ಶಿಕ್ಷಿಸಲಾಯಿತು.

ಇಂದು ಸಹ ದೇಶದ್ರೋಹಿಗಳಿಗಿರುವ ಶಿಕ್ಷೆ ಮರಣದಂಡನೆಯಾಗಿದೆ. ಇಸ್ಲಾಮೀ ಸರಕಾರಗಳು ಕೆಲವು ದೇಶದ್ರೋಹಿಗಳಿಗೆ ಮರಣದಂಡನೆಯ ಶಿಕ್ಷೆ ವಿಧಿಸಿದ್ದರೆ ಅದರ ಕಾರಣ ದೇಶದ್ರೋಹವೇ ಹೊರತು ಧರ್ಮತ್ಯಾಗವಲ್ಲ.

ಇಸ್ಲಾಮಿನ ದೃಷ್ಟಿಯಲ್ಲಿ ಧರ್ಮತ್ಯಾಗದ ಶಿಕ್ಷೆ ಮರಣದಂಡನೆ ಎಂದು ಆರೋಪಿಸುವುದು ಸಂಪೂರ್ಣವಾಗಿ ನಿರಾಧಾರವಾಗಿದೆ. ಒಬ್ಬ ಮುಸ್ಲಿಮನು ಮದ್ಯಸೇವನೆ ಮತ್ತು ವ್ಯಭಿಚಾರ ಮಾಡುವುದಾದರೆ ಅದರ ಬಗ್ಗೆ ಒಬ್ಬ ವಿರೋಧಿ, ಇಸ್ಲಾಮ್ ಮದ್ಯಪಾನವನ್ನೂ ವ್ಯಭಿಚಾರವನ್ನೂ ಉಪದೇಶಿಸುತ್ತದೆ ಎಂದು ಹೇಳುವ ಹಾಗಿದೆ ಅವರ ಈ ಆರೋಪ. ಮದ್ಯಪಾನ ಮತ್ತು ವ್ಯಭಿಚಾರ ಅದನ್ನು ಮಾಡುವವನ ವೈಯಕ್ತಿಕ ವರ್ತನೆಯಾಗಿದೆ. ಇದೇ ರೀತಿ ಕೆಲವರು ಇಸ್ಲಾಮಿನ ಹೆಸರಿನಲ್ಲಿ ಹತ್ಯೆ ಮತ್ತು ಇತರ ಅಪರಾಧಗಳನ್ನು ಮಾಡುವುದಾದರೆ ಅವು ಅವುಗಳನ್ನು ಮಾಡುವವರ ಕುಕೃತ್ಯಗಳೇ ಹೊರತು ಅದಕ್ಕೆ ಪವಿತ್ರ ಖುರ್‌ಆನ್ ಮತ್ತು ಇಸ್ಲಾಮ್ ಕಾರಣವೆಂದು ಹೇಳಲಿಕ್ಕಾಗದು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**"ಖಂಡಿತವಾಗಿಯೂ ಇದೊಂದು ಉಪದೇಶವಾಗಿದೆ. ಆದ್ದರಿಂದ ಯಾವನಾದರೂ ಬಯಸುವುದಾದರೆ ತನ್ನ ಪ್ರಭುವಿನ ಕಡೆಗಿರುವ ಒಂದು ಮಾರ್ಗವನ್ನು ಅವನು ಅನುಸರಿಸಲಿ."** (73:20)

ಪವಿತ್ರ ಖುರ್‌ಆನ್‌ನಲ್ಲಿ ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಸೇರಿಸುವ ಬಗ್ಗೆ ಆಜ್ಞೆ ಇರುತ್ತಿದ್ದರೆ ಇಸ್ಲಾಮ್ ಧರ್ಮವನ್ನು ತ್ಯಜಿಸುವವರಿಗೆ ನೀಡುವ ಶಿಕ್ಷೆಯ ಬಗ್ಗೆಯೂ ಪ್ರಸ್ತಾಪಿಸಲಾಗುತ್ತಿತ್ತು.

ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ವಚನಗಳಲ್ಲಿ ಅಲ್ಲಾಹನು ಧರ್ಮತ್ಯಾಗಿಗಳ ಅಂತಿಮ ಗತಿಯ ಬಗ್ಗೆ ಪ್ರಸ್ತಾಪಿಸಿರುವನಾದರೂ ಅವರಿಗೆ ಶಿಕ್ಷೆ ನೀಡುವ ಬಗ್ಗೆ ಒಂದು ವಚನದಲ್ಲಿ ಕೂಡ ಪ್ರಸ್ತಾಪಿಸಿಲ್ಲ.

ಅಲ್ಲಾಹನು ಪವಿತ್ರ ಖುರ್‌ಆನಿನ ವಿರೋಧಿಗಳಿಗೆ ವಿವೇಕವನ್ನು ದಯಪಾಲಿಸಲಿ. ಅವರು ದ್ವೇಷಾಸೂಯೆಗಳನ್ನು ಬಿಟ್ಟು ದೇವನಿಂದ ಕ್ಷಮೆಯನ್ನು ಯಾಚಿಸುತ್ತಾ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಸ್ವತಃ ತಿಳಿದುಕೊಂಡು ತಮ್ಮ ಸಂತಾನದ ಆಧ್ಯಾತ್ಮಿಕ ಪ್ರಗತಿಗೆ ಸಾಮಗ್ರಿಯನ್ನು ಒದಗಿಸುವಂತಾಗಲಿ.

## ಪಾದರಿ ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ 9 ಮತ್ತು 10ರ ಉತ್ತರ

**ಲೇಖಕ: ಶಮೀಮ್ ಅಹ್ಮದ್ ಘೋರಿ**

ಅಧ್ಯಾಪಕರು, ಜಾಮಿಅ ಅಹ್ಮದಿಯಾ ಖಾದಿಯಾನ್.

**ಆಕ್ಷೇಪ ಸಂಖ್ಯೆ 9:** ಇಸ್ಲಾಮ್ ಧರ್ಮದ ಉಪದೇಶಗಳಲ್ಲಿ ಪಾಶ್ಚಿಮಾತ್ಯರ ವಿರುದ್ಧ ದ್ವೇಷ ಕಂಡುಬರುತ್ತದೆ.

**ಆಕ್ಷೇಪ ಸಂಖ್ಯೆ 10:** ಇಸ್ಲಾಮ್ ರಾಜಕೀಯ ಶಕ್ತಿ ಪಡೆದಾಗ ಯಹೂದಿಯರನ್ನೂ ಕ್ರೈಸ್ತರನ್ನೂ ಇನ್ನಿತರ ಧರ್ಮಗಳ ಅನುಯಾಯಿಗಳನ್ನೂ ಮುಸ್ಲಿಮರಾಗಬೇಕೆಂದು ಬಲಾತ್ಕರಿಸುತ್ತದೆ. ಚರ್ಚ್‌ಗಳನ್ನೂ ಇತರ ದೇವಾಲಯಗಳನ್ನೂ ಧ್ವಂಸ ಮಾಡಲಾಗುತ್ತಿದೆ.

### ಆಕ್ಷೇಪ ಸಂಖ್ಯೆ 9ರ ಉತ್ತರ

ಇಸ್ಲಾಮ್‌ನಲ್ಲಿ ಪಾಶ್ಚಿಮಾತ್ಯರ ವಿರುದ್ಧ ದ್ವೇಷದ ಉಪದೇಶ ಕಂಡು ಬರುತ್ತದೆ ಎಂದು ಪಾದರಿ ಹೇಳುವುದರ ಬಗ್ಗೆ ಸ್ವಲ್ಪವಾದರೂ ಯೋಚಿಸುವುದಾದರೆ ಪಾದರಿ ಇಸ್ಲಾಮೀ ಉಪದೇಶಗಳ ಕುರಿತು ಅಜ್ಞಾನಿಯಾಗಿರುವುದಾಗಿ ತಿಳಿಯುತ್ತದೆ. ಯಾವ ಧರ್ಮದ ಮೂಲ ಉಪದೇಶವು ಲೋಕದಲ್ಲಿ ಏಕತೆಯನ್ನು ಸೃಷ್ಟಿಸುವುದಾಗಿಯೋ ಅದರಲ್ಲಿ ಪಾಶ್ಚಿಮಾತ್ಯರ ವಿರುದ್ಧ ದ್ವೇಷ ಹೇಗೆ ತಾನೆ ಇರಲು ಸಾಧ್ಯ? ಇಸ್ಲಾಮಿನ ತತ್ವಗಳ ಸಂಗ್ರಹವಾದ ಪವಿತ್ರ ಖುರ್‌ಆನ್‌ನಲ್ಲಿ ಅದರ ಪ್ರಾರಂಭಿಕ ವಚನಗಳಲ್ಲಿಯೇ **"ಅಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" – ಎಲ್ಲಾ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ"** ಎಂದು ಪ್ರಸ್ತಾಪಿಸಲಾಗಿದೆ.

ಅಲ್ಲಾಹನು ಅರಬಿಗಳ ಪರಿಪಾಲಕನಾಗಿರುವ ಹಾಗೆ ಅರಬಿಯೇತರರ ಪರಿಪಾಲಕನೂ ಆಗಿದ್ದಾನೆ. ಅವನು ಆಫ್ರಿಕದ ಕಪ್ಪು ಜನರ ಪರಿಪಾಲಕನಾಗಿರುವ ಹಾಗೆಯೇ ಯುರೋಪಿನ ಬಿಳಿಯರ ಪರಿಪಾಲಕನೂ ಆಗಿದ್ದಾನೆ. ಇದು ಪವಿತ್ರ ಖುರ್‌ಆನ್ ಪ್ರಾರಂಭದಲ್ಲಿಯೇ ಪ್ರತಿಪಾದಿಸಿದ ತತ್ವವಾಗಿದೆ. ಯಾವುದೇ ಜನಾಂಗದ ಬಗ್ಗೆ ಇದರಲ್ಲಿ ವಿಶಿಷ್ಟವಾಗಿ ಪ್ರಸ್ತಾಪಿಸಿಲ್ಲ. ಈ ವಚನದಲ್ಲಿ ಇಸ್ಲಾಮಿನ ದೇವನು ಕೇವಲ ಅರಬಿಗಳ ದೇವನೆಂದು ಹೇಳಿಲ್ಲ. ಅರಬಿಗಳನ್ನು ಮಾತ್ರ ಪ್ರೀತಿಸಿ ಅನ್ಯರನ್ನು ದ್ವೇಷಿಸಿ ಎಂದು ಸೂಚಿಸುವ ಪವಿತ್ರ ಖುರ್‌ಆನಿನ ವಚನ ಎಲ್ಲಿದೆ? ವಾಸ್ತವಿಕ ವಿಷಯವೇನೆಂದರೆ, ಇಸ್ಲಾಮ್ ಪ್ರತಿಪಾದಿಸುವ ಪರಿಪಾಲಕ ಸಕಲ ಲೋಕಗಳ ಒಡೆಯನಾಗಿದ್ದಾನೆ. ಇಸ್ಲಾಮ್ ಈ ಉಪದೇಶದ ಮೂಲಕ ಜಾಗತಿಕ ಸಮಾನತೆಯನ್ನು ಸ್ಥಾಪಿಸಿದೆ. ಇಸ್ಲಾಮಿಗೆ ಮುಂಚೆ ಆಗಮಿಸಿದ ಪ್ರವಾದಿಗಳು ತಮ್ಮ ತಮ್ಮ ಜನಾಂಗಗಳಿಗೋಸ್ಕರ ಆಗಮಿಸಿದರು. ಹಝ್ರತ್ ಯೇಸು ಮಸೀಹರೂ ಇಸ್ರಾಯೇಲ್ ಜನಾಂಗದ ಕಾಣೆಯಾದ ಕುರಿಗಳಿಗೋಸ್ಕರ ಆಗಮಿಸಿದ್ದರು. ಆದರೆ ಅಲ್ಲಾಹನು ಇಸ್ಲಾಮ್ ಮೂಲಕ ಎಂತಹ ಪ್ರವಾದಿಯನ್ನು ಕಳುಹಿಸಿದನೆಂದರೆ, ಅವರು ಎಲ್ಲಾ ಜನಾಂಗೀಯ ಪರಿಮಿತಿಗಳನ್ನು ಮತ್ತು ದೇಶಗಳ ಪರಿಮಿತಿಗಳನ್ನು ದಾಟಿಕೊಂಡು ಹೀಗೆ ಹೇಳುತ್ತಾ ಆಗಮಿಸಿದರು:

**"ಓ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ."**

(ಪವಿತ್ರ ಖುರ್‌ಆನ್ 7:159)

ಹಿಂದಿನ ಕಾಲದಲ್ಲಿ ಯಾವ್ಯಾವ ಜನಾಂಗಗಳಿಗೆ ಪ್ರವಾದಿಗಳು ಆಗಮಿಸಿದ್ದರೋ ಆ ಜನಾಂಗಗಳ ಕೆಲವು ಅವಿವೇಕಿಗಳಾದ ಅನುಯಾಯಿಗಳು ತಾವು ನಂಬುವ ಪ್ರವಾದಿಯ ಉಪದೇಶಗಳನ್ನು ಹೊರತು ಉಳಿದ ಪ್ರವಾದಿಗಳ ಉಪದೇಶಗಳನ್ನು ತಪ್ಪೆಂದು ಭಾವಿಸಿ ತಿರಸ್ಕರಿಸುತ್ತಿದ್ದರು.

ಉದಾಹರಣೆಗೆ ಹೇಳುವುದಾದರೆ, ಹಿಂದೂಗಳು ಹೀಗೆ ಹೇಳುತ್ತಿದ್ದರು: ಯಹೋವನ ಬಗ್ಗೆ ನಮಗೆ ತಿಳಿದಿಲ್ಲ. ನಾವು ಪರಮೇಶ್ವರನ ಬಗ್ಗೆ ಮಾತ್ರ ತಿಳಿದಿದ್ದೇವೆ. ಆಗ ಯಹೂದಿಯರು ಪರಮೇಶ್ವರನ ಬಗ್ಗೆ ಪರಿಹಾಸ ಮಾಡುತ್ತಿದ್ದರು.

ಆದರೆ ಇಸ್ಲಾಮ್ ಎಂತಹ ಸುಂದರ ಉಪದೇಶ ನೀಡುತ್ತದೆ ಎಂದರೆ ಅದು ಹೇಳುತ್ತದೆ: ದೇವನು ಒಬ್ಬನೇ. ಅವನು ಅರಬಿಗಳ ದೇವನಾಗಿರುವ ಹಾಗೆ ಅರಬಿಯೇತರರ ದೇವನೂ ಆಗಿದ್ದಾನೆ. ಏಶಿಯಾದ ದೇವನಾಗಿರುವ ಹಾಗೆ ಯುರೋಪಿನ ಜನರ ದೇವನು ಸಹ ಅವನೇ ಆಗಿರುವನು. ಇಸ್ಲಾಮ್ ಈ ಸುಂದರ ಉಪದೇಶದ ಮೂಲಕ ಭಾರತದ ನಿವಾಸಿಗಳನ್ನೂ ಚೀನದ ನಿವಾಸಿಗಳನ್ನೂ ಈಜಿಪ್ಟಿನ ನಿವಾಸಿಗಳನ್ನೂ ಇರಾನಿನ ನಿವಾಸಿಗಳನ್ನೂ ಪೌರಸ್ತ್ಯರನ್ನೂ ಪಾಶ್ಚಿಮಾತ್ಯರನ್ನೂ ಏಕದೇವನನ್ನು ಸ್ತುತಿಸುವವರನ್ನಾಗಿ ಮಾಡಿತು.

ಆಕ್ಷೇಪಗಾರನು ಇಸ್ಲಾಮಿನ ಯಾವ ಉಪದೇಶವನ್ನು ಮುಂದೆ ಇರಿಸಿ ಈ ರೀತಿ ಆಕ್ಷೇಪಿಸಿರುವನೆಂದು ನಮಗೆ ತಿಳಿಯದು. ಈ ಆಕ್ಷೇಪಕ್ಕೆ ಸ್ಪಷ್ಟ ಉತ್ತರ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದಲ್ಲಿದೆ:

**"ಸತ್ಯ ವಿಶ್ವಾಸಿಗಳು (ಪರಸ್ಪರ) ಸಹೋದರರು.."**

**"ಓ ವಿಶ್ವಾಸಿಗಳೇ, ಒಂದು ಜನಾಂಗ ಇನ್ನೊಂದು ಜನಾಂಗವನ್ನು ಪರಿಹಾಸ ಮಾಡದಿರಲಿ. (ಒಂದು ವೇಳೆ) ಅವರು (ಪರಿಹಾಸಕ್ಕೀಡಾದವರು) ಇವರಿಗಿಂತ (ಪರಿಹಾಸ ಮಾಡುವವರಿಗಿಂತ) ಉತ್ತಮರಾಗಿರಬಹುದು." (49:11,12)**

ಪವಿತ್ರ ಖುರ್‌ಆನ್ ಹೀಗೆ ಉಪದೇಶ ನೀಡಿರುವಾಗ ಇಸ್ಲಾಮ್ ಪಾಶ್ಚಿಮಾತ್ಯರನ್ನು ದ್ವೇಷಿಸಲು ಉಪದೇಶಿಸುತ್ತದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

ಇಸ್ಲಾಮಿನ ಪ್ರಥಮ ಧರ್ಮಪ್ರಚಾರಕರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಜೀವಿತದಲ್ಲಿ ಈ ಉಪದೇಶವನ್ನು ಅನುಷ್ಠಾನಕ್ಕೆ ತಂದು ತೋರಿಸಿದರು. ಅವರು ತಮ್ಮ ಜೀವಿತ ಕಾಲದಲ್ಲಿ ಒಮ್ಮೆಯಾದರೂ ಅರಬಿಯರಿಗೆ ಅರಬಿಯೇತರರಿಗಿಂತ ಶ್ರೇಷ್ಠತೆ ಇರುವುದಾಗಿ ಸೂಚಿಸಿಲ್ಲ. ಅವರು ಮಾಡಿದ ಕೊನೆಯ ಹಜ್ಜ್ ಯಾತ್ರೆಯನ್ನು ಹಜ್ಜತುಲ್ ವಿದಾ ಎಂದೆನ್ನುತ್ತಾರೆ. ಆಗ ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಸಂಬೋಧಿಸಿ ಹೀಗೆ ಹೇಳಿದರು:

**"ಓ ಜನರೇ, ನಿಮ್ಮ ಪರಿಪಾಲಕ ಒಬ್ಬನು. ನಿಮ್ಮ ಪಿತನೂ ಒಬ್ಬನೇ. ಆದುದರಿಂದ ಜಾಗರೂಕರಾಗಿ ಆಲಿಸಿರಿ. ಅರಬಿಯನಿಗೆ ಅರಬಿಯೇತರನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ, ಅದೇ ರೀತಿ ಅರಬಿಯೇತರನಿಗೆ ಅರಬಿಯ ಮೇಲೆಯೂ ಶ್ರೇಷ್ಠತೆ ಇಲ್ಲ. ಬಿಳಿ ಜನರಿಗೆ ಕಪ್ಪು ಜನರ ಮೇಲೆ ಶ್ರೇಷ್ಠತೆ ಇಲ್ಲ. ಅದೇ ರೀತಿ ಕಪ್ಪು ಜನರಿಗೆ ಬಿಳಿ ಜನರ ಮೇಲೆಯೂ ಶ್ರೇಷ್ಠತೆ ಇಲ್ಲ. ಯಾರು ಭಯಭಕ್ತಿಯಿಂದ ಮುಂದೆ ಸಾಗುತ್ತಾನೋ ಅವನೇ ಶ್ರೇಷ್ಠನು." (ಮುಸ್‌ನದ್ ಇಮಾಂ ಅಹ್ಮದ್ ಬಿನ್ ಹಂಬಲ್)**

ಇಂತಹ ಉತ್ತಮ ಸುಂದರ ಉಪದೇಶ ಇಸ್ಲಾಮಿನಲ್ಲಿರುವಾಗ ಇಸ್ಲಾಮಿನ ಉಪದೇಶಗಳಲ್ಲಿ ಪಾಶ್ಚಿಮಾತ್ಯ ದೇಶಗಳ ವಿರುದ್ಧ ಮತ್ತು ಪಾಶ್ಚಿಮಾತ್ಯ ಜನಾಂಗಗಳ ವಿರುದ್ಧ ದ್ವೇಷ ಭಾವನೆ ಇದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

ಇಸ್ಲಾಮೇತರ ಧರ್ಮಗಳ ಉಪದೇಶಗಳ ಕಡೆಗೆ ನೋಡುವುದಾದರೆ ಆ ಧರ್ಮಗಳಲ್ಲಿ ಅನ್ಯಧರ್ಮದ ಜನಾಂಗಗಳ ವಿರುದ್ಧ ದ್ವೇಷ ಭಾವನೆ ಕಾಣುತ್ತೇವೆ.

ಪವಿತ್ರ ಖುರ್‌ಆನ್ ಹೀಗೆ ಪ್ರಸ್ತಾಪಿಸುತ್ತದೆ:

**"ಯಹೂದಿಯರು ಹೇಳುತ್ತಾರೆ: ಯಹೂದಿಯಲ್ಲದವರು ಸ್ವರ್ಗವನ್ನು ಎಂದೂ ಪ್ರವೇಶಿಸಲಾರರು."**

**"ಕ್ರೈಸ್ತರು ಹೇಳುತ್ತಾರೆ: ಕ್ರೈಸ್ತರಲ್ಲದವರು ಸ್ವರ್ಗವನ್ನು ಎಂದೂ ಪ್ರವೇಶಿಸಲಾರರು."**

ಈ ಎರಡು ಜನಾಂಗಗಳು ಅನ್ಯ ಜನಾಂಗಗಳ ವಿರುದ್ಧ ದ್ವೇಷ ಭಾವನೆ ಪ್ರಕಟಿಸುತ್ತವೆ. ಆದರೆ ಇಸ್ಲಾಮ್ ಧರ್ಮವು ಎಲ್ಲಾ ಜನಾಂಗಗಳಿಗೆ ಮತ್ತು ಎಲ್ಲಾ ದೇಶಗಳಿಗೆ ದೇವನ ಆಸ್ಥಾನದಲ್ಲಿ ಸಮಾನ ಪದವಿಯನ್ನು ನೀಡುತ್ತದೆ.

ಎಲ್ಲಾ ಜನಾಂಗಗಳು ಸಮಾನವಾಗಿವೆ ಎನ್ನುವುದೇ ಇಸ್ಲಾಮಿನ ಉಪದೇಶವಾಗಿದೆ. ಯಾವ ಜನಾಂಗಕ್ಕೂ ಬೇರೆ ಯಾವ ಜನಾಂಗದ ಮೇಲೆಯೂ ಶ್ರೇಷ್ಠತೆ ಇಲ್ಲ. ಇಸ್ಲಾಮಿನ ಉಪದೇಶಗಳ ವಲಯ ಬಹಳ ವಿಶಾಲವಾಗಿದೆ. ಯಾವುದೇ ದೇಶ ಮತ್ತು ಯಾವುದೇ ಜನಾಂಗ ಇಸ್ಲಾಮಿನ ವಲಯದ ಹೊರಗೆ ಇರುವುದಿಲ್ಲ. ಇಸ್ಲಾಮ್ ಎಲ್ಲಾ ದೇಶಗಳನ್ನೂ ಎಲ್ಲಾ ಜನಾಂಗಗಳನ್ನೂ ತನ್ನ ಹದ್ದುಬಸ್ತುಗಳೊಳಗೆ ಸೇರಿಸಿರುವಾಗ ತನ್ನ ಹದ್ದುಬಸ್ತುಗಳೊಳಗಿರುವ ಯಾವುದೇ ದೇಶವನ್ನು ಮತ್ತು ಯಾವುದೇ ಜನಾಂಗವನ್ನು ತಾತ್ಸಾರ ದೃಷ್ಟಿಯಿಂದ ಕಾಣಲು ಹೇಗೆ ತಾನೆ ಸಾಧ್ಯ?

## ಬೈಬಲಿನಲ್ಲಿ ಅನ್ಯ ಜನಾಂಗಗಳ ವಿರುದ್ಧ ದ್ವೇಷಭಾವನೆ:

ಬೈಬಲ್ ಯಹೂದಿಯರಿಗೆ ಏಕ ದೇವಾರಾಧನೆಯ ಉಪದೇಶ ನೀಡುವುದರೊಂದಿಗೆ ಮೂರ್ತಿ ಪೂಜಕರ ವಿಗ್ರಹಗಳನ್ನು ಧ್ವಂಸಗೊಳಿಸಲು ಆದೇಶಿಸುತ್ತದೆ. ಈ ಕೆಳಗಿನ ವಚನಗಳನ್ನು ನೋಡಿರಿ:

**"ಅವರ ದೇವತೆಗಳನ್ನು ನೀವು ನಮಸ್ಕರಿಸಲೂ ಬಾರದು, ಪೂಜಿಸಲೂಬಾರದು,; ಅವರ ಆಚರಣೆಗಳನ್ನು ಅನುಸರಿಸಲೇ ಬಾರದು. ಆ ಜನಗಳನ್ನು ನಿರ್ಮೂಲ ಮಾಡಿ ವಿಗ್ರಹ ಸ್ತಂಭಗಳನ್ನು ನಾಶಮಾಡಬೇಕು." (ವಿಮೋಚನ ಕಾಂಡ 23:24)**

**"ನೀವು ಅವರ ಬಲಿಪೀಠಗಳನ್ನು ಕೆಡವಿ ಅವರ ಕಲ್ಲುಕಂಬಗಳನ್ನು ಒಡೆದು ಬಿಡಬೇಕು. (ವಿಮೋಚನಾ ಕಾಂಡ 34:13)**

ತಮ್ಮ ಮತ್ತು ಅನ್ಯ ಜನಾಂಗಗಳೊಂದಿಗೆ ತಾರತಮ್ಯ ಭಾವನೆಯಿಂದ ವರ್ತಿಸಲು ಉಪದೇಶಿಸಿ ಅನ್ಯ ಜನಾಂಗದ ವಿರುದ್ಧ ದ್ವೇಷವನ್ನು ಸೂಚಿಸುವ ಬೈಬಲಿನ ಉಪದೇಶ ಹೀಗಿದೆ:

**"ನಿಮ್ಮಲ್ಲಿ ಒಬ್ಬ ಸಹೋದರನು ಬಡವನಾಗಿ ತನ್ನನ್ನೇ ಮಾರಿಕೊಂಡರೆ ಅವನನ್ನು ದಾಸನಂತೆ ನಡಿಸಬಾರದು.." (ಯಾಜಕಕಾಂಡ 25:39)**

"(ಅನ್ಯ ಜನಾಂಗದವರನ್ನು) ಶಾಶ್ವತವಾಗಿ ದಾಸರನ್ನಾಗಿ ಮಾಡಿಕೊಳ್ಳಬಹುದು." (ಯಾಜಕ ಕಾಂಡ 25:46)

ಬೈಬಲ್ ಪ್ರಕಾರ ಇಸ್ರಾಯೇಲ್ ಜನಾಂಗದವರು ದೇವನ ಅತ್ಯಂತ ಶ್ರೇಷ್ಠ ಸೃಷ್ಟಿ ಆಗಿದ್ದಾರೆ. ಅವರ ಹೊರತು ಬಾಕಿ ಎಲ್ಲರೂ ದ್ವಿತೀಯ ದರ್ಜೆಯ ನಾಗರಿಕರೂ ಕೆಲವರು ಅದಕ್ಕಿಂತಲೂ ಕೀಳುಮಟ್ಟದವರೂ ಆಗಿದ್ದಾರೆ.

ಇಸ್ರಾಯೇಲ್ಯರ ಬಗ್ಗೆ ಬೈಬಲಿನ ಈ ವಚನ ನೋಡಿರಿ:

**"ನೀವು ನಿಮ್ಮ ದೇವರಾಗಿರುವ ಕರ್ತನ ಮಕ್ಕಳು.." (ಧರ್ಮೋಪದೇಶ ಕಾಂಡ 14:1)**

ಬೈಬಲ್‌ನಲ್ಲಿ ಇಸ್ರಾಯೇಲ್ಯರ ಹೊರತು ಅನ್ಯ ಜನಾಂಗದವರ ವಿರುದ್ಧ ಬಹಳ ದ್ವೇಷ ಕಂಡು ಬರುತ್ತದೆ. ಆಕ್ಷೇಪಗಾರನು ತನ್ನ ಆಕ್ಷೇಪಕ್ಕೆ ಆಧಾರವಾಗಿ ಒಂದೇ ಒಂದು ವಚನವಾದರೂ ಪವಿತ್ರ ಖುರ್‌ಆನ್‌ನಿಂದ ಆಯ್ಕೆ ಮಾಡಿ ತೋರಿಸಲಿ.

ಇಸ್ಲಾಮಿನ ಉಪದೇಶಗಳು ಆವರಿಸುವ ವಲಯ ಎಷ್ಟು ವಿಶಾಲವಾಗಿದೆ ಎಂದರೆ ಅದರ ಅಂದಾಜನ್ನು ಅನ್ಯ ಧರ್ಮೀಯರು ಮಾಡಲಾರರು.

ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ನಜ್‌ರಾನಿನ ಕ್ರೈಸ್ತರ ಒಂದು ಪ್ರತಿನಿಧಿ ಸಂಘ ಸಂವಾದಕ್ಕೋಸ್ಕರ ಬಂದಿತ್ತು. ಅವರ ಆರಾಧನೆ ಮಾಡುವ ಸಮಯವಾದಾಗ, ಅವರು ಹೊರಗೆ ಹೋಗಿ ಆರಾಧಿಸಲು ಅನುಮತಿಯನ್ನು ಕೇಳಿದರು. ಆಗ ಹಝ್ರತ್ ಪೈಗಂಬರ್(ಸ) ಕ್ರೈಸ್ತರಿಗೆ ಅವರ ಧಾರ್ಮಿಕ ರೀತಿಯಲ್ಲಿ ಮಸ್‌ಜಿದ್ ನಬವಿಯ ಒಳಗೆಯೇ ಆರಾಧನೆ ನಡೆಸಲು ಅನುಮತಿ ನೀಡಿದರು.

ಇಸ್ಲಾಮಿನಲ್ಲಿ ಅನ್ಯ ಜನಾಂಗದವರ ವಿರುದ್ಧ ಸ್ವಲ್ಪವಾದರೂ ದ್ವೇಷ ಭಾವನೆ ಇದ್ದರೆ ಹೀಗೆ ಆಗಲು ಸಾಧ್ಯವಿತ್ತೇ?

## 10ನೇ ಆಕ್ಷೇಪಕ್ಕೆ ಉತ್ತರ:

ಈ ಆಕ್ಷೇಪ ಸಹ ಇತರ ಆಕ್ಷೇಪಗಳಂತೆ ಇಸ್ಲಾಮಿನ ವಿರುದ್ಧ ಅಜ್ಞಾನದ ಕಾರಣದಿಂದ ಮಾಡಲಾಗಿದೆ ಎಂದು ಕಾಣುತ್ತದೆ. ಆಕ್ಷೇಪಗಾರನಿಗೆ ಇಸ್ಲಾಮಿನ ಉಪದೇಶಗಳ ಬಗ್ಗೆ ಏನೂ ತಿಳುವಳಿಕೆ ಇಲ್ಲ. ಇಸ್ಲಾಮಿನ ಉಪದೇಶ ಈ ಆಕ್ಷೇಪಗಳಿಗೆ ತೀರಾ ವಿರುದ್ಧವಾಗಿದೆ.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**ಹೇಳು: 'ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.'** (18:30)

ಅಲ್ಲಾಹನು ಇನ್ನೊಂದು ಕಡೆ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**ಹೇಳು: ಓ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಸತ್ಯ ಬಂದಿರುತ್ತದೆ. ಯಾರಾದರೂ ಸತ್ಪಥವನ್ನು ಅನುಸರಿಸುವವನಾದರೆ ಅವನು ತನ್ನ ಒಳಿತಿಗಾಗಿಯೇ ಸತ್ಪಥವನ್ನು ಅನುಸರಿಸುತ್ತಾನೆ. ಯಾರಾದರೂ ದಾರಿತಪ್ಪಿ ಹೋಗುವವನಾದರೆ, ತನಗೆ ಹಾನಿಕರವಾಗಿಯೇ ಅವನು ದಾರಿ ತಪ್ಪುತ್ತಾನೆ. ನಾನು ನಿಮ್ಮ ಮೇಲ್ನೋಟಗಾರನಲ್ಲ."** (10:109)

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದು ತಾತ್ವಿಕ ಸಿದ್ಧಾಂತವಾಗಿ ಹೀಗೆ ಹೇಳುತ್ತಾನೆ:

**"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ."** (2:257)

ಇಸ್ಲಾಮಿನ ಉಪದೇಶಗಳು ಮೇಲೆ ವಿವರಿಸಿದಂತೆ ಇವೆ. ಇಸ್ಲಾಮಿನ ಅನುಯಾಯಿಗಳು ಈ ಸುಂದರ ಉಪದೇಶಗಳನ್ನು ಹೇಗೆ ಅನುಷ್ಠಿಸಿದರು ಎಂದು ನೋಡೋಣ.

ವಸಕ್ ರೂಮೀ ಎಂಬವರು ಹೀಗೆ ವರದಿ ಮಾಡುತ್ತಾರೆ:

"ಹಝ್ರತ್ ಉಮರ್(ರ) ಖಿಲಾಫತ್ ಕಾಲದಲ್ಲಿ ನಾನು ಅವರ ಗುಲಾಮನಾಗಿದ್ದೆನು. ಅವರು ನನ್ನೊಂದಿಗೆ 'ನೀನು ಮುಸ್ಲಿಮನಾಗು ಎಂದು ಹೇಳುತ್ತಾ ಇದ್ದರು. ಆದರೆ ನಾನು ಅದಕ್ಕೆ ಒಪ್ಪಿಗೆ ಸೂಚಿಸುತ್ತಿರಲಿಲ್ಲ. ಆಗ ಉಮರ್ 'ಲಾ ಇಕ್ರಾಹ ಫಿದ್ದೀನ್' (ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ) ಎಂದು ಹೇಳುತ್ತಿದ್ದರು. ಅವರು ಮೃತರಾಗುವ ಕಾಲ ಸಮೀಪಿಸಿದಾಗ ಅವರು ನನ್ನನ್ನು ಸ್ವತಂತ್ರಗೊಳಿಸಿ ನಿನಗೆ ಇಷ್ಟವಿರುವಲ್ಲಿಗೆ ನೀನು ಹೋಗಬಹುದು' ಎಂದು ಹೇಳಿದರು." (ಅಪಾರಿಫ್ ಬಿ ರಿವಾಯತಿ ಇಝಾಲತಿಲ್ ಖಫಾ ಅನ್ ಖಿಲಾಫತಿಲ್ ಖುಲಫಾ)

ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲವೆಂದು ಹೇಳಿದುದನ್ನು ಉಚ್ಚ ಸ್ವರದಲ್ಲಿ ಹಗಲು ರಾತ್ರಿ ಘೋಷಿಸಿ ಇಸ್ಲಾಮಿನ ಕಡೆಗೆ ಅವಿಶ್ವಾಸಿಗಳನ್ನು ಆಹ್ವಾನಿಸುವಾಗ ಹಝ್ರತ್ ಪೈಗಂಬರರು(ಸ) ಮತ್ತು ಶಿಷ್ಯರು ಖಡ್ಗವನ್ನು ಹಿಡಿದುಕೊಂಡು ಜನರನ್ನು ಬಲಾತ್ಕಾರದಿಂದ ಇಸ್ಲಾಮಿಗೆ ಸೇರಿಸಲು ಹೊರಡುತ್ತಿದ್ದರೆ ಅವಿಶ್ವಾಸಿಗಳು ಹೀಗೆ ಆಕ್ಷೇಪಿಸುತ್ತಿರಲಿಲ್ಲವೇ?: "ದೇವವಾಣಿ ಬಲಾತ್ಕಾರದ ವಿರುದ್ಧವಾಗಿದೆ ಎಂದು ಹೇಳುತ್ತಿರುವೆ. ಆದರೆ ಸ್ವತಃ ನೀನು ಬಲಾತ್ಕಾರ

ಮಾಡುತ್ತಿರುವೆ." ಆದರೆ ಮೇಲಿನಂತೆ ಅವಿಶ್ವಾಸಿಗಳು ಎಂದೂ ಆಕ್ಷೇಪಿಸಿರಲಿಲ್ಲವೆಂದು ಚರಿತ್ರೆಯಿಂದ ತಿಳಿಯುತ್ತದೆ.

ಹಝ್ರತ್ ಪೈಗಂಬರರು(ಸ) ಮಕ್ಕವನ್ನು ಜಯಿಸಿದಾಗ ಖುರೈಶರ ಪೈಕಿ ಕೆಲವರು ಮುಸ್ಲಿಮರಾದರು. ಆದರೆ ಅನೇಕ ಅವಿಶ್ವಾಸಿಗಳು ತಮ್ಮ ಧರ್ಮದಲ್ಲಿ ಸ್ಥಿರವಾಗಿ ನಿಂತರು. ಪರಂತು ಅದರ ಬಗ್ಗೆ ಯಾವುದೇ ರೀತಿಯ ಆಕ್ಷೇಪ ಉಂಟಾಗಲಿಲ್ಲ.

ಮಕ್ಕದ ವಿಜಯಕ್ಕೆ ಎಷ್ಟೋ ಮೊದಲು ಹಝ್ರತ್ ಪೈಗಂಬರ್(ಸ) ಅವಿಶ್ವಾಸಿಗಳ ದೌರ್ಜನ್ಯದಿಂದ ಕಷ್ಟಕ್ಕೊಳಗಾಗಿ ಮದೀನಕ್ಕೆ ವಲಸೆ ಹೋದರು. ಅಲ್ಲಿ ಅಲ್ಲಾಹನು ಅವರಿಗೆ ಮದೀನದ ದೊರೆತನವನ್ನು ದಯಪಾಲಿಸಿದನು. ಅವರು ಮದೀನದ ಅತ್ಯುಚ್ಚ ನಾಯಕರಾದರು. ಅಲ್ಲಿ ಮುಸ್ಲಿಮರಲ್ಲದೆ ಯಹೂದಿ ಗೋತ್ರಗಳೂ ಇದ್ದುವು. ಅಲ್ಲಿ ಹಝ್ರತ್ ಪೈಗಂಬರರಿಗೆ ಶಕ್ತಿ ಇದ್ದರೂ ಮುಸ್ಲಿಮೇತರರೊಂದಿಗೆ ವರ್ತಿಸಿದ ರೀತಿ, ಅದು ಲೋಕಾಂತ್ಯದ ವರೆಗೆ ಆದರ್ಶ ಮಾದರಿಯಾಗಿರುವುದು. ನೆರೆಹೊರೆಯವರು ಯಾವ ಧರ್ಮಕ್ಕೆ ಸೇರಿದವರಾಗಿದ್ದರೂ ಅವರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ಹಝ್ರತ್ ಪೈಗಂಬರರು(ಸ) ಹೇಳುತ್ತಿದ್ದರು. ಅವರ ಶಿಷ್ಯರು ಅವರ ಮಾತನ್ನು ಯಾವಾಗಲೂ ತಮ್ಮ ಗಮನದಲ್ಲಿರಿಸಿ ವರ್ತಿಸುತ್ತಿದ್ದರು.

ಒಂದು ಹದೀಸಿನಲ್ಲಿ ಹೀಗೆ ಬರೆದಿದೆ: ಒಮ್ಮೆ ಹಝ್ರತ್ ಇಬ್ನು ಅಬ್ಬಾಸ್(ರ) ಮನೆಗೆ ಬಂದಾಗ ಮನೆಗೆ ಯಾರೋ ಮಾಂಸವನ್ನು ತಂದುಕೊಟ್ಟಿದ್ದಾರೆಂದು ತಿಳಿಯಿತು. ಆಗ ಅವರು ಕೇಳಿದರು: ನಮ್ಮ ನೆರೆಹೊರೆಯಲ್ಲಿರುವ ಯಹೂದಿಯ ಮನೆಗೆ ಮಾಂಸ ಕೊಟ್ಟಿದ್ದಾರೋ ಇಲ್ಲವೋ? ಅವರು ಎಷ್ಟು ಸಾರಿ ಈ ಪ್ರಶ್ನೆಯನ್ನು ಪುನರಾವರ್ತಿಸಿದರೆಂದರೆ ಮನೆಯವರು ಕೇಳಿದರು: ನೀವು ಹೀಗೇಕೆ ಪ್ರಶ್ನಿಸುತ್ತಿರುವಿರಿ? ಆಗ ಹ॥ ಇಬ್ನು ಅಬ್ಬಾಸ್(ರ) ಹೇಳಿದರು: ಹಝ್ರತ್ ಪೈಗಂಬರರು ಹೀಗೆ ಹೇಳಿದ್ದಾರೆ: 'ಜಿಬ್ರೀಲ್ ನನ್ನೊಂದಿಗೆ ನೆರೆಹೊರೆಯವರ ಪರವಾಗಿ ಎಷ್ಟು ಸಲ ಒತ್ತಿ ಹೇಳಿದರೆಂದರೆ, ಪ್ರಾಯಶಃ ನೆರೆಹೊರೆಯ ಜನರನ್ನೂ ವಾರೀಸುದಾರರಲ್ಲಿ ಸೇರಿಸಲಾಗುವುದು ಎಂದು ನಾನು ಭಾವಿಸಿದೆನು.'

ಹಝ್ರತ್ ಪೈಗಂಬರ್(ಸ) ಮುಸ್ಲಿಮೇತರರ ಭಾವನೆಗಳ ಬಗ್ಗೆ ಸಹ ಬಹಳ ಶ್ರದ್ಧೆ ನೀಡುತ್ತಿದ್ದರೆಂದು ಚರಿತ್ರೆಯಿಂದ ಸಾಬೀತಾಗುತ್ತದೆ. ಒಮ್ಮೆ ಹಝ್ರತ್ ಅಬೂಬಕರರೊಂದಿಗೆ(ರ) ಒಬ್ಬ ಯಹೂದಿ ಹೀಗೆ ಹೇಳಿದನು: "ಎಲ್ಲಾ ಪ್ರವಾದಿಗಳಿಗಿಂತ ದೇವನು ಹೆಚ್ಚು ಶ್ರೇಷ್ಠತೆ ನೀಡಿದ ಮೂಸಾ ಪ್ರವಾದಿಯ ಪ್ರಮಾಣ!" ಆಗ ಹಝ್ರತ್ ಅಬೂಬಕರ್(ರ) ಯಹೂದಿಗೆ ಹೊಡೆದರು. ಈ ಸಂಭವ ಹಝ್ರತ್ ಪೈಗಂಬರರಿಗೆ(ಸ) ತಿಳಿದಾಗ ಅವರು ಹಝ್ರತ್ ಅಬೂಬಕರರ(ರ) ವರ್ತನೆಯ ಬಗ್ಗೆ ಅತೃಪ್ತಿ ಸೂಚಿಸಿದರು.

ನೀವು ಯೋಚಿಸಿರಿ. ಮುಸ್ಲಿಮರ ಸರಕಾರವಿದೆ. ಒಬ್ಬ ಯಹೂದಿ ಹಝ್ರತ್ ಮೂಸಾ ಪ್ರವಾದಿಯನ್ನು ಹಝ್ರತ್ ಮುಹಮ್ಮದರಿಗಿಂತ ಶ್ರೇಷ್ಠರೆಂದು ಹೇಳುತ್ತಾನೆ. ಯಹೂದಿ ಹೇಗೆ ಮಾತನಾಡುತ್ತಾನೆಂದರೆ, ಅವನ ಮಾತಿನ ರೀತಿಯಿಂದ ಮೃದು ಹೃದಯದವರಾದ ಹಝ್ರತ್ ಅಬೂಬಕರ್ ಸಹ ಕೋಪಿಷ್ಠರಾಗುತ್ತಾರೆ. ಅವರು ಯಹೂದಿಗೆ ಹೊಡೆಯುತ್ತಾರೆ. ಆಗ ಹಝ್ರತ್ ಪೈಗಂಬರ್(ಸ) ಸಹ ಹಝ್ರತ್ ಅಬೂಬಕರರ ವರ್ತನೆಯ ಬಗ್ಗೆ ಅಸಂತೃಪ್ತಿ ಸೂಚಿಸುತ್ತಾರೆ ಮತ್ತು ಹೇಳುತ್ತಾರೆ: ನೀವು ಈ ರೀತಿ ಏಕೆ ವರ್ತಿಸಿದಿರಿ. ತನಗಿಷ್ಟವಿರುವ ನಂಬಿಕೆಯನ್ನು ಹೊಂದಲು ಯಹೂದಿಗೆ ಸ್ವಾತಂತ್ರ್ಯವಿದೆ.

ಮೇಲೆ ಬರೆದವುಗಳು ಚಾರಿತ್ರಿಕ ದಾಖಲೆ ಇರುವ ಘಟನೆಗಳಾಗಿವೆ. ಇವುಗಳ ಮೂಲಕ ಪಾದರಿಯ ಆಕ್ಷೇಪಗಳು ನಿರಾಧಾರವೆಂದು ಸಾಬೀತಾಗುತ್ತದೆ. ಮುಸ್ಲಿಮರಿಗೆ ಅಧಿಕಾರ ದೊರೆತಾಗ ಅವರು ತಮ್ಮ ಅಧೀನದಲ್ಲಿರುವ ದೇಶದಲ್ಲಿ ಚರ್ಚ್‌ಗಳನ್ನೂ ಇತರ ದೇವಾಲಯಗಳನ್ನೂ ಧ್ವಂಸಗೊಳಿಸಿದ್ದಾರೆ ಎಂದು ಪಾದರಿ ಆಕ್ಷೇಪಿಸುವುದು ಸಹ ನಿರಾಧಾರವಾಗಿದೆ.

ಅವಿಶ್ವಾಸಿಗಳ ವಿರುದ್ಧ ಆತ್ಮರಕ್ಷಣೆಗೋಸ್ಕರ ಯುದ್ಧ ಮಾಡಲು ಅಲ್ಲಾಹನಿಂದ ಅನುಮತಿ ದೊರೆತಾಗ ಹಝ್ರತ್ ಪೈಗಂಬರ್(ಸ) ಯುದ್ಧಕ್ಕೆ ಯೋಧರನ್ನು ಕಳುಹಿಸುವಾಗ ಹೀಗೆ ಉಪದೇಶಿಸುತ್ತಿದ್ದರು:

"ಓ ಮುಸ್ಲಿಮರೇ, ಅಲ್ಲಾಹನ ನಾಮವನ್ನು ಉಚ್ಚರಿಸಿ ಹೊರಡಿರಿ. ಧರ್ಮವನ್ನು ಸಂರಕ್ಷಿಸಲಿಕ್ಕಾಗಿ ಹೋರಾಡಿರಿ. ನಿಮಗೆ ದೊರಕುವ ಶತ್ರುಗಳ ಸಂಪತ್ತಿನ ವಿಷಯದಲ್ಲಿ ಅಪ್ರಾಮಾಣಿಕವಾಗಿ ವರ್ತಿಸಬೇಡಿರಿ. ಯಾವ ಜನಾಂಗದವರಿಗೂ ಮೋಸಮಾಡಬೇಡಿರಿ. ಶತ್ರು ಸೈನಿಕರಲ್ಲಿ ಮೃತರಾದವರ ಅಂಗಾಂಗಗಳನ್ನು ವಿಕೃತಗೊಳಿಸಬೇಡಿರಿ. ಮಹಿಳೆಯರನ್ನು, ಮಕ್ಕಳನ್ನು ಮತ್ತು ಧಾರ್ಮಿಕ ಸ್ಥಳಗಳ ನಿವಾಸಿಗಳನ್ನು ಕೊಲ್ಲಬೇಡಿರಿ. ಹೆಚ್ಚು ವೃದ್ಧರಾದವರನ್ನೂ ಕೊಲ್ಲಬೇಡಿರಿ. ನಾಡಿನಲ್ಲಿ ಸುಧಾರಣೆ ಮಾಡಿರಿ. ಜನರೊಂದಿಗೆ ಸಹಾನುಭೂತಿಯಿಂದ ವರ್ತಿಸಿರಿ. ಏಕೆಂದರೆ ಅಲ್ಲಾಹನು ಸಹಾನುಭೂತಿಯನ್ನು ಇಷ್ಟಪಡುತ್ತಾನೆ."

ಸಕಲ ಲೋಕಗಳಿಗೂ ಅನುಗ್ರಹದಾಯಕರಾಗಿ ಆಗಮಿಸಿದ ಹಝ್ರತ್ ಪೈಗಂಬರ್(ಸ) ಮೇಲಿನಂತೆ ಅನ್ಯರ ಆರಾಧನಾಲಯಗಳ ಬಗ್ಗೆ ಆದೇಶಿಸಿದರು. ಹೀಗಿರುವಾಗ ಮುಸ್ಲಿಮರು ಅನ್ಯರ ಆರಾಧನಾಲಯಗಳನು ಗೌರವಿಸಲಿಲ್ಲ ಎಂದು ಹೇಳುವುದಾದರೂ ಹೇಗೆ?

ಇಸ್ಲಾಮ್ ಅನ್ಯ ಧರ್ಮಗಳ ಶತ್ರುವಾಗಿದ್ದರೆ ಹಝ್ರತ್ ಪೈಗಂಬರ್(ಸ) ಅನ್ಯ ಧಾರ್ಮಿಕ ಸ್ಥಳಗಳ ನಿವಾಸಿಗಳನ್ನು ಕೊಲ್ಲಬಾರದೆಂದು ಹೇಳಿದುದು ಏಕೆ?

ಇಸ್ಲಾಮ್ ಅನ್ಯ ಧರ್ಮಗಳ ಶತ್ರುವಾಗಿದ್ದರೆ ಹಝ್ರತ್ ಪೈಗಂಬರ್(ಸ) ಅನ್ಯ ಧರ್ಮದ ಧಾರ್ಮಿಕ ನಾಯಕರನ್ನು ಮೊದಲು ಕೊಲ್ಲಬೇಕೆಂದು ಹೇಳುತ್ತಿದ್ದರು. ಆದರೆ ಅವರು ಹೇಳಿದುದು ಹೀಗೆ: ಖಡ್ಗ ಹಿರಿದು ಹೋರಾಡಲು ಬರುವವರನು ಕೊಲ್ಲಿರಿ. ಆದರೆ

ಧಾರ್ಮಿಕ ಕೆಲಸಗಳಲ್ಲಿ ಮಗ್ನರಾದವರನ್ನು ಕೊಲ್ಲಬೇಡಿರಿ.

ಚರಿತ್ರೆಯಿಂದ ಸಾಬೀತಾಗುವುದೇನೆಂದರೆ, ಇಸ್ಲಾಮೀ ದೇಶಗಳಲ್ಲಿ ಇಸ್ಲಾಮೀ ಸರಕಾರಗಳ ಅಧೀನದಲ್ಲಿ ಮುಸ್ಲಿಮೇತರರು ದೊಡ್ಡ ದೊಡ್ಡ ಹುದ್ದೆಗಳಿಗೆ ನೇಮಿಸಲ್ಪಟ್ಟಿದ್ದರು. ಇಸ್ಲಾಮ್ ತನ್ನ ವಿಜಯದ ಕಾಲದಲ್ಲಿ ಕೂಡ ಎಂದೂ ದೌರ್ಜನ್ಯ ಮಾಡಲಿಲ್ಲ ಎಂಬುದಕ್ಕೆ ಚರಿತ್ರೆ ಸಾಕ್ಷ್ಯ ನೀಡುತ್ತದೆ.

ಹಿಜರಿ ಶಕೆ 16ನೇ ವರ್ಷದಲ್ಲಿ ಪಾಲೆಸ್ತೀನ್‌ನಲ್ಲಿರುವ ಬೈತುಲ್ ಮುಖದ್ದಸನ್ನು ಹಝ್ರತ್ ಉಮರ್[ರ] ಸಂದರ್ಶಿಸಿದಾಗ ಕ್ರೈಸ್ತರ ಆರಾಧನಾಲಯಕ್ಕೆ ಅವರು ಭೇಟಿಕೊಟ್ಟಿದ್ದರು. ನಮಾಝಿನ ಸಮಯವಾದಾಗ ಕ್ರೈಸ್ತರು ಅವರನ್ನು ತಮ್ಮ ದೇವಾಲಯದಲ್ಲಿ ನಮಾಝ್ ಮಾಡಲು ಆಮಂತ್ರಿಸಿದಾಗ ಹಝ್ರತ್ ಉಮರ್[ರ] ಆಮಂತ್ರಣವನ್ನು ಅಂಗೀಕರಿಸಲಿಲ್ಲ. ಅವರು ಚರ್ಚ್‌ನ ಹೊರಗೆ ಹೋಗಿ ನಮಾಝ್ ಮಾಡಿದರು. ಅವರು ಹಾಗೆ ಮಾಡಿದುದು ಏಕೆಂದರೆ, ಅವರು ಕ್ರೈಸ್ತರ ಆರಾಧನಾಲಯದಲ್ಲಿ ನಮಾಝ್ ಮಾಡುತ್ತಿದ್ದರೆ ಅದನ್ನು ಮುಸ್ಲಿಮರು ಮುಂದೆ ಮಸ್‌ಜಿದ್‌ಗಾಗಿ ಪರಿವರ್ತಿಸದಿರಲಿ ಎಂದಾಗಿತ್ತು.

ಮೇಲೆ ವಿವರಿಸಿದುದು ಇಸ್ಲಾಮಿನ ಸುಂದರ ಉಪದೇಶಗಳಾಗಿವೆ. ಅದರ ವಿರುದ್ಧ ನಮ್ಮ ಕೆಲವು ಅಜ್ಞಾನಿ ಸೋದರರು ಆಕ್ಷೇಪಿಸುತ್ತಾರೆ. ಅಲ್ಲಾಹನನ್ನು ನಾವು ಪ್ರಾರ್ಥಿಸುತ್ತೇವೆ: ಅವನು ಈ ತಿಳಿಗೇಡಿಗಳಿಗೆ ಬುದ್ಧಿ ದಯಪಾಲಿಸಲಿ. ಜನರು ಇಸ್ಲಾಮಿನ ವಿರುದ್ಧ ಅನಾವಶ್ಯಕ ಆಕ್ಷೇಪಗಳನ್ನು ಮಾಡುವುದರಿಂದ ತಮ್ಮನ್ನು ತಾವೇ ತಡೆದಿಟ್ಟುಕೊಳ್ಳುವಂತೆ ಆಗಲಿ. ★

---

*ಇಸ್ಲಾಮ್ ವಿರುದ್ಧ ಸಿನೆಮ: (10 ನೇ ಪುಟದಿಂದ)*

ಅಥವಾ ನಿಮ್ಮ ಉಪಾಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವಿರಿ ಎಂದು ನೀವು ಭಾವಿಸುತ್ತಿರುವಿರೇನು? ಖಂಡಿತ ಸಾಧ್ಯವಾಗದು. ಮನುಷ್ಯರ ಕೆಲಸ ಅಂದು ಕೊನೆಗೊಳ್ಳುವುದು. ಅಮೇರಿಕ ಮೊದಲಾದ ದೇಶಗಳಲ್ಲಿ ಭೂಕಂಪ ಉಂಟಾಗಿದೆ; ಆದರೆ ನಿಮ್ಮ ದೇಶ ಸುರಕ್ಷಿತವಾಗಿದೆ ಎಂದು ನೀವು ಯೋಚಿಸಬೇಡಿರಿ.... ಓ ಯುರೋಪು, ನೀನು ಸುರಕ್ಷಿತವಾಗಿಲ್ಲ. ಓ ಏಶಿಯಾ, ನೀನು ಸಹ ಸುರಕ್ಷಿತವಾಗಿಲ್ಲ. ಓ ದ್ವೀಪಗಳಲ್ಲಿ ವಾಸಿಸುವ ಜನರೇ, ಯಾವುದೇ ಮಿಥ್ಯ ದೈವ ನಿಮಗೆ ಸಹಾಯಮಾಡಲಾರದು. ನಾನು ನಗರಗಳನ್ನು ಕುಸಿದು ಬೀಳುತ್ತಿರುವುದಾಗಿ ಕಾಣುತ್ತೇನೆ. ಜನವಾಸ ಕೇಂದ್ರಗಳು ಜನರಿಂದ ವಿರಹಿತವಾಗಿರುವುದಾಗಿ ನಾನು ಕಾಣುತ್ತಿದ್ದೇನೆ. ಆ ಏಕ ದೇವನು ಒಂದು ಕಾಲಾವಧಿ ತನಕ ಮೌನವಾಗಿದ್ದನು. ಅವನ ಕಣ್ಣುಗಳ ಮುಂದೆ ಅಸಹ್ಯ ಕೆಲಸಗಳು ಮಾಡಲ್ಪಟ್ಟರೂ ಅವನು ಸುಮ್ಮನೆ ಇದ್ದನು. ಆದರೆ ಅವನು ತನ್ನ ಶಕ್ತಿ ವೈಭವದೊಂದಿಗೆ ತನ್ನ ಮುಖವನ್ನು ತೋರಿಸಿಕೊಡುವನು. ಯಾರ ಕಿವಿಗಳು ಆಲಿಸಬಲ್ಲವೋ ಅವರು ಆಲಿಸಲಿ. ಆ ನಿಗದಿತ ಸಮಯ ದೂರವೇನೂ ಅಲ್ಲ. ಅಲ್ಲಾಹನ ಶಾಂತಿಧಾಮದಲ್ಲಿ ಎಲ್ಲರನ್ನೂ ಜಮಾಯಿಸಲು ನಾನು ಪ್ರಯತ್ನಿಸಿದೆನು. ಆದರೆ ವಿಧಿ ಲಿಖಿತವು ಈಡೇರುವುದು ಆವಶ್ಯಕವಾಗಿತ್ತು... ಪ್ರವಾದಿ ನೂಹರ[ಅ] ಕಾಲಘಟ್ಟ ನಿಮ್ಮ ಕಣ್ಣುಗಳ ಮುಂದೆ ಕಂಡು ಬರುವುದು. ಪ್ರವಾದಿ ಲೂತರ[ಅ] ಕಾಲಘಟ್ಟದ ಘಟನೆಯನ್ನು ನೀವು ಸ್ವತಃ ಕಾಣುವಿರಿ. ಆದರೆ ಅಲ್ಲಾಹನ ಕೋಪ ಬಂದೆರಗುವುದು ನಿಧಾನವಾಗಿ ಯಾಗಿದೆ. ನೀವು ಪಶ್ಚಾತ್ತಾಪಗೊಂಡು ದೇವನ ಕಡೆಗೆ ತಿರುಗುವುದಾದರೆ ನಿಮ್ಮ ಮೇಲೆ ದಯೆ ಉಂಟಾಗುವುದು. ದೇವನನ್ನು ಬಿಟ್ಟು ದೂರ ಸರಿಯುವವನು ಒಂದು ಕ್ರಿಮಿಯಾಗಿದ್ದಾನೆ; ಅವನು ಮನುಷ್ಯನಲ್ಲ. ದೇವನಿಗೆ ಭಯಪಡದವನು ಮೃತನಾದವನ ಹಾಗಿರುವನು; ಅವನು ಜೀವಂತನಾಗಿರುವುದಿಲ್ಲ." (ಹಕೀಖತುಲ್ ವಹೀ)

ಅಲ್ಲಾಹನು ಲೋಕಕ್ಕೆ ವಿವೇಕವನ್ನು ದಯಪಾಲಿಸಲಿ. ಜನರು ಅಸಹ್ಯ ಮತ್ತು ದೌರ್ಜನ್ಯ ಭರಿತ ಕೆಲಸ ಮಾಡುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳಲಿ. ನಾವು ಸಹ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ.

**(ಅನುವಾದಕ : ಎಂ. ಉಬೈದುಲ್ಲಾ)**

---

*ಅಣ್ವಾಯುಧ ಯುದ್ಧದ......... (18 ಪುಟದಿಂದ)*

ಮಹಾರಾಣಿಗೆ ನಮ್ಮಿಂದ ತಲಪಲಿ. ಗೌರವಾನ್ವಿತ ಮಹಾರಾಣಿ ಸದಾ ಕಾಲ ಸಂತೋಷವನ್ನೂ ಸಂತೃಪ್ತಿಯನ್ನೂ ಹೊಂದುವವರಾಗಲಿ."

ವಾಗ್ದತ್ತ ಮಸೀಹರು ವಿಕ್ಟೋರಿಯಾ ಮಹಾರಾಣಿ ಪರವಾಗಿ ಪ್ರಾರ್ಥಿಸಿದ್ದರು. ನಾನು ಅವರ ಪದಗಳನ್ನೇ ಬಳಸಿಕೊಂಡು ಎಲಿಝಬೆತ್ ಮಹಾರಾಣಿಗೋಸ್ಕರ ಪ್ರಾರ್ಥಿಸುತ್ತೇನೆ:

"ಶಕ್ತಿಶಾಲಿಯೂ ಪ್ರತಾಪವಂತನೂ ಆಗಿರುವ ಪ್ರಭೂ, ನಿನ್ನ ಕಾರುಣ್ಯ ಮತ್ತು ಅನುಗ್ರಹಗಳ ಮೂಲಕ ನಮ್ಮ ಗೌರವಾನ್ವಿತ ಮಹಾರಾಣಿಯನ್ನು, ನಾವು ಆಕೆಯ ಉಪಕಾರ ಮತ್ತು ದಯೆಯ ಅಧೀನದಲ್ಲಿ ಸಂತೋಷದಿಂದ ಜೀವಿಸುತ್ತಿರುವ ಹಾಗೆ ಸದಾಕಾಲ ಸಂತೋಷದಿಂದ ಜೀವಿಸುವಂತೆ ಮಾಡು. ಆಕೆಯ ಪ್ರಜಾಹಿತಕಾರಿ ಆಡಳಿತೆಯಲ್ಲಿ ನಾವು ಶಾಂತಿಯಿಂದಲೂ ಸಮೃದ್ಧಿಯಿಂದಲೂ ಜೀವಿಸುತ್ತಿರುವ ಹಾಗೆ ನೀನು ಆಕೆಯೊಂದಿಗೆ ದಯೆಯಿಂದಲೂ ಪ್ರೀತಿಯಿಂದಲೂ ವರ್ತಿಸುವವನಾಗು."

ಬ್ರಿಟಿಷ್ ಪೌರನಾಗಿರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮ್ ಇಂತಹ ಕೃತಜ್ಞತೆಯ ಮನೋಭಾವವನ್ನು ಹೊಂದಿರುತ್ತಾನೆ.

ನೀವೆಲ್ಲರೂ ಇಲ್ಲಿಗೆ ಆಗಮಿಸಿ ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃ ಭಾವನೆಯನ್ನು ಪ್ರಕಟಿಸಿದುದಕ್ಕೆ ನಾನು ನಿಮಗೆಲ್ಲರಿಗೂ ಇನ್ನೊಮ್ಮೆ ನನ್ನ ಕೃತಜ್ಞತೆಗಳನ್ನು ಹೃತ್ಪೂರ್ವಕವಾಗಿ ಅರ್ಪಿಸಲು ಬಯಸುತ್ತೇನೆ.

ನಿಮಗೆಲ್ಲರಿಗೂ ಧನ್ಯವಾದಗಳು.

**(Review of Religions : May 2012 ಸಂಚಿಕೆಯಿಂದ.**
**ಭಾಷಾಂತರ : A. ಅಬ್ದುಸ್ಸಲಾಮ್**

# ಜಿಹಾದ್

★ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್
ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ

ನಮ್ಮ ವಿರುದ್ಧ ಮಾಡಲಾಗುವ ಇನ್ನೊಂದು ಆಕ್ಷೇಪ ನಾವು ಜಿಹಾದನ್ನು ನಿರಾಕರಿಸುತ್ತೇವೆ ಎಂದಾಗಿದೆ. ಇಂತಹ ಸುಳ್ಳನ್ನು ಜನರು ಏಕೆ ಹೇಳುತ್ತಾರೆಂದು ನನಗೆ ಯಾವಾಗಲೂ ಆಶ್ಚರ್ಯ ವಾಗುತ್ತದೆ. ನಾವು ಜಿಹಾದನ್ನು ನಿರಾಕರಿಸುತ್ತೇವೆ ಎನ್ನುವುದು ಸಂಪೂರ್ಣ ಸುಳ್ಳಾಗಿದೆ. ನಮ್ಮ ಅಭಿಪ್ರಾಯ ಪ್ರಕಾರ ಜಿಹಾದ್ ರಹಿತವಾಗಿ ಈಮಾನ್ (ವಿಶ್ವಾಸ) ಪರಿಪೂರ್ಣ ವಾಗಲಾರದು. ಇಸ್ಲಾಮ್ ಮತ್ತು ಮುಸ್ಲಿಮರಲ್ಲಿ ಉಂಟಾದ ಬಲಹೀನತೆಗೆ ಮತ್ತು ಮುಸ್ಲಿಮರ ವಿಶ್ವಾಸದ ಬಲಹೀನತೆ ಮತ್ತು ಅದರ ಕೊರತೆ ಅವರಲ್ಲಿ ಕಾಣಿಸಿಕೊಂಡಿರುವುದು ಜಿಹಾದ್ ಬಗ್ಗೆ ಉದಾಸೀನತೆ ತೋರಿಸಿದುದರಿಂದಾಗಿದೆ. ನಾವು ಜಿಹಾದನ್ನು ನಿರಾಕರಿಸುತ್ತೇವೆ ಎಂದು ಹೇಳುವುದು ನಮ್ಮ ವಿರುದ್ಧ ಮಾಡುವ ದೋಷಾರೋಪವಾಗಿದೆ.

ಪವಿತ್ರ ಖುರ್‌ಆನ್ ಅನೇಕ ಕಡೆಗಳಲ್ಲಿ ಜಿಹಾದ್ ಬಗ್ಗೆ ಉಪದೇಶಿಸಿರುವಾಗ ಮುಸ್ಲಿಮರೆಂಬ ನೆಲೆಯಲ್ಲೂ ಪವಿತ್ರ ಖುರ್‌ಆನಿನ ಅಭಿಮಾನಿಗಳು ಎಂಬ ನೆಲೆಯಲ್ಲೂ ನಾವು ಜಿಹಾದನ್ನು ಹೇಗೆ ತಾನೆ ನಿರಾಕರಿಸಬಲ್ಲೆವು?

ಆದರೆ ನಾವು ಒಂದು ವಿಷಯುವನ್ನು ಕಠಿಣವಾಗಿ ವಿರೋಧಿಸುತ್ತೇವೆ. ಇಸ್ಲಾಮಿನ ಹೆಸರಲ್ಲಿ ರಕ್ತಪಾತ ನಡೆಸುವುದು, ಗಲಭೆಗೊಂದಲ ಪ್ರಾರಂಭಿಸುವುದು, ವಿದ್ರೋಹ ಕೃತ್ಯ ಮಾಡುವುದು, ಡಕಾಯಿತಿ ಕೊಳ್ಳೆ ನಡೆಸುವುದು ಮತ್ತು ಬೆಂಕಿ ಹಚ್ಚುವುದು ಇವುಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಈ ಕೃತ್ಯಗಳಿಂದ ಇಸ್ಲಾಮಿನ ಸುಂದರ ಮುಖವು ವಿಕಾರ ಗೊಳ್ಳುತ್ತದೆ. ದುರಾಶೆ, ಲಾಲಸೆ, ಸ್ವಾರ್ಥ ಮತ್ತು ಸ್ವಂತಲಾಭಕ್ಕಾಗಿ ಇಸ್ಲಾಮಿನ ಪರಿಶುದ್ಧ ಆಜ್ಞೆಗಳನ್ನು ಬಿಗಡಾಯಿಸುವುದನ್ನು ನಾವು ಸಹಿಸಲಾರೆವು. ಒಟ್ಟಾರೆ ಹೇಳುವುದಾದರೆ, ನಾವು ಜಿಹಾದನ್ನು ವಿರೋಧಿಸುವುದಿಲ್ಲ, ಆದರೆ ಯಾರಾದರೂ ದೌರ್ಜನ್ಯ ಮತ್ತು ಅತಿರೇಕ ಕೃತ್ಯಗಳಿಗೆ ಜಿಹಾದ್ ಎಂದು ಹೆಸರಿಸುವುದನ್ನು ನಾವು ವಿರೋಧಿಸುತ್ತೇವೆ.

ಪ್ರಿಯ ವಾಚಕರೇ, ಒಬ್ಬ ವ್ಯಕ್ತಿಯ ಪ್ರೀತಿಗೆ ಪಾತ್ರರಾದವರ ವಿರುದ್ಧ ಬೇರೊಬ್ಬ ಆಕ್ಷೇಪಿಸುವಾಗ ಪ್ರೀತಿಸುವ ವ್ಯಕ್ತಿಗೆ ಎಷ್ಟು ನೋವಾಗುತ್ತದೆ ಎಂದು ನೀವು ಮನವರಿಕೆ ಮಾಡಿಕೊಳ್ಳಬಲ್ಲಿರಿ. ಆಕ್ಷೇಪಿಸುವವನ ವಿರುದ್ಧ ಪ್ರೀತಿಸುವವನಿಗೆ ಎಷ್ಟು ಕೋಪ ಬರುತ್ತದೆ ಎಂದು ನೀವು ತಿಳಿಯಬಲ್ಲಿರಿ.

ಇಸ್ಲಾಮಿಗೆ ಕೆಟ್ಟ ಹೆಸರು ತರುವವರ ವಿರುದ್ಧ ನಮಗೆ ದೂರು ಇದೆ. ಅವರು ತಾವು ಮುಸ್ಲಿಮರೆಂದು ಹೇಳಿಕೊಂಡು ಇಸ್ಲಾಮಿನ ವಿರುದ್ಧ ವರ್ತಿಸುತ್ತಾರೆ. ಇಂದು ಇಸ್ಲಾಮ್ ಧರ್ಮವನ್ನು ಅಪರಿಷ್ಕೃತ ಧರ್ಮ ಎಂದೂ ಇಸ್ಲಾಮಿನ ಪ್ರವಾದಿಯವರನ್ನು ದೌರ್ಜನ್ಯಕಾರ ರಾಜ ಎಂದೂ ಅನ್ಯರು ಭಾವಿಸುತ್ತಾರೆ. ಇದಕ್ಕೆ ಕಾರಣವೇನು? ಅವರು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದಲ್ಲಿ ಭಯಭಕ್ತಿಗೆ ವಿರುದ್ಧವಾದ ಅಥವಾ ಪ್ರಾಮಾಣಿಕತೆಗೆ ವಿರುದ್ಧವಾದ ಯಾವುದಾದರೂ ವಿಷಯವನ್ನು ಕಂಡಿರುವರೋ? ಇಲ್ಲ, ಖಂಡಿತ ಇಲ್ಲ. ಮುಸ್ಲಿಮರು ತಮ್ಮ ಕೃತ್ಯಗಳಿಂದ ಜನರ ಮನಸ್ಸಿನಲ್ಲಿ ಎಂತಹ ವಿಷಯಗಳನ್ನು ಹಾಕಿರುವರೆಂದರೆ ಅವರು ಒಂದು ಕ್ಷಣ ಸಹ ಅವುಗಳನ್ನು ಮರೆತುಬಿಡಲಾರರು.

ನನ್ನ ಅಭಿಪ್ರಾಯವೇನೆಂದರೆ, ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ನಡೆಸಲಾದ ಅಪಾಯಕರ ದೌರ್ಜನ್ಯಗಳಲ್ಲಿ ಒಂದು ದೌರ್ಜನ್ಯ ಇದಾಗಿದೆ.

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ದಯೆಯ ಸಾಕಾರ ಸ್ವರೂಪವಾಗಿದ್ದರು. ಅವರು ಒಂದು ಇರುವೆಗೆ ಕೂಡ ನೋವನ್ನುಂಟುಮಾಡಲು ಬಯಸುತ್ತಿರಲಿಲ್ಲ. ಇಂತಹ ದಯಾಳು ಮಹಾನುಭಾವರನ್ನು ತಥಾಕಥಿತ ಮುಸ್ಲಿಮರು ಇಸ್ಲಾಮಿನ ಶತ್ರುಗಳ ಮುಂದೆ ಎಂತಹ ರೂಪದಲ್ಲಿ ಪ್ರಕಟಿಸಿದರೆಂದರೆ, ಶತ್ರುಗಳು ಅವರನ್ನು ದ್ವೇಷಿಸಲು ತೊಡಗಿದರು ಮತ್ತು ಅವರ ಮನಸ್ಸು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧವಾಗಿರುವ ಯೋಚನೆಗಳಿಂದ ತುಂಬಿದುವು.

ನಾನು ನಾಲ್ಕು ದಿಕ್ಕುಗಳಿಂದಲೂ ಜಿಹಾದ್, ಜಿಹಾದ್ ಎಂಬ ಶಬ್ದ ಆಲಿಸುತ್ತಿದ್ದೇನೆ. ಆದರೆ ಅಲ್ಲಾಹನು ಮತ್ತು ಅವನ ಸಂದೇಶ ವಾಹಕರು ಜನರನ್ನು ಯಾವ ಜಿಹಾದ್ ಕಡೆಗೆ ಆಮಂತ್ರಿಸುತ್ತಾ ಇದ್ದರು ಮತ್ತು ಈಗ ಜನರನ್ನು ಯಾವ ಜಿಹಾದಿನ ಕಡೆಗೆ ಕರೆಯಲಾಗುತ್ತಿದೆ ಎಂದು ನೋಡೋಣ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

فَلَا تُطِعِ الْكٰفِرِيْنَ وَجَاهِدْهُمْ بِهٖ جِهَادًا كَبِيْرًا ـ

**"ನೀವು ಅವಿಶ್ವಾಸಿಗಳನ್ನು ಅನುಸರಿಸಬೇಡಿರಿ. ನೀವು ಈ ಖುರ್‌ಆನಿನ ಮೂಲಕ ಹೋರಾಡಿರಿ – ಬಹಳ ದೊಡ್ಡ ಹೋರಾಟ."**
(25:53)

ಇಂದಿನ ಕಾಲದಲ್ಲಿ ಖುರ್‌ಆನಿನ ಮೂಲಕ ನಡೆಸಲಾಗುವ ಜಿಹಾದ್‌ಗೆ ಜನರನ್ನು ಮುಸ್ಲಿಮರು ಕರೆಯುತ್ತಿದ್ದಾರೆಯೋ? ಪವಿತ್ರ ಖುರ್‌ಆನನ್ನು ಕೈಯಲ್ಲಿ ಹಿಡಿದುಕೊಂಡು ಅವಿಶ್ವಾಸಿಗಳ ವಿರುದ್ಧ ಅದರ ಮೂಲಕ ಯುದ್ಧ ಮಾಡಲು ಎಷ್ಟು ಜನರು ಹೊರಟಿದ್ದಾರೆ? ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಜನರ ಹೃದಯಗಳನ್ನು ಆಕರ್ಷಿಸಬಲ್ಲ ಸಾಮರ್ಥ್ಯ ಇಲ್ಲವೇ?

ಮನುಷ್ಯರ ಮಾತುಗಳು ಜನರ ಹೃದಯಗಳನ್ನು ತಮ್ಮ ಸ್ವಾಧೀನಕ್ಕೊಳಪಡಿಸುತ್ತವೆ; ಆದರೆ ಅಲ್ಲಾಹನ ವಚನಗಳು ಎಷ್ಟು ಪ್ರಭಾವಹೀನವಾಗಿದೆ ಎಂದರೆ ಜನರ ಹೃದಯಗಳನ್ನು ಅವು ಗೆಲ್ಲಲಾರವು; ಆದುದರಿಂದ ಜನರನ್ನು ಒಪ್ಪುವಂತೆ ಮಾಡಲು

ಖಡ್ಗದ ಆವಶ್ಯಕತೆ ಇದೆ ಎಂದು ಈ ತಥಾಕಥಿತ ಮುಸ್ಲಿಮರು ಅಭಿಪ್ರಾಯ ಹೊಂದಿದ್ದಾರೆ. ಆದರೆ ಖಡ್ಗದ ಮೂಲಕ ಹೃದಯಗಳನ್ನು ಜಯಿಸಿದುದನ್ನು ಇಂದಿನ ತನಕ ನಾವು ಕಂಡಿಲ್ಲ. ಹೆದರಿಕೆ ಅಥವಾ ಲಾಲಸೆಯ ಕಾರಣದಿಂದ ಧರ್ಮವನ್ನು ಸ್ವೀಕರಿಸುವುದನ್ನು ಇಸ್ಲಾಮ್ ಶಪಿಸುತ್ತದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

إِذَا جَاءَكَ الْمُنَافِقُونَ قَالُوا نَشْهَدُ إِنَّكَ لَرَسُولُ اللَّهِ ۗ وَاللَّهُ يَعْلَمُ إِنَّكَ لَرَسُولُهُ وَاللَّهُ يَشْهَدُ إِنَّ الْمُنَافِقِينَ لَكَاذِبُونَ۔

**"ಕಪಟ ವಿಶ್ವಾಸಿಗಳು ನಿನ್ನ ಬಳಿಗೆ ಬರುವಾಗ 'ನೀವು ನಿಜವಾಗಿಯೂ ಅಲ್ಲಾಹನ ಸಂದೇಶವಾಹಕರೇ ಆಗಿದ್ದೀರೆಂದು ನಾವು ಸಾಕ್ಷ್ಯ ನೀಡುತ್ತೇವೆ' ಎಂದು ಹೇಳುತ್ತಾರೆ. ನೀನು ಅಲ್ಲಾಹನ ಸಂದೇಶವಾಹಕನೇ ಆಗಿರುವೆ ಎಂದು ಅಲ್ಲಾಹನಿಗೆ ಗೊತ್ತಿದೆ. ಆದರೆ ಕಪಟವಿಶ್ವಾಸಿಗಳು ಸುಳ್ಳು ಹೇಳುತ್ತಿದ್ದಾರೆಂದು ಅಲ್ಲಾಹನು ಸಾಕ್ಷ್ಯ ನೀಡುತ್ತಾನೆ." (63:2)**

ಇಸ್ಲಾಮ್ ಪ್ರಚಾರಕ್ಕೋಸ್ಕರ ಖಡ್ಗದ ಜಿಹಾದ್ ಅನುಮತಿಸಲ್ಪಟ್ಟಿದ್ದರೆ ಇಸ್ಲಾಮ್ ಧರ್ಮವನ್ನು ಬಾಹ್ಯವಾಗಿ ಅಂಗೀಕರಿಸಿದ್ದರೂ ಹೃದಯದಲ್ಲಿ ಅವಿಶ್ವಾಸಿಗಳಾಗಿದ್ದವರ ಬಗ್ಗೆ ಮೇಲಿನಂತೆ ಪವಿತ್ರ ಖುರ್‌ಆನ್ ವಿವರಿಸುತ್ತಿರಲಿಲ್ಲ. ಅವರನ್ನು ಅಂಗೀಕೃತ ವಿಶ್ವಾಸಿಗಳೆಂದೇ ಗಣಿಸಬೇಕಾಗಿತ್ತು.

ಖಡ್ಗದ ಮೂಲಕ ನಿಷ್ಠಾವಂತರಾದ ಜನರ ಒಂದು ಜಮಾಅತನ್ನು ಸ್ಥಾಪಿಸಲು ಯಾರಿಗೆ ತಾನೆ ಸಾಧ್ಯ?

ಇಸ್ಲಾಮ್ ಅನ್ಯ ಧರ್ಮೀಯರನ್ನು ಖಡ್ಗದ ಮೂಲಕ ತನ್ನಲ್ಲಿ ಪ್ರವೇಶಿಸುವಂತೆ ಮಾಡಲು ಆಜ್ಞಾಪಿಸುತ್ತದೆ ಎಂದು ಹೇಳುವುದು ತಪ್ಪು.

ಧಾರ್ಮಿಕ ವಿಷಯಗಳಲ್ಲಿ ಸ್ವಾತಂತ್ರ್ಯ ಬೇಕೆಂದು ಪ್ರತಿಪಾದಿಸಿದ ಪ್ರಥಮ ಧರ್ಮ ಇಸ್ಲಾಮ್ ಆಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:

لَا إِكْرَاهَ فِي الدِّينِ قَدْ تَبَيَّنَ الرُّشْدُ مِنَ الْغَيِّ۔

**"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2:252)**

ಸತ್ಯವನ್ನು ಅಂಗೀಕರಿಸಲು ಅಥವಾ ತಿರಸ್ಕರಿಸಲು ಅಧಿಕಾರವನ್ನು ಪ್ರತಿಯೊಬ್ಬನಿಗೆ ನೀಡಲಾಗಿದೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

وَقَاتِلُوا فِي سَبِيلِ اللَّهِ الَّذِينَ يُقَاتِلُونَكُمْ وَلَا تَعْتَدُوا ۚ إِنَّ اللَّهَ لَا يُحِبُّ الْمُعْتَدِينَ۔

**"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ." (2:191)**

ಧರ್ಮದ ಕಾರಣದಿಂದ ಮುಸ್ಲಿಮರ ವಿರುದ್ಧ ಯುದ್ಧ ಮಾಡುವವರ ಮತ್ತು ಮುಸ್ಲಿಮರನ್ನು ಬಲಾತ್ಕಾರದಿಂದ ಧರ್ಮತ್ಯಾಗ ಮಾಡುವಂತೆ ಬಯಸುವವರ ವಿರುದ್ಧ ಯುದ್ಧ ಮಾಡಲು ಅನುಮತಿ ನೀಡಲಾಗಿದೆ. ಇಂತಹ ಪರಿಸ್ಥಿತಿಯಲ್ಲೂ ಅತಿರೇಕದಿಂದ ವರ್ತಿಸಬಾರದೆಂದು ಆಜ್ಞಾಪಿಸಲಾಗಿದೆ. ಅವರು ಯುದ್ಧ ನಿಲ್ಲಿಸಿದರೆ ಮುಸ್ಲಿಮರೂ ಯುದ್ಧ ನಿಲ್ಲಿಸಬೇಕು.

ಪವಿತ್ರ ಖುರ್‌ಆನ್ ಮೇಲಿನಂತೆ ಆಜ್ಞಾಪಿಸಿರುವಾಗ ಅನ್ಯ ಧರ್ಮದವರ ಮೇಲೆ ಇಸ್ಲಾಮ್ ಧರ್ಮವನ್ನು ಹೇರಲು ಯುದ್ಧ ಮಾಡಲು ಇಸ್ಲಾಮ್ ಆಜ್ಞಾಪಿಸುತ್ತದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

ಅಲ್ಲಾಹನು ವಿವಿಧ ಧರ್ಮಗಳನ್ನು ನಾಶಮಾಡಲು ಅಲ್ಲ, ವಿವಿಧ ಧರ್ಮಗಳನ್ನು ರಕ್ಷಿಸಲು ಯುದ್ಧ ಮಾಡಲು ಆಜ್ಞಾಪಿಸುತ್ತಾನೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ನೋಡಿರಿ.

أُذِنَ لِلَّذِينَ يُقَاتَلُونَ بِأَنَّهُمْ ظُلِمُوا ۚ وَإِنَّ اللَّهَ عَلَىٰ نَصْرِهِمْ لَقَدِيرٌ۔ الَّذِينَ أُخْرِجُوا مِن دِيَارِهِم بِغَيْرِ حَقٍّ إِلَّا أَن يَقُولُوا رَبُّنَا اللَّهُ ۗ وَلَوْلَا دَفْعُ اللَّهِ النَّاسَ بَعْضَهُم بِبَعْضٍ لَّهُدِّمَتْ صَوَامِعُ وَبِيَعٌ وَصَلَوَاتٌ وَمَسَاجِدُ يُذْكَرُ فِيهَا اسْمُ اللَّهِ كَثِيرًا ۗ وَلَيَنصُرَنَّ اللَّهُ مَن يَنصُرُهُ ۗ إِنَّ اللَّهَ لَقَوِيٌّ عَزِيزٌ۔

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.**

**"ಅಲ್ಲಾಹನೇ ನಮ್ಮ ಪ್ರಭು" ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚುಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22:41, 42)**

ಪವಿತ್ರ ಖುರ್‌ಆನಿನ ವಚನಗಳು ಸ್ಪಷ್ಟವಾಗಿ ಹೀಗೆ ಸೂಚಿಸುತ್ತವೆ: "ನಮ್ಮ ಪ್ರಭು ಅಲ್ಲಾಹು" ಎಂದು ಹೇಳುವುದನ್ನು ತಡೆಯುವವರ ವಿರುದ್ಧ, ಎಂದರೆ ಧರ್ಮದಲ್ಲಿ ಹಸ್ತಕ್ಷೇಪ ಮಾಡುವವರ ವಿರುದ್ಧ ಯುದ್ಧಮಾಡಲು ಅನುಮತಿಸಲಾಗಿದೆ. ಇತರ ಧರ್ಮಗಳ ದೇವಾಲಯಗಳನ್ನು ನಾಶಮಾಡಲು, ಜನರನ್ನು ಬಲಾತ್ಕಾರದಿಂದ ಧರ್ಮಕ್ಕೆ ಸೇರಿಸಲು ಮತ್ತು ಜನರನ್ನು ಕೊಲ್ಲಲು ಯುದ್ಧ ಮಾಡಬಾರದು. ಎಲ್ಲಾ ಧರ್ಮಗಳನ್ನು ರಕ್ಷಿಸುವುದೇ ಯುದ್ಧದ ಉದ್ದೇಶವಾಗಬೇಕು.

ಎಲ್ಲಾ ಧರ್ಮಗಳ ಆರಾಧನಾ ಲಯಗಳನ್ನು ರಕ್ಷಿಸಬೇಕು. ಇದೇ ಇಸ್ಲಾಮ್ ಧರ್ಮದ ಉಪದೇಶವಾಗಿದೆ. ಇಸ್ಲಾಮ್ ಲೋಕಕ್ಕೆ ಸಾಕ್ಷಿಯಾಗಿ ಮತ್ತು ರಕ್ಷಕನಾಗಿ ಬಂದಿದೆ ಹೊರತು ದೌರ್ಜನ್ಯಗಾರನಾಗಿ ಅಲ್ಲ.

ಇಸ್ಲಾಮ್ ಅನುಮತಿಸಿರುವ ಜಿಹಾದ್ ಹೀಗಿದೆ: ಬಲಾತ್ಕಾರ ಪ್ರಯೋಗಿಸಿ ಜನರನ್ನು ಇಸ್ಲಾಮ್ ತ್ಯಜಿಸುವಂತೆ ಮಾಡುವವರ ವಿರುದ್ಧ ಮತ್ತು ಇಸ್ಲಾಮನ್ನು ಪ್ರವೇಶಿಸುವವರನ್ನು ಬಲಪ್ರಯೋಗಿಸಿ ತಡೆಯುವವರ ವಿರುದ್ಧ, ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದ ಕಾರಣದಿಂದ ಜನರನ್ನು ಕೊಲ್ಲುವವರ ವಿರುದ್ಧ ಮಾತ್ರ ಜಿಹಾದ್ ಮಾಡಲು ಅನುಮತಿ ನೀಡಲಾಗಿದೆ. ಈ ಕಾರಣ ಗಳಿಂದ ಹೊರತು ಅನ್ಯಕಾರಣಗಳಿಂದ ಜಿಹಾದ್ ನಡೆಸಲಾಗದು.

ಬೇರೆ ಯುದ್ಧಗಳು ರಾಜಕೀಯ ಮತ್ತು ರಾಷ್ಟ್ರೀಯ ಕಾರಣದಿಂದ ನಡೆಯಬಹುದಾಗಿದೆ. ಎರಡು ಮುಸ್ಲಿಮ್ ಜನಾಂಗಗಳು ಸಹ ರಾಜಕೀಯ ಅಥವಾ ರಾಷ್ಟ್ರೀಯ ಕಾರಣಗಳಿಂದ ಪರಸ್ಪರ ವಿರುದ್ಧ ಸಹ ಹೋರಾಡಬಹುದು.

ದೌರ್ಜನ್ಯಭರಿತ ಯುದ್ಧಗಳು ರಕ್ತಪಾತ ಮತ್ತು ಡಕಾಯಿತಿಗಳ ಹೊರತು ಬೇರೇನನ್ನೂ ಒಳಗೊಂಡಿರುವುದಿಲ್ಲ. ದುರದೃಷ್ಟವಶಾತ್, ಅನ್ಯ ಧರ್ಮೀಯರಿಂದ ಇಂತಹ ಯುದ್ಧಗಳು ಮುಸ್ಲಿಮರಲ್ಲಿ ಜಾರಿಗೊಂಡಿದೆ. ಇಸ್ಲಾಮ್‌ನಲ್ಲಿ ಇವುಗಳ ಅಸ್ತಿತ್ವವೇ ಇರಲಿಲ್ಲ. ಈ ರೀತಿಯ ನಂಬಿಕೆಯ ಪ್ರಚಾರದ ದೋಷಾರೋಪ ಕ್ರೈಸ್ತಧರ್ಮೀಯರ ವಿರುದ್ಧವಿದೆ. ಅವರೇ ಈಗ ಈ ವಿಷಯದಲ್ಲಿ ಮುಸ್ಲಿಮರನ್ನು ಎಲ್ಲರಿಗಿಂತಲೂ ಹೆಚ್ಚು ಆಕ್ಷೇಪಿಸುತ್ತಿದ್ದಾರೆ. ಮಧ್ಯಯುಗದಲ್ಲಿ ಇಂತಹ ಯುದ್ಧಗಳಲ್ಲಿ ಯುರೋಪು ಖಂಡವು ತಲ್ಲೀನವಾಗಿತ್ತು. ಅವರು ಮುಸ್ಲಿಮ್ ದೇಶಗಳ ಸರಹದ್ದುಗಳನ್ನು ಆಕ್ರಮಿಸುತ್ತಿದ್ದರು - ಅರೆಸ್ವಾತಂತ್ರ್ಯ ಹೊಂದಿದ ಗಡಿನಾಡು ಬುಡಕಟ್ಟಿನ ಜನರು ಹಿಂದೂಸ್ಥಾನದ ಗಡಿಪ್ರದೇಶಗಳನ್ನು ಆಕ್ರಮಿಸುತ್ತಿದ್ದ ಹಾಗೆ.

ಕ್ರೈಸ್ತ ಧರ್ಮವನ್ನು ಅವಲಂಬಿಸದ ಇತರ ಜನಾಂಗಗಳ ವಿರುದ್ಧ ಸಹ ಕ್ರೈಸ್ತ ಧರ್ಮೀಯರು ಆಕ್ರಮಣ ಮಾಡುತ್ತಿದ್ದರು ಮತ್ತು ತಮ್ಮ ದೌರ್ಜನ್ಯದಿಂದ ದೇವನು ಸಂತೋಷಪಡುವನು ಎಂದು ಭಾವಿಸುತ್ತಿದ್ದರು.

ಮನುಷ್ಯನು ಕೋಪಾವಿಷ್ಟನಾದರೆ ಅವನ ಬುದ್ಧಿಗೆ ಪರದೆ ಬೀಳುತ್ತದೆ. ಮುಸ್ಲಿಮರು ಕ್ರೈಸ್ತ ಧರ್ಮೀಯರ ಆಕ್ರಮಣಕಾರಿ ಕೃತ್ಯಗಳಿಂದ ಪ್ರಭಾವಿತರಾಗಿ ಸ್ವತಃ ಕ್ರೈಸ್ತ ಧರ್ಮೀಯರ ಹಾಗೆ ಆಕ್ರಮಣ ನಡೆಸಲು ಪ್ರಾರಂಭಿಸಿದರು ಮತ್ತು ತಮ್ಮ ಧರ್ಮದ ಉಪದೇಶಗಳನ್ನು ಸಂಪೂರ್ಣವಾಗಿ ಮರೆತುಬಿಟ್ಟರು. ಅನಂತರ ಎಂತಹ ಕಾಲಘಟ್ಟ ಸನ್ನಿಹಿತವಾಯಿತೆಂದರೆ ಮುಸ್ಲಿಮರಿಗೆ ಈ ವಿದ್ಯೆ ಕಲಿಸಿದವರೇ ಅವರನ್ನು ಆಕ್ಷೇಪಿಸಲು ತೊಡಗಿದರು. ಆದರೆ ಮುಸ್ಲಿಮರು ಆಕ್ಷೇಪಿಸಲ್ಪಡುವಾಗಲೂ ಅವರು ವಾಸ್ತವವೇನೆಂದು. ಮನವರಿಕೆ ಮಾಡುವುದಿಲ್ಲ. ಇಂದು ಜಗತ್ತಿನಾದ್ಯಂತ ಇಸ್ಲಾಮಿನ ವಿರುದ್ಧ ಇದೇ ಆಯುಧವನ್ನು ಪ್ರಯೋಗಿಸಲಾಗುತ್ತಿದೆ. ಆದರೆ ಮುಸ್ಲಿಮರು ಕಣ್ಣು ತೆರೆಯುವುದಿಲ್ಲ. ಅವರು ಶತ್ರುಗಳ ಕೈಗೆ ಖಡ್ಗವನ್ನು ಹಿಡಿಯಲು ಕೊಟ್ಟು "ಇದನ್ನು ತೆಗೆದುಕೊಳ್ಳಿ. ಇದರಿಂದ ಇಸ್ಲಾಮನ್ನು ಆಕ್ರಮಣ ಮಾಡಿರಿ" ಎಂದು ಹೇಳುತ್ತಾರೆ!

ಮುಸ್ಲಿಮರು ಜಿಹಾದ್ ಎಂದು ಕರೆಯುವ ದೌರ್ಜನ್ಯ ಕಾರಕ ಯುದ್ಧಗಳು ಇಸ್ಲಾಮಿಗೆ ಯಾವ ಲಾಭವನ್ನೂ ಉಂಟು ಮಾಡುವುದಿಲ್ಲ. ಅವು ಹಾನಿಕಾರಕವಾಗಿವೆ. ಈ ಆಯುಧ ಪ್ರಯೋಗಿಸಿ ಜಯಶಾಲಿಯಾದುದಾದರೂ ಯಾವ ಶಕ್ತಿಶಾಲಿ ರಾಷ್ಟ್ರ? ಯುದ್ಧದಲ್ಲಿ ಸೈನಿಕರ ಸಂಖ್ಯೆ ಪ್ರಯೋಜನಕರವಾಗುವುದಿಲ್ಲ. ಆದರೆ ಚತುರೋಪಾಯಗಳು, ಸುವ್ಯವಸ್ಥೆ, ತರಬೇತಿ, ಸಾಮಗ್ರಿಗಳು, ಉತ್ಸಾಹ ಮತ್ತು ಅನ್ಯ ಸಮುದಾಯಗಳ ಸಹಾನುಭೂತಿ ಯುದ್ಧದಲ್ಲಿ ಪ್ರಯೋಜನಕರವಾಗುತ್ತವೆ. ಕೆಲವು ಚಿಕ್ಕ ಚಿಕ್ಕ ಸಮುದಾಯಗಳು ಮೇಲಿನ ಕಾರಣಗಳಿಂದ ದೊಡ್ಡ ದೊಡ್ಡ ಸರಕಾರಗಳನ್ನು ಸೋಲಿಸುತ್ತವೆ. ಮೇಲೆ ವಿವರಿಸಿದ ವಿಷಯಗಳ ಸಹಾಯವಿಲ್ಲದಿದ್ದರೆ ದೊಡ್ಡ ದೊಡ್ಡ ಸೈನ್ಯ ಸಹ ಬಲಹೀನವೂ ನಿರುಪಯೋಗಿಯೂ ಆಗುತ್ತವೆ.

ಮುಸ್ಲಿಮರು ತಮ್ಮ ರಕ್ಷಣೆಗೋಸ್ಕರ ಈ ಸಾಮಗ್ರಿಗಳನ್ನು ಗಳಿಸಲು ಪ್ರಯತ್ನಿಸುತ್ತಿದ್ದರೆ ಒಳ್ಳೆಯದಾಗಿತ್ತು. ಅವರು ಜಿಹಾದ್‌ಗೆ ತಪ್ಪು ಅರ್ಥ ನೀಡಿ ಇಸ್ಲಾಮನ್ನು ಅಪಕೀರ್ತಿಗೊಳಪಡಿಸಿ ಸ್ವತಃ ನಷ್ಟ ಅನುಭವಿಸುತ್ತಾ ಇದ್ದಾರೆ.

ಒಂದು ಸಮುದಾಯ ತನ್ನ ಧರ್ಮದ ನೆವನ ಹೇಳಿ ಲೌಕಿಕ ಯುದ್ಧವನ್ನು ಮಾಡುತ್ತದೆ ಎಂದು ಜನರಿಗೆ ಮನವರಿಕೆಯಾದರೆ ಎಲ್ಲಾ ಸಮುದಾಯಗಳು ಆ ಸಮುದಾಯವನ್ನು ಎದುರಿಸಲು ಒಗ್ಗೂಡುತ್ತವೆ. ಏಕೆಂದರೆ ಅಂತಹ ಸಮುದಾಯದ ಅಪಾಯ ಇತರ ಎಲ್ಲಾ ಸಮುದಾಯಗಳು ತಿಳಿದುಕೊಳ್ಳುತ್ತವೆ. ಅತ್ಯಂತ ನ್ಯಾಯನಿಷ್ಠ ಸರಕಾರ ಸಹ ಸುರಕ್ಷಿತವಾಗಿರಲಾರದೆಂದು ಎಲ್ಲರಿಗೂ ತಿಳಿಯುತ್ತದೆ. ಧರ್ಮದ ನೆವನದಿಂದ ಯುದ್ಧ ಮಾಡುವ ಸಮುದಾಯದ ಜೊತೆಗೆ ಎಷ್ಟು ಒಳ್ಳೆಯ ರೀತಿಯಲ್ಲಿ ವರ್ತಿಸಿದರೂ ಶಾಂತಿ ಸ್ಥಾಪನೆಯಾಗದು. ಏಕೆಂದರೆ ಆ ಸಮುದಾಯ ಯುದ್ಧ ಮಾಡುವುದು ದೌರ್ಜನ್ಯದ ಕಾರಣದಿಂದಲ್ಲ, ಧಾರ್ಮಿಕ ವ್ಯತ್ಯಾಸದ ಕಾರಣದಿಂದ ಎಂದು ಅನ್ಯ ಧರ್ಮಗಳ ಸರಕಾರಗಳು ಯೋಚಿಸುತ್ತವೆ.

ಒಟ್ಟಾರೆ ಹೇಳುವುದಾದರೆ, ನಾವು ಜಿಹಾದನ್ನು ನಿರಾಕರಿಸುವುದಿಲ್ಲ. ಆದರೆ ಇಸ್ಲಾಮಿಗೆ ಕಠಿಣವಾದ ಹಾನಿ ಉಂಟು ಮಾಡುವ, ತಪ್ಪು ಅರ್ಥ ನೀಡಲಾಗುವ ಜಿಹಾದನ್ನು ನಾವು ಅಂಗೀಕರಿಸುವುದಿಲ್ಲ. ನಮ್ಮ ದೃಷ್ಟಿಯಲ್ಲಿ ಮುಸ್ಲಿಮರ ಅಭಿವೃದ್ಧಿಯ ರಹಸ್ಯವು ಜಿಹಾದೆ ಕಬೀರ್ (ದೊಡ್ಡ ಜಿಹಾದ್) ಪವಿತ್ರ ಖುರ್‌ಆನಿನ ಮೂಲಕ ಹೊರತು ಖಡ್ಗದ ಮೂಲಕವಲ್ಲ ಎಂಬ ವಿಷಯವನ್ನು ಮನವರಿಕೆ ಮಾಡುವುದರಲ್ಲಿ ಅಡಕವಾಗಿದೆ. (ಪವಿತ್ರ ಖುರ್‌ಆನಿನ ವಚನ - "ನೀವು ಅವಿಶ್ವಾಸಿಗಳನ್ನು ಅನುಸರಿಸಬೇಡಿರಿ. ನೀವು ಈ ಖುರ್‌ಆನಿನ ಮೂಲಕ ಹೋರಾಡಿರಿ - ಬಹಳ ದೊಡ್ಡ ಜಿಹಾದ್" ನೋಡಿರಿ.)

ಧರ್ಮದ ವ್ಯತ್ಯಾಸವು ಅನ್ಯ ಧರ್ಮೀಯರ ಜೀವ,

# ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರ ಸತ್ಯಸಾಕ್ಷ್ಯ

★ ಕೆ. ಎಂ. ಉಮರ್

ಲೋಕದಲ್ಲಿ ಅಂಧಕಾರ ಹರಡಿ ಜನರು ಅಲ್ಲಾಹನ ಆಜ್ಞೆಯನ್ನು ಸಂಪೂರ್ಣ ಕೈ ಬಿಟ್ಟು ತಮಗೆ ತೋಚಿದ ಹಾಗೆ ಅಲ್ಲಾಹನನ್ನೂ ಅವನ ಗ್ರಂಥಗಳನ್ನೂ ವ್ಯಾಖ್ಯಾನಿಸಿ ಕೊನೆಗೆ ಅಧರ್ಮಿಗಳಾಗಿ ಮಾರ್ಪಡುವಾಗಲೆಲ್ಲಾ ಅಲ್ಲಾಹು ತನ್ನ ಕಡೆಯಿಂದ ಅವನ ವರಿಷ್ಠ ದಾಸರನ್ನು ಮಾನವರಿಗೆ ಅನುಗ್ರಹವಾಗಿ ಜನರೆಡೆ ಕಳುಹಿಸುವುದು ಅಲ್ಲಾಹನ ಸ್ಥಿರವಾದ ಸುನ್ನತ್ (ನಡವಳಿಕೆ) ಆಗಿದೆ. ಈ ಸುನ್ನತಿನಲ್ಲಿ ಯಾವ ಬದಲಾವಣೆಯನ್ನೂ ಮಾಡಲಾರೆನೆಂದು ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು:

"ಅಲ್ಲಾಹನ ಕ್ರಮದಲ್ಲಿ ನೀನು ಯಾವ ಬದಲಾವಣೆಯನ್ನೂ ಕಾಣಲಾರೆ." (33:63)

ಅಲ್ಲಾಹನ ಪ್ರವಾದಿ ಹ। ಮುಹಮ್ಮದ್ ಮುಸ್ತಫಾ(ಸ) ಹೀಗೆ ಭವಿಷ್ಯವಾಣಿ ನುಡಿದರು: "ಮುಂದೆ ಒಂದು ಕಾಲ ಬರಲಿದೆ. ಅಂದು ಇಸ್ಲಾಮಿನ ಹೆಸರು ಮತ್ತು ಖುರ್‌ಆನಿನ ಲಿಪಿಗಳು ಮಾತ್ರ ಬಾಕಿ ಉಳಿಯುವುವು." (ಮಿಶ್ಕಾತ್)

"ಈಮಾನ್ ಕಾರ್ತಿಕ ನಕ್ಷತ್ರದವರೆಗೆ ಎತ್ತಲ್ಪಡುವುದು. ಆ ಕಾಲದಲ್ಲಿ (ಸಲ್ಮಾನುಲ್ ಫಾರಿಸಿ(ರ) ಹೆಗಲ ಮೇಲೆ ಕೈ ಇಟ್ಟು ಹ। ನಬಿಕರೀಂ(ಸ) ಹೇಳಿದರು) ಇವರ ವಂಶದ (ಫಾರ್ಸಿ ವಂಶದ) ಒಬ್ಬರೋ ಕೆಲವರೋ ಅದನ್ನು ಮರಳಿ ಭೂಮಿಗೆ ತರುವರು." (ಬುಖಾರಿ)

ಇನ್ನೊಂದು ವರದಿಯಲ್ಲಿ ಈ ರೀತಿ ಇದೆ:

"ಈಮಾನ್ ಕಾರ್ತಿಕ ನಕ್ಷತ್ರದವರೆಗೆ ಎತ್ತಲ್ಪಟ್ಟರೂ ಫಾರ್ಸಿ ವಂಶಜನಾದ ಒಬ್ಬರು ಅದನ್ನು ಮರಳಿ ಭೂಮಿಗೆ ತರುವರು." (ಕನ್‌ಸುಲ್ ಉಮ್ಮಾಲ್)

ಹ। ಮುಹಮ್ಮದ್ ಮುಸ್ತಫಾ(ಸ) ಭವಿಷ್ಯವಾಣಿ ನುಡಿದ ಈ ಕಾಲದಲ್ಲಿಯೇ ಅಲ್ಲಾಹನು ತನ್ನ ಕಡೆಯಿಂದ ಹ। ಅಹ್ಮದ್(ಅ)ರವರನ್ನು ಈ ಕಾಲದ ಮುಜದ್ದಿದಾಗಿಯೂ ಮಹ್‌ದೀ ಮಸೀಹಾಗಿಯೂ ಹ। ಮುಹಮ್ಮದ್ ಪೈಗಂಬರರ(ಸ) ಉಮ್ಮತೀ ನಬಿಯಾಗಿಯೂ ಕಳುಹಿಸಿ ಕೊಟ್ಟನು. ಈ ಮಹಾತ್ಮರ ಆಗಮನದ ಕಾಲವು ಇಸ್ಲಾಂ ಧರ್ಮವು ಶೋಚನೀಯಾವಸ್ಥೆಯಲ್ಲಿ ಮುಳುಗಿ ಇತರ ಸಮುದಾಯದವರು ಪವಿತ್ರ ಇಸ್ಲಾಂ ಧರ್ಮವನ್ನು ಆಕ್ರಮಿಸಿದ ಕಾಲವಾಗಿತ್ತು. ಇಸ್ಲಾಂ ಧರ್ಮದಲ್ಲಿ ನಾಯಕನಿಲ್ಲದೆ ಬಳಲಿ ಬೆಂಡಾಗಿ ಹೋದ ಕಾಲವಾಗಿತ್ತು. ಕೆಲವು ಮುಸ್ಲಿಂ ಪಂಡಿತರೂ ಅವರ ಶಿಷ್ಯರೂ ಗುಂಪು ಗುಂಪಾಗಿ ಕ್ರೈಸ್ತ ಮತವನ್ನು ಸೇರುತ್ತಿದ್ದ ಕಾಲ. ಹ। ಅಹ್ಮದ್‌ರವರ(ಅ) ಆಗಮನದ ಕಾಲ ಎಂತಹ ಕಾಲವಾಗಿತ್ತೆಂದು ಅಹ್ಮದಿಯಾ ಜಮಾಅತಿನ ವಿರೋಧಿಗಳಲ್ಲಿ ಒಬ್ಬರಾದ ಅಬುಲ್ ಹಸನ್ ಅಲಿ ನದವಿ ಖಾದಿಯಾನಿಸಂ ಎಂಬ ಪುಸ್ತಕದಲ್ಲಿ ಬರೆದ ಕೆಲವು ಉದ್ಧರಣೆಗಳು ಈ ರೀತಿ ಇವೆ:

"19ನೇ ಶತಮಾನದ ಕೊನೆಯಲ್ಲಿ ಪಾಶ್ಚಾತ್ಯರು ದುರಾಡಳಿತದೊಂದಿಗೆ ಇಸ್ಲಾಮಿಕ ಲೋಕವನ್ನು ಆಕ್ರಮಿಸಿದರು. ಧರ್ಮದ ಆತ್ಮ ನಶಿಸಿದ ಸಂಸ್ಕಾರವೂ ನಿರೀಶ್ವರ ನಾಗರಿಕತೆಯೂ ಬಾಹ್ಯವಾಗಿ ಹಬ್ಬಿತು. ವಿಶ್ವಾಸವೂ ವಿವರವೂ ಸಾಮರ್ಥ್ಯವೂ ಮೊದಲಿನಿಂದಲೇ ಇಲ್ಲವಾಗಿ ಕ್ಷೀಣಿಸುತ್ತಲಿದ್ದ ಇಸ್ಲಾಮಿಕ ಲೋಕ, ಯುದ್ಧ ದಾರಿಗಳೂ ರಕ್ತ ಕುದಿಯುತ್ತಿರುವ ಪಾಶ್ಚಾತ್ಯರಿಗೆ ಆಹಾರ ವಾಯಿತು. ಸಂಪೂರ್ಣವಾಗಿಯೂ ಬಳಲಿ ಹೋಗಿದ್ದ ಇಸ್ಲಾಮಿಕ ವಿಶ್ವಾಸವೂ ನಿರೀಶ್ವರ ಭೌತಿಕ ನಾಗರಿಕತೆಯೂ ಪರಸ್ಪರ ಅತಿಯಾದ ಸಂಘರ್ಷ ನಡೆಯಿತು. ರಾಷ್ಟ್ರೀಯವೂ ನಾಗರಿಕತೆಯೂ ವೈಜ್ಞಾನಿಕವೂ

---

ಸಂಪತ್ತು ಅಥವಾ ಗೌರವವನ್ನು ಹಾನಿಗೊಳಪಡಿಸುವುದನ್ನು ಅನುಮತಿಸುವುದಿಲ್ಲವೆಂದು ಮುಸ್ಲಿಮರು ತಿಳಿದುಕೊಳ್ಳಬೇಕು. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಅವರು ನಿಮ್ಮನ್ನು ಬಿಟ್ಟು ನಿಂತು, ನಿಮ್ಮೊಡನೆ ಯುದ್ಧ ಮಾಡದೆ ನಿಮ್ಮ ಬಳಿಗೆ ಶಾಂತಿಯ ಸಂದೇಶವನ್ನು ಕಳುಹಿಸಿದರೆ (ನೆನಪಿಡಿರಿ) ಅಲ್ಲಾಹನು ಅವರ ವಿರುದ್ಧ ಯಾವುದೇ (ಆಕ್ರಮಣ) ಕ್ರಮವನ್ನು ಕೈಗೊಳ್ಳುವರೆ ನಿಮಗೆ ಅವಕಾಶ ಕೊಟ್ಟಿಲ್ಲ." (4:91)

"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ."(2:191)

"ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡುವವ ರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಕ್ಕಟ್ಟಿದವ ರೊಡನೆ ನೀವು ಒಳಿತಿನಿಂದಲೂ ನ್ಯಾಯಯುತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ." (60:9)

ಮುಸ್ಲಿಮರ ಹೃದಯಗಳಲ್ಲಿ ಮೇಲೆ ವಿವರಿಸಿದ ಪವಿತ್ರ ಖುರ್‌ಆನ್ ವಚನಗಳ ಮೂಲಕ ಬದಲಾವಣೆ ಉಂಟಾದಲ್ಲಿ ನೇರಮಾರ್ಗದಲ್ಲಿ ನಡೆಯಲು ಅವರು ಲಕ್ಷ್ಯ ನೀಡುವರು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

لَيْسَ الْبِرُّ بِأَنْ تَأْتُوا الْبُيُوتَ مِنْ ظُهُورِهَا وَلٰكِنَّ الْبِرَّ مَنِ اتَّقٰى
وَأْتُوا الْبُيُوتَ مِنْ أَبْوَابِهَا وَاتَّقُوا اللّٰهَ لَعَلَّكُمْ تُفْلِحُونَ۔

"ನಿಮ್ಮ ಮನೆಗಳನ್ನು ಹಿಂಭಾಗದಿಂದ ಪ್ರವೇಶಿಸುವುದು ಸತ್ಕರ್ಮವಲ್ಲ. ಅಲ್ಲಾಹನ ಭಯವಿರಿಸಿಕೊಂಡು ಕೆಡುಕುಗಳಿಂದ ದೂರವಿರುವವನೇ (ಯಥಾರ್ಥ) ಸತ್ಕರ್ಮಿ. ನೀವು ಮನೆಗಳನ್ನು ಅವುಗಳ ಬಾಗಿಲುಗಳ ಮೂಲಕ ಪ್ರವೇಶಿಸಿರಿ. ಅಲ್ಲಾಹನ ಭಯವಿರಿಸಿಕೊಳ್ಳಿರಿ – ನೀವು ವಿಜಯಿಗಳಾಗಲಿಕ್ಕೆ" (2:190)

ಮುಸ್ಲಿಮರು ಅಭಿವೃದ್ಧಿಯ ಸರಿಯಾದ ತತ್ವಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಬೇಕು.

★

ಸಾಮೂಹಿಕವೂ ಆಗಿ ಅನೇಕ ಹೊಸ ಪ್ರಶ್ನೆಗಳು ಹುಟ್ಟಿಕೊಂಡವು. ಅದನ್ನು ಪರಿಹರಿಸಲು ದೃಢವಾದ ವಿಶ್ವಾಸವೂ ಬಲವಾದ ವಿಜ್ಞಾನವೂ ಆಳವಾದ ಅಧ್ಯಯನವೂ ಅನಿವಾರ್ಯವಾಗಿತ್ತು. ಉನ್ನತವಾದ ಬುದ್ಧಿಯೂ ಹೆಚ್ಚು ಕ್ರಿಯಾತ್ಮಕವಾದ ಪ್ರಜ್ಞೆಯೂ ಮನೋಧೈರ್ಯವೂ ಬಲವಾದ ವ್ಯಕ್ತಿತ್ವವೂ ಅತಿಯಾದ ಆಧ್ಯಾತ್ಮಿಕ ಜ್ಞಾನವೂ ಬೇಕು. ಧರ್ಮಕ್ರಾಂತಿಯ ಉತ್ಸಾಹ ಮತ್ತು ಧೀರತೆ ಇರುವ ಒಬ್ಬ ಮುಜದ್ದಿದ್‌ನ ಅನಿವಾರ್ಯತೆ ಇಸ್ಲಾಮಿಕ ಲೋಕದಲ್ಲಿ ಕಂಡುಬಂದಿತು. (ಕಾದಿಯಾನಿಸಂ ಮಲಯಾಳ ಭಾಷಾಂತರ ಪುಟ 177)

ಇದೇ ಪುಟದಲ್ಲಿ ಇನ್ನೂ ಹೇಳಿದೆ:

"ಇಸ್ಲಾಮಿಕ ಲೋಕವನ್ನು ಒಟ್ಟುಗೂಡಿಸಿ ಹೊಸದೊಂದು ಬದುಕು ಬಹುಮಾನ ನೀಡಿ, ತನ್ನ ಈಮಾನಿನ ಶಕ್ತಿಯನ್ನೂ ಜ್ಞಾನದ ಉನ್ನತಿಯನ್ನೂ ಸಮರಾವೇಶ ಉಪಯೋಗಿಸಿ ಪಾಶ್ಚಾತ್ಯ ಸಂಸ್ಕಾರದ ದಾಳಿಯನ್ನು ಎದುರಿಸಲು ಸಾಮರ್ಥ್ಯವಿರುವ ಒಬ್ಬ ಪ್ರಬೋಧಕನ ಆಗಮನವನ್ನು ನಿರೀಕ್ಷಿಸುತ್ತಲಿತ್ತು ಮುಸ್ಲಿಂ ಲೋಕ."

ಇದೇ ಪುಸ್ತಕದ ಇನ್ನೊಂದೆಡೆ ಈ ರೀತಿ ಹೇಳಿದೆ:

"ವಿಶ್ವಾಸ, ಸತ್ಕರ್ಮ ಇದರ ತಳಹದಿಯಲ್ಲಿರುವ ಜೀವಿತಕ್ಕೆ ಆಮಂತ್ರಿಸುವ ಪ್ರಾರಂಭ ಕಾಲದ ಇಸ್ಲಾಮಿಕ ಪ್ರಬೋಧನದ ಅದೇ ರೀತಿ ಇರುವ ಪ್ರಭೋಧನವೇ ಆಗಿತ್ತು ಅಂದಿನವರ ಅತಿಯಾದ ಆಸಕ್ತಿ. ಇಸ್ಲಾಮಿಕ ಲೋಕದಲ್ಲಿ ಅತ್ಯಂತ ಅಸಮಾಧಾನ ಸಂಭವಿಸಿದ ಈ ವಿಷಮಕರ ಸನ್ನಿವೇಶದಲ್ಲಿ ಮಿರ್ಝಾ ಗುಲಾಂ ಅಹ್ಮದ್ ರಂಗಪ್ರವೇಶ ಮಾಡುತ್ತಾರೆ." (ಕಾದಿಯಾನಿಸಂ ಪುಟ 180-181)

ಧೀರನೂ ಶೂರನೂ ಆದ ಒಬ್ಬ ಮುಜದ್ದಿದ್‌ನ ಆಗಮನವನ್ನು ಮುಸ್ಲಿಂ ಲೋಕ ಕಾಯುತ್ತಿದ್ದ ಕಾಲದಲ್ಲಿ ಹ। ಅಹ್ಮದ್(ಅ) ಆಗಮಿಸಿದರು ಎಂದು ಅಹ್ಮದಿಯತಿನ ಬದ್ಧ ವೈರಿಗಳೇ ಒಪ್ಪಿಕೊಂಡಿರುತ್ತಾರೆ.

ಇನ್ನು ಈ ಕಾಲದಲ್ಲಿ ಅಲ್ಲಾಹನಿಂದ ನಿಯುಕ್ತರಾದ ವ್ಯಕ್ತಿ ತಾನು ಅಲ್ಲಾಹನ ಮಹ್‌ದೀ ಮಸೀಹಾಗಿ ವಾದಿಸುವುದಕ್ಕಿಂತ ಮುಂಚೆ ಹೇಗಿದ್ದ ವ್ಯಕ್ತಿ ಎಂದು ತಿಳಿಯಬೇಕಾಗಿರುವುದು ಪ್ರತಿಯೊಬ್ಬ ಸತ್ಯವಿಶ್ವಾಸಿಯ ಕರ್ತವ್ಯವಾಗಿದೆ. ಹ। ಅಹ್ಮದ್(ಅ)ರವರ ಸತ್ಯಸಂಧತೆಯನ್ನು ವಿವರಿಸುವಾಗ ಅದಕ್ಕೆ ಮಾನದಂಡವಾಗಿ ಹ। ಮುಹಮ್ಮದ್ ಮುಸ್ತಫಾರವರನ್ನೇ(ಸ) ತೆಗೆದುಕೊಳ್ಳೋಣ.

ಹ। ನಬಿಕರೀಂರವರ(ಸ) ಕುರಿತು ಅವರ ಬದ್ಧ ವೈರಿಗಳೇ ಈ ರೀತಿ ಹೇಳಿದ್ದಾರೆ:

ಹ। ಮುಹಮ್ಮದ್ ಪೈಗಂಬರ್(ಸ) ತನಗೆ ನುಬುವ್ವತ್ ಲಭಿಸಿದ ಸಂಗತಿಯನ್ನು ಬೈಝಾಂಟೈನ್ (ರೂಮ್) ಚಕ್ರವರ್ತಿಯಾದ ಹಿರ್‌ಕಲ್‌ರವರಿಗೆ ಪತ್ರ ಬರೆದು ಕಳುಹಿಸಿದಾಗ, ಈ ವಿಷಯವನ್ನು ಯಾರಾದರೂ ಒಬ್ಬ ಅರೇಬಿಯನಲ್ಲಿ ಕೇಳಿ ತಿಳಿದುಕೊಳ್ಳಬೇಕೆಂದು ಹಿರ್‌ಕಲ್ ಚಕ್ರವರ್ತಿ ತೀರ್ಮಾನಿಸಿದರು. ಆ ಸಂದರ್ಭದಲ್ಲಿ ಮಕ್ಕಾದಿಂದ ಅಬೂಸುಫಿಯಾನರ ನೇತೃತ್ವದಲ್ಲಿ ಒಂದು ವ್ಯಾಪಾರಿ ಸಂಘವೂ ರೂಮ್‌ಗೆ ತಲಪಿತ್ತು. ಚಕ್ರವರ್ತಿ ಅವರನ್ನು ತನ್ನ ಅರಮನೆಗೆ ಕರೆಯಿಸಿ ಅಬೂಸಫಿಯಾನರ ಸಂಗಡವಿದ್ದ ಕೆಲವು ಅರಬಿಗಳನ್ನು ಒಂದೆಡೆ ನಿಲ್ಲಿಸಿ ಅವರ ಎದುರಿಗೆ ಅಬೂಸೂಫಿಯಾನರನ್ನು ನಿಲ್ಲಿಸಿ ಚಕ್ರವರ್ತಿ ಈ ರೀತಿ ಹೇಳಿದರು: ನಾನು ಮಕ್ಕದಲ್ಲಿ ಪ್ರವಾದಿತ್ವ ವಾದಿಸಿದ ಮುಹಮ್ಮದರ ಕುರಿತು ಕೆಲವು ವಿಷಯಗಳನ್ನು ನಿಮ್ಮ ನೇತಾರರಲ್ಲಿ ಕೇಳುತ್ತೇನೆ. ಅದಕ್ಕವರು ಉತ್ತರಿಸುವರು. ಈ ಉತ್ತರ ಸರಿಯಿಲ್ಲದಿದ್ದರೆ ನಿಮ್ಮಲ್ಲಿ ಯಾರು ಬೇಕಾದರೂ ಅದನ್ನು ತಿದ್ದಬಹುದು. ಹೀಗೆ ಹೇಳಿ ಅವರು ಅಬುಸೂಫಿಯಾನರಲ್ಲಿ ಪ್ರಶ್ನೆ ಆರಂಭಿಸಿದರು.

ಹಿರ್‌ಕಲ್: "ಮುಹಮ್ಮದ್ ಈ ವಾದ ಹೊರಡಿಸುವುದಕ್ಕಿಂತ ಮೊದಲು ನಿಮ್ಮಲ್ಲಿ . ಯಾರಾದರೂ ಅವರು ಸುಳ್ಳು ಹೇಳುವವರೆಂದು ಆರೋಪಗಳನ್ನು ಹೊರಡಿಸಿದ್ದರೋ?'

ಅಬೂಸುಫಿಯಾನ್: "ಇಲ್ಲ."

ಹಿರ್‌ಕಲ್: "ಅವರ ಬಾಹ್ಯವಾದ ಸಾಮರ್ಥ್ಯದ ಕುರಿತೂ ನ್ಯಾಯ ವಿಧಿಸುವ ನೈಪುಣ್ಯದ ಕುರಿತೂ ನೀವು ಏನು ಹೇಳುವಿರಿ?"

ಅಬೂಸೂಫಿಯಾನ್: "ಅವರ ಸಾಮರ್ಥ್ಯದಲ್ಲಿ ನಾವು ಏನೂ ಕಡಿಮೆ ಕಂಡಿಲ್ಲ. ಅದೇ ರೀತಿ ನ್ಯಾಯ ವಿಧಿಸುವುದರಲ್ಲೂ."

ಹಿರ್‌ಕಲ್ : "ಅವರು ಒಪ್ಪಂದ, ಕರಾರು ಯಾವಾಗಲಾದರೂ ಉಲ್ಲಂಘಿಸಿರುವರೋ?'

ಅಬೂಸುಫಿಯಾನ್: "ಇದುವರೆಗೂ ಇಲ್ಲ. ಮುಂದೆ ಕಾದು ನೋಡಬೇಕು."

ಇದು ಹ। ಮುಹಮ್ಮದ್ ಮುಸ್ತಫಾರವರ(ಸ) ಬದ್ಧ ವೈರಿಯಾಗಿದ್ದ ಅಬೂಸುಫಿಯಾನ್‌ರ ಹೇಳಿಕೆ.

ಹ। ನಬಿಕರೀಂ(ಸ) ತನಗೆ ನುಬುವ್ವತ್ ಲಭಿಸಿದ ಸಂಗತಿಯನ್ನು ಮಕ್ಕಾ ನಿವಾಸಿಗಳಿಗೆ ತಿಳಿಸಲಿಕ್ಕಾಗಿ ಅವರನ್ನೆಲ್ಲಾ ಒಂದು ಬೆಟ್ಟದ ಸಮೀಪ ಒಟ್ಟುಗೂಡಿಸಿ ಹೇಳಿದರು: "ಈಗ ನಾನು ನಿಮ್ಮಲ್ಲಿ ಒಂದು ಸಂಗತಿ – ಈ ಬೆಟ್ಟದ ಆಚೆ ಕಡೆಯ ತಪ್ಪಲಿನಲ್ಲಿ ನಮ್ಮನ್ನು ಆಕ್ರಮಿಸಲು ಒಂದು ಸೈನ್ಯ ಬಂದು ನಿಂತಿದೆ ಎಂದು ಹೇಳಿದರೆ ನೀವು ಅದನ್ನು ನಂಬುವಿರೋ?" ಆಗ ಮಕ್ಕಾ ನಿವಾಸಿಗಳು ಮರುನುಡಿದರು: "ಮುಹಮ್ಮದ್ ಇದುವರೆಗೂ ಒಂದು ಸುಳ್ಳನ್ನಾದರೂ ಹೇಳಿದ ಅನುಭವ ನಮಗಿಲ್ಲ. ಹಾಗಿರುವಾಗ ನೀನು ಈಗ ಹೇಳುವುದೂ ನಿಜವೆಂದೇ ನಾವು ನಂಬುವೆವು. ಆ ಸೈನ್ಯ ಈಗ ಅಲ್ಲಿ ಬರಲು ಸಾಧ್ಯವಿಲ್ಲ. ಆದರೂ ಮುಹಮ್ಮದ್ ಈ ಮಾತನ್ನು ಹೇಳಿದರೆ ಖಂಡಿತವಾಗಿಯೂ ನಾವು ಅದನ್ನು ಒಪ್ಪುತ್ತೇವೆ. ಕಾರಣ, ಮುಹಮ್ಮದ್ ಇದುವರೆಗೂ ನಿಜವನ್ನಲ್ಲದೆ ಹೇಳಿಲ್ಲ." ಆಗ ನಬಿಕರೀಂ(ಸ) ಹೇಳಿದರು: "ನಾನು ನಿಮಗೆ ಮುನ್ನೆಚ್ಚರಿಕೆ ನೀಡಲಿಕ್ಕಾಗಿ ಅಲ್ಲಾಹನಿಂದ ನಿಯುಕ್ತನಾದ ಪ್ರವಾದಿಯಾಗಿರುವೆನು."

ಇದನ್ನು ಆಲಿಸಿದ ಮಕ್ಕಾ ನಿವಾಸಿಗಳು ತಕ್ಷಣವೇ ಈಗ ನೀನು ಹೇಳುತ್ತಿರುವುದು ಸುಳ್ಳೆಂದು ನಿರಾಕರಿಸಿದರು. ಅದುವರೆಗೂ ಮುಹಮ್ಮದ್ ಸತ್ಯಸಂಧನೆಂದು ಹೇಳಿದ ಅಬೂಲಹಬ್, "ಇದಕ್ಕಾಗಿ ನಮ್ಮನ್ನೆಲ್ಲಾ ಇಲ್ಲಿಗೆ ಕರೆತಂದೆಯಾ, ನಾಶವಾಗಿ ಹೋಗು" ಎಂದು ಕೂಗಾಡಿದನು.

ಹ। ಮುಹಮ್ಮದ್ ಮುಸ್ತಫಾರ(ಸ) ನುಬುವ್ವತ್ ವಾದದ ಮುಂಚಿನ ಜೀವಿತ ಪರಮ ಪರಿಶುದ್ಧವಾಗಿತ್ತೆಂದೂ ಅವರ ವಿರೋಧಿಗಳೆಲ್ಲರೂ ದೃಢ ಮನಸ್ಸಿನಿಂದ ಒಪ್ಪಿಕೊಂಡಿರುತ್ತಾರೆ. ಇದೇ ರೀತಿ ಹ। ಅಹ್ಮದ್‌ರ(ಅ) ಮಹ್‌ದೀ ಮಸೀಹ್ ವಾದದ ಮುಂಚಿನ ಜೀವನ ಹೇಗಿತ್ತೆಂದು ನೋಡೋಣ.

ಮುಜಾಹಿದ್ ಪಂಡಿತನಾದ ಅಬುಲ್‌ಹಸನ್ ಅಲಿ ನದ್‌ವಿ ಬರೆದ ಖಾದಿಯಾನಿಸಂ ಎಂಬ ಪುಸ್ತಕದ ಪುಟ 55ರಲ್ಲಿ ಈ ರೀತಿ ಬರೆದಿದೆ:

"ಇಸ್ಲಾಮಿನ ರಕ್ಷಣೆಗಾಗಿ ಧ್ವನಿ ಎತ್ತಿ ಅವರಿಗುಂಟಾದ ತುಂಬಾ ಇಲ್‌ಹಾಮುಗಳ ಮತ್ತು ದರ್ಶನಗಳ, ಸಂತೋಷವಾರ್ತೆಗಳ ಪ್ರಕಾಶದಲ್ಲಿ ಜನರು ಅವರನ್ನು ಒಬ್ಬ ವಲಿ ಎಂದು ನಂಬಿದ್ದರು." (ಖಾದಿಯಾನಿಸಂ ಪುಟ 55)

ವಾಗ್ದತ್ತ ಮಹ್‌ದೀ ಮಸೀಹ್ ಹ॥ ಮಿರ್ಝಾ ಗುಲಾಂ ಅಹ್ಮದ್‌ರ(ಅ) ಜೀವನ ಪಾವನವೂ ಪವಿತ್ರವೂ ಆಗಿತ್ತು. ಜನರು ಅವರನ್ನು ಒಬ್ಬ ವಲಿ ಎಂದು ನಂಬಿದ ಈ ಸಂದರ್ಭವನ್ನು ಹ॥ ಅಹ್ಮದ್(ಅ) ದುರುಪಯೋಗಪಡಿಸಿದರು ಎಂದು ಅಬುಲ್ ಹಸನ್ ಅಲಿ ನದ್‌ವಿ ಬರೆದಿದ್ದಾರೆ. ಇದು ಸಹ ಅವರ ಸತ್ಯತೆಗೆ ಸಾಕ್ಷಿಯಾಗಿದೆ.

ಹ॥ ಅಹ್ಮದ್‌ರವರ(ಅ) ಸಹಪಾಠಿಯೂ ಮಿತ್ರರೂ ಅಹಲೆ ಹದೀಸ್ ಉನ್ನತ ಪಂಡಿತರೂ, ಅಲ್ಲದೆ ಕೊನೆಗೆ ಹ॥ ಅಹ್ಮದ್‌ರವರ(ಅ) ಬದ್ಧ ವೈರಿಯೂ ಆದ, ಅಬೂ ಸಯೀದ್ ಮುಹಮ್ಮದ್ ಹುಸೈನ್ ಬಟಾಲವಿಯವರು, ಹ॥ ಅಹ್ಮದ್(ಅ) ತಾನು ಮಹ್‌ದೀ ಮಸೀಹ್ ವಾದ ಹೊರಡಿಸುವುದಕ್ಕಿಂತ ಮೊದಲು ಬರೆದ ಬರಾಹೀನೆ ಅಹ್ಮದಿಯಾ ಎಂಬ ಗ್ರಂಥದ ಕುರಿತು, ತನ್ನ ಪತ್ರಿಕೆಯಾದ ಇಶಾಅತೆ ಸುನ್ನ ಎಂಬ ಪತ್ರಿಕೆಯಲ್ಲಿ ಹೀಗೆ ರಿವ್ಯೂ ಬರೆದರು:

"ನಮ್ಮ ಅಭಿಪ್ರಾಯದಲ್ಲಿ ಈ ಗ್ರಂಥವು ಈ ಕಾಲದಲ್ಲಿ ಇಂದಿನ ಪರಿಸ್ಥಿತಿಯ ನೋಟದಲ್ಲಿ, ಇಸ್ಲಾಮಿನಲ್ಲಿ ಇಲ್ಲಿಯವರೆಗೂ ಪ್ರಕಟಿಸಿಲ್ಲದಂತಹ ನಿಸ್ತುಲ್ಯವಾದ ಒಂದು ಗ್ರಂಥವಾಗಿದೆ. ಧನದಿಂದಲೂ ದೇಹದಿಂದಲೂ ಲೇಖನಿಯಿಂದಲೂ ನಾಲಗೆಯಿಂದಲೂ ಪ್ರವರ್ತನೆಯಿಂದಲೂ ಮಾತಿನಿಂದಲೂ ಇಸ್ಲಾಮಿಗಾಗಿ ಈ ಗ್ರಂಥಕರ್ತರ ಹಾಗೆ ಸೇವೆ ಸಲ್ಲಿಸಿರುವವರು ಪೂರ್ವಿಕ ಮುಸ್ಲಿಮ್‌ರಲ್ಲೂ ತುಂಬಾ ವಿರಳವಾಗಿಯೇ ಕಾಣಬಹುದು. ನಮ್ಮ ಈ ಮಾತನ್ನು ಏಷ್ಯನ್ನರ ಹೊಗಳಿಕೆ ಎಂದು ಯಾರಾದರೂ ಭಾವಿಸುವುದಾದರೆ, ಇಸ್ಲಾಮಿನ ವಿರೋಧಿಗಳನ್ನೂ ಮುಖ್ಯವಾಗಿ ಆರ್ಯ ಸಮಾಜ ಮತ್ತು ಬ್ರಹ್ಮ ಸಮಾಜವನ್ನೂ ಖಂಡಿಸಿರುವ ಒಂದೇ ಒಂದು ಗ್ರಂಥವನ್ನಾದರೂ ಅವರು ತೋರಿಸಿ ಕೊಡಲಿ. ಧನದಿಂದಲೂ ದೇಹದಿಂದಲೂ ಲೇಖನಿಯಿಂದಲೂ ನಾಲಗೆಯಿಂದಲೂ ಸರ್ವೋಪರಿ ಜೀವಿತ ರೀತಿಯಿಂದಲೂ ಇಸ್ಲಾಮಿನ ವೈರಿಗಳನ್ನು ಮತ್ತು ಇಲ್‌ಹಾಮಿನ ನಿಷೇಧಿಗಳನ್ನು ಖಂಡಿಸಿ ಸಂಶಯ ಇರುವವರನ್ನು ತನ್ನ ಸಮೀಪ ಬಂದು ಅನುಭವ ಸಾಕ್ಷ್ಯ ಸ್ವೀಕರಿಸಲು ಗಂಡೆದೆಯಿಂದ ಆಹ್ವಾನಗೈದು ಇತರ ಸಮುದಾಯದವರಿಗೆ ಅನುಭೂತಿಗಳನ್ನು ರುಚಿಸುವಂತೆ ಮಾಡಿರುವ ಮೂರು, ನಾಲ್ಕು ಜನರನ್ನಾದರೂ ತೋರಿಸಿ ಕೊಡಲಿ. (ಇಶಾಅತೆ ಸುನ್ನ ಸಂ:9, ಪುಟ 169-170)

ಹ॥ ಮುಹಮ್ಮದ್ ಮುಸ್ತಫಾರವರ(ಸ) ವಿರೋಧಿಗಳು ಆ ಮಹಾತ್ಮರ ನುಬುವ್ವತ್ ವಾದದ ಮುಂಚೆ ಯಾವ ರೀತಿಯ ಮಾತನ್ನು ಹೇಳಿದ್ದರೋ ಅದೇ ಮಾತನ್ನು ಹ॥ ಅಹ್ಮದ್‌ರ(ಅ) ವಾದಕ್ಕೆ ಮುಂಚೆ ಅವರ ವಿರೋಧಿಗಳೂ ಹೇಳಿರುವರು.

ಇನ್ನು ಹ॥ ಮುಹಮ್ಮದ್ ಮುಸ್ತಫಾರ(ಸ) ಹಿಂದಿನ ಜೀವನ ಅಂದರೆ ನುಬುವ್ವತ್ ವಾದಿಸುವುದಕ್ಕಿಂತ ಮುಂಚಿನ ಜೀವನ ಹೇಗಿತ್ತೆಂದೂ ಪವಿತ್ರ ಖುರ್‌ಆನ್ ಏನು ಹೇಳುತ್ತದೆಂದೂ ನೋಡೋಣ. ವಿರೋಧಿಗಳೊಡನೆ ಹೀಗೆ ಕೇಳಲು ಅಲ್ಲಾಹು ಮುಹಮ್ಮದ್ ಪೈಗಂಬರರಿಗೆ(ಸ) ಆದೇಶಿಸುತ್ತಾನೆ:

"ಇದಕ್ಕೆ ಮುಂಚೆ ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸುತ್ತಿದ್ದೆನಲ್ಲವೇ? ಅದರೂ ನೀವು ಮನವರಿಕೆ ಮಾಡುವುದಿಲ್ಲವೇ?" (ಪವಿತ್ರ ಖುರ್‌ಆನ್ 10:17)

ಅಂದರೆ, ಮುಹಮ್ಮದ್ ಮುಸ್ತಫಾರ(ಸ) ನುಬುವತ್ ವಾದಿಸುವುದಕ್ಕಿಂತ ಮೊದಲಿನ ಜೀವನ ಪರಿಪಾವನವೂ ಪರಿಶುದ್ಧವೂ ಆಗಿತ್ತೆಂದು ಅವರ ವಿರೋಧಿಗಳು ಹೇಳಿರುವರು.

ಇದೇ ರೀತಿ ಹ॥ ಅಹ್ಮದ್(ಅ) ತನ್ನ ಗ್ರಂಥವಾದ, ತದ್‌ಕಿರತು ಶಹಾದತೈನ್‌ನಲ್ಲಿ ಈ ರೀತಿ ಹೇಳಿರುವರು: "ನನ್ನ ಹಿಂದಿನ ಜೀವನದಲ್ಲಿ ಅಂದರೆ ನುಬುವ್ವತ್ ವಾದ ಹೊರಡಿಸುವವರೆಗಿನ ಜೀವನದಲ್ಲಿ ಏನಾದರೂ ಒಂದು ಸುಳ್ಳಾಗಲಿ, ವಂಚನೆಯಾಗಲಿ, ಮೋಸವಾಗಲಿ ಇದೆ ಎಂದು ತೋರಿಸಿ ಕೊಡಲು ನಿಮ್ಮಲ್ಲಿ ಯಾರಿರುವಿರಿ? ಹಿಂದಿನಿಂದಲೂ ನಾನು ವಂಚನೆ, ಸುಳ್ಳು, ಮೋಸದಲ್ಲಿ ಮುಂದುವರಿದವನಾಗಿದ್ದಿದ್ದರೆ ಈಗ ನಾನು ಹೇಳುವುದೂ ಸುಳ್ಳೆಂದು ನಿಮಗೆ ಹೇಳಬಹುದಿತ್ತು. ನನ್ನ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕಿ ಇಲ್ಲದ ರೀತಿ ಅಲ್ಲಾಹು ನನ್ನನ್ನು ಸಂರಕ್ಷಿಸಿರುತ್ತಾನೆ. ಇದು ಅಲ್ಲಾಹನ ಅತಿ ಮಹತ್ತಾದ ಒಂದು ಅನುಗ್ರಹವಾಗಿದೆ. ಚಿಂತನೆ ಮಾಡುವವರಿಗೆ ಇದು ದೃಷ್ಟಾಂತವಾಗಿದೆ." (ತದ್‌ಕಿರತುಶಹಾದತೈನ್)

ಹ॥ ಮುಹಮ್ಮದ್ ಪೈಗಂಬರರ(ಸ) ಕುರಿತು ಅಲ್ಲಾಹನು ಹಗೇಳಿರುವುದು ಅಫಲಾ ತಅ್‌ಖಿಲೂನ್ – ನೀವೇಕೆ ಮನವರಿಕೆ ಮಾಡುವುದಿಲ್ಲ ಎಂದಾಗಿದೆ. ಇಲ್ಲಿ ಹ॥ ಅಹ್ಮದ್(ಅ) ಹೇಳುತ್ತಾರೆ – ಚಿಂತನೆ ಮಾಡುವವರಿಗೆ ಇದು ದೃಷ್ಟಾಂತವಾಗಿದೆ ಎಂದು.

ಇದು ಒಬ್ಬ ಸಂದೇಶವಾಹಕ ತಾನು ಅಲ್ಲಾಹು ಕಳುಹಿಸಿದ ಅಲ್ಲಾಹನ ಸಂದೇಶವಾಹಕನ ವಾದದ ಮುಂಚಿನ ಸತ್ಯಕ್ಕೆ ಸಾಕ್ಷಿಯಾಯಿತು. ಒಬ್ಬ ತಾನು ನಬಿ ಅಥವಾ ಪ್ರವಾದಿ ಎಂದು ವಾದಿಸಿದರೆ ಅದು ನಿಜವೋ ಸುಳ್ಳೋ ಎಂದು ನಾವು ಹೇಗೆ ತಿಳಿಯುವುದು? ಹ॥ ನಬಿ ಕರೀಂ(ಸ) ತನ್ನ ಉಮ್ಮತಿನಲ್ಲಿ ಅನೇಕ ಕಳ್ಳ ಪ್ರವಾದಿಗಳು ಬರುವರು ಎಂದು ಭವಿಷ್ಯ ನುಡಿದಿರುವರು. ಅದರೊಂದಿಗೆ ತನ್ನ ಉಮ್ಮತ್‌ನಲ್ಲಿ ಆಗಮಿಸಲಿರುವ ಇಬ್ನು ಮರ್‌ಯಂ ಎಂಬ ಪ್ರವಾದಿಯ ಕುರಿತೂ ಭವಿಷ್ಯವಾಣಿ ನುಡಿದಿರುವರು.

ಕಳ್ಳಪ್ರವಾದಿಯನ್ನೂ ಸತ್ಯಪ್ರವಾದಿಯನ್ನೂ ತುಂಬಾ ಸ್ಪಷ್ಟವಾದ ರೀತಿ ಪವಿತ್ರ ಖುರ್‌ಆನ್ ನಮಗೆ ತೋರಿಸಿಕೊಟ್ಟಿದೆ.

ಹ॥ ಮುಹಮ್ಮದ್ ಮುಸ್ತಫಾ(ಸ) ಸತ್ಯವಂತನೆಂಬುದಕ್ಕೆ ಸಾಕ್ಷಿಯಾಗಿ ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಹೇಳುತ್ತಾನೆ:

"ಇದು ಸರ್ವಲೋಕಗಳ ಪ್ರಭುವಿನಿಂದ ಅವತೀರ್ಣಗೊಂಡದ್ದಾಗಿದೆ. ಆತನು (ನಾವು ಅವತೀರ್ಣಗೊಳಿಸದ) ಕೆಲವು ಸುಳ್ಳು ಮಾತುಗಳನ್ನು ನಮ್ಮದೆಂದು ಹೇಳಿರುತ್ತಿದ್ದರೆ, ನಾವು ಆತನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು. ಅನಂತರ ನಾವು ಆತನ ಜೀವನಾಡಿಯನ್ನೇ ಕೊಯ್ದು ಬಿಡುತ್ತಿದ್ದೆವು. ಆಗ ಅದನ್ನು ತಡೆಯಬಲ್ಲವನು ಯಾರೂ ನಿಮ್ಮಲ್ಲಿ ಇಲ್ಲ." (69 : 44, 48)

ಹ। ಮುಹಮ್ಮದ್ ಮುಸ್ತಫಾ[ಸ] ತಾನು ಅಲ್ಲಾಹನಿಂದ ನಿಯುಕ್ತನಾದ ಪ್ರವಾದಿಯೆಂದು ವಾದಿಸಿದ ನಂತರ 23 ವರ್ಷ ತನ್ನ ವಿರೋಧಿಗಳಿಂದ ಅನೇಕ ವಿಧದ ನಿಂದನೆಗಳಿಗೂ ದೌರ್ಜನ್ಯಗಳಿಗೂ ತುತ್ತಾದರು. ಎಷ್ಟೇ ಕ್ಲೇಶಗಳ ನಡುವೆಯೂ ಅಲ್ಲಾಹನು ತನ್ನಲ್ಲಿ ಅರ್ಪಿಸಿದಂತಹ ದೌತ್ಯವನ್ನು ಪೂರ್ತೀಕರಿಸಿ, ಅಲ್‌ಯೌಮ ಅಕ್‌ಮಲ್‌ತುಲಕುಂ ದೀನಕುಂ ಎಂಬ ಆಯತ್ ಲಭಿಸಿದ ನಂತರ ತನ್ನ 63ನೆಯ ವಯಸ್ಸಿನಲ್ಲಿ ವಫಾತಾದರು.

ಹ। ಮುಹಮ್ಮದ್ ಮುಸ್ತಫಾರ[ಸ] ನುಬುವ್ವತ್ ವಾದದ ನಂತರದ 23 ವರ್ಷದಲ್ಲಿ ಹ। ನಬಿಕರೀಂ[ಸ] ಅಲ್ಲಾಹನ ವಚನವನ್ನಲ್ಲದೆ ತನ್ನದಾದ ಯಾವ ಕಾರ್ಯವನ್ನೂ ಹೇಳಿಲ್ಲ ಎಂಬುದಕ್ಕೆ ಪ್ರಸ್ತುತ ಆಯತ್ ಸಾಕ್ಷಿಯಾಗಿದೆ. ಹಾಗೇನಾದರೂ ಅವರು ಒಂದೇ ಒಂದು ವಾಕ್ಯವನ್ನಾದರೂ ಸ್ವಯಂ ಉಂಟುಮಾಡಿ ಹೇಳಿದ್ದರೆ ಅಲ್ಲಾಹನು ಬಲಗೈಯಿಂದ ಅವರನ್ನು ಹಿಡಿದು ಅವರ ಜೀವನಾಡಿ ಕತ್ತರಿಸಿ ಬಿಡುತ್ತಿದ್ದನು.

ಇದನ್ನು ಒಂದು ಮಾನದಂಡವಾಗಿ ಇಟ್ಟು ಪರಿಶೋಧಿಸೋಣ. ಹ। ಅಹ್ಮದ್[ಅ] ತನ್ನ 40ನೇ ವಯಸ್ಸಿನಲ್ಲಿ ತನಗೆ ಅಲ್ಲಾಹುನಿಂದ ವಹಿ (ಇಲ್‌ಹಾಂ) ಲಭಿಸುತ್ತದೆ ಎಂದು ಘೋಷಿಸಿದರು. ಅವರು ಈ ರೀತಿ ಹೇಳಿದರು:

"ನನ್ನ ಜೀವ ಯಾರ ಕೈಯಲ್ಲಿದೆಯೋ ಆ ಸರ್ವಶಕ್ತನ ಮೇಲೆ ಆಣೆ ಇಟ್ಟು ನಾನು ಹೇಳುತ್ತೇನೆ. ಹ। ಮುಹಮ್ಮದ್ ಮುಸ್ತಫಾ[ಸ] ಭವಿಷ್ಯವಾಣಿ ನುಡಿದ, ಮಸೀಹ್ ಮತ್ತು ಮಹ್‌ದೀ ನಾನೇ ಆಗಿದ್ದೇನೆ. ಇಲ್‌ಹಾಂ ಮುಖಾಂತರ ಅಲ್ಲಾಹನು, ನನಗೆ ತಿಳಿಸಿರುವನು. ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ ಎಂದಾಗಿದೆ ನನ್ನ ನಂಬಿಕೆ. ಖಾತಮುನ್ನಬಿಯ್ಯೀನ್ ಎಂಬುದಾಗಿದೆ ಆ ಮಹಾತ್ಮರ ಕುರಿತಿರುವ ನನ್ನ ಈಮಾನ್. ನನ್ನ ಈ ಪ್ರಸ್ತಾಪನೆ ಸತ್ಯವಾಗಿದೆ ಎಂಬುದಕ್ಕೆ ಅಲ್ಲಾಹನಿಗೆ ಎಷ್ಟು ನಾಮಗಳಿವೆಯೋ ಅಷ್ಟು ಸಲ, ನಬಿಕರೀಂ[ಸ]ರವರ ಉತ್ಕೃಷ್ಟತೆಗಳು ಎಷ್ಟಿವೆಯೋ ಅಷ್ಟು ಸಲ ಅಲ್ಲಾಹನ ನಾಮದಲ್ಲಿ ನಾನು ಪ್ರಮಾಣ ಮಾಡುತ್ತೇನೆ. ಅಲ್ಲಾಹನ ಮತ್ತು ಅವನ ರಸೂಲರ ಆಜ್ಞೆಗಳಿಗೆ ವಿರುದ್ಧವಾದ ಒಂದೇ ಒಂದು ವಿಶ್ವಾಸವನ್ನಾದರೂ ನಾನು ಅಂಗೀಕರಿಸಿಲ್ಲ. ಹಾಗೇನಾದರೂ ತಿಳಿಯುವುದಾದರೆ ಅದು ಅವರ ತಪ್ಪು ಕಲ್ಪನೆಗೆ ಮಾತ್ರವಾಗಿದೆ." (ಕರಾಮತುಸ್ವಾದಿಕೀನ್)

ಹ। ಅಹ್ಮದ್[ಅ] 1835ರಲ್ಲಿ ಜನಿಸಿದರು. ಅವರಿಗೆ 40 ವರ್ಷ ಪ್ರಾಯವಾದಾಗ ಪ್ರಥಮವಾಗಿ ಇಲ್‌ಹಾಂ ಉಂಟಾಯಿತು. (1879ರಲ್ಲಿ). 1889ರಲ್ಲಿ ಪ್ರಥಮ ಬೈಅತ್ ಸ್ವೀಕರಿಸಿದರು. ಅಲ್ಲಿಂದ ಶುರುವಾಯಿತು ಅವರಿಗೆ ವಿರೋಧದ ಬಿರುಗಾಳಿ. ಇದನ್ನೆಲ್ಲಾ ಧೀರತನದಿಂದ ಎದುರಿಸಿ ಅಲ್ಲಾಹನು ತನಗೆ ವಹಿಸಿಕೊಟ್ಟಂತಹ ಮಹ್‌ದೀ ಮಸೀಹರ ದೌತ್ಯವನ್ನು ತುಂಬಾ ಸುಂದರವಾದ ರೀತಿಯಲ್ಲೂ ವಿಜಯಕರವಾಗಿಯೂ ಪೂರೈಸಿ ಅತಿ ದೊಡ್ಡ ಒಂದು ಶಿಷ್ಯ ಸಂಘವನ್ನು ರಚಿಸಿದರು. ಅಲ್ಲಾಹನ ನಾಮದಲ್ಲಿ ಅಹೋರಾತ್ರಿ ಪರಿಶ್ರಮಿಸುವ ಈ ಸಂಘಟನೆಗೆ ಅಹ್ಮದಿಯಾ ಮುಸ್ಲಿಂ ಜಮಾಅತ್ ಎಂದು ನಾಮಕರಣ ಮಾಡಿದರು.

ಕೊನೆಯದಾಗಿ ಅವರು ಅಲ್‌ವಸಿಯ್ಯತ್ ಎಂಬ ಒಂದು ಗ್ರಂಥ ರಚಿಸಿದರು. ಈ ಗ್ರಂಥದಲ್ಲಿ ತನ್ನ ಅಂತ್ಯವು ಸಮೀಪಿಸಿದೆಯೆಂದೂ ಅಲ್ಲಾಹನ ಎರಡನೆಯ ಶಕ್ತಿಯಾದ ಖಿಲಾಫತ್ ಜಾರಿಗೊಳ್ಳುವುದೆಂದೂ ಅದು ಅಂತಿಮ ದಿನದ ವರೆಗೆ ಜಾರಿಯಲ್ಲಿರುವುದೆಂದೂ ತನ್ನ ಅನುಯಾಯಿಗಳಿಗೆ ಸಾಂತ್ವನ ಹೇಳಿದರು. 1908ರಲ್ಲಿ ಹ। ವಾಗ್ದತ್ತ ಮಹ್‌ದೀ ಮಸೀಹರು ವಫಾತಾದರು.

ಪವಿತ್ರ ಖುರ್‌ಆನ್ ಎಲ್ಲಾ ಕಾಲಕ್ಕೂ ಎಲ್ಲಾ ಜನರಿಗೂ ಮಾದರಿಯಾಗಿರುತ್ತದೆ. ಹ। ಮುಹಮ್ಮದ್ ಮುಸ್ತಫಾ[ಸ] ಎರಡು ಲೋಕಗಳ ಅಧಿಪತಿಯಾಗಿರುವರು. ಆ ಮಹಾತ್ಮರಿಗೆ ಅಲ್ಲಾಹು ಖುರ್‌ಆನಿನಲ್ಲಿ ವಿವರಿಸಿದ (69: 46, 47) ವಿಚಾರ, ಅದು ಅಲ್ಲಾಹನ ನಾಮದಲ್ಲಿ ಸುಳ್ಳುಹೇಳುವ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ಹ। ಮುಹಮ್ಮದ್ ಮುಸ್ತಫಾರ[ಸ] ಕಾಲದಿಂದ ಇಲ್ಲಿಯ ತನಕ ಅದೆಷ್ಟೋ ಕಳ್ಳ ಪ್ರವಾದಿಗಳು ಶ್ರಮಿಸಿ ನೋಡಿದರು. ಆದರೆ ಅಲ್ಲಾಹನು ಅವನ ಬಲಗೈಯಿಂದ ಅವರನ್ನು ಹಿಡಿದು, ಅವರ ಜೀವನಾಡಿಯನ್ನೇ ಕತ್ತರಿಸಿಬಿಟ್ಟನು.

ಅಲ್ಲಾಹನು ತನ್ನ ಪ್ರವಾದಿ ಹ। ಮುಹಮ್ಮದ್ ಮುಸ್ತಫಾರ[ಸ] ವಾಗ್ದಾನ ಪ್ರಕಾರ ಹಿಜಿರಿ 14ನೇ ಶತಮಾನದಲ್ಲಿ ಆಗಮಿಸಿದ ಹ। ಮಿರ್ಝಾ ಗುಲಾಂ ಅಹ್ಮದ್‌ರನ್ನು[ಅ] ಆದರಿಸಿ ಸಂರಕ್ಷಿಸಿ ವಿಜಯದ ಸೋಪಾನದಲ್ಲಿ ನಡೆಸುತ್ತಲಿರುವನು.

ಹ। ಮುಹಮ್ಮದ್ ಮುಸ್ತಫಾ[ಸ] ನುಬುವ್ವತಿನ ನಂತರದ 23 ವರ್ಷಗಳನ್ನು ವಿಜಯಕರವಾಗಿ ಸಾಗಿಸಿ ತನ್ನ ಕೊನೆಯ ಕಾಲದಲ್ಲಿ, ಅಲ್ಲಾಹು ಅವರಿಗೆ ಈ ರೀತಿ ತಿಳಿಸಿಕೊಟ್ಟನು:

"ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು, ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು." (5 : 4)

ಇದರ ನಂತರ ಹ। ನಬಿಕರೀಂರವರು[ಸ] ವಫಾತಾದರು.

ಇದೇ ರೀತಿ ಹ। ಅಹ್ಮದ್[ಅ]ರವರು ತನಗೆ ಅಲ್ಲಾಹನಿಂದ ಇಲ್‌ಹಾಂ ಲಭಿಸುವುದು ಎಂದು ಜನರಲ್ಲಿ ಸಾರಿದ ನಂತರ ಹ। ಮುಹಮ್ಮದ್ ಮುಸ್ತಫಾರವರು[ಸ] ಜೀವಿಸಿದ 23 ವರ್ಷ ಅಲ್ಲದೆ ಇನ್ನೂ ಸ್ವಲ್ಪ ಹೆಚ್ಚು ಕಾಲ ಅಂದರೆ ಸುಮಾರು 30 ವರ್ಷ ಜೀವಿಸಿ ಅಲ್‌ವಸಿಯತ್ ಎಂಬ ಗ್ರಂಥವನ್ನು ಬರೆದು ಸ್ವಾಭಾವಿಕವಾಗಿಯೇ ವಫಾತಾದರು.

ಇದು ಅವರ ಸತ್ಯತೆಗೆ ಸಾಕ್ಷಿಯಲ್ಲವೇ?

★

**"ಇನ್ಸಾನಿಯತ್ ಝಿಂದಾಬಾದ್"**

**"ಮಾನವೀಯತೆ ಚಿರಕಾಲ ಬಾಳಲಿ"**

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಜನಾಝ ನಮಾಝ್

ಒಬ್ಬ ಮುಸ್ಲಿಮ್ ಮೃತನಾದರೆ ಮೃತನಿಗೆ ಜನಾಝ ನಮಾಝ್ ಮಾಡುವುದು ಮುಸ್ಲಿಮರ ಸಾಮಾಜಿಕ ಕರ್ತವ್ಯಗಳಲ್ಲೊಂದಾಗಿದೆ. ಜನಾಝ ನಮಾಝಿನಲ್ಲಿ ರುಕೂಅ್, ಸುಜೂದುಗಳಿಲ್ಲ.

ವುಝು ಮಾಡಿ ಜನಾಝ ನಮಾಝಿನ ನಿಯ್ಯತ್ ಮಾಡಿಕೊಂಡು "ಅಲ್ಲಾಹು ಅಕ್‌ಬರ್" ಎಂದು ಹೇಳಿ ಕೈಕಟ್ಟಬೇಕು. ಅನಂತರ ಸುಬ್‌ಹಾನಕಲ್ಲಾಹುಮ್ಮ ಎಂದು ಆರಂಭಿಸುವ ಸ್ತುತಿವಚನವನ್ನೂ ಸೂರತುಲ್ ಫಾತಿಹವನ್ನೂ ಓದಬೇಕು. ಅನಂತರ ಅಲ್ಲಾಹು ಅಕ್‌ಬರ್ ಎಂದು ಹೇಳಿ ದರೂದ್ ಶರೀಫ್ ದುಆ ಓದಬೇಕು. ಅನಂತರ ಮೂರನೆಯ ಬಾರಿ ಅಲ್ಲಾಹು ಅಕ್‌ಬರ್ ಎಂದು ಹೇಳಿ ಕೆಳಗೆ ಸೇರಿಸಿರುವ ಎರಡು ದುಆಗಳನ್ನು ಒಂದರ ನಂತರ ಇನ್ನೊಂದರಂತೆ ಅಥವಾ ಇವುಗಳಲ್ಲಿ ಒಂದು ದುಆವನ್ನು ಮಾತ್ರ ಓದಬೇಕು. ಅನಂತರ ನಾಲ್ಕನೆಯ ಸಾರಿ ಅಲ್ಲಾಹು ಅಕ್‌ಬರ್ ಎಂದು ಹೇಳಿ ಸಲಾಮ್ ಹೇಳಬೇಕು.

## ಜನಾಝ ನಮಾಝಿನ ದುಆಗಳು

اَللّٰهُمَّ اغْفِرْ لِحَيِّنَا وَمَيِّتِنَا وَشَاهِدِنَا وَغَائِبِنَا وَصَغِيْرِنَا
وَكَبِيْرِنَا وَذَكَرِنَا وَاُنْثَانَا اَللّٰهُمَّ مَنْ اَحْيَيْتَهُ مِنَّا فَاَحْيِهِ
عَلَى الْاِسْلَامِ وَمَنْ تَوَفَّيْتَهُ مِنَّا فَتَوَفَّهُ عَلَى الْاِيْمَانِ اَللّٰهُمَّ
لَا تَحْرِمْنَا اَجْرَهُ وَلَا تَفْتِنَّا بَعْدَهُ.

ಅಲ್ಲಾಹುಮ್ಮಗ್‌ಫಿರ್ ಲಿಹಯ್ಯಿನಾ ವ ಮಯ್ಯಿತಿನಾ ವ ಶಾಹಿದಿನಾ ವ ಗಾಇಬಿನಾ ವ ಸಗೀರಿನಾ
ವ ಕಬೀರಿನಾ ವ ಧಕರಿನಾ ವ ಉನ್‌ಸಾನಾ. ಅಲ್ಲಾಹುಮ್ಮ ಮನ್ ಅಹ್‌ಯಯ್‌ತಹೂ ಮಿನ್ನಾ ಫಅಹ್‌ಯಿಹೀ
ಅಲಲ್ ಇಸ್ಲಾಮಿ ವಮನ್ ತವಫ್ಫೈತಹು ಮಿನ್ನಾ ಫತವಫ್ಫಹೂ ಅಲಲ್ ಈಮಾನಿ.
ಅಲ್ಲಾಹುಮ್ಮ ಲಾ ತಹ್‌ರಿಮ್‌ನಾ ಅಜ್‌ರಹೂ ವಲಾ ತಫ್‌ತಿನ್ನಾ ಬಅ್‌ದಹೂ.

ಅರ್ಥ : ನಮ್ಮ ಪೈಕಿ ಜೀವಿಸಿರುವವರಿಗೂ ಮೃತರಾದವರಿಗೂ ನಮ್ಮ ಪೈಕಿ ಹಾಜರಾಗಿರುವವರಿಗೂ ಹಾಜರಾಗದವರಿಗೂ ನಮ್ಮವರಲ್ಲಿ ಹಿರಿಯರಿಗೂ ಕಿರಿಯರಿಗೂ ನಮ್ಮ ಪುರುಷರಿಗೂ ಸ್ತ್ರೀಯರಿಗೂ ನೀನು ಪಾಪದಿಂದ ವಿಮೋಚನೆ ನೀಡು. ಓ ಅಲ್ಲಾಹ್, ನಮ್ಮವರಲ್ಲಿ ಯಾರನ್ನು ನೀನು ಜೀವಂತವಾಗಿಡುತ್ತೀಯೋ ಅವರನ್ನು ನೀನು ಇಸ್ಲಾಮ್ ಧರ್ಮದಲ್ಲಿಯೇ ನೆಲೆ ನಿಲ್ಲಿಸು. ನಮ್ಮವರಲ್ಲಿ ನೀನು ಯಾರನ್ನು ಮೃತಪಡಿಸುತ್ತೀಯೋ ಅವರನ್ನು ನೀನು ಸತ್ಯವಿಶ್ವಾಸದಲ್ಲಿ ಮೃತಪಡಿಸು. ಓ ಅಲ್ಲಾಹ್, ನಮ್ಮನ್ನು ಅದರ ಪುಣ್ಯಫಲದಿಂದ ವಂಚಿತರನ್ನಾಗಿ ಮಾಡಬೇಡ ಮತ್ತು ನಮ್ಮನ್ನು ಆ ನಂತರ ಪರೀಕ್ಷೆಗೆ ಗುರಿಮಾಡಬೇಡ.

اَللّٰهُمَّ اغْفِرْ لَهُ وَارْحَمْهُ وَعَافِهِ
وَاعْفُ عَنْهُ وَاَكْرِمْ نُزُلَهُ وَوَسِّعْ مُدْخَلَهُ وَاغْسِلْهُ
بِالْمَاءِ وَالثَّلْجِ وَالْبَرَدِ وَنَقِّهِ مِنَ الْخَطَايَا كَمَا نَقَّيْتَ
الثَّوْبَ الْاَبْيَضَ مِنَ الدَّنَسِ. وَاَبْدِلْهُ دَارًا خَيْرًا مِنْ دَارِهِ
وَاَهْلًا خَيْرًا مِنْ اَهْلِهِ وَزَوْجًا خَيْرًا مِنْ زَوْجِهِ وَاَدْخِلْهُ
الْجَنَّةَ وَاَعِذْهُ مِنْ عَذَابِ الْقَبْرِ وَمِنْ عَذَابِ النَّارِ

ಅಲ್ಲಾಹುಮ್ಮಗ್‌ಫಿರ್ ಲಹೂ ವರ್‌ಹಮ್‌ಹು ವ ಆಫಿಹೀ ವಅ್‌ಫು ಅನ್‌ಹು ವ ಅಕ್‌ರಿಮ್ ನುಝುಲಹೂ ವ ವಸ್ಸಿಅ್ ಮದ್‌ಖಲಹೂ ವಗ್‌ಸಿಲ್‌ಹು ಬಿಲ್‌ಮಾಇ ವಸ್ಸಲ್‌ಜಿ ವಲ್‌ಬರದಿ ವ ನಖ್ಖಿಹೀ ಮಿನಲ್ ಖತಾಯಾ ಕಮಾ ನಖ್ಖೈತಸ್ಸೌಬಲ್ ಅಬ್‌ಯಝು ಮಿನದ್ದನ್‌ಸಿ. ವ ಅಬ್‌ದಿಲ್‌ಹು ದಾರನ್ ಖೈರನ್ ಮಿನ್ ದಾರಿಹೀ ವ ಅಹ್‌ಲನ್ ಖೈರನ್ ಮಿನ್ ಅಹ್ಲಿಹೀ ವ ಝೌಜನ್ ಖೈರನ್ ಮಿನ್ ಝೌಜಿಹೀ ವ ಅದ್‌ಖಿಲ್‌ಹುಲ್‌ಜನ್ನತ ವ ಅಇಧ್‌ಹು ಮಿನ್ ಅಧಾಬಿಲ್ ಖಬ್‌ರಿ ವ ಮಿನ್ ಅಧಾಬಿನ್ನಾರ್.

ಸೂಚನೆ : ಮೃತಪಟ್ಟ ವ್ಯಕ್ತಿ ಹೆಣ್ಣಾಗಿದ್ದರೆ ಲಹೂ ಎಂಬಲ್ಲಿ ಲಹಾ ಎಂದೂ ಹು ಮತ್ತು ಹೀ ಎಂದು ಬಂದಲೆಲ್ಲಾ ಹಾ ಎಂದೂ ಓದಬೇಕು.

ಮೇಲಿನ ದುಆದ ಅರ್ಥ: ಓ ಅಲ್ಲಾಹ್, ಮೃತಪಟ್ಟ ಈ ವ್ಯಕ್ತಿಗೆ ನೀನು ಕ್ಷಮಾಪಣೆ ನೀಡು. ಆತನಿಗೆ / ಆಕೆಗೆ ಕರುಣೆದೋರು. ಆತನಿಗೆ ಸುಖ ನೀಡು. ಆತನ ಕುಂದುಕೊರತೆಗಳನ್ನು ಕಡೆಗಣಿಸು. ಆತನಿಗೆ ಗೌರವದಿಂದ ಆತಿಥ್ಯ ನೀಡು. ಆತನ ಪ್ರವೇಶದ ಸ್ಥಳ ವಿಶಾಲಗೊಳಿಸು. ಆತನನ್ನು ನೀರಿನಿಂದಲೂ ಮಂಜುಗಡ್ಡೆಯಿಂದಲೂ ಆಲಿಕಲ್ಲುಗಳಿಂದಲೂ ನಿರ್ಮಲಗೊಳಿಸು. ಬಿಳಿ ಬಟ್ಟೆಯನ್ನು

ತೊಳೆದು ಕೊಳೆಯಿಂದ ಶುದ್ಧೀಕರಿಸಿದ ಹಾಗೆ ಆತನನ್ನು ಪಾಪಗಳಿಂದೆಲ್ಲ ಶುದ್ಧೀಕರಿಸು. ಆತನ ಗೃಹಕ್ಕಿಂತ ಉತ್ತಮವಾದ ಒಂದು ಗೃಹವನ್ನೂ ಅತನ ಕುಟುಂಬಕ್ಕಿಂತ ಉತ್ತಮವಾದ ಒಂದು ಕುಟುಂಬವನ್ನೂ ಆತನ ಜೀವನ ಸಂಗಾತಿಗಿಂತ ಉತ್ತಮವಾದ ಓರ್ವ ಜೀವನ ಸಂಗಾತಿಯನ್ನೂ ಆತನಿಗೆ ನೀಡು. ಆತನನ್ನು ಸ್ವರ್ಗದಲ್ಲಿ ನೀನು ಪ್ರವೇಶಗೊಳಿಸು. ಆತನನ್ನು ಖಬ್‌ರಿನ ಶಿಕ್ಷೆಯಿಂದಲೂ ನರಕಾಗ್ನಿಯಿಂದಲೂ ರಕ್ಷಿಸು.

ಪ್ರಾಯಪೂರ್ತಿಯಾಗದ ಮಕ್ಕಳ ಜನಾಝ ನಮಾಝ್ ಮಾಡುವಾಗ ಈ ಕೆಳಗಿನ ದುಆ ಹೇಳಬೇಕು:

اَللّٰهُمَّ اجْعَلْهُ لَنَا فَرَطًا
وَّاجْعَلْهُ لَنَآ اَجْرًا وَّذُخْرًا وَّاجْعَلْهُ لَنَا شَافِعًا وَّمُشَفَّعًا

ಅಲ್ಲಾಹುಮ್ಮಜ್‌ಅಲ್‌ಹು ಲನಾ ಫರತನ್ ವಜ್‌ಅಲ್‌ಹು ಲನಾ ಅಜ್‌ರನ್ ವಧುಖ್ರನ್ ವಜ್‌ಅಲ್‌ಹು ಲನಾ ಶಾಫಿಅನ್ ವ ಮುಶಫ್ಫಅನ್.

ಅರ್ಥ: ಓ ಅಲ್ಲಾಹ್, ಈ ಮಗುವನ್ನು ನಮಗೆ ಮುಂದಾಗಿ ಸಿದ್ಧಪಡಿಸುವವನನ್ನಾಗಿ ಮಾಡು. ಅವನನ್ನು ನೀನು ನಮಗೆ ಉತ್ತಮ ಪ್ರತಿಫಲ ನೀಡಲು ಕಾರಣೀಭೂತನನ್ನಾಗಿ ಮಾಡು. ಅವನನ್ನು ನೀನು ನಮಗೆ ಒಬ್ಬ ಶಿಫಾರಸುಗಾರನನ್ನಾಗಿ ಮತ್ತು ಶಿಫಾರಸು ಸ್ವೀಕರಿಸಲ್ಪಡುವವನನ್ನಾಗಿಯೂ ಮಾಡು.

### ಜನಾಝ ನಮಾಝ್ ಗಾಇಬ್

ಮೃತಪಟ್ಟ ವ್ಯಕ್ತಿಯ ಮಯ್ಯಿತ್ ಕಣ್ಮುಂದೆ ಇಲ್ಲದ ಸಮಯದಲ್ಲಿ ಮತ್ತು ದೂರದ ಸ್ಥಳದಲ್ಲಿ ಯಾರಾದರೂ ಮೃತಪಟ್ಟಿದ್ದರೆ ಮೃತಪಟ್ಟ ವ್ಯಕ್ತಿಗೋಸ್ಕರ ಜನಾಝ ನಮಾಝ್ ಮಾಡಬಹುದು. ಒಂದೇ ನಿಯ್ಯತ್ ಮಾಡಿ ಹಲವು ವ್ಯಕ್ತಿಗಳ ಜನಾಝ ನಮಾಝ್ ಸಹ ಮಾಡಬಹುದು.

## ಸಂಪಾದಕರಿಗೆ ಪತ್ರ

ಮಾನ್ಯ ಮುಹಮ್ಮದ್ ಯೂಸುಫ್ ಸಾಹೇಬ್,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ತಾವು ಕಳುಹಿಸಿದ "ಯುಗರಶ್ಮಿ" ಪ್ರತಿ ತಲಪಿದೆ. ಮಾಶಾಅ್ ಅಲ್ಲಾಹ್, ವಿನ್ಯಾಸ ಚೆನ್ನಾಗಿದೆ. ಲೇಖನಗಳೂ ಫೋಟೋಗಳೂ ಉತ್ತಮ ಮಟ್ಟದ್ದಾಗಿವೆ. ಅಲ್ಲಾಹು ತಮ್ಮ ಪರಿಶ್ರಮವನ್ನು ಸ್ವೀಕರಿಸಲಿ. ಪ್ರಚಾರ ರಂಗದಲ್ಲಿ ಈ ಪತ್ರಿಕೆ ಯಶಸ್ಸನ್ನು ಗಳಿಸಲಿ. ಅಲ್ಲಾಹು ನಿಮಗೆ ಉತ್ತಮ ಆರೋಗ್ಯವನ್ನೂ ದೀರ್ಘಾಯುಸ್ಸನ್ನೂ ದಯಪಾಲಿಸಲಿ.

ಮೌಲಾನ ಝುಹೀರ್ ಅಹ್ಮದ್ ಖಾದಿಮ್
ನಾಝಿರ್ ದಅ್‌ವತೆ ಇಲಲ್ಲಾಹ್, ಖಾದಿಯಾನ್.

## ನಿಧನ ವಾರ್ತೆ

### ಹಾಜಿರ ಸಾಹಿಬ

ಮಡಿಕೇರಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪಿಸಲ್ಪಡಲು ಕಾರಣಕರ್ತರಾಗಿದ್ದ ಮರ್ಹೂಮ್ ಜನಾಬ್ ಯು.ಎಂ.ಎ. ಮೊಹಿದಿನ್ ಸಾಹೇಬರ ಕಿರಿಯ ಪುತ್ರಿಯಾದ ಹಾಜಿರ ಸಾಹಿಬ 02-11-2012 ರಂದು ತನ್ನ 74ನೇ ವಯಸ್ಸಿನಲ್ಲಿ ಮಡಿಕೇರಿಯಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೃತರು ನಾಲ್ವರು ಸಹೋದರರನ್ನೂ ಇಬ್ಬರು ಸಹೋದರಿಯರನ್ನೂ ಅನೇಕ ಬಂಧುಗಳನ್ನೂ ಅಗಲಿದ್ದಾರೆ. ಅಲ್ಲಾಹು ಮೃತರಿಗೆ ಮಗ್ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ. ಆಮೀನ್.

**Love for All** "ಎಲ್ಲರೊಂದಿಗೂ ಪ್ರೀತಿ"

**Hatered for None** "ಯಾರಲ್ಲೂ ದ್ವೇಷವಿಲ್ಲ"

**ಅಹ್ಮದಿಯರಿಗೆ ಸುತ್ತೋಲೆ**

# ತಹ್ರೀಕ್ ಜದೀದಿನ ಹೊಸ ವರ್ಷ ಘೋಷಣೆ

ತಹ್ರೀಕ್ ಜದೀದಿನ 79ನೇ ಹೊಸ ವರ್ಷ ಘೋಷಣೆ ಮಾಡುತ್ತಾ 2012 ನವೆಂಬರ್ 9ರಂದು ಲಂಡನಿನ ಮಸ್ಜಿದ್ ಬೈತುಲ್ ಫುತೂಹ್‌ನಲ್ಲಿ ಮಾಡಿದ ಜುಮುಅ ಖುತುಬದಲ್ಲಿ ಸಯ್ಯಿದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್ (ಅಯ್ಯದಹುಲ್ಲಾಹ್) ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ನುಡಿಗಳ ಪ್ರಕಾಶದಲ್ಲಿ ಆರ್ಥಿಕ ತ್ಯಾಗದ ಪ್ರಾಮುಖ್ಯ ಮತ್ತು ಅನುಗ್ರಹಗಳನ್ನು ವಿವರಿಸಿದರು.

ಒಬ್ಬ ವಿಶ್ವಾಸಿಗೆ ಸಂಬಂಧಿಸಿದಂತೆ, ಆತನು ಸದಾ ಒಳಿತಿನಲ್ಲಿ ಮುನ್ನೇರುವ ತೀವ್ರ ಪರಿಶ್ರಮದಲ್ಲಿ ಇರುವವನೆಂದೂ ಅದಕ್ಕೋಸ್ಕರ ಏನನ್ನೂ ತ್ಯಾಗ ಮಾಡಲು ಸರ್ವಾತ್ಮನಾ ಸನ್ನದ್ಧನಾಗಿರುವನೆಂದೂ ಹುಝೂರ್ ನುಡಿದರು.

ಈ ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರರ(ಸ) ಯಥಾರ್ಥ ಪ್ರೇಮಿಯಾದ ವಾಗ್ದತ್ತ ಮಹ್‌ದೀ ಮಸೀಹ್(ಅ) ಮೂಲಕ ಸ್ಥಾಪಿತವಾದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಮನುಷ್ಯ ಕುಲದ ಸೇವೆಯಲ್ಲಿ ನಿರತವಾಗಲು ಸೌಭಾಗ್ಯ ಸಿದ್ಧಿಸಿದೆ. ಬೈಅತಿನ ನಿಬಂಧನೆಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸಿಕೊಂಡು ಆರ್ಥಿಕ ಲಾಲಸೆಗಳಿಗೆ ತುತ್ತಾಗದೆ ದೈವಿಕ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗ ಕರಗತಮಾಡಲು ಪ್ರತಿಯೊಬ್ಬ ಅಹ್ಮದಿ ಪ್ರಯತ್ನಿಸಬೇಕೆಂದು ಹುಝೂರ್ ಆಹ್ವಾನಿಸಿದರು.

ಪವಿತ್ರ ಖುರ್‌ಆನ್, ಮಾಡಲು ಆಜ್ಞಾಪಿಸುವ ಒಳಿತುಗಳಲ್ಲಿ ದೇವಮಾರ್ಗದಲ್ಲಿ ಗೈಯುವ ಧನತ್ಯಾಗಕ್ಕೆ ದೊಡ್ಡ ಸ್ಥಾನವಿದೆ. ಧನತ್ಯಾಗ ಇಸ್ಲಾಮಿನ ಪ್ರಚಾರಕ್ಕೂ ಮಾನವ ಕುಲದ ಒಳಿತಿಗೂ ಅನಿವಾರ್ಯವಾಗಿದೆ. ಅಹ್ಮದಿಯಾ ಜಮಾಅತಿನ ಕಳೆದ ಒಂದೂಕಾಲು ಶತಮಾನ ಧನತ್ಯಾಗದ ಅತುಲ್ಯ ಇತಿಹಾಸವನ್ನು ರಚಿಸಿದೆ. ಇಂದು ಅಹ್ಮದಿಯರು ಮನುಷ್ಯ ಕುಲದ ಒಳಿತಿಗಾಗಿ ಎಬ್ಬಿಸಲ್ಪಟ್ಟ ಉತ್ತಮ ಸಮುದಾಯವಾಗಿದ್ದು ಒಳಿತುಗಳಲ್ಲಿ ಪರಸ್ಪರ ಸ್ಪರ್ಧಿಸಿ ಮುನ್ನೇರುವವರು.

ಅಹ್ಮದಿಯರಲ್ಲಿ ಬಹುಸಂಖ್ಯಾತರು ಬಹಳ ತುಚ್ಛವಾದ ವರಮಾನದವರಾಗಿದ್ದಾರೆ. ಆದರೆ ಧನತ್ಯಾಗದ ಕಾರ್ಯದಲ್ಲಿ ದೇವಸಂಪ್ರೀತಿಯನ್ನು ಉದ್ದೇಶಿಸಿ ಅಹ್ಮದಿಯರು ಅಸಾಮಾನ್ಯ ಧನತ್ಯಾಗಗಳನ್ನು ಸಮರ್ಪಿಸುತ್ತಾರೆ.

ವಿವಿಧ ದೇಶಗಳ ಚಂದಾ ವಿವರಗಳನ್ನೂ ಚಟುವಟಿಕೆಗಳನ್ನೂ ಧನತ್ಯಾಗಕ್ಕೆ ಸಂಬಂಧಿಸಿದ ಅನೇಕ ಘಟನೆಗಳನ್ನೂ ಹುಝೂರ್ ವಿವರಿಸಿದರು. ಈ ವರ್ಷ 72,15,700 ಸ್ಟರ್ಲಿಂಗ್ ಪೌಂಡ್ (ಸುಮಾರು 61,33,34,500/- ರೂಪಾಯಿಗಳು) ಚಂದಾ ವಸೂಲು ಮಾಡಲಾಗಿದೆ ಎಂದು ಅವರು ಹೇಳಿದರು.

ಬಹಳ ಪ್ರತಿಕೂಲ ಪರಿಸ್ಥಿತಿ ಮತ್ತು ದರಿದ್ರ ಅವಸ್ಥೆ ಇದ್ದರೂ ಪಾಕಿಸ್ಥಾನದ ಅಹ್ಮದಿಯರು ತಮ್ಮ ಪ್ರಥಮ ಸ್ಥಾನವನ್ನು ಕಾಪಾಡಿಕೊಂಡಿದ್ದಾರೆ. ಬೇರೆ ದೇಶಗಳ ಸ್ಥಾನ ಯಥಾಕ್ರಮ ಈ ರೀತಿಯಾಗಿದೆ: ಅಮೇರಿಕ, ಜರ್ಮನಿ, ಬ್ರಿಟನ್, ಕೆನಡ, ಭಾರತ, ಇಂಡೋನೇಶ್ಯ, ಮಿಡ್ಲ್‌ಈಸ್ಟ್, ಆಸ್ಟ್ರೇಲಿಯಾ, ಸ್ವಿಝರ್‌ಲೇಂಡ್, ಬೆಲ್ಜಿಯಂ. ಐದನೇ ಸ್ಥಾನವನ್ನು ಪಡೆದ ಭಾರತ ಅತಿ ಹೆಚ್ಚು ಮೊತ್ತ ವಸೂಲು ಮಾಡಿದ ರಾಷ್ಟ್ರಗಳ ಪೈಕಿ ಮೂರನೇ ಸ್ಥಾನ ಗಳಿಸಿದೆ. ಧನತ್ಯಾಗದಲ್ಲಿ ಮುಂದೆ ನಿಲ್ಲುವ ಭಾರತದ ಮೊದಲ ಹತ್ತು ರಾಜ್ಯಗಳು ಯಥಾಕ್ರಮ ಹೀಗಿವೆ: ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಜಮ್ಮು ಕಾಶ್ಮೀರ, ಪಶ್ಚಿಮ ಬಂಗಾಳ, ಕರ್ನಾಟಕ, ಒರಿಸ್ಸಾ, ಪಂಜಾಬ್, ದೆಹಲಿ, ಉತ್ತರ ಪ್ರದೇಶ. ಮೊದಲಿನ ಹತ್ತು ಸ್ಥಾನಗಳನ್ನು ಪಡೆದ ಜಮಾಅತ್ ಘಟಕಗಳು: ಕೊಯಂಬತ್ತೂರ್, ಕರುಳಾಯಿ, ಕಲ್ಲಿಕೋಟೆ, ಹೈದರಾಬಾದ್, ಖಾದಿಯಾನ್, ಕಣ್ಣೂರ್ ಟೌನ್, ಕೊಲ್ಕತ್ತ, ಪಯಂಗಾಡಿ, ಮಾತ್ತೋಟಂ, ಚೆನ್ನೈ.

ಅಲ್ಲಾಹು ಹುಝೂರರ ಇಚ್ಛೆಗನುಸಾರವಾಗಿ ಧನತ್ಯಾಗದಲ್ಲಿ ಪಾಲುಗೊಳ್ಳಲಿಕ್ಕೂ ಅದರ ಎಲ್ಲ ಅನುಗ್ರಹಗಳಿಗೆ ಇಹಪರ ಲೋಕಗಳಲ್ಲಿ ಹಕ್ಕುದಾರರಾಗಲಿಕ್ಕೂ ನಮಗೆಲ್ಲರಿಗೂ ಸೌಭಾಗ್ಯ ನೀಡಲಿ. ಆಮೀನ್.

ಖುರ್ಷೀದ್ ಅಹ್ಮದ್
ವಕೀಲುಲ್ ಮಾಲ್, ತಹ್ರೀಕ್ ಜದೀದ್,
ಖಾದಿಯಾನ್.

## ಪಾಕಿಸ್ಥಾನಕ್ಕೆ ಬೇಡವಾದ ದೇವಕಣ ವಿಜ್ಞಾನಿ

ಇಸ್ಲಾಮಾಬಾದ್, ಜು.9 : ದೇವಕಣ ಸಂಶೋಧನೆಯ ಆರಂಭ ಘಟ್ಟದಲ್ಲಿ ಈ ಪ್ರಯೋಗಕ್ಕೆ ಮಹತ್ವದ ಯೋಗದಾನ ನೀಡಿರುವ ಪಾಕಿಸ್ಥಾನದ ವಿಜ್ಞಾನಿ ಅಬ್ದುಸ್ ಸಲಾಮ್ ಪಾಕಿಸ್ಥಾನಿಯರಿಂದಲೇ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ. ಜಗತ್ತು ದೇವಕಣ ಪತ್ತೆಯಾದ ಸಂಭ್ರಮವನ್ನು ಆಚರಿಸುತ್ತಿದ್ದಾಗ ಅದಕ್ಕೆ ಪ್ರೇರಣೆಯಾಗಿದ್ದ ದೇಶದ ಏಕೈಕ ನೊಬೆಲ್ ಪುರಸ್ಕೃತ ವಿಜ್ಞಾನಿ ಸಲಾಮ್ ಹೆಸರು ಉಳಿದವರಿಗೆ ಬಿಡಿ ಪಾಕಿಸ್ಥಾನದವರಿಗೇ ನೆನಪಿಗೆ ಬರಲಿಲ್ಲ.

ಪಾಕಿಸ್ಥಾನದ ಅಣ್ವಸ್ತ್ರ ಕಾರ್ಯಕ್ರಮಗಳ ಆರಂಭದ ರೂವಾರಿಯಾಗಿದ್ದ ಸಲಾಮ್ ದೇಶದಲ್ಲಿ ಮೂಲಭೂತವಾದಿಗಳ ಹಿಡಿತ ಬಲವಾದ ಬಳಿಕ ಮೂಲೆಗುಂಪಾದರು. ಸಲಾಮ್ ಅಹ್ಮದಿ ಪಂಗಡಕ್ಕೆ ಸೇರಿರುವುದೇ ಇದಕ್ಕೆ ಕಾರಣ. ಪಾಕಿಸ್ಥಾನ ಸರಕಾರ ಮತ್ತು ತಾಲಿಬಾನ್ ಅಹ್ಮದಿಗಳನ್ನು ಕಾಫಿರರು ಅಥವಾ ಸಂಪ್ರದಾಯ ವಿರೋಧಿಗಳು ಎಂದು ಪರಿಗಣಿಸುತ್ತದೆ. ಶಿಯಾ ಪಂಗಡಕ್ಕೆ ಸೇರಿರುವ ಅಹ್ಮದಿಗಳು ಮುಸ್ಲಿಮರೇ ಅಲ್ಲ ಎಂದು ಪಾಕಿಸ್ಥಾನ ಸರಕಾರ ಶಾಸನಬದ್ಧವಾಗಿ ಘೋಷಿಸಿದೆ.

ವಿಭಜನೆ ಪೂರ್ವದಲ್ಲಿ ಪಾಕಿಸ್ಥಾನದ ಪಾಲಾಗಿರುವ ಭಾಗದಲ್ಲಿ 1926ರಲ್ಲಿ ಜನಿಸಿದ ಸಲಾಂ 12ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. 1979ರಲ್ಲಿ ಅವರು ಕಣ ಭೌತವಿಜ್ಞಾನದ ಸ್ಟಾಂಡರ್ಡ್ ಮೋಡೆಲ್ ಸಂಶೋಧನೆಗಾಗಿ ಸ್ಟೀವನ್ ವೆನ್‌ಬರ್ಗ್ ಜತೆಗೆ ನೊಬೆಲ್ ಪ್ರಶಸ್ತಿ ಹಂಚಿಕೊಂಡಿದ್ದಾರೆ. 1960 ಮತ್ತು 70ರ ದಶಕದಲ್ಲಿ ಸಲಾಂ ಪಾಕ್‌ನಲ್ಲಿ ಮಹತ್ವದ ಸ್ಥಾನಮಾನ ಹೊಂದಿದ್ದರು. ಅಧ್ಯಕ್ಷರ ಮುಖ್ಯ ವೈಜ್ಞಾನಿಕ ಸಲಹೆಗಾರರಾಗಿ ದೇಶದ ಬಾಹ್ಯಾಕಾಶ ಸಂಸ್ಥೆ ಅಣು ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಸ್ಥಾಪನೆಗೆ ನೆರವಾಗಿದ್ದರು. 1998ರಲ್ಲಿ ಪಾಕ್ ಪರೀಕ್ಷಿಸಿದ ಅಣು ಬಾಂಬ್ ನಿರ್ಮಾಣದ ನಾಂದಿ ಹಾಡಿದವರು ಸಲಾಂ. ಇಂತಹ ಉನ್ನತ ವಿಜ್ಞಾನಿಯಾಗಿದ್ದರೂ ಸಲಾಂ ಬದುಕು ಉಳಿದ ಸುಮಾರು 3 ದಶಲಕ್ಷ ಅಹ್ಮದಿಯರಿಗಿಂತ ಭಿನ್ನವಾಗಿರಲಿಲ್ಲ. 1974ರಲ್ಲಿ ಪಾಕ್ ಸಂಸತ್ತು ಸಂವಿಧಾನಕ್ಕೆ ತಿದ್ದುಪಡಿ ತಂದು ಪಾಕ್ ಕಾನೂನಿನಂತೆ ಅಹ್ಮದಿ ಪಂಥದವರು ಮುಸ್ಲಿಮರಲ್ಲ ಎಂದು ಘೋಷಿಸಿತು. ಸಂವಿಧಾನಕ್ಕೆ ಮಾಡಿದ ತಿದ್ದುಪಡಿಯನ್ನು ಪ್ರತಿಭಟಿಸಿ ಸಲಾಂ 1974ರಲ್ಲಿ ಸರಕಾರಿ ಹುದ್ದೆಗೆ ರಾಜೀನಾಮೆ ನೀಡಿದರು ಹಾಗೂ ಇಟಲಿಗೆ ಹೋಗಿ ಸಂಶೋಧನೆಯನ್ನು ಮುಂದುವರಿಸಿದರು. ನೊಬೆಲ್ ಪ್ರಶಸ್ತಿ ಸಿಕ್ಕಿದ ಬಳಿಕ ಪಾಕಿಸ್ಥಾನದ ಹಿಂದಿನ ಅಧ್ಯಕ್ಷ ಜಿಯಾ ಉಲ್ ಹಕ್ ಅವರಿಗೆ ದೇಶದ ಉನ್ನತ ನಾಗರಿಕ ಗೌರವ ಪ್ರಶಸ್ತಿಯನ್ನು ನೀಡಿದರೂ ದೇಶದಲ್ಲಿ ಇದರ ಸಂಭ್ರಮವಿರಲಿಲ್ಲ. ಆದರೆ ಭಾರತ ಸಹಿತ ಇತರ ಹಲವು ದೇಶಗಳು ಸಲಾಂ ಸಾಧನೆಯನ್ನು ಪ್ರಶಂಸಿಸಿವೆ.

ಇಷ್ಟೆಲ್ಲ ಸಾಧನ ಮಾಡಿರುವ ಸಲಾಂ ಬಗ್ಗೆ ಪಾಕಿಸ್ಥಾನದ ಪಠ್ಯಪುಸ್ತಕಗಳಲ್ಲಿ ಒಂದು ಅಧ್ಯಾಯ ಕೂಡ ಇಲ್ಲ. ಪಾಕಿಸ್ಥಾನದ ಅಧಿಕಾರಿಗಳಾಗಲಿ, ಮಾಧ್ಯಮವಾಗಲಿ ಅಪರೂಪಕ್ಕೊಮ್ಮೆಯಾದರೂ ಅವರ ಹೆಸರು ಉಲ್ಲೇಖಿಸುವುದಿಲ್ಲ. ಅಣು ಬಾಂಬ್ ಅಭಿವೃದ್ಧಿಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಹಾಗೂ ಬಳಿಕ ಅಣುತಂತ್ರಜ್ಞಾನವನ್ನು ಇರಾನ್, ಉತ್ತರ ಕೊರಿಯ ಮತ್ತು ಲಿಬಿಯಾ ದೇಶಗಳಿಗೆ ಮಾರಿ ದೇಶದ್ರೋಹ ಎಸಗಿರುವ ಎ.ಕ್ಯೂ. ಖಾನ್ ಮಾತ್ರ ಪಾಕಿಸ್ಥಾನೀಯರಿಗೆ ರಾಷ್ಟ್ರೀಯ ನಾಯಕ. ಇದಕ್ಕೆ ಕಾರಣ ಖಾನ್ ಸುನ್ನಿ ಮುಸ್ಲಿಮನಾಗಿರುವುದು. ಸಾವಿನಲ್ಲೂ ಸಲಾಂ ಸುನ್ನಿಗಳ ದ್ವೇಷಕ್ಕೆ ಗುರಿಯಾಗಿದ್ದಾರೆ. 1996ರಲ್ಲಿ ಇಂಗ್ಲೆಂಡ್‌ನ ಓಕ್ಸ್‌ಫೋರ್ಡ್‌ನಲ್ಲಿ ತೀರಿಕೊಂಡ ಸಲಾಂ ಮೃತದೇಹವನ್ನು ಪಾಕಿಸ್ಥಾನದಲ್ಲಿ ದಫನ ಮಾಡಿ ಮೊದಲ ಮುಸ್ಲಿಮ್ ನೊಬೆಲ್ ಪುರಸ್ಕೃತ ಎಂದು ಬರೆಯಲಾಗಿತ್ತು. ಅನಂತರ ಸ್ಥಳೀಯ ನ್ಯಾಯಾಧೀಶರು ಇದರಲ್ಲಿದ್ದ ಮುಸ್ಲಿಮ್ ಪದವನ್ನು ಕಿತ್ತುಹಾಕಿದ್ದಾರೆ.

**("ಉದಯವಾಣಿ" 10 ಜುಲೈ 2012)**

## ಅಹ್ಮದಿಯರು ಶಿಯಾಗಳಲ್ಲ

ಜು.18 : ದಿನಾಂಕ 10-7-2012ರ ಉದಯವಾಣಿಯಲ್ಲಿ 'ಪಾಕಿಸ್ಥಾನಕ್ಕೆ ಬೇಡವಾದ ದೇವಕಣ ವಿಜ್ಞಾನಿ' ಎಂಬ ಶೀರ್ಷಿಕೆಯಡಿ ಪ್ರಕಟವಾದ ವಾರ್ತೆಯಲ್ಲಿ ಪಾಕಿಸ್ಥಾನದ ವಿಜ್ಞಾನಿ ಅಬ್ದುಸ್ ಸಲಾಮ್ ಪಾಕಿಸ್ಥಾನೀಯರಿಂದಲೇ ನಿರ್ಲಕ್ಷ್ಯಕ್ಕೊಳಗಾದ ಕುರಿತು ವಿವರಿಸಲಾಗಿದೆ. ಅವರು ಅಹ್ಮದಿ ಪಂಗಡಕ್ಕೆ ಸೇರಿರುವುದೇ ಇದಕ್ಕೆ ಕಾರಣ, ಅಹ್ಮದಿಯರು ಶಿಯಾ ಪಂಗಡಕ್ಕೆ ಸೇರಿದವರೆಂದು ಹೇಳಿದೆ. ಮುಸ್ಲಿಮರಲ್ಲಿ ಇರುವ ಎರಡು ಪ್ರಮುಖ ಬಣಗಳು ಸುನ್ನೀ ಮತ್ತು ಶಿಯಾ. ಶಿಯಾ ಬಣಕ್ಕೆ ಸೇರಿದ ಮುಸ್ಲಿಮರು ಮುಹಮ್ಮದ್ ಪೈಗಂಬರರ ಪ್ರಥಮದ ನಾಲ್ವರು ಖಲೀಫರಲ್ಲಿ ಹಝ್ರತ್ ಅಬೂಬಕರ್, ಹ| ಉಮರ್ ಮತ್ತು ಹ| ಉಸ್ಮಾನ್‌ರನ್ನು ಗೌರವಿಸುವುದಿಲ್ಲ. ನಾಲ್ಕನೆಯ ಖಲೀಫರಾದ ಹ| ಅಲಿ ಅವರನ್ನು ಮಾತ್ರ ಗೌರವಿಸುತ್ತಾರೆ. ಅಹ್ಮದಿಯರು ಆ ಬಣಕ್ಕೆ ಸೇರಿದವರಲ್ಲ. ಅವರು ಪೈಗಂಬರರ ಪ್ರಥಮದ ನಾಲ್ವರು ಖಲೀಫರುಗಳನ್ನೂ ಅತ್ಯಂತ ಗೌರವಿಸುತ್ತಾರೆ. ಅವರನ್ನು 'ಖುಲಫಾಉರ್ರಾಶಿದೀನ್' (ಅಲ್ಲಾಹುವಿನಿಂದ ಮಾರ್ಗದರ್ಶನ ಪಡೆದ ಖಲೀಫರು) ಎಂದು ಅಂಗೀಕರಿಸುತ್ತಾರೆ.

**ಮುಹಮ್ಮದ್ ಯೂಸುಫ್ (ಆಧ್ಯಕ್ಷ, ಅಹ್ಮದಿಯಾ ಮುಸ್ಲಿಂ ಮಿಶನ್), ಮಂಗಳೂರು. ("ಉದಯವಾಣಿ" 18 ಜುಲೈ 2012)**

## ದೇವಕಣ : ಪಾಕ್ ವಿಜ್ಞಾನಿಯ ಅವಜ್ಞೆಗೆ ಆಕ್ರೋಶ

ಲಂಡನ್, ಜು.13 : ಇಡೀ ವಿಶ್ವದ ಗಮನಸೆಳೆದ ವಿಜ್ಞಾನಿಗಳ ಇತ್ತೀಚಿನ ಮಹತ್ವದ ದೇವಕಣದ ಸಂಶೋಧನೆಯಲ್ಲಿ ಪ್ರಧಾನ ಕೊಡುಗೆ ನೀಡಿದ ನೋಬೆಲ್ ಪ್ರಶಸ್ತಿ ವಿಜೇತ ಪಾಕಿಸ್ಥಾನ ಮೂಲದ ಅಬ್ದುಸ್ಸಲಾಂ ಅವರನ್ನು ಪಾಕಿಸ್ಥಾನ ನಿರಂತರವಾಗಿ ಕಡೆಗಣಿಸುತ್ತಲೇ ಬಂದಿದೆ. ಅಹ್ಮದೀಯ ಹಿನ್ನೆಲೆಯ ಕಾರಣಕ್ಕಾಗಿ ಪಾಕಿಸ್ಥಾನ ಅಬ್ದುಸ್ಸಲಾಂ ಬಗೆಗೆ ಆಷಾಢಭೂತಿತನವನ್ನು ಪ್ರದರ್ಶಿಸುತ್ತಿದೆ ಎಂದು ಅವರ ಮಗ ಅಹಮದ್ ಸಲಾಂ ವಿಷಾದ ವ್ಯಕ್ತಪಡಿಸಿದ್ದಾರೆ.

ಅಬ್ದುಸ್ಸಲಾಂ ಅವರನ್ನು ಪಾಕಿಸ್ಥಾನ ಕಡೆಗಣಿಸುತ್ತಿರುವುದು ಮಾತ್ರವಲ್ಲದೆ ಅವರ ಬಗೆಗೆ ಅವಜ್ಞೆಯ ಭಾವ ತಾಳಿದೆ. ಭಾರತ ಹಾಗೂ ಇನ್ನಿತರ ದೇಶಗಳಿಂದ ಪೌರತ್ವದ ಕೊಡುಗೆ ಬಂದರೂ ಅವರು ತಮ್ಮ ನಿಧನದವರೆಗೂ ಪಾಕಿಸ್ಥಾನದ ಪೌರತ್ವವನ್ನು ಉಳಿಸಿಕೊಂಡಿದ್ದರು ಎಂದು ಲಂಡನ್‌ನಲ್ಲಿ ಹೂಡಿಕೆ ವ್ಯವಹಾರದಲ್ಲಿ ತೊಡಗಿಕೊಂಡಿರುವ ಅಬ್ದುಸ್ಸಲಾಂ ಅವರ ಮಗ ಅಹಮದ್ ಸಲಾಂ ಹೇಳಿದ್ದಾರೆ. ಪಾಕಿಸ್ಥಾನ ಅಗತ್ಯ ಬಿದ್ದಾಗಲೆಲ್ಲಾ ತನ್ನ ತಂದೆಯಿಂದ ವಿಜ್ಞಾನ ಹಾಗೂ ಪರಮಾಣು ವಿಚಾರಗಳಲ್ಲಿ ಸಲಹೆಗಳನ್ನು ಪಡೆಯುತ್ತಾ ಬಂದಿತ್ತು. ಆದರೆ ಎಂದೂ ಅಧಿಕೃತವಾಗಿ ಪರಿಗಣನೆಗೆ ತೆಗೆದುಕೊಳ್ಳಲು ಹಿಂದೇಟು ಹಾಕಿತು. ಪಾಕಿಸ್ಥಾನದ ಅಣುಶಕ್ತಿ ಹಾಗೂ ಇನ್ನಿತರ ಸಂಸ್ಥೆಗಳು, ತನ್ನ ತಂದೆಯಿಂದ ಗುಪ್ತವಾಗಿ ಸಲಹೆಗಳನ್ನು ಪಡೆದುಕೊಂಡಿದ್ದವು ಎಂದವರು ಹೇಳಿದರು. ತನ್ನ ತಂದೆಗೆ ಪಾಕಿಸ್ಥಾನ ಭಾರೀ ಅಪಮಾನವನ್ನೇ ಮಾಡಿದೆ. ಪಾಕಿಸ್ಥಾನದಲ್ಲಿನ ಅವರ ಗೋರಿಯ ಮೇಲೆ 'ಮುಸ್ಲಿಮ್' ಎಂದು ಬರೆಯಲಾಗಿದೆ. ಆದರೆ ಆರಂಭದಲ್ಲಿ 'ನೋಬೆಲ್ ವಿಜೇತ ಪ್ರಥಮ ಮುಸ್ಲಿಂ' ಎಂದು ಬರೆಯಿಸಲಾಗಿತ್ತು. ಆದರೆ ಸ್ಥಳೀಯ ಮ್ಯಾಜಿಸ್ಟ್ರೇಟ್‌ರ ಆದೇಶದಂತೆ ಇದನ್ನು ಅಳಿಸಿ ಹಾಕಲಾಯಿತು ಎಂದವರು ಹೇಳಿದರು. ತನ್ನ ತಂದೆಯ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಪಾಕ್ ಸರಕಾರದ ಪರವಾಗಿ ಸ್ಥಳೀಯ ಪೋಲೀಸ್ ಇನ್ಸ್‌ಪೆಕ್ಟರ್ ಓರ್ವರನ್ನು ಕಳುಹಿಸಿಕೊಡಲಾಗಿತ್ತು. 1974ರಲ್ಲಿ ಪಾಕಿಸ್ಥಾನದ ಸಂವಿಧಾನಕ್ಕೆ ತಿದ್ದುಪಡಿಯೊಂದನ್ನು ತಂದು ದೇಶದ ಕಾನೂನಿನಲ್ಲಿ ಅಹಮದೀಯರನ್ನು ಮುಸ್ಲಿಮರೆಂದು ಪರಿಗಣಿಸಲಾಗದು ಎಂದು ಸಾರಲಾಗಿತ್ತು ಎಂದು ಅಹಮದ್ ಸಲಾಂ ನೆನಪಿಸಿಕೊಂಡರು.

**("ಉದಯವಾಣಿ" 14 ಜುಲೈ 2012)**

## ಮೊಹಮದ್ ಅಬ್ದುಸ್ ಸಲಾಮ್



ಮೊಹಮ್ಮದ್ ಅಬ್ದುಸ್ ಸಲಾಮ್ ಪಾಕಿಸ್ಥಾನದ ಭೌತವಿಜ್ಞಾನಿ. ವಿಜ್ಞಾನ ಪ್ರಪಂಚಕ್ಕೆ ಅವರು ನೀಡಿದ ಕೊಡುಗೆ ಅಪಾರ. ಪಾಕಿಸ್ಥಾನ ಅಣುರಾಷ್ಟ್ರವಾಗಲು ಅವರ ಕೊಡುಗೆಯೇ ಕಾರಣ. ತಮ್ಮ ಅಪೂರ್ವ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿ ಪಡೆದ ಅವರು ಪಾಕಿಸ್ಥಾನ ಸರ್ಕಾರದ ವಿಜ್ಞಾನ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಅವರು ಅಹ್ಮದೀಯ ಪಂಗಡಕ್ಕೆ ಸೇರಿದವರಾಗಿದ್ದುದರಿಂದ ಪಾಕಿಸ್ಥಾನ ಅವರನ್ನು ಮುಸ್ಲಿಂ ಎಂದು ಪರಿಗಣಿಸಲಿಲ್ಲ. ಇದರಿಂದ ಬೇಸರಗೊಂಡು ಪಾಕಿಸ್ಥಾನ ಸರ್ಕಾರದ ನಿರ್ಧಾರದ ವಿರುದ್ಧ ಪ್ರತಿಭಟಿಸಿ, 1974ರಲ್ಲಿ ಪಾಕಿಸ್ಥಾನ ತೊರೆದು ಇಂಗ್ಲೆಂಡಿಗೆ ಬಂದು ನೆಲೆಸಿದರು. ಅವರು ಅಲ್ಲಿಯೇ ಮರಣಿಸುವವರೆಗೆ ವಾಸಿಸತೊಡಗಿದರು. ಇದು ಅವರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತು. ಪಾಕಿಸ್ಥಾನದ ವಿಜ್ಞಾನಿಯೊಬ್ಬರು ಪ್ರಥಮವಾಗಿ ನೊಬೆಲ್ ಪ್ರಶಸ್ತಿ ಪಡೆದದ್ದು ಮತ್ತು ಮುಸ್ಲಿಂ ವಿಜ್ಞಾನಿಯೊಬ್ಬರು ಇದೇ ಮೊದಲ ಬಾರಿಗೆ ನೊಬೆಲ್ ಪ್ರಶಸ್ತಿ ಗಳಿಸಿದ್ದು ಇಲ್ಲಿ ಪ್ರಾಮುಖ್ಯತೆ ಪಡೆದಿದೆ. ಹಾಗಿದ್ದೂ ಪಾಕಿಸ್ಥಾನದ ಧೋರಣೆ ಅವರ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಕೊನೆಗೆ ಅವರ ಮರಣದ ನಂತರ ಅವರ ದೇಹವನ್ನು ಪಾಕಿಸ್ಥಾನಕ್ಕೆ ತಂದು ಸಕಲ ಸರ್ಕಾರಿ ಗೌರವಗಳೊಂದಿಗೆ ಮಣ್ಣು ಮಾಡಲಾಯಿತು. ಅವರ ಜ್ಞಾಪಕಾರ್ಥ ಪಾಕಿಸ್ಥಾನ ಸರ್ಕಾರ ಒಂದು ಅಂಚೆ ಚೀಟಿಯನ್ನೂ ಹೊರತಂದಿತು. ನಮಗೆ ಅಬ್ದುಸ್ ಸಲಾಮ್ ನೆನಪಾಗುವುದು ಶ್ರೇಷ್ಠ ವಿಜ್ಞಾನಿ ಎಂದಾಗಲೀ, ನೊಬೆಲ್ ಪುರಸ್ಕೃತರೆಂದಾಗಲೀ ಅಲ್ಲ. ಅವರಿಂದು ಎಲ್ಲರ ಸ್ಮೃತಿಪಟಲದಲ್ಲಿರುವುದು ಅವರ ದಾನಗುಣದಿಂದ. ಅವರು ಪಡೆದ ಎಲ್ಲ ಗೌರವಗಳೂ ಪ್ರಶಸ್ತಿಗಳೂ ದೇವರ ಕೃಪೆಯಿಂದ ಮಾತ್ರ ಬಂದವುಗಳು ಎಂದು ನಂಬಿದ್ದರು. ಹೀಗಾಗಿ ದೇವರು ನೀಡಿದ ಎಲ್ಲವನ್ನೂ ದೇವರ ಹೆಸರಿನಲ್ಲಿ ಸಮಾಜಕ್ಕಾಗಿ, ದೀನದಲಿತರ ಉದ್ಧಾರಕ್ಕಾಗಿ ವಿನಿಯೋಗಿಸಿದರು. ಹೀಗೆ ಅವರು ನೀಡಿದ ಹಣದಲ್ಲಿ ನೊಬೆಲ್ ಪಾರಿತೋಷಕದ ಹಣ ಅರವತ್ತಾರು ಸಾವಿರ ಡಾಲರ್, ಬಾರ್ಸಿಲೋನಾ ಬಹುಮಾನ ಒಂದು ಲಕ್ಷ ಡಾಲರ್, ಶಾಂತಿಗಾಗಿ ಅಣು ಬಹುಮಾನ ಮೂವತ್ತು ಸಾವಿರ ಪೌಂಡ್, ಎಡಿನ್‌ಬರೋ ಬಹುಮಾನ ಐದು ಸಾವಿರ ಪೌಂಡ್, ಹೀಗೆ ಬಂದ ಎಲ್ಲ ನಗದು ಬಹುಮಾನವನ್ನೂ ತನ್ನ ಸ್ವಂತಕ್ಕೆ ಬಳಸದೆ ಅನೇಕ ದತ್ತಿ ಸಂಸ್ಥೆಗಳಿಗೆ, ಶಾಲಾ ಕಾಲೇಜುಗಳಿಗೆ ದಾನ ಮಾಡಿದರು. ಇದು ಅವರ ಸಮಾಜಮುಖಿ ನಡವಳಿಕೆಯನ್ನು ಮತ್ತು ದಾನ ಗುಣವನ್ನು ತೋರಿಸುತ್ತದೆ.

**ಪ್ರೊ. ಎಂ. ಎಸ್. ಸುಂದರರಾಜ್, ಶಿವಮೊಗ್ಗ. ("ಕನ್ನಡ ಪ್ರಭ"-22 ನವೆಂಬರ್ 2012)**

## ಸಹಜ ಗರ್ಭಧಾರಣೆ : ಪೋಪ್ ಕರೆ

ವ್ಯಾಟಿಕನ್, ಫೆ. 26: ದಂಪತಿಗಳು ಕೃತಕ ಗರ್ಭಧಾರಣೆ ವಿಧಾನಗಳನ್ನು ಬಳಸಬಾರದೆಂದು ಕರೆ ನೀಡಿರುವ ಪೋಪ್ ಹದಿನಾರನೇ ಬೆನೆಡಿಕ್ಟ್, ಗಂಡ ಮತ್ತು ಹೆಂಡತಿ ನಡುವಣ ಸಹಜ ಮಿಲನ ಕ್ರಿಯೆ ಗರ್ಭಧಾರಣೆಯ ಸಮ್ಮತ ವಿಧಾನ ಎಂದಿದ್ದಾರೆ.

ಗರ್ಭ ಧರಿಸಲು ಪ್ರನಾಳ ಶಿಶು ಮುಂತಾದ ಕೃತಕ ವಿಧಾನಗಳನ್ನು ಬಳಸುವುದು ಉದ್ಧಟತನ ಎಂದು ರೋಮ್‌ನಲ್ಲಿ ಸಂತಾನ ಹೀನತೆ ಬಗ್ಗೆ ನಡೆದ ಮೂರು ದಿನಗಳ ವಿಚಾರಗೋಷ್ಠಿಯಲ್ಲಿ ಪೋಪ್ ಹೇಳಿದ್ದಾರೆ. ಹೊಸ ಮಾನವ ಪೀಳಿಗೆಯನ್ನು ಭೂಮಿಗೆ ತರಲು ವಿವಾಹವೊಂದೇ ಸಮ್ಮತ ವಿಧಾನವೆನ್ನುವ ತನ್ನ ನಿಲುವನ್ನು ಚರ್ಚ್ ವಿಜ್ಞಾನಿಗಳಿಗೆ ಮತ್ತು ವೈದ್ಯರಿಗೆ ಸ್ಪಷ್ಟಪಡಿಸಿದೆ. ಮಾನವೀಯತೆ ಮತ್ತು ಕ್ರೈಸ್ತ ಗ್ರಹಿಕೆ ಸೃಷ್ಟಿಯನ್ನು ಒಂದು ಉತ್ಪನ್ನ ಎಂದು ಭಾವಿಸುವುದಿಲ್ಲ. ಅದು ಪತಿ ಪತ್ನಿಯರ ನಡುವಣ ಪ್ರೀತಿಯ ಅಭಿವ್ಯಕ್ತಿಯ ಫಲವಾಗಿರಬೇಕು. ದೈಹಿಕವಾದ ಅಭಿವ್ಯಕ್ತಿಯ ಜತೆಗೆ ಧಾರ್ಮಿಕ ಅಭಿವ್ಯಕ್ತಿಯೂ ಇಲ್ಲಿ ಮುಖ್ಯ ಎಂದು ಪೋಪ್ ಹೇಳಿರುವುದನ್ನು ಡೇಲಿ ಮೇಲ್ ಪತ್ರಿಕೆ ವರದಿ ಮಾಡಿದೆ. ಕೃತಕ ಗರ್ಭಧಾರಣೆಯ ವ್ಯಾಮೋಹವನ್ನು ಬಿಟ್ಟುಬಿಡುವಂತೆ ತಜ್ಞರಿಗೆ ಹೇಳಿರುವ ಪೋಪ್ ಇದರಿಂದ ಸಿಗುವ ಸುಲಭದ ಗಳಿಕೆ ಪಾಪ. ಸೃಷ್ಟಿಕರ್ತನ ವಿರುದ್ಧ ಉದ್ಧಟತನ ಸಲ್ಲದು ಎಂದಿದ್ದಾರೆ. ವೀರ್ಯ ಅಥವಾ ಅಂಡಾಣು ದಾನ ಮತ್ತು ಐವಿಎಫ್‌ನಂತಹ ಗರ್ಭಧಾರಣೆ ವಿಧಾನಗಳನ್ನು ಕ್ಯಾಥೊಲಿಕ್ ಸಮುದಾಯಕ್ಕೆ ನಿಷೇಧಿಸಲಾಗಿದೆ. ಮಾನವ ಸೃಷ್ಟಿಗೆ ಕೃತಕ ವಿಧಾನಗಳನ್ನು ಬಳಸುತ್ತಿರುವ ಇಂದಿನ ವಿಜ್ಞಾನದ ಹಿಂದೆ ಹಣದ ವ್ಯಾಮೋಹ ಕಾಣಿಸುತ್ತಿದೆ ಎಂದು ಪೋಪ್ ಹೇಳಿದ್ದಾರೆ.

**("ಉದಯವಾಣಿ" 27 ಫೆಬ್ರವರಿ 2012)**

## ಎರಡನೇ ಮದುವೆ ಬೇಡ : ದೇವಬಂದ್

ಮುಜಫ್ಫರ್‌ನಗರ್, ಎ. 12: ಭಾರತದಲ್ಲಿರುವ ಮುಸ್ಲಿಮರು ಎರಡನೆಯ ಮದುವೆಯಾಗದಿರುವುದೇ ಲೇಸು ಎಂದು ದಾರುಲ್–ಉಲೂಮ್ ದೇವಬಂದ್ ಹೇಳಿದೆ. ಕೈ ಹಿಡಿದ ಇಬ್ಬರು ಪತ್ನಿಯರಿಗೂ ಸರಿ ಸಮನಾಗಿ ನ್ಯಾಯ ಒದಗಿಸುವುದು ಸುಲಭ ಸಾಧ್ಯವಾಗದ ಕಾರಣ ತಾನು ಈ ಸೂಚನೆ ನೀಡಿರುವುದಾಗಿ ಅದು ಹೇಳಿದೆ. 'ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಇಬ್ಬರು ಪತ್ನಿಯರನ್ನು ತಾರತಮ್ಯವಿಲ್ಲದ ಧೋರಣೆಯಿಂದ ನೋಡುವುದು ಕಷ್ಟ ಎಂದು ದೇವಬಂದ್ ಅಭಿಪ್ರಾಯ ವ್ಯಕ್ತಪಡಿಸಿದೆ. ವ್ಯಕ್ತಿಯೊಬ್ಬ ಮೊದಲ ಹೆಂಡತಿ ಬದುಕಿರುವಾಗಲೇ 2ನೆಯ ಮದುವೆಯಾಗಬಹುದೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ದೇವಬಂದ್ ಈ ವಿವರಣೆ ನೀಡಿದೆ.

ಇಬ್ಬರು ಪತ್ನಿಯರನ್ನು ಏಕಕಾಲಕ್ಕೆ ಹೊಂದಲು ಇಸ್ಲಾಂನಲ್ಲಿ ಅವಕಾಶವಿರುವುದೇನೋ ನಿಜ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಅದಕ್ಕೆ ಅವಕಾಶವಿಲ್ಲ. ಹೀಗಿರುವಾಗ ಇಲ್ಲಿಯ ಮುಸ್ಲಿಮರು 2ನೆಯ ಮದುವೆಯಾಗದಿರುವುದೇ ಲೇಸು ಎಂದು ದೇವಬಂದ್ ಹೇಳಿದೆ. ಇಬ್ಬರು ಪತ್ನಿಯರನ್ನೂ ಸಮನಾಗಿ ನೋಡಿಕೊಳ್ಳಲು ಸಾಧ್ಯವಾಗುವುದಾದರೆ ಎರಡನೆಯ ಮದುವೆಯಾಗುವುದಕ್ಕೆ ಅಡ್ಡಿ ಇಲ್ಲ ಎಂದೂ ಅದು ಹೇಳಿದೆ.

**("ಉದಯವಾಣಿ" 13 ಎಪ್ರಿಲ್ 2012)**

## ಪಾಕಿಸ್ಥಾನ : ತಾಲಿಬಾನ್ ವಿರುದ್ಧ ಫತ್ವಾ

ಲಾಹೋರ್, ಅ.12: ಹದಿಹರೆಯದ ಮಾನವಾಧಿಕಾರಿಗಳ ಕಾರ್ಯಕರ್ತೆ ಮಲಾಲ ಯೂಸುಫ್ ಜಾಯಿಯನ್ನು ಸಾಯಿಸಲೆತ್ನಿಸಿರುವುದು ಇಸ್ಲಾಂ ವಿರೋಧಿ ಕೃತ್ಯ ಎಂದಿರುವ 50ಕ್ಕೂ ಅಧಿಕ ಸುನ್ನಿ ಮುಸ್ಲಿಮ್ ಧರ್ಮಪಂಡಿತರು ತಾಲಿಬಾನ್ ಇಸ್ಲಾಂನ್ನು ಅದರ ತತ್ವ ಮತ್ತು ಬೋಧನೆಗಳಿಗೆ ವಿರುದ್ಧವಾಗಿ ಅರ್ಥಮಾಡಿಕೊಂಡಿದೆ ಎಂದು ಹೇಳಿ ಅದರ ವಿರುದ್ಧ ಫತ್ವಾ ಹೊರಡಿಸಿದ್ದಾರೆ.

ತಲೆಗೆ ಗುಂಡೇಟಾಗಿ ರಾವಲ್ಪಿಂಡಿಯ ಮಿಲಿಟರಿ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿರುವ 14 ವರ್ಷದ ಬಾಲಕಿಗೆ ಬೆಂಬಲ ಸೂಚಿಸುವ ಸಲುವಾಗಿ ಶುಕ್ರವಾರವನ್ನು 'ಖಂಡನಾ ದಿನ'ವನ್ನಾಗಿ ಆಚರಿಸಲು ಮತಪಂಡಿತರು ಹೊರಡಿಸಿರುವ ಧಾರ್ಮಿಕ ಆದೇಶದಲ್ಲಿ ಸೂಚಿಸಲಾಗಿದೆ. ಸುನ್ನಿ ಇತ್ತೆಹದ್ ಕೌನ್ಸಿಲ್‌ಗೆ ಸೇರಿರುವ ಮತಪಂಡಿತರು ಹೊರಡಿಸಿರುವ ಜಂಟಿ ಫತ್ವಾದಲ್ಲಿ ಇಸ್ಲಾಂ ಮಹಿಳೆಯರು ವಿದ್ಯಾವಂತರಾಗುವುದನ್ನು ನಿಷೇಧಿಸಿಲ್ಲ. ಹಲ್ಲೆಕೋರರು ಇಸ್ಲಾಂ ತತ್ವಗಳನ್ನು ಉಲ್ಲಂಘಿಸಿದ್ದಾರೆಂದು ಹೇಳಲಾಗಿದೆ. ಬರೇಲ್ವಿ ಚಿಂತಕಕೂಟದವರಾಗಿರುವ ಈ ಮತಪಂಡಿತರು ತಾಲಿಬಾನ್ ಇಸ್ಲಾಮ್‌ನ್ನು ಅದರ ಬೋಧನೆ ಮತ್ತು ತತ್ವಗಳಿಗೆ ವಿರುದ್ಧವಾಗಿ ಗ್ರಹಿಸಿಕೊಂಡಿದೆ. ಇಸ್ಲಾಮ್ ತನ್ನನ್ನು ಅನುಸರಿಸುವವರು ವಿದ್ಯಾವಂತರಾಗಿರಬೇಕೆಂದು ಹೇಳಿದೆ. ಅಮಾಯಕ ಜನರನ್ನು ಸಾಯಿಸುವುದನ್ನು ಇಸ್ಲಾಮ್ ಕಟ್ಟುನಿಟ್ಟಾಗಿ ನಿಷೇಧಿಸಿದೆ ಎಂದಿದ್ದಾರೆ.

**("ಉದಯವಾಣಿ" 13 ಅಕ್ಟೋಬರ್ 2012)**

## ಆಸ್ಟ್ರೇಲಿಯಾ : ಬುರ್ಖಾ ನಿಯಮ ಇನ್ನಷ್ಟು ಕಠಿಣ

ಮೆಲ್ಬರ್ನ್, ಮಾ. 5: ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ರಾಜ್ಯ ಬುರ್ಖಾ ನಿಯಮವನ್ನು ಇನ್ನಷ್ಟು ಕಠಿಣಗೊಳಿಸಿ ಮುಸ್ಲಿಮ್ ಮಹಿಳೆಯರು ಗುರುತು ಪರಿಶೀಲನೆಗಾಗಿ ಮುಖದ ಪರದೆಯನ್ನು ತೆಗೆಯುವುದನ್ನು ಕಡ್ಡಾಯಗೊಳಿಸಿದೆ.

ಎ. 30ರಿಂದ ಜಾರಿಗೆ ಬರಲಿರುವ ಪರಿಷ್ಕೃತ ಕಾನೂನುಗಳು ನ್ಯಾಯಾಂಗ ಇಲಾಖೆ ಹಾಗೂ ಸರಕಾರಿ ಇಲಾಖೆಗಳ ಅಧಿಕಾರಿಗಳಿಗೆ ಧಾರ್ಮಿಕ ಉಡುಗೆಯಾಗಿರುವ ಬುರ್ಖಾದೊಳಗಿರುವ ಮುಖವನ್ನು ನೋಡುವ ಅಧಿಕಾರ ಕೊಟ್ಟಿದೆ.

ನ್ಯಾಯಾಧೀಶರು ಮತ್ತು ವಕೀಲರು ಇನ್ನು ಮುಂದೆ ಶಾಸನಾತ್ಮಕ ಘೋಷಣೆಗಳಿಗಾಗಿ ಜನರಿಗೆ ಮೋಟಾರ್ ಸೈಕಲ್ ಹೆಲ್ಮೆಟ್ ಸಹಿತ ಎಲ್ಲ ಮುಖವಾಡಗಳನ್ನು ಮತ್ತು ಮುಖ ಪರದೆಗಳನ್ನು ತೆಗೆಯಲು ಹೇಳುವುದು ಕಡ್ಡಾಯ ಎಂದು ನ್ಯೂ ಸೌತ್ ವೇಲ್ಸ್‌ನ ಅಟಾರ್ನಿ ಜನರಲ್ ಗ್ರೆಗ್ ಸ್ಮಿತ್ ತಿಳಿಸಿದ್ದಾರೆ.

ಅರ್ಧ ಅಥವಾ ಪೂರ್ತಿ ಮುಖ ಮುಚ್ಚುವ ಉಡುಗೆ ಧರಿಸಿರುವವರು ಗುರುತು ಪತ್ತೆಗಾಗಿ ತಲೆಯ ಮೇಲಿನ ಉಡುಗೆಯನ್ನು ಕಳಚಬೇಕಾಗುತ್ತದೆ. ಸಂಸತ್ತಿನಲ್ಲಿ ಡಿ. 23ರಂದು ಈ ಹೊಸ ಕಾನೂನು ಮಂಜೂರಾಗಿದೆ.

ಪೊಲೀಸರು ವಿನಂತಿಸಿದಾಗ ಮುಖವಾಡ ತೆಗೆಯಲು ನಿರಾಕರಿಸುವವರಿಗೆ 5,900 ಡಾಲರ್ ದಂಡ ಮತ್ತು 12 ತಿಂಗಳು ಸೆರೆವಾಸ ವಿಧಿಸುವ ಅವಕಾಶ ಹೊಸ ಕಾನೂನಿನಲ್ಲಿದೆ.

ಟ್ರಾಫಿಕ್ ಪೊಲೀಸ್ ಸಿಬಂದಿ ತನ್ನ 'ನಖಾಬ್' ತೆಗೆಯಲು ಯತ್ನಿಸಿದ್ದಾರೆಂದು ಸುಳ್ಳು ಹೇಳಿ ಮಹಿಳೆಯೊಬ್ಬರು ಹಿಂದಿನ ವರ್ಷ ಕೇಸು ದಾಖಲಿಸಿದ ಹಿನ್ನಲೆಯಲ್ಲಿ ಆಸ್ಟ್ರೇಲಿಯಾ ಕಠಿಣ ಬುರ್ಖಾ ಕಾನೂನು ರೂಪಿಸಿದೆ.

ನ್ಯೂ ಸೌತ್ ವೇಲ್ಸ್ ಕಠಿಣ ಬುರ್ಖಾ ಕಾನೂನು ರಚಿಸಿದ ಮೊದಲ ರಾಜ್ಯ. ವಿಕ್ಟೋರಿಯ ಮತ್ತು ಪಶ್ಚಿಮ ಆಸ್ಟ್ರೇಲಿಯ ರಾಜ್ಯಗಳೂ ವೇಲ್ಸ್‌ನ್ನು ಅನುಸರಿಸಲಿವೆ. ಆಸ್ಟ್ರೇಲಿಯದಲ್ಲಿ ಮುಸ್ಲಿಮರು ಅತಿ ಕ್ಷಿಪ್ರವಾಗಿ ಜನಸಂಖ್ಯೆ ಹೆಚ್ಚಿಸಿಕೊಳ್ಳುತ್ತಿರುವ ಅಲ್ಪಸಂಖ್ಯಾಕರು. ಆಸ್ಟ್ರೇಲಿಯದ 23 ದಶಲಕ್ಷ ಜನಸಂಖ್ಯೆಯಲ್ಲಿ ಸುಮಾರು 4 ಲಕ್ಷ ಮುಸ್ಲಿಮರಿದ್ದಾರೆ.

**("ಉದಯವಾಣಿ" 6 ಮಾರ್ಚ್ 2012)**

## 'ರಾಷ್ಟ್ರಪಿತ' ಪದವಿ ಅಧಿಕೃತವಲ್ಲ

ಗುಡ್ಗಾಂವ್, ಜು.11: ಮಹಾತ್ಮಾ ಗಾಂಧೀಜಿಗೆ ಸರಕಾರ ಅಧಿಕೃತವಾಗಿ ರಾಷ್ಟ್ರಪಿತನ ಪದವಿ ನೀಡಿಲ್ಲ. ಆರ್‌ಟಿಐ ಮೂಲಕ ಕೇಳಿದ ಪ್ರಶ್ನೆಯೊಂದಕ್ಕೆ ನೀಡಿರುವ ಉತ್ತರದಲ್ಲಿ ಗೃಹ ಖಾತೆ ಈ ಸಂಗತಿಯನ್ನು ಸ್ಪಷ್ಟಪಡಿಸಿದೆ.

ಮಹಾತ್ಮಾ ಗಾಂಧೀಜಿಯವರು ರಾಷ್ಟ್ರಪಿತನೆಂದು ಜನಾನುರಾಗಿಯಾಗಿದ್ದರೂ ಸರಕಾರ ಅವರಿಗೆ ಔಪಚಾರಿಕವಾಗಿ ಈ ಪದವಿಯನ್ನು ಪ್ರದಾನಿಸಿಲ್ಲ ಎಂದು ಕೇಂದ್ರೀಯ ಸಾರ್ವಜನಿಕ ಮಾಹಿತಿ ಅಧಿಕಾರಿ ಶ್ಯಾಮಲಾ ಮೋಹನ್ ಕಳೆದ ಜೂ. 18ರಂದು ಆರ್‌ಟಿಐ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ಮಹಾತ್ಮಾ ಗಾಂಧೀಜಿಯವರನ್ನು ರಾಷ್ಟ್ರಪಿತನೆಂದು ಘೋಷಿಸಿರುವ ಮಾಹಿತಿಯನ್ನು ಸಮಾಜ ಸೇವಕ ಅಭಿಷೇಕ ಕಡ್ಯಾನ್ ಎನ್ನುವವರು ಕಳೆದ ಮೇ.21ರಂದು ಗೃಹ ಖಾತೆಯಿಂದ ಕೋರಿದ್ದರು. ಅಭಿಷೇಕ್ ಕಡ್ಯಾನ್ ಇಟಲಿಯ ಪ್ರಾಣಿದಯಾ ಸಂಘ ಒಐಪಿಎಗೆ ಸಲಹೆಗಾರರಾಗಿದ್ದಾರೆ.

ಈ ಮೊದಲು ಲಕ್ನೊದ ಆರನೇ ತರಗತಿ ವಿದ್ಯಾರ್ಥಿನಿ ಐಶ್ವರ್ಯಾ ಪರಾಶರ್ ಕೂಡ ಮಹಾತ್ಮಾ ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಘೋಷಿಸಿರುವ ಆದೇಶದ ಪ್ರತಿಯನ್ನು ಕೋರಿ ಮಾಹಿತಿ ಹಕ್ಕು ಕಾಯಿದೆ ಮೂಲಕ ಅರ್ಜಿ ಸಲ್ಲಿಸಿದ್ದರು. ಅವರಿಗೆ ನೀಡಿದ ಉತ್ತರದಲ್ಲಿಯೂ ಈ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ ಎಂದು ಹೇಳಲಾಗಿತ್ತು.

ಕಳೆದ ಫೆಬ್ರವರಿಯಲ್ಲಿ ಐಶ್ವರ್ಯಾ ಪ್ರಧಾನಿಯವರ ಮಾಹಿತಿ ಅಧಿಕಾರಿಗೆ ಈ ಮಾಹಿತಿ ಹಕ್ಕು ಅರ್ಜಿಯನ್ನು ಕಳುಹಿಸಿದ್ದಾಳೆ. ಪ್ರಧಾನಿ ಕಾರ್ಯಾಲಯದಿಂದ ಈ ಅರ್ಜಿಯನ್ನು ಗೃಹ ಖಾತೆಗೆ ಕಳುಹಿಸಲಾಯಿತು. ಗೃಹ ಖಾತೆ ಇದು ತನ್ನ ವ್ಯಾಪ್ತಿಗೊಳಪಟ್ಟ ವಿಚಾರವಲ್ಲ ಎಂದು ಹೇಳಿ ಅರ್ಜಿಯನ್ನು ಪುರಾತತ್ವ ಇಲಾಖೆಗೆ ರವಾನಿಸಿತು.

ಪುರಾತತ್ವ ಇಲಾಖೆ ಐಶ್ವರ್ಯಾಳಿಗೆ ಕಳುಹಿಸಿದ ಉತ್ತರದಲ್ಲಿ ಮಹಾತ್ಮಾ ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಘೋಷಿಸಿರುವ ದಾಖಲೆಗಳು ಲಭ್ಯವಿಲ್ಲ ಎಂದಿದೆ.

**("ಉದಯವಾಣಿ" 12 ಜುಲೈ 2012)**

## ವಾಟರ್ ಕಾರ್ ನಿರ್ಮಿಸಿದ ಪಾಕ್ ಎಂಜಿನಿಯರ್!

ಇಸ್ಲಾಮಾಬಾದ್, ಜು.28: ಪಾಕಿಸ್ಥಾನದ ಎಂಜಿನಿಯರೊಬ್ಬರು ಬರಿಯ ನೀರಿನಿಂದ ಓಡುವ ಕಾರೊಂದನ್ನು ನಿರ್ಮಿಸಿರುವುದು ಪ್ರತ್ಯಕ್ಷದರ್ಶಿಗಳಲ್ಲಿ ದಿಗ್ಭ್ರಮೆ ಮೂಡಿಸಿದೆ. ಪೆಟ್ರೋಲ್ ಅಥವಾ ಡೀಸೆಲ್‌ನ ಬದಲಿಗೆ ಕೇವಲ ನೀರಿನಿಂದ ಚಲಿಸಬಲ್ಲ ಕಾರನ್ನು ನಿರ್ಮಿಸಿರುವ ಪಾಕಿಸ್ತಾನದ ಎಂಜಿನಿಯರ್ ವಖಾರ್ ಅಹ್ಮದ್ ಅದನ್ನು ಸಂಸದರು, ವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳ ಮುಂದೆ ಪ್ರದರ್ಶಿಸಿರುವುದಾಗಿ 'ಡಾನ್' ವರದಿ ಮಾಡಿದೆ. ಪೆಟ್ರೋಲ್ ಅಥವಾ ಸಿಎನ್‌ಜಿ (ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್) ಬಳಸುವ ಬದಲು ಕೇವಲ ನೀರನ್ನು ಉಪಯೋಗಿಸಿ ಕಾರುಗಳನ್ನು ಓಡಿಸಲು ಸಾಧ್ಯವಿದೆ ಎಂದು ಅಹ್ಮದ್ ಹೇಳಿದ್ದಾರೆ. ಅಹ್ಮದ್‌ರ ಈ ವಿನೂತನ 'ಜಲ ಇಂಧನ ಪರಿಕರ ಯೋಜನೆ'ಯನ್ನು ಪಾಕ್ ಸಂಪುಟ ಉಪ ಸಮಿತಿ ಮುಕ್ತಕಂಠದಿಂದ ಶ್ಲಾಘಿಸಿದೆ.ನೀರನ್ನು ಇಂಧನವಾಗಿ ಬಳಸುವ ತಂತ್ರಜ್ಞಾನದಲ್ಲಿ ಭಟ್ಟಿ ಇಳಿಸುವಿಕೆಗೊಳಗಾದ ನೀರಿನೊಂದಿಗಿರುವ ಜಲಜನಕ ಬಂಧವು 'ಹೈಡ್ರೋಜನ್ ಅನಿಲ'ವನ್ನು ಉತ್ಪಾದಿಸಿ ಕಾರನ್ನು ಚಲಿಸುವಂತೆ ಮಾಡುತ್ತದೆ ಎಂದು ನೂತನ ಸಂಶೋಧನೆಯ ಕುರಿತು ಮಾಧ್ಯಮಗಳು ವಿವರಿಸಿವೆ. ಯೋಜನೆಯ ನೇತೃತ್ವ ವಹಿಸಿರುವ ಪಾಕ್‌ನ ಧಾರ್ಮಿಕ ವ್ಯವಹಾರಗಳ ಸಚಿವ ಸಯೀದ್ ಖುರ್ಶಿದ್ ಅಹ್ಮದ್ ಶಾಹ್, ಅಹ್ಮದ್‌ರ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರದರ್ಶನದ ವೇಳೆ ಶಾಹ್ ಸ್ವತಃ ವಿನೂತನ ಕಾರನ್ನು ಚಲಾಯಿಸಿದ್ದಾರೆ. ಹೊಸ ತಂತ್ರಜ್ಞಾನದ ಕಾರಿನ ಸಂಶೋಧನೆ ನಡೆಸಿರುವ ಅಹ್ಮದ್‌ರಿಗೆ ಸಂಪೂರ್ಣ ಭದ್ರತೆ ಒದಗಿಸಲಾಗುವುದು ಹಾಗೂ ನಿರ್ಮಾಣ ಸೂತ್ರವನ್ನು ಸಂರಕ್ಷಿಸಿಡಲಾಗುವುದು ಎಂದವರು ಭರವಸೆ ನೀಡಿದ್ದಾರೆ.

**("ವಾರ್ತಾಭಾರತಿ" 29 ಜುಲೈ 2012)**

## ಕೌಮಾರ್ಯ ಸಂತಾನ : ಹೊಸ ಶೋಧ!

ಲಂಡನ್, ಆ.19: ಗಂಡು ಮತ್ತು ಹೆಣ್ಣಿನ ನಡುವೆ ಯಾವುದೇ ರೀತಿಯಲ್ಲಿ ಲೈಂಗಿಕ ಸಂಪರ್ಕ ಏರ್ಪಡದೆಯೇ ಮಗು ಪಡೆದುಕೊಳ್ಳುವ ತಂತ್ರಜ್ಞಾನ ಸಾಧ್ಯ ಎಂದು ಪ್ರತಿಪಾದಿಸುತ್ತಿದ್ದಾರೆ ಭಾರತೀಯ ಮೂಲದ ಸಂಶೋಧಕಿ ಹಾಗೂ ತಳಿ ವಿಜ್ಞಾನಿ ಆರತಿ ಪ್ರಸಾದ್. ಭಿನ್ನ ಲಿಂಗಿಗಳ ನಡುವಣ ಲೈಂಗಿಕ ಸಂಪರ್ಕದ ವಿಚಾರ ಬಿಡಿ; ಭವಿಷ್ಯದಲ್ಲಿ ವೀರ್ಯ ದಾನದ ಅಗತ್ಯವಿಲ್ಲದೆಯೇ ಮಕ್ಕಳು ಹುಟ್ಟಲಿವೆ ಎನ್ನುತ್ತಾರೆ ಇಂಪೀರಿಯಲ್ ಕಾಲೇಜ್ ಲಂಡನ್‌ನ ಆರತಿ ಪ್ರಸಾದ್. 'ಲೈಕ್ ಎ ವರ್ಜಿನ್' ಎನ್ನುವ ಪುಸ್ತಕದಲ್ಲಿ ಅವರು ಮಾನವ ಪ್ರಜನನ ವ್ಯವಸ್ಥೆಗೆ ಸವಾಲೊಡ್ಡುವಂತಹ ವಿಚಾರವನ್ನು ಪ್ರತಿಪಾದಿಸಿದ್ದಾರೆ. ಆರತಿ ಹೇಳುವ ಪ್ರಕಾರ ಮನುಷ್ಯನ ವಿಧಿ ಇನ್ನು ಮುಂದೆ ಪವಿತ್ರವೂ ಅಲ್ಲ ವಿಶೇಷವೂ ಅಲ್ಲ. ತನ್ನ ವಿಧಿಯನ್ನು ಅವನೇ ಸ್ವತಃ ನಿರ್ಧರಿಸಿಕೊಳ್ಳಬಹುದು. ಮನುಷ್ಯ ಈಗ ಏನು ಬೇಕಾದರೂ ಸಾಧಿಸಲು ಅವಕಾಶವಿರುವ ವಿಜ್ಞಾನದ ಯುಗದಲ್ಲಿ ವಾಸಿಸುತ್ತಿದ್ದಾನೆ. ಪ್ರಜನನ ಪ್ರಕ್ರಿಯೆಯನ್ನು ಕೂಡ ಅವನು ತನ್ನ ಇಷ್ಟಕ್ಕೆ ತಕ್ಕಂತೆ ನಿಯಂತ್ರಿಸಬಹುದು. ಕೌಮಾರ್ಯ ಸಂತಾನ ಈಗ ಬಹುತೇಕ ವಿಜ್ಞಾನದ ಆವಿಷ್ಕಾರದ ಪರಿಧಿಯಲ್ಲಿದೆ ಎನ್ನುವುದು ಆರತಿಯ ಪುಸ್ತಕದ ತಿರುಳು ಎಂಬುದಾಗಿ ಡೈಲಿ ಮೇಲ್ ವರದಿ ಮಾಡಿದೆ. ನೈಸರ್ಗಿಕ ಗರ್ಭಕೋಶದಂತೆಯೇ ದ್ರಾವಣ ಮತ್ತು ಬ್ಯಾಕ್ಟೀರಿಯಗಳನ್ನು ತುಂಬಿಸಲು ಸಾಧ್ಯವಿರುವ ಪ್ಲಾಸ್ಟಿಕ್‌ನ ಕೃತಕ ಗರ್ಭಕೋಶವನ್ನು ತಯಾರಿಸಿದರೆ ಗಂಡು ಹೆಣ್ಣು ಪರಸ್ಪರ ಲೈಂಗಿಕವಾಗಿ ಸಂಪರ್ಕಿಸದೆ ಮಕ್ಕಳನ್ನು ಪಡೆಯಬಹುದು. ಆಸ್ಟ್ರೇಲಿಯದಲ್ಲಿ ಇಂತಹ ಕೃತಕ ಗರ್ಭಕೋಶವನ್ನು ಅಭಿವೃದ್ಧಿಪಡಿಸುವ ಸಂಶೋಧನೆ ನಡೆಯುತ್ತಿದೆ. ಭವಿಷ್ಯದಲ್ಲಿ ಒಂದು ದಿನ ಪುರುಷ ಹೆಣ್ಣಿನ ಸಹಕಾರವಿಲ್ಲದೆ ಈ ಕೃತಕ ಗರ್ಭಕೋಶದ ಮೂಲಕ ಮಕ್ಕಳನ್ನು ಪಡೆಯಬಹುದು ಎನ್ನುತ್ತಾರೆ ಆರತಿ ಪ್ರಸಾದ್. ವಿಜ್ಞಾನ ಈಗಾಗಲೇ ಕೃತಕ ವೀರ್ಯವನ್ನು ಕಂಡು ಹಿಡಿದಿದೆ. ಇದೇ ಮಾದರಿಯಲ್ಲಿ ಕೃತಕ ಅಂಡಾಣುಗಳನ್ನು ಕಂಡು ಹಿಡಿಯುವುದು ಇನ್ನೆಷ್ಟು ದೂರವಿದೆ? ವೀರ್ಯ ಮತ್ತು ಅಂಡಾಣು ಕೃತಕವಾಗಿ ಸಿಕ್ಕಿದರೆ ಮನುಷ್ಯ ಸಂಪರ್ಕವಿಲ್ಲದೆ ಮಕ್ಕಳನ್ನು ತಯಾರಿಸಬಹುದು ಎನ್ನುವುದು ಆರತಿಯ ವಾದ.

**("ಉದಯವಾಣಿ" 20 ಆಗಸ್ಟ್ 2012)**

## ಪಾಕಿಸ್ಥಾನ : ತಂಪು ಪಾನೀಯ ಕುಡಿದವರಿಗೆ ಏಟಿನ ಶಿಕ್ಷೆ

ಇಸ್ಲಾಮಾಬಾದ್, ಜು.30: ಇಲ್ಲಿನ ಜನಪ್ರಿಯ ಪ್ರವಾಸಿ ತಾಣವೊಂದರಲ್ಲಿ ರಮ್ಜಾನ್ ಉಪವಾಸ ಸಂದರ್ಭದಲ್ಲಿ ಬಹಿರಂಗವಾಗಿ ತಂಪು ಪಾನೀಯ ಕುಡಿದ ಇಬ್ಬರು ಯುವಕರನ್ನು ಪೊಲೀಸರು ಹಿಡಿದು ಥಳಿಸಿದ್ದಾರೆ. ಅನ್ವರ್ ಅಬ್ಬಾಸ್ ಮತ್ತು ಮಲಿಕ್ ಸಯೀದ್ ಎಂದು ಗುರುತಿಸಲಾಗಿರುವ ಈ ಇಬ್ಬರು ಯುವಕರು ಕಾರಿನಲ್ಲಿ ಕುಳಿತು ತಂಪು ಪಾನೀಯ ಕುಡಿಯುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿ ಬಿದ್ದರು. ಗಲ್ಫ್ ದೇಶಗಳಂತೆ ಪಾಕಿಸ್ಥಾನದಲ್ಲೂ ಈಗ ಧಾರ್ಮಿಕ ಕಟ್ಟಳೆಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ರಮ್ಜಾನ್ ಉಪವಾಸ ಸಂದರ್ಭದಲ್ಲಿ ಬಹಿರಂಗವಾಗಿ ತಿನ್ನುವುದನ್ನು ಇಲ್ಲಿ ಅಪರಾಧವೆಂದು ಪರಿಗಣಿಸಲಾಗುತ್ತದೆ.

**("ಉದಯವಾಣಿ" 31 ಜುಲೈ 2012)**

## ಯುವ ಜನತೆಗೆ ದಾರಿದ್ರ್ಯದ ಬಿಸಿ

ಲಂಡನ್, ಆ.20: ಬ್ರಿಟನಿನಲ್ಲಿ 20ರ ಆಸುಪಾಸಿನಲ್ಲಿರುವ ಯುವಜನತೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ತಮ್ಮ ಕೇಶ ಮಾರಾಟ ಮಾಡುವುದು, ಊಟ ವರ್ಜಿಸುವುದು ಮತ್ತು ಲ್ಯಾಪ್‌ಡಾನ್ಸಿಂಗ್ ಸೇರಿದಂತೆ ಹಲವು ಅನಿವಾರ್ಯಗಳಲ್ಲಿ ಸಿಲುಕಿಕೊಂಡಿರುವರೆಂದು ಸಮೀಕ್ಷೆಯೊಂದು ತಿಳಿಸಿದೆ.

ವಾಣಿಜ್ಯ ನಿರ್ವಹಣೆ ಸಂಸ್ಥೆ (ಐಸಿಎಂ) ಸಮೀಕ್ಷೆಯಲ್ಲಿ ಪದವೀಧರರು, ವಿದ್ಯಾರ್ಥಿಗಳು, ನಿರುದ್ಯೋಗಿ ಶಾಲೆ ಬಿಟ್ಟವರು ಸೇರಿದಂತೆ 2,000 ಯುವ ಜನರನ್ನು ಪ್ರಶ್ನಿಸಲಾಗಿತ್ತು.

ದಿನಕ್ಕೆ ಮೂರು ಸಲ ಭೋಜನದ ಖರ್ಚು ಸಾಧ್ಯವಾಗದೆ ನಡುವಿನ ಭೋಜನವನ್ನು ಬಿಟ್ಟವರ ಬಗ್ಗೆ ತಮಗೆ ತಿಳಿದಿದೆ ಎಂದು ಸುಮಾರು ಶೇ. 22 ಮಂದಿ ತಿಳಿಸಿದರು.

ಖರ್ಚು ಭರಿಸಲು ತಮ್ಮ ಕೂದಲನ್ನು ಮಾರಾಟ ಮಾಡಿದವರ ಬಗ್ಗೆ ತಮಗೆ ಗೊತ್ತೆಂದು ಶೇ. 3 ಮಂದಿ ಹೇಳಿದರು. ಹೆಚ್ಚುವರಿ ಹಣ ಸಂಪಾದಿಸಲು ಮಾದಕ ದ್ರವ್ಯ ದಂಧೆಗೆ ಇಳಿದವರ ಬಗ್ಗೆಯೂ ತಮಗೆ ತಿಳಿದಿದೆ ಎಂದು ಸುಮಾರು ಶೇ. 10 ಮಂದಿ ತಿಳಿಸಿದರೆಂದು ಡೈಲಿ ಎಕ್ಸ್‌ಪ್ರೆಸ್ ವರದಿ ಮಾಡಿದೆ. ವೇಶ್ಯಾವಾಟಿಕೆ, ಲ್ಯಾಪ್‌ಡಾನ್ಸಿಂಗ್, ಗ್ಲ್ಯಾಮರ್ ಮಾಡೆಲಿಂಗ್‌ನಲ್ಲಿ ಕೆಲಸ ಮಾಡಿದವರ ಬಗ್ಗೆ ತಮಗೆ ಗೊತ್ತಿದೆ ಎಂದು ಶೇ.8 ಮಂದಿ ತಿಳಿಸಿದರು.

**("ಉದಯವಾಣಿ" 21 ಆಗಸ್ಟ್ 2012)**

## ಇದೆಂಥಾ ಲೋಕವಯ್ಯಾ...!

ಉಡುಪಿ, ನ.26: ಚಂದ್ರ ನಮ್ಮ ಭೂಮಿಯಿಂದ ಸುಮಾರು 3.84 ಲಕ್ಷ ಕಿ.ಮೀ. ದೂರದಲ್ಲಿದ್ದಾನೆ. ಇದು ಉಳಿದ ಗ್ರಹಗಳ ದೂರವನ್ನು ಗಮನಿಸಿದರೆ ಏನೇನೂ ಅಲ್ಲ. ಅದೇ ಚಂದ್ರನ ಪಕ್ಕ ಕಾಣಿಸುವ ಗುರುಗ್ರಹ (ಸೂರ್ಯನಿಂದ ಸುಮಾರು 74 ಕೋಟಿ ಕಿ.ಮೀ.) ನಮ್ಮ ಭೂಮಿಯಿಂದ ಸುಮಾರು 59 ಕೋಟಿ ಕಿ.ಮೀ. ದೂರದಲ್ಲಿದೆ. ಇನ್ನು ಇವುಗಳ ಪಕ್ಕದಲ್ಲಿ ಕಾಣಿಸುವ ನಕ್ಷತ್ರ ರೋಹಿಣಿ (ಆಲ್‌ಡೆಬರಾನ್) ನಮ್ಮ ಸೂರ್ಯನಿಂದ 66 ಜ್ಯೋತಿರ್ವರ್ಷ ದೂರದಲ್ಲಿದೆ. ಅದೆಂತಹ ಆಳದ ಆಕಾಶವೋ? ಒಂದು ಜ್ಯೋತಿರ್ವರ್ಷವೆಂದರೆ 3ಲಕ್ಷx60x60x60x24x365ಕಿ.ಮೀ.ಗಳು =10 ಲಕ್ಷ ಕೋಟಿ ಕಿ.ಮೀ.ಗಳು. ಹಾಗೆಯೇ ಶುಕ್ರ ನಮ್ಮ ಭೂಮಿಯಿಂದ 4 ಕೋಟಿ ಕಿ.ಮೀ. ದೂರದಲ್ಲಿದೆ. ಆದರೆ ಶನಿ ಗ್ರಹ ಸೂರ್ಯನಿಂದ 140 ಕೋಟಿ ಕಿ.ಮೀ., ಭೂಮಿಯಿಂದ 125 ಕೋಟಿ ಕಿ.ಮೀ. ದೂರದಲ್ಲಿದೆ.

ಇನ್ನು ಗಾತ್ರದಲ್ಲಿ ಶನಿ ಗ್ರಹ ಶುಕ್ರನಿಗಿಂತ 1,000 ಪಟ್ಟು ದೊಡ್ಡದು. ಗುರು ಗ್ರಹ ಚಂದ್ರನಿಂದ 64,000 ಪಟ್ಟು ದೊಡ್ಡದು. ರೋಹಿಣಿ ನಕ್ಷತ್ರ ಗುರು ಗ್ರಹಕ್ಕಿಂತ 1 ಕೋಟಿ ಪಟ್ಟು ದೊಡ್ಡದು. ಭೂಮಿಗಿಂತ ಸೂರ್ಯ 13 ಲಕ್ಷ ಪಟ್ಟು ದೊಡ್ಡದು. ರೋಹಿಣಿ ನಕ್ಷತ್ರ ಸೂರ್ಯನಿಗಿಂತ 12,000 ಪಟ್ಟು ದೊಡ್ಡದು. ಗುರು ಗ್ರಹಕ್ಕಿಂತ ಸೂರ್ಯ 1,000 ಪಟ್ಟು ದೊಡ್ಡದು. ಅಂದರೆ ರೋಹಿಣಿ ನಕ್ಷತ್ರದಲ್ಲಿ 1 ಕೋಟಿ ಗುರು ಗ್ರಹಗಳನ್ನು ತುಂಬಿಸಬಹುದು. ಇದೆಂಥಾ ಲೋಕವಯ್ಯಾ!!!

**– ಡಾ| ಎ. ಪಿ. ಭಟ್, ಉಡುಪಿ.**

**("ಉದಯವಾಣಿ" 27 ನವೆಂಬರ್ 2012)**

## ಕುರಾನ್ ಸುಟ್ಟ ವ್ಯಕ್ತಿ ಧರ್ಮದೇಟಿಗೆ ಬಲಿ

ಮುಲ್ತಾನ್, ಜು.6: ಕುರಾನ್ ಸುಟ್ಟ ಮತಿವಿಕಲ ವ್ಯಕ್ತಿಯೊಬ್ಬನನ್ನು ಜನರು ಪೊಲೀಸರ ಕೈಯಿಂದ ಕಿತ್ತುಕೊಂಡು ಥಳಿಸಿಕೊಂಡಿರುವ ಘಟನೆ ಪಾಕಿಸ್ಥಾನದ ಮುಲ್ತಾನ್‌ನಲ್ಲಿ ಸಂಭವಿಸಿದೆ.

ಮುಲ್ತಾನ್‌ನಿಂದ ಸುಮಾರು 100 ಕಿ.ಮೀ. ದೂರವಿರುವ ಬಹವಲ್ಪುರ ನಗರದ ಹೊರವಲಯದಲ್ಲಿರುವ ಪೊಲೀಸ್ ಠಾಣೆಗೆ ನುಗ್ಗಿದ ಸುಮಾರು 2000 ಜನರಿದ್ದ ಗುಂಪು ಠಾಣೆಯಲ್ಲಿ ದಾಂಧಲೆ ಎಸಗಿ ಕುರಾನ್ ಪುಟಗಳನ್ನು ಸುಟ್ಟ ಆರೋಪದಲ್ಲಿ ಸೆರೆಯಾಗಿದ್ದ ಗುಲಾಮ್ ಅಬ್ಬಾಸ್‌ನನ್ನು (40 ವ.) ಹೊರಗೆಳೆದು ತಂದು ಥಳಿಸಿ ಕೊಂದಿದೆ.

**("ಉದಯವಾಣಿ" 7 ಜುಲೈ 2012)**

## ಪಾಕಿಸ್ಥಾನ ಸದ್ಯವೇ ಛಿದ್ರ : ಖಾನ್

ಇಸ್ಲಾಮಾಬಾದ್, ಡಿ.17: ಪಾಕಿಸ್ಥಾನದಲ್ಲಿ ಪ್ರಸ್ತುತ 1971ಕ್ಕಿಂತಲೂ ಕೆಟ್ಟ ಪರಿಸ್ಥಿತಿಯಿದ್ದು, ದೇಶ ಇನ್ನೊಮ್ಮೆ ಛಿದ್ರಗೊಳ್ಳುವ ದಿನ ಹೆಚ್ಚು ದೂರವಿಲ್ಲ ಎಂದು ಕಳಂಕಿತ ಅಣು ವಿಜ್ಞಾನಿ ಅಬ್ದುಲ್ ಕಾದಿರ್ ಖಾನ್ ಎಚ್ಚರಿಸಿದ್ದಾರೆ. ದೇಶ ಪ್ರಸ್ತುತ 1971ಕ್ಕಿಂತಲೂ ಹೆಚ್ಚಿನ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಎಲ್ಲ ರೀತಿಯ ಸಾಮಾಜಿಕ ಕೆಡುಕುಗಳು ತಾಂಡವಾಡುತ್ತಿವೆ. ಇದನ್ನು ಕೂಡಲೇ ಸರಿಪಡಿಸಿಕೊಳ್ಳದಿದ್ದರೆ ದೇಶ ಇನ್ನೊಮ್ಮೆ ಛಿದ್ರವಾಗುವ ದಿನ ಹೆಚ್ಚು ದೂರವಿಲ್ಲ. ಮೊದಲಾಗಿ ಮಾಡಬೇಕಾಗಿರುವುದು 'ಹೊರಗಿನವರ ಜತೆಗಿನ ಜಗಳವನ್ನು ನಿಲ್ಲಿಸಿ ಮೊದಲು ನಮ್ಮ ಮನೆಯನ್ನು ಸರಿಯಾಗಿಟ್ಟುಕೊಳ್ಳುವ ಕೆಲಸ' ಎಂದು ಪತ್ರಿಕೆಯೊಂದರ ಜನಾಭಿಪ್ರಾಯ ವಿಭಾಗಕ್ಕೆ ಬರೆದ ಅಂಕಣದಲ್ಲಿ ಖಾನ್ ಹೇಳಿದ್ದಾರೆ.

ಬಾಂಗ್ಲಾದೇಶದ ಉದಯಕ್ಕೆ ಕಾರಣವಾಗಿರುವ 1971ರ ಭಾರತ್–ಪಾಕ್ ಯುದ್ಧವನ್ನು ಉಲ್ಲೇಖಿಸಿ ಅವರು ಈ ಲೇಖನದಲ್ಲಿ ಪಾಕಿಸ್ಥಾನದ ಸದ್ಯದ ಪರಿಸ್ಥಿತಿಗೆ ಕನ್ನಡಿ ಹಿಡಿದಿದ್ದಾರೆ. ಎಲ್ಲ ದೇಶಗಳಲ್ಲಿ ಏಳುಬೀಳುಗಳಿರುತ್ತವೆ. ವೈಭವದಿಂದ ಮೆರೆದ ದೇಶಗಳು ನೆಲಕಚ್ಚಿವೆ. ಆದರೆ ಜನರು ಸಾಮಾನ್ಯವಾಗಿ ದುರಂತಗಳನ್ನು ಮರೆತು ವೈಭವವನ್ನು ಮಾತ್ರ ನೆನಪಿಟ್ಟುಕೊಳ್ಳುತ್ತಾರೆ. ಹಿಂದಿನ ದುರಂತಗಳಿಂದ ಪಾಕಿಸ್ಥಾನೀಯರಾದ ನಾವು ಕೂಡ ಪಾಠ ಕಲಿತುಕೊಂಡಿಲ್ಲ. 1971ರ ಡಿ. 16ರಂದು ಪಾಕಿಸ್ಥಾನ ವಿಭಜನೆಯಾದದ್ದು ಇಂತಹ ದುರಂತಗಳಲ್ಲಿ ಒಂದು ಎಂದಿದ್ದಾರೆ. ಪಾಕಿಸ್ಥಾನದ ಕೋಟಿಗಟ್ಟಲೆ ಜನರಿಗೆ ವಿಭಜನೆ ಹಿಂದಿನ ನಿಜವಾದ ಕಾರಣ ತಿಳಿದಿದೆ. ಆದರೆ ನಮ್ಮನ್ನು ಆಳುವವರು ಇದನ್ನು ಕಂಡೂ ಕಾಣದಂತಿದ್ದಾರೆ ಎಂದಿದ್ದಾರೆ.

2004ರಲ್ಲಿ ಖಾನ್ ತಾನು ಇರಾನ್, ಲಿಬಿಯಾ ಮತ್ತು ಉತ್ತರ ಕೊರಿಯ ದೇಶಗಳಿಗೆ ಅಣ್ವಸ್ತ್ರ ತಂತ್ರಜ್ಞಾನವನ್ನು ರಹಸ್ಯವಾಗಿ ಸಾಗಿಸಿರುವುದನ್ನು ಒಪ್ಪಿಕೊಂಡು ಗೃಹಬಂಧನದಲ್ಲಿದ್ದು, ಅನಂತರ ಕ್ಷಮೆ ಯಾಚಿಸಿದ್ದರು. ಆದರೆ ಬಳಿಕ ತನ್ನ ಹೇಳಿಕೆಯನ್ನು ಹಿಂದೆಗೆದುಕೊಂಡು ಹಿಂದಿನ ಅಧ್ಯಕ್ಷ ಪರ್ವೇಜ್ ಮುಶರ್ರಫ್ ತನ್ನಿಂದ ಬಲವಂತವಾಗಿ ಹೇಳಿಕೆ ಕೊಡಿಸಿದ್ದಾರೆಂದು ಆರೋಪಿಸಿದ್ದರು. ದೇಶ ಒಡೆದಿದೆ, ಸಾವಿರಾರು ಜನರ ಕೊಲೆಯಾಗಿದೆ ಮತ್ತು ಅನೇಕ ಮಂದಿ ಮಹಿಳೆಯರ ಮಾನಭಂಗವಾಗಿದೆ. ಕೆಲವು ಮಕ್ಕಳು ಅನಾಥರಾಗಿದ್ದಾರೆ. ಸುಮಾರು 92,000 ಸೈನಿಕರನ್ನು ಕೈದಿಗಳಾಗಿ ಬಂಧನದಲ್ಲಿಡಲಾಗಿದೆ. ಮಾಮೂಲಿನಂತೆ ಇಂತಹ ಭೀಕರ ಕೃತ್ಯಗಳಿಗೆ ಇಲ್ಲಿ ಯಾರೂ ಹೊಣೆಗಾರರಿಲ್ಲ. ಸರ್ವಾಧಿಕಾರ ಸಿಕ್ಕಿದರೆ ಜನರು ಕ್ರೂರಿಗಳಾಗುತ್ತಾರೆ ಎನ್ನುವುದಕ್ಕೆ 1971ರ ಘಟನೆಯೆ ಸಾಕ್ಷಿ. ಆಗ ವಿದೇಶಗಳ ಟಿವಿಗಳಲ್ಲಿ ಪಾಕಿಸ್ಥಾನದ ಪರಿಸ್ಥಿತಿಯನ್ನು ನೋಡುವಾಗ ನನಗೆ ನಾಚಿಕೆಯಾಗುತ್ತಿತ್ತು (ಖಾನ್ ಆಗ ಬೆಲ್ಜಿಯಂನಲ್ಲಿದ್ದರು). ಮುಸ್ಲಿಮರನ್ನು ಮುಸ್ಲಿಮರೇ ಕೊಲ್ಲುವುದು ನಾಚಿಕೆಗೇಡು ಎಂದಿದ್ದಾರೆ.

**("ಉದಯವಾಣಿ" 18 ಡಿಸೆಂಬರ್ 2012)**

## ನಕಲಿ ನಂಬರ್ ಬಳಸಿದರೆ ಸೆರೆ

ಲಾಹೋರ್, ಡಿ.28: ಪಾಕಿಸ್ಥಾನದ ಪ್ರಮುಖ ಇಸ್ಲಾಮ್ ಮತಪಂಡಿತ ತಾಹಿರುಲ್ ಖಾದ್ರಿ ನಕಲಿ ನೋಂದಣಿ ಸಂಖ್ಯೆ ಹೊಂದಿರುವ ವಾಹನಗಳನ್ನು ಬಳಸುವುದನ್ನು ಮುಂದುವರಿಸಿದರೆ ಅವನನ್ನು ಬಂಧಿಸಲಾಗುವುದು ಎಂದು ಪಂಜಾಬ್ ಪ್ರಾಂತ್ಯದ ಸರಕಾರ ಎಚ್ಚರಿಸಿದೆ. ಮುಂದಿನ ತಿಂಗಳು ಖಾದ್ರಿ ಚುನಾವಣೆಗೆ ಒತ್ತಾಯಿಸಿ ಇಸ್ಲಾಮಾಬಾದ್‌ಗೆ ಮೆರವಣಿಗೆ ನಡೆಸಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಸರಕಾರ ಈ ಎಚ್ಚರಿಕೆಯನ್ನು ನೀಡಿದೆ.

ತಾಹಿರುಲ್ ಖಾದ್ರಿ ನಕಲಿ ನೋಂದಣಿ ಸಂಖ್ಯೆ ಹೊಂದಿರುವ ವಾಹನಗಳನ್ನು ಮರಳಿ ಬಳಸಿದರೆ ಅವನನ್ನು ಬಂಧಿಸಲು ಅಬಕಾರಿ ಇಲಾಖೆಗೆ ಸೂಚಿಸಿದ್ದೇವೆ. ಖಾದ್ರಿ ನಕಲಿ ನೋಂದಣಿ ಸಂಖ್ಯೆಯಿರುವ ವಾಹನಗಳನ್ನು ಬಳಸುತ್ತಿರುವುದರಿಂದ ಅಬಕಾರಿ ಅಧಿಕಾರಿಗಳು ಅವರನ್ನು ಬಂಧಿಸಬಹುದು ಎಂದು ಪಂಜಾಬಿನ ಕಾನೂನು ಸಚಿವ ರಾಣಾ ಸನಾವುಲ್ಲಾ ಹೇಳಿದ್ದಾರೆ.

**("ಉದಯವಾಣಿ" 29 ಡಿಸೆಂಬರ್ 2012)**

"ಯುಗರಶ್ಮಿ"ಗೆ ಚಂದಾದಾರರಾಗಿರಿ
ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ.70/–

## ಆರೋಗ್ಯ

# ಜೇನು ಆರೋಗ್ಯದ ಕಾಮಧೇನು

ಜೇನು ಖನಿಜಾಂಶ, ಪೌಷ್ಟಿಕಾಂಶ ಹಾಗೂ ವಿಟಮಿನ್‌ಗಳ ಆಗರವಾಗಿದ್ದು, ಆರೋಗ್ಯದ ದೃಷ್ಟಿಯಿಂದ ಬಹಳ ಮಹತ್ವವಾದುದು. ಅದರಲ್ಲಿ ರೋಗನಿರೋಧಕ, ಉಪಶಾಮಕ ಮತ್ತು ವಿರೇಚಕ ಗುಣಗಳೆಲ್ಲವೂ ಮೇಳೈಸಿವೆ. ಒಂದು ರೀತಿಯಲ್ಲಿ ಜೇನನ್ನು ಸಂಜೀವಿನಿ ಎಂದು ಕರೆದರೂ ಉತ್ಪ್ರೇಕ್ಷೆಯಾಗಲಾರದು.

ಅನಾದಿ ಕಾಲದಿಂದಲೂ ಜೇನು ಔಷಧಿ ರೂಪದಲ್ಲಿ ಬಳಕೆಯಾಗುತ್ತಿದೆ. ಜೇನುತುಪ್ಪ ಸೇವನೆಯಿಂದ ಹಲವಾರು ಆರೋಗ್ಯ ತೊಂದರೆಗಳು ಪರಿಹಾರವಾಗುತ್ತವೆ. ಯಾವುದೇ ಕಾಯಿಲೆಗೆ ಔಷಧಿ ತೆಗೆದುಕೊಳ್ಳುತ್ತಿದ್ದರೂ ಜೊತೆಯಲ್ಲಿ ಜೇನುತುಪ್ಪ ಸೇವಿಸಿದರೆ, ಜೇನು ಆ ಔಷಧಿಯ ಕಾರ್ಯಕ್ಷಮತೆ ಹೆಚ್ಚಲು ಸಹಾಯ ಮಾಡುತ್ತದೆ. ಅತಿ ದಣಿವಿನ ಸಂದರ್ಭದಲ್ಲಿ ಜೇನು ಬೆರೆಸಿದ ನೀರಿನ ಸೇವನೆ ಚೇತೋಹಾರಿಯಾಗಿರುತ್ತದೆ. ಜೇನಿನಲ್ಲಿ ಇರುವ ನೈಸರ್ಗಿಕ ಸಕ್ಕರೆಯ ಅಂಶ ನೇರವಾಗಿ ರಕ್ತದಲ್ಲಿ ಮಿಳಿತಗೊಂಡು ದೇಹಕ್ಕೆ ಚೈತನ್ಯ ನೀಡುತ್ತದೆ.

ಉಪಶಮನಕಾರಿ ಗುಣದಿಂದಾಗಿ ಜೇನನ್ನು ಗಾಯಗಳಿಗೂ ಮುಲಾಮಿನಂತೆ ಬಳಸಬಹುದು. ಒಡೆದ ತುಟಿಗಳಿಗೆ ಅದು ಮೃದುತ್ವ ತಂದುಕೊಡಬಲ್ಲದು. ಬಾಯಿಹುಣ್ಣಿನ ಬಾಧೆಯಿಂದ ಬಳಲುತ್ತಿರುವವರು ಜೇನುತುಪ್ಪವನ್ನು ಹುಣ್ಣಿನ ಮೇಲೆ ಸವರುತ್ತಾ ಬಂದರೆ ಬೇಗನೆ ಗುಣವಾಗುತ್ತದೆ. ಹಲ್ಲು ನೋವಿನಿಂದ ಬರುವಂತಹ ಒಸಡಿನ ಬಾವು ಕೂಡಾ ಜೇನು ಸವರಿದಾಗ ನಿವಾರಣೆಯಾಗುತ್ತದೆ. ತೀವ್ರ ಕೆಮ್ಮಿನ ಸಂದರ್ಭದಲ್ಲಿ ತುಳಸಿ ರಸ, ವೀಳ್ಯದೆಲೆ ರಸ ಮತ್ತು ಜೇನುತುಪ್ಪ ಬೆರೆಸಿ ಕುಡಿದರೆ ಎಂತಹ ಕೆಮ್ಮಿದ್ದರೂ ದೂರ ಓಡುತ್ತದೆ. ಅಜೀರ್ಣ ಹಾಗೂ ಅಗ್ನಿಮಾಂದ್ಯದಿಂದ ತೊಂದರೆಗೀಡಾಗಿರುವವರು ಶುಂಠಿಯನ್ನು ಜಜ್ಜಿ ಅದನ್ನು ಜೇನಿನೊಡನೆ ತಿನ್ನಲಾರಂಭಿಸಿದರೆ ಜೀರ್ಣಶಕ್ತಿ ಹೆಚ್ಚಿ ಆಹಾರ ಚೆನ್ನಾಗಿ ಪಚನವಾಗುತ್ತದೆ.

ಜೇನುತುಪ್ಪ ಸೇವಿಸುವುದರಿಂದ ದೇಹದಲ್ಲಿ ರಕ್ತಪರಿಚಲನೆ ಸರಾಗವಾಗಿ ಆಗುತ್ತದೆ. ಚರ್ಮದಲ್ಲಿನ ಸೂಕ್ಷ್ಮಾತಿಸೂಕ್ಷ್ಮ ರಕ್ತನಾಳಗಳಿಗೂ ರಕ್ತ ಪ್ರವಹಿಸಿ ಚರ್ಮದ ಕಾಂತಿ ಹೆಚ್ಚುತ್ತದೆ. ಇದರಿಂದ ಮುಖದ ಅಂದ ಹೆಚ್ಚುವುದಲ್ಲದೇ, ಕಣ್ಣ ಸುತ್ತಲಿನ ಕಪ್ಪು ಸಹ ನಿವಾರಣೆಯಾಗುತ್ತದೆ. ರಕ್ತದೋಷದ ನಿವಾರಣೆಯಲ್ಲಿ ಜೇನಿನದ್ದು ಮುಂಚೂಣಿ ಸ್ಥಾನ. ಒಂದು ಲೋಟ ನೀರಿಗೆ ಒಂದು ಚಮಚ ಜೇನುತುಪ್ಪ ಬೆರೆಸಿ ಸೇವಿಸುವುದು ಸರ್ವರಿಗೂ ಒಳ್ಳೆಯದು. ಜೇನುತಪ್ಪದಲ್ಲಿರುವ ಖನಿಜ ಭಂಡಾರ ದೇಹದಲ್ಲಿ ಕೆಂಪುರಕ್ತ ಕಣಗಳ ಬೆಳವಣಿಗೆಯನ್ನು ತೀವ್ರಗೊಳಿಸಿ, ಆ ಮೂಲಕ ಹಿಮೋಗ್ಲೋಬಿನ್ ಮಟ್ಟ ವೃದ್ಧಿಸಿ, ರಕ್ತಹೀನತೆಯನ್ನು ನಿವಾರಿಸುತ್ತದೆ. ಇದೇ ಚಿಕಿತ್ಸೆಯನ್ನು ಕೊಲೆಸ್ಟರಾಲ್ ಹೆಚ್ಚಿರುವವರು ಮಾಡಿದಾಗ, ರಕ್ತನಾಳಗಳಲ್ಲಿ ಅನಗತ್ಯವಾಗಿ ಸಂಗ್ರಹವಾಗಿರುವ ಕೊಬ್ಬಿನಂಶ ಕರಗಿ ರಕ್ತಸಂಚಾರ ಸರಾಗವಾಗುತ್ತದೆ.

ಔಷಧೀಯ ಗುಣದ ದೃಷ್ಟಿಯಿಂದ, ಸಂಸ್ಕರಿಸಿದ ಜೇನುತುಪ್ಪಕ್ಕಿಂತ ನೈಸರ್ಗಿಕ ಜೇನುತುಪ್ಪ ಉತ್ತಮ. ಏಕೆಂದರೆ ಹಲವಾರು ವೈವಿಧ್ಯಮಯ ಹೂಗಳ ಪರಾಗ ಸಂಗ್ರಹದಿಂದ ಉತ್ಕೃಷ್ಟ ನೈಸರ್ಗಿಕ ಜೇನುತುಪ್ಪ ತಯಾರಾಗಿರುತ್ತದೆ. ಆದರೆ ಜೇನು ಕೂಡಾ ಕಲಬೆರಕೆ ಮುಕ್ತವಾಗಿಲ್ಲ. ಮಾರುಕಟ್ಟೆಯಲ್ಲಿ ದೊರಕುವ ಹಲವು ಬ್ರಾಂಡ್‌ಗಳ ಜೇನುತುಪ್ಪದ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿಲ್ಲ. ಆದ್ದರಿಂದ ಸರ್ಕಾರಿ ಸ್ವಾಮ್ಯದ ಅರಣ್ಯೋತ್ಪನ್ನ ಮಾರಾಟ ಸಂಘಗಳಿಂದಲೇ ನೇರವಾಗಿ ಜೇನುತುಪ್ಪವನ್ನು ಖರೀದಿಸುವುದು ಒಳಿತು.

*– ವಿ. ನಿರ್ಮಲಾ (ಕೃಪೆ : ಪ್ರಜಾವಾಣಿ 22–9–2012)*

# ಪ್ರಾರ್ಥನೆ

ಬೇಡಲು, ಕಾಡಲು ಮನನೊಂದು ಕೇಳಲು
ನೀನಲ್ಲದೆ ನಮಗಿನ್ನ್ಯಾರು?
ಬೇಡಿದ ಪ್ರಾರ್ಥನೆ ಆಲಿಸಿ ನಮಗೆ
ಉತ್ತರ ನೀಡಲು ಇನ್ನ್ಯಾರು?

ಕಷ್ಟಗಳೇನೆ ಬಂದರೂ ನಮಗೆ
ಕರೆಯುವ ನಾಮವು ಯಾ ಅಲ್ಲಾಹ್
ಕಷ್ಟಗಳಿಲ್ಲದೆ ಸುಖಪಡುವಾಗಲೂ
ನೀನೇ ಬೇಕು ಯಾ ಅಲ್ಲಾಹ್

ಮುತ್ತು ನಬಿಯರ ಉತ್ತಮ ಶಿಷ್ಯರ
ಸಾಲಲಿ ಸೇರಿಸು ನಮ್ಮನ್ನು
ನಿನ್ನನು ಸ್ಮರಿಸಿ ಕೆಡುಕನು ತ್ಯಜಿಸಿ
ಬಾಳಲು ಕರುಣಿಸು ನಮ್ಮನ್ನು

ನಿನ್ನಯ ಕಲ್ಪನೆ ಭುವಿಯಲಿ ಹರಡಲು
ಶಕ್ತಿಯ ನೀಡು ನಮಗೆಲ್ಲ
ನಿನ್ನಯ ಪ್ರೀತಿಯ ಗಳಿಸುವ ಭಾಗ್ಯವ
ಕರುಣಿಸು ನೀನು ನಮಗೆಲ್ಲ.

ಮಹ್‌ದಿ ಇಮಾಮರ ಆತ್ಮೀಯ ಭವನದಿ
ಒಟ್ಟಿಗೆ ಸೇರಿಸು ನಮ್ಮನ್ನು
ಮಾನ್ಯತೆ ನೀಡಿ ಕರುಣೆಯ ಸುರಿಸಿ
ರಕ್ಷಿಸು ಭುವಿಯಲಿ ನಮ್ಮನ್ನು

ನಿನ್ನಯ ಸಂದೇಶ ಸಾರಿದ ನಮಗೆ
ಪಾಕಿಸ್ತಾನದಿ ಗುಂಡೇಟು
ನಿನ್ನಯ ಮಹ್‌ದಿಯ ನಂಬಿದ ನಮಗೆ
ಇಂಡೋನೇಷ್ಯದಿ ಕಲ್ಲೇಟು

ಆದರೂ ನಮ್ಮನು ರಕ್ಷಿಸಿ ಮುಂದಕೆ
ತಂದಿರುವಂಥಾ ಸರ್ವೇಶ
ಅಜ್ಞಾನ ಕತ್ತಲನಳಿಸುತ ಜನರನು
ಕಾಪಾಡೋ ನೀ ಭುವನೇಶ

ಪಂಗಡ, ಪಂಗಡವಾಗಿರೊ ಮುಸ್ಲಿಂ
ಮಕ್ಕಳನೆಲ್ಲ ಒಟ್ಟಾಗಿ
ಪಕ್ಕಕೆ ಸೇರಿಸು ಮಹ್‌ದಿ ಇಮಾಮರ
ಭವನದ ಒಳಗೆ ಒಟ್ಟಾಗಿ

ಮುತ್ತು ನಬಿಯರ ಶಿಷ್ಯರ ಗಣಗಳ
ತಪ್ಪನು ಕ್ಷಮಿಸಿ, ಕಾಪಾಡೋ
ಮುತ್ತು ನಬಿಯರ ಮಹ್‌ದಿಯ ಶಿಷ್ಯರ
ಸಂಘದಿ ಸೇರಿಸಿ ಕಾಪಾಡೋ

ಉತ್ತಮ ಶಿಷ್ಯರ ಸಾಲಲಿ ಸೇರಿಸು
ಮಾನವರೆಲ್ಲರನ್ನೊಟ್ಟಾಗಿ
ಉಗ್ರರನಳಿಸಿ ಶಾಂತಿಯ ನೆಲೆಸಿ
ಮಾನವ ವಂಶವ ಕಾಪಾಡೋ

ಖಡ್ಗವನೆತ್ತಿದ ಉಗ್ರರ ನಾಶ
ಖಡ್ಗದಲೆ ನೀ ಕೊನೆಗೊಳಿಸು
ಕತ್ತಲೆ ಅಳಿಸಿ ಶಾಂತಿಯನುಳಿಸಿ
ಉತ್ತಮ ಶಿಷ್ಯರ ನೆಲೆಗೊಳಿಸು

ಪಶ್ಚಿಮ ಸೂರ್ಯನ ಕಿರಣವ ತೋರಿಸು
ಪಾಮರ ಜನರಿಗೆ ಬೇಗದಲಿ
ಪಶ್ಚಾತ್ತಾಪವಗೊಳ್ಳುತ ಮಹ್‌ದಿಯ
ಶಿಷ್ಯರನಾಗಿಸು ಬೇಗದಲಿ

ದೀನಿಸ್ಲಾಮಿನ ವಿಜಯವ ತೋರಿಸು
ಬೇಗನೆ ಮಹ್‌ದಿಯ ಶಿಷ್ಯರಲಿ
ಧೀರರನಾಗಿಸು ಲೋಕದಲಿಂದು
ಮಹ್‌ದಿ ಮಸೀಹರ ಶಿಷ್ಯರನು

ಕಷ್ಟಗಳೇನೇ ಬಂದರೂ ಕೊಂಚವು
ಎದೆಗುಂದದನೇ ಮುಂದಕ್ಕೆ
ಕೈ ಹಿಡಿದೆತ್ತಿಕೋ ನಿನ್ನಯ ಪ್ರೀತಿಯ
ಕಾಲದಿ ಇಮಾಮರ ಶಿಷ್ಯರನು

★ ಕೆ. ಎಂ. ಉಮರ್
ಮಡಿಕೇರಿ.

# ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ
ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

*ಈ ಕೆಳಗಿನ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

# ಸನ್ಮಾರ್ಗ ದರ್ಶಕ

ಗ್ರಂಥಕರ್ತ
ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗಾಗಿ ಸಂಪರ್ಕಿಸಿರಿ :
**Ahmadiyya Muslim Mission, No. 1, 3rd Cross Road, Wilson Garden, Bangalore - 560 027**

## "ಯುಗರಶ್ಮಿ"ಯ ಒಂದು ವರ್ಷದ ಉಚಿತ ಪ್ರತಿಗಳನ್ನು ವಿತರಿಸಲು ಧನ ಸಹಾಯ ನೀಡಿದ ಉದಾರಮತಿಗಳು

1. ಮುಹಮ್ಮದ್ ಲೈರ್ಝ್ ಸಾಹೇಬ್, ಕೊಚ್ಚಿ – 100 ಪ್ರತಿಗಳು
2. ಯು. ಎಚ್. ಅಬ್ದುಲ್ ಲತೀಫ್ ಸಾಹೇಬ್, ಮಂಜೇಶ್ವರ – 50 ಪ್ರತಿಗಳು
3. ಅಮ್ರ ಶರೀಫ ಸಾಹಿಬ, ಮಂಜೇಶ್ವರ – 50 ಪ್ರತಿಗಳು
4. ನಾಸಿರ್ ಅಹ್ಮದ್ ಸಾಹೇಬ್, ಪಯಂಗಾಡಿ – 30 ಪ್ರತಿಗಳು
5. ಮುಹಮ್ಮದ್ ಇಸ್ಮಾಈಲ್ ಸಾಹೇಬ್, ಗೋಗಿಕ್ – 15 ಪ್ರತಿಗಳು
6. ಎಂ. ಯು. ನಾಸಿರ್ ಅಹ್ಮದ್ ಸಾಹೇಬ್, ಮಂಜೇಶ್ವರ – 10 ಪ್ರತಿಗಳು

**ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ**




## ಪವಿತ್ರ ಖುರ್‌ಆನ್

**ಕನ್ನಡ ಭಾಷಾಂತರ**

**ಬೆಲೆ : ರೂ. 200/-**




## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

**ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**

**ಪುಟಗಳು - 320. ಬೆಲೆ : 100/-**

### ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

ಹೊಸ ಪುಸ್ತಕದ ಕುರಿತಾಗಿ....

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಅಹ್ಮದಿಯಾ ಮುಸ್ಲಿಂ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಜರತ್ ಮಿರ್ಜಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಅವರು ಇಸ್ಲಾಮೀ ಧಾರ್ಮಿಕ ತತ್ತ್ವಗಳ ಆಳ ಅಗಲಗಳನ್ನು ಬಲ್ಲವರು. ಪವಿತ್ರ ಖುರಾನ್‌ಗೆ ವ್ಯಾಖ್ಯಾನವನ್ನೂ ರಚಿಸಿರುವ ಶ್ರೇಯಸ್ಸು ಅವರದು. ಮುಹಮ್ಮದ್ ಪೈಗಂಬರರ ಜೀವನ - ಸಾಧನೆಯನ್ನು ಕುರಿತ ಈ ಕೃತಿ ಪೈಗಂಬರರ ಜನನಪೂರ್ವದಲ್ಲಿದ್ದ ಅರಬ್ ಸಮಾಜದ ಸ್ಥಿತಿ-ಗತಿಗಳನ್ನು ಹಾಗೂ ಅವರ ಬಾಲ್ಯ ಕಾಲದಲ್ಲಿ ಅವರಿಗಿದ್ದ ಸಮಾಜ ಸುಧಾರಣೆ ಕುರಿತ ತುಡಿತಗಳನ್ನು ಆರಂಭದ ಪುಟಗಳಲ್ಲಿ ಸರಳ ನಿರೂಪಣೆಯ ಮೂಲಕ ನಮ್ಮೆದುರು ಇರಿಸುತ್ತದೆ. ಮುಂದೆ ಮುಹಮ್ಮದರು ಸಾಮಾಜಿಕ ಸೌಹಾರ್ದಕ್ಕಾಗಿ ಶ್ರಮಿಸಿದ ಘಟನೆಗಳನ್ನು, ನಡೆಸಿದ ಸಾಮಾಜಿಕ ಸುಧಾರಣೆಗಳನ್ನು ಕಾಲಾನುಗತ ಕ್ರಮದಲ್ಲಿ ನಿರೂಪಿಸುತ್ತ, ಅವರು ಇಸ್ಲಾಮೀ ಮೂಲ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವಾಗ ಎದುರಿಸಿದ ಕೆಲವು ವಿಲಕ್ಷಣ ಐತಿಹಾಸಿಕ ಸವಾಲುಗಳನ್ನೂ ದಾಖಲಿಸುತ್ತದೆ. ಇಸ್ಲಾಂ ಧರ್ಮವನ್ನು ಕುರಿತ ಮೂಲಭೂತ ಸಂಗತಿಗಳನ್ನು ತಿಳಿಸುವುದರೊಂದಿಗೆ, ಆ ಕುರಿತ ಕೆಲವು ಅಪಕಲ್ಪನೆಗಳನ್ನೂ ಅಪಾರ್ಥಗಳನ್ನೂ ಇಂಥ ಪುಸ್ತಕಗಳು ಹೋಗಲಾಡಿಸಬಲ್ಲವು. ಪೈಗಂಬರರ ಜನನದಿಂದ ಮರಣದವರೆಗಿನ ಘಟನಾ ವಿವರಗಳಿಂದ ತುಂಬಿರುವ ಈ ಗ್ರಂಥ ಅವರ ಉದಾತ್ತ ಜೀವಿತದ ಧಾರ್ಮಿಕ - ನೈತಿಕ ಪಾಠಗಳನ್ನು ಅರಿತುಕೊಳ್ಳಲು ನೆರವಾದೀತೆಂಬ ನಂಬಿಕೆಯನ್ನು ಪ್ರಕಾಶಕರು ವ್ಯಕ್ತಪಡಿಸಿದ್ದಾರೆ.

ಸ್ವಾಗತಾರ್ಹ ಪ್ರಕಟಣೆ.

ಜ. ಕಾ.


*("ಉದಯವಾಣಿ" 17 ಜೂನ್ 2012)*

Registered with the Registrar of Newspapers for India No. R.N. 27354/75
Yugarashmi Kannada Quarterly, December - 2012. Price : Rs. 15/-

ReachingtheCornersoftheEarth

**Muslim Television Ahmadiyya International**

mta INTERNATIONAL



**Attractive Programs on MTA**

**Friday Sermon**
LIVE every Friday
12:00 GMT



**Faith Matters**
Answering your questions about faith and religion



**Rah-e-Huda**
A live and interactive show answering your questions about Islam



**Fiqa'hi Masail**
An interactive show answering your questions about Islamic jurisprudence
Every Wednesday at 16:20 GMT



**Beacon of Truth**
Shedding light on the beautiful, true teachings of Islam



**Intikhab-e-Sukhan**
LIVE every Saturday
12:50 GMT




**Real Talk : Ladies Edition**
Discussing today's social and moral issues



MTA International's Official YouTube Channel
www.youtube.com/mtaonline1



YouTube | mta

**National Toll Free Number : 1800 180 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001